ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕಿ
ವೀಣಾ ವಾ. ಕುಲಕರ್ಣಿ

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಪ್ರವಾಚಕರು

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮

ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕಿ

ವೀಣಾ ವಾ. ಕುಲಕರ್ಣಿ

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಪ್ರವಾಚಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮

ಅಭ್ಯರ್ಥಿಯ ದೃಢೀಕರಣ

'ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನಾನು ಡಾ. ಶಿವಾನಂದ ವಿರಕ್ತಮಠ, ಪ್ರವಾಚಕರು, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ. ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಇದನ್ನು ಈ ಹಿಂದೆ ಯಾವುದೇ ಪದವಿಗಾಗಿ ಬೇರೆ ವಿಶ್ವವಿದ್ಯಾಲಯಕ್ಕೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಸಲ್ಲಿಸಿಲ್ಲವೆಂದು ಈ ಮೂಲಕ ನಾನು ದೃಢೀಕರಿಸುತ್ತೇನೆ.

ವೀಣಾ ವಾ.ಕುಲಕರ್ಣಿ
ಸಂಶೋಧಕಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೫-೧೦-೦೮
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

'ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ವೀಣಾ ವಾ.ಕುಲಕರ್ಣಿ** ಇವರು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಗಾಗಿ ಮಹಿಳಾ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ. ಇದನ್ನು ಈ ಹಿಂದೆ ಯಾವುದೇ ಪದವಿಗಾಗಿ ಬೇರೆ ವಿಶ್ವವಿದ್ಯಾಲಯಕ್ಕೆ ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಸಲ್ಲಿಸಿಲ್ಲವೆಂದು ಈ ಮೂಲಕ ನಾನು ದೃಢೀಕರಿಸುತ್ತೇನೆ.

ಡಾ.ಶಿವಾನಂದ ಎಸ್. ವಿರಕ್ತಮಠ
ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 15.10.08
ಸ್ಥಳ : ವಿದ್ಯಾರಣ್ಯ

ಪರಿವಿಡಿ

❒

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

೧.೧. ಪ್ರಸ್ತಾವನೆ

ಮಹಿಳಾ ಅಧ್ಯಯನವು ಅಂತರ್ ಶಿಸ್ತೀಯ ಹಾಗೂ ಬಹುಶಿಸ್ತೀಯ ನೆಲೆಯನ್ನು ಪಡೆದುಕೊಂಡು ಬಳಕೆಯಾಗುತ್ತಲಿರುವ ಒಂದು ಅಧ್ಯಯನ ಶಾಖೆ ೬೦ರ ದಶಕದಲ್ಲಿ ಅಮೇರಿಕಾದಲ್ಲಿ ಇದು ಬಳಕೆಗೆ ಬಂದಿತು.[೧] ಪಾಶ್ಚಿಮಾತ್ಯ ಮಹಿಳಾ ಚಳುವಳಿಯ ಪ್ರಭಾವದಿಂದ ಭಾರತದಲ್ಲಿ ಹುಟ್ಟಿಕೊಂಡ ಮಹಿಳಾ ಚಳುವಳಿಯೊಂದಿಗೆ ಮಹಿಳಾ ಅಧ್ಯಯನವು ಬೆಳೆಯಿತು. ಪ್ರತಿಯೊಂದು ಅಧ್ಯಯನ ಶಿಸ್ತಿನೊಂದಿಗೆ ಪೂರಕವಾಗಿರುವಂತಹ ಸಂಬಂಧವನ್ನು ಮಹಿಳಾ ಅಧ್ಯಯನ ಹೊಂದಿದೆ. ಮಹಿಳಾ ಅಧ್ಯಯನದ ಉಗಮ ಮತ್ತು ಬೆಳವಣಿಗೆಯ ಕುರಿತು ಎರಡು ಅಭಿಪ್ರಾಯಗಳಿವೆ.

೧. ಮಹಿಳಾ ಚಳುವಳಿಯೇ ಮಹಿಳಾ ಅಧ್ಯಯನದ ಉಗಮಕ್ಕೆ ಸ್ಪೂರ್ತಿ ಎಂದರೆ

೨. ವಿಷಯ ತಜ್ಞರು ಹಾಗೂ ಅಕಾಡೆಮಿಶಿಯನ್‌ಗಳ ಕೊಡುಗೆಯೇ ಮುಖ್ಯ ಕಾರಣ ಎಂದು ಹೇಳುತ್ತದೆ.

''ಅಕಾಡೆಮಿಕ್ ಕ್ಷೇತ್ರದಲ್ಲಿ ಮಹಿಳಾ ವಿಷಯಗಳನ್ನು ಸೇರಿಸುವುದಕ್ಕೆ ಮಹಿಳಾ ಚಳುವಳಿಯ ಹೊರಗಿನಿಂದ ಬಂದ ಒತ್ತಡದ ಪ್ರತಿಫಲ. ಆದರೆ ಕಾಳಜಿ ಬದ್ಧತೆಯಿಂದ ಕೆಲವೇ ಕೆಲವು ಅಕಾಡೆಮಿಶಿಯನ್‌ಗಳು ಮಾಡಿದ ಪ್ರಾರಂಭದ ಪ್ರಯತ್ನಗಳು ಕಾರಣ ಎಂದು ನಾನು ಭಾವಿಸುತ್ತೇನೆ.'' ಎಂದು ಡಾ. ನೀರಾದೇಸಾಯಿಯವರು ಹೇಳುತ್ತಾರೆ. ಈ ಎರಡು ಅಭಪ್ರಾಯಗಳಲ್ಲೂ ಸತ್ವ ಇದ್ದು, ಮಹಿಳಾ ಅಧ್ಯಯನವು ಚಳುವಳಿ ಹಾಗೂ ಅಕಾಡೆಮಿಶಿಯನ್‌ಗಳ ಪ್ರಯತ್ನಗಳ ಪ್ರತಿಫಲ ಎಂದು ಹೇಳಬಹುದು. ಏಕೆಂದರೆ ಮಹಿಳಾ ವಿಷಯಗಳು ಸಾಮಾಜಿಕ ವಿಷಯವಾಗಿ ಸಾರ್ವಜನಿಕರ ಗಮನ ಸೆಳೆಯುವಂತೆ ಮಾಡುವಲ್ಲಿ ಆಕ್ಟಿವಿಸ್ಟಗಳ ಪ್ರಯತ್ನ ಹಾಗೂ ಮಹಿಳಾ ಹೋರಾಟಗಳು ಪ್ರಮುಖ ಪಾತ್ರವಹಿಸಿವೆ. ಈ ಹೋರಾಟಗಳಿಗೆ ಸೈದ್ಧಾಂತಿಕ ಹಿನ್ನೆಲೆ, ಬೆಂಬಲ ವಾಸ್ತವಾಂಶಗಳನ್ನು ನೀಡುವಲ್ಲಿ ಅಕಾಡೆಮಿಶಿಯನ್‌ಗಳ ಕೊಡುಗೆ ಅಪಾರವಾದದ್ದಾಗಿದೆ.''[೨]

''ಮಹಿಳಾ ಅಧ್ಯಯನ ಮೂಲಭೂತವಾಗಿ ಮಹಿಳೆಯರ ಸಮಸ್ಯೆಗಳು, ಅವರಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುತ್ತಾ ಅದಕ್ಕೆ ಪರಿಹಾರವನ್ನು ಸೂಚಿಸುವ ಅಧ್ಯಯನ ಕ್ಷೇತ್ರವಾಗಿದೆ. ಮಹಿಳೆಯರ ಅಭಿವೃದ್ಧಿಯ ಕಡೆಗೆ ಕಣ್ಣಿರಿಸಿಕೊಂಡಿದ್ದು, ಅದು ಸರಳ, ಸಂಕೀರ್ಣ, ಸಾಂಪ್ರದಾಯಿಕ ಅಥವಾ ಆಧುನಿಕ, ಸಣ್ಣ ಅಥವಾ ದೊಡ್ಡ, ಅಭಿವೃದ್ಧಿಶೀಲ ಅಥವಾ ಅಭಿವೃದ್ಧಿ ರಾಷ್ಟ್ರಗಳು ಯಾವುದೇ ಇರಬಹುದು. ಆ ಸಮಾಜಗಳ ಮುಖ್ಯ ಪ್ರವಾಹದೊಳಗೆ ಅವರನ್ನು ಒಗ್ಗೂಡಿಸುವ ಕಡೆಗೆ ಗಮನಹರಿಸುತ್ತದೆ. ಮಹಿಳೆಯರ ಅನುಭವಗಳನ್ನು ಮಹಿಳಾ ಅಧ್ಯಯನ ತನ್ನ ಅಧ್ಯಯನದ ಮುಖ್ಯ ಕೇಂದ್ರವಾಗಿರಿಸಿಕೊಳ್ಳುತ್ತದೆ. ಮಹಿಳೆಯರ ಬದುಕಿಗೆ ಸಂಬಂಧಿಸಿದ ಎಲ್ಲಾ ವಿಷಯ ವಿಚಾರಗಳನ್ನು ಸ್ತ್ರೀ ಸಂವೇದನೆಯ ನೆಲೆಯಲ್ಲಿ ಚರ್ಚಿಸುವ ಪರೀಕ್ಷಿಸುವ ಆಸಕ್ತಿ ತೋರುತ್ತದೆ.''[೨]

ಸಮಾಜದಲ್ಲಿ ಅನೇಕ ಶ್ರೇಣೀಕರಣ ವ್ಯವಸ್ಥೆಗಳಿವೆ. ವರ್ಗಶ್ರೇಣೀಕರಣ, ವರ್ಣಶ್ರೇಣೀಕರಣಗಳಿದ್ದು, ಅದರಲ್ಲಿ ಲಿಂಗ ಶ್ರೇಣೀಕರಣವೂ ಒಂದಾಗಿದೆ. ಈ ಲಿಂಗ ಸಮಾನತೆ ವ್ಯವಸ್ಥೆಯನ್ನು ಬೇರೆ ಬೇರೆ ದೇಶಗಳಲ್ಲಿ ಸ್ತ್ರೀವಾದಿಗಳು ತರ್ಕಬದ್ಧವಾಗಿ ಮಂಡಿಸುತ್ತಾ ಬಂದಿದ್ದಾರೆ. ''ಮಹಿಳಾ ಅಧ್ಯಯನದ ಹಿಂದಿರುವ ಚಾಲಕ ಶಕ್ತಿ ಸ್ತ್ರೀವಾದ, ಮಹಿಳೆಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವರ ಬೇಡಿಕೆ ಆಸಕ್ತಿಗಳನ್ನು ಎತ್ತಿಹಿಡಿಯುವ ಮಹಿಳಾ ಪರ ಹೋರಾಟವೇ ಸ್ತ್ರೀವಾದ. ಮಹಿಳೆಯರನ್ನು ಪುರುಷ ಪ್ರಧಾನ ವ್ಯವಸ್ಥೆಯಿಂದ ಬಿಡಿಸಿಕೊಳ್ಳುವ ನೆಲೆಯಲ್ಲಿ ಯೋಚಿಸಿದಾಗ ಮಹಿಳೆಯರ ನೈಜ ಚಿತ್ರಣ ದೊರಕುತ್ತದೆ. ಸ್ತ್ರೀವಾದ ಸ್ತ್ರೀ ವಿಮೋಚನೆಯ ಸ್ವರೂಪ ಹೇಗಿರಬೇಕು, ಅದನ್ನು ಹೇಗೆ ಸಾಧಿಸಬೇಕು ಎಂಬುದು ಮಹಿಳಾ ಅಧ್ಯಯನದ ಚೌಕಟ್ಟಿನಲ್ಲಿ ಬರುತ್ತದೆ. ಮಹಿಳೆಯರ ಸ್ಥಿತಿಯನ್ನು ವ್ಯಾಖ್ಯಾನಿಸಿ ಅವರ ಸಮಸ್ಯೆಗಳನ್ನು ಪರಿಕಲ್ಪಿಸಿರುವುದು ಮಹಿಳಾ ಅಧ್ಯಯನದ ಉದ್ದೇಶ. ಇತಿಹಾಸದಲ್ಲಿ ಮಹಿಳೆಯರ ನಿಜಾಂಶವನ್ನು ಹೇಗೆ ವಿರೂಪಗೊಳಿಸಲಾಗಿದೆ ಎಂಬುದನ್ನು ಗುರುತಿಸಿ ಮಹಿಳೆ ಮತ್ತು ಮಹಿಳಾ ವಿಷಯಗಳನ್ನು ಇತ್ಯಾತ್ಮಕವಾಗಿ ಖಚಿತಪಡಿಸುವ ನಿಟ್ಟಿನಲ್ಲಿ ಸ್ತ್ರೀವಾದ ಕೆಲಸಮಾಡುತ್ತದೆ.''[೩] ಮಹಿಳಾ ಅಧ್ಯಯನದ ಉದ್ದೇಶವು ಸಾಮಾಜಿಕ ವಾಸ್ತವಿಕತೆಯನ್ನು ಮಹಿಳಾ ದೃಷ್ಟಿಕೋನದಿಂದ ಅರ್ಥಮಾಡಿಕೊಂಡು ಸಮಾಜದಲ್ಲಿ ಲಿಂಗ ಸಮಾನತೆಯನ್ನು ತರುವುದೇ ಆಗಿರುವುದರಿಂದ ಸ್ತ್ರೀವಾದ ಹಾಗೂ ಮಹಿಳಾ ಅಧ್ಯಯನ ಒಂದಕ್ಕೊಂದು ಪೂರಕವಾಗಿ ಕೆಲಸಮಾಡುತ್ತಿವೆ. ಇದು ಮಹಿಳೆಯರ ಕುರಿತು ನಡೆಯುವ ಅಧ್ಯಯನವನ್ನು ಮಹಿಳಾ ಅಧ್ಯಯನವನ್ನಾಗಿ ಪರಿವರ್ತಿಸಿತು. ಮಹಿಳೆಯರ ಅಧ್ಯಯನದಲ್ಲಿ ಮಹಿಳೆಯರು ಕೇವಲ ವಸ್ತುಗಳಾಗಿರುತ್ತಾರೆ. ಆದರೆ ಮಹಿಳಾ ಅಧ್ಯಯನದಲ್ಲಿ ವಸ್ತುಗಳ ಜೊತೆಗೆ ಅಧ್ಯಯನ ವ್ಯಕ್ತಿಗಳೂ ಆಗಿರುತ್ತಾರೆ. ಸ್ತ್ರೀವಾದಿ ಹಿನ್ನೆಲೆಯನ್ನು ಹೊಂದಿರುವುದರಿಂದ ಮಹಿಳಾ ಅಧ್ಯಯನವನ್ನು ಸ್ತ್ರೀವಾದಿ ಅಧ್ಯಯನ ಎಂದು ಕರೆಯುತ್ತಾರೆ. ಕರೆಯಬಹುದು.[೬] ಮಾನವತಾವಾದವನ್ನು ಪ್ರತಿಪಾದಿಸುವ ಸ್ತ್ರೀವಾದವನ್ನು ಆಧಾರವಾಗಿಟ್ಟುಕೊಂಡಿರುವ ಮಹಿಳಾ ಅಧ್ಯಯನ ಮಹಿಳೆಯರ ಏಳಿಗೆಯ ಮೂಲಕ ಇಡೀ ಸಮಾಜದ ಪ್ರಗತಿಯನ್ನು ಬಯಸುತ್ತದೆ.''[೪]

'ಮಹಿಳಾ ಅಧ್ಯಯನವನ್ನು ಕ್ಲಿಷ್ಟವಾದ ಅಮೂರ್ತವಾಖ್ಯೆಗಳಿಂದ ವ್ಯಾಖ್ಯಾನಿಸಬೇಕಾಗಿಲ್ಲ. ಮಹಿಳಾ ದೃಷ್ಟಿಕೋನದಿಂದ ಮಹಿಳೆಯರನ್ನು ಅಧ್ಯಯನ ಮಾಡುವುದು. ಮಹಿಳಾ ದೃಷ್ಟಿಕೋನದಿಂದ ಜಗತ್ತಿನ ಮಹಿಳೆಯರನ್ನು ನೋಡುವುದು.'[೫] ಮಹಿಳೆಯರ ಅನುಭವಗಳನ್ನು ಆಧರಿಸಿ ಮಹಿಳೆಯರ ವಾಸ್ತವಿಕತೆಯನ್ನು ಸ್ಥಾಪಿಸುವುದೇ ಮಹಿಳಾ ಅಧ್ಯಯನ. ಯಾವುದೇ ಬಗೆಯ ಸಮಾಜದಿಂದ ಮಹಿಳೆಯರನ್ನು ಒಗ್ಗೂಡಿಸಿ ಆಕೆಯನ್ನು

ಮಹಿಳಾ ವಾಹಿನಿಗೆ ತರಿಸಿ ಅಭ್ಯಸಿಸುವುದೇ ಮಹಿಳಾ ಅಧ್ಯಯನ ಸಮಾಜ ವಿಜ್ಞಾನದ ಜೊತೆಗೆ ಮಹಿಳೆಯರ ಮತ್ತು ಮಹಿಳಾ ವಿಷಯಗಳ ಬಗೆಗೆ ಅಧ್ಯಯನ ಮಾಡುವುದೇ ಮಹಿಳಾ ಅಧ್ಯಯನವಾಗಿದೆ.

ಒಟ್ಟಿನಲ್ಲಿ ಮಹಿಳಾ ಅಧ್ಯಯನದ ವ್ಯಾಖ್ಯಾನ ಸಮಾಜವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಾಮಾಜಿಕ ವಾಸ್ತವಿಕತೆಯನ್ನು ಮಹಿಳಾ ಬದುಕಿನ ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕೆಂದು ಒತ್ತಿಹೇಳುತ್ತದೆ. ಜ್ಞಾನದನೆಲೆಯಲ್ಲಿ ಸಮಾನತೆಯನ್ನು ಮಹಿಳಾ ಅಧ್ಯಯನ ಒತ್ತಾಯಿಸುತ್ತದೆ. ಅನಾದಿಕಾಲದಿಂದಲೂ ಮಹಿಳೆ ಸಮಾನತೆಯಿಂದ ಬದಿಗೊತ್ತಲ್ಪಟ್ಟಿರುವುದೇ ಇದರ ಕಳಕಳಿಯ ವಿಷಯವಾಗಿದೆ. ''ಇದು ಪುರುಷರಿಗೆ ಪರ್ಯಾಯವಾಗಿ ಮಹಿಳೆಯರನ್ನು ಗುರುತಿಸುವುದು. ಎಲ್ಲೆಲ್ಲಿ ಮಹಿಳೆಯರು ಇಲ್ಲವೋ ಅಲ್ಲಲ್ಲಿ ಅವರನ್ನು ಸೇರಿಸುವುದು ಎಂಬ ಅರ್ಥಕ್ಕೆ ಸೀಮಿತಗೊಳ್ಳಬಾರದು. ಮಹಿಳೆಯರ ಪರಿಸ್ಥಿತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅರ್ಥಮಾಡಿಕೊಂಡು, ಜಗತ್ತಿನೊಂದಿಗೆ ಮಹಿಳೆಯರ ಸಂಬಂಧ, ಅವರ ತುಳಿತ ಮತ್ತು ತಾರತಮ್ಯಕ್ಕೆ ಕಾರಣಗಳನ್ನು ಕಂಡುಹಿಡಿದು. ಅವರ ಪರಿಸ್ಥಿತಿಯನ್ನು ಬದಲಾಯಿಸಲು ನಡೆಸುವ ಪ್ರಯತ್ನವೇ ಮಹಿಳಾ ಅಧ್ಯಯನ. ಮಹಿಳೆ ಮತ್ತು ಅವಳ ಜೀವನವೇ ಅಧ್ಯಯನದ ಪ್ರಮುಖ ಘಟಕ.''[೬]

''ಮೈತ್ರೇಯಿ ಕೃಷ್ಣರಾಜ ಅವರು ಹೇಳುವಂತೆ ಮಹಿಳಾ ಅಧ್ಯಯನವು ಮೂರು ಕಾರ್ಯಗಳನ್ನು ಹೊಂದಿದೆ. ಗ್ರಹಿಸುವುದು, ಅರಿವು ಮೂಡಿಸುವುದು, ಕ್ರೀಯಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಸಮಾಜದಲ್ಲಿ ಲಿಂಗ ತಾರತಮ್ಯ ಮತ್ತು ಮಹಿಳೆಯರ ತುಳಿತ ಇದೆ. ಎಂದು ಒಪ್ಪಿಕೊಳ್ಳುವುದಾದರೇ ಮಹಿಳಾ ಅಧ್ಯಯನ ನಿಷ್ಪಕ್ಷಪಾತವಾಗಿರುವುದಕ್ಕೆ ಸಾಧ್ಯವಿಲ್ಲ. ಮಹಿಳಾ ಅಧ್ಯಯನವು ಇತರ ಶಾಸ್ತ್ರಗಳಿಗೆ ಸವಾಲುಗಳನ್ನು ಒಡ್ಡುತ್ತದೆ.''[೭] ''ಮಹಿಳಾ ಅಧ್ಯಯನವನ್ನು ಭೌತಿಕ, ರಾಸಾಯನಿಕ ಅಥವಾ ಪ್ರಾಕೃತಿಕ ವಿಜ್ಞಾನಗಳಂತಲ್ಲದೇ ಸಮಾಜವಿಜ್ಞಾನದಂತೆ ಕಾಣಬೇಕು ಎಂಬ ಒಂದು ಚಿಂತನೆಯಿದೆ. ಹೀಗೆ ಚಿಂತಿಸುವವರು ಸಮಾಜಶಾಸ್ತ್ರಜ್ಞರಾಗಿದ್ದು. ಬದುಕಿನ ಎಲ್ಲಾ ಸಮಸ್ಯೆಗಳನ್ನು ಮಹಿಳಾ ನೆಲೆಯಲ್ಲಿ ಗಮನಿಸುವ ಆಸಕ್ತಿ ತೋರುತ್ತಾರೆ. ಮಹಿಳಾ ಅಧ್ಯಯನವು ಚರಿತ್ರೆ, ಮನಃಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ, ಮಾನವಶಾಸ್ತ್ರ, ಅರ್ಥಶಾಸ್ತ್ರ ಹೀಗೆ ಎಲ್ಲಾ ವಿಷಯಗಳೊಂದಿಗೆ ಸಂವಾದಗಳನ್ನು ಬೆಳೆಸುವ ಅಧ್ಯಯನದ ಭಾಗವಾಗಿ ರೂಪಗೊಂಡಿದೆ. ಈ ಅಧ್ಯಯನಕ್ಕೊಂದು ಶಿಸ್ತುದೊರೆತು ಶೈಕ್ಷಣಿಕವಾಗಿ ಅದನ್ನು ವ್ಯಾಖ್ಯಾನಿಸುವುದರಿಂದ ಮೊದಲುಗೊಂಡು ಕ್ರಮಬದ್ಧವಾಗಿ ಅಭ್ಯಸಿಸುವವರೆಗೂ ಪ್ರಯತ್ನಿಸಲಾಗುತ್ತದೆ. ಸ್ತ್ರೀವಾದಿಗಳು ಸ್ತ್ರೀ ಸಂವೇದನೆಯುಳ್ಳವರು ಮಹಿಳಾ ಅಧ್ಯಯನವನ್ನು ಒಂದು ಗಂಭೀರ ಶೈಕ್ಷಣಿಕ ವಿಧಾನವಾಗಿ ರೂಪಿಸಿಕೊಂಡಿದ್ದಾರೆ.''[೮]

''ಮುಖ್ಯವಾಗಿ ಮಹಿಳಾ ಅಧ್ಯಯನ ಮಹಿಳೆಯರ ಆಲೋಚನೆಯ ಚಿಂತನೆಗಳ ವಿಶಿಷ್ಟತೆಗಳನ್ನು ಗಮನದಲ್ಲಿರಿಸಿಕೊಳ್ಳುತ್ತಲೇ ಅವಳ ಸಾಧ್ಯತೆ ಸಾಮರ್ಥ್ಯಗಳ ಸ್ವರೂಪವನ್ನು ಅವಳಿಗಾದ ಅನ್ಯಾಯಗಳು, ಶೋಷಣೆಗಳು ಉಂಟಾಗುವ ತೊಂದರೆ ತೊಡಕುಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುತ್ತದೆ. ಅದಕ್ಕೆ ದೊರಕಿಸಬೇಕಾದ ಪರಿಹಾರ ಮಾರ್ಗೋಪಾಯಗಳು ಇತ್ಯಾದಿ ವಿಚಾರಗಳ ಕುರಿತು ಚಿಂತಿಸುತ್ತದೆ. ಪ್ರಧಾನ ಸಂಸ್ಕೃತಿಯಲ್ಲಿ ಲಿಂಗಾಧಾರಿತ ಸಾಮಾಜಿಕ ವ್ಯವಸ್ಥೆ ಮಹಿಳೆಯರ ಸ್ಥಿತಿಗತಿಗಳಿಗೆ ರೂಪಿಸಿದ ನಿಯಮಗಳು, ಅದರಿಂದ ಅವಳಿಗುಂಟಾದ ಅವಕಾಶವಂಚಿತಸ್ಥಿತಿ, ಗೃಹಬಂಧನ ಗೃಹ ಸಂಬಂಧಿ ನೆಲೆಯಲ್ಲಿ ಮಾತ್ರ ತನ್ನನ್ನು ತಾನು

ಗುರುತಿಸಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ, ಇದರಿಂದ ಪುರುಷ ಜಗತ್ತಿಗೆ ಉಂಟಾದ ಲಾಭ, ಒಟ್ಟು ಬದುಕಿನಲ್ಲಿ ಹೆಣ್ಣಿಗೆ ಉಂಟಾದ ಅನ್ಯಾಯ ಇಂತಹ ಗಂಭೀರ ವಿಷಯಗಳು ಮಹಿಳಾ ಅಧ್ಯಯನದ ಪ್ರಧಾನ ಚರ್ಚೆಗಳಾಗಿವೆ.''[೯]

''ಮಹಿಳಾ ಅಧ್ಯಯನ ಸಮಾಜದ ರಚನೆ ಹಾಗೂ ಕ್ರಿಯೆಗಳು ಮಹಿಳೆಯರ ಲೈಂಗಿಕ ವಿಷಯಗಳನ್ನು ಕುರಿತಂತೆ ವೈಜ್ಞಾನಿಕವಾಗಿ, ಕ್ರಮಬದ್ಧವಾಗಿ ಅಧ್ಯಯನ ಮಾಡುತ್ತದೆ. ಇದು ಯಾವುದೇ ಲಿಂಗಾಧಾರಿತ ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ಸಂಬಂಧಗಳೊಡನೆ ಮಹಿಳೆಯ ಅಂತಸ್ತು ಸ್ಥಾನ-ಮಾನಗಳನ್ನು ಕುರಿತು ಯೋಚಿಸುತ್ತದೆ. ಇದು ಯಾವುದೇ ಸಮಾಜದ ಸಾಮಾಜಿಕ ರಚನೆಯಲ್ಲಿ ಸ್ತ್ರೀ ಪುರುಷರ ನಡುವಿನ ಅಧಿಕಾರ ಸಂಬಂಧಗಳ ಸ್ವರೂಪವನ್ನು ವೈಜ್ಞಾನಿಕ ತಿಳುವಳಿಕೆಯಿಂದ ನೋಡುವ ಒಂದು ವಿಧಾನವೂ ಆಗಿದೆ. ಹೀಗೆ ಮಾಡುವ ಸಂದರ್ಭದಲ್ಲಿ ಇದು ಮಹಿಳೆಯರ ಸ್ಥಾನಮಾನಗಳು ಆಕೆಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ರೂಪ ಹಾಗೂ ಅವಳ ಸಮಸ್ಯೆಗಳು ಅವಳನ್ನು ಕುರಿತು ವಾಸ್ತವಿಕ ಹಾಗೂ ಸಾಮಾನ್ಯ ಗ್ರಹಿಕೆಗಳ ನಡುವಿನ ವೈರುಧ್ಯಗಳನ್ನು ಕುರಿತು ವಿಚಾರಗಳನ್ನು ಚರ್ಚಿಸುತ್ತದೆ.''[೧೦]

ಮಹಿಳಾ ಅಧ್ಯಯನವು ಕೇವಲ ಮಹಿಳೆಯರ ಮೇಲೆ ಕೇಂದ್ರೀಕರಿಸುವುದಲ್ಲ. ಇದುವರೆಗೆ ಪುರುಷ ಪಕ್ಷಪಾತವಾಗಿದ್ದ ಸಮಾಜವನ್ನು ಪರಿಶೀಲಿಸುವ ವಿಮರ್ಶಾತ್ಮಕ ಸಾಧನ. ಮಹಿಳಾ ಅಧ್ಯಯನ ಒಂದು ಶಾಸ್ತ್ರವೂ ಹೌದು, ಹೋರಾಟವೂ ಹೌದು. ಶಾಸ್ತ್ರವಾಗಿ ಸಿದ್ಧಾಂತ ಪರಿಕಲ್ಪನೆಗಳನ್ನು ಹುಟ್ಟಿಸುತ್ತದೆ. ಮಹಿಳೆಯರ ಬಗ್ಗೆ ವಾಸ್ತವಾಂಶಗಳನ್ನು ಬೆಳಕಿಗೆ ತರುತ್ತದೆ. ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನಿಸುತ್ತದೆ.''[೧೧] ಎಲ್ಲ ಮಹಿಳೆಯರು ಸಮಾನ ಶೋಷಿತರು. ಯಾವುದೇ ವರ್ಗದವರಾಗಲೀ, ವರ್ಣದವರಾಗಲೀ, ಜಗತ್ತಿನ ಎಲ್ಲ ಮಹಿಳೆಯರು ಸಮಾನ ಶೋಷಿತರಾಗಿದ್ದಾರೆ. ಹೀಗೆ ಶೋಷಣೆಗೆ ಒಳಗಾಗಿರುವ ಮಹಿಳೆಯರ ಬದುಕನ್ನು ಹಂತ ಹಂತವಾಗಿ ತೆರೆದಿಡುವ ಪ್ರಯತ್ನವನ್ನು ಸ್ತ್ರೀವಾದಿಗಳು ಮತ್ತು ಮಹಿಳಾ ಅಧ್ಯಯನಗಳು ಮಾಡಿಕೊಂಡು ಬರುತ್ತಲಿವೆ.

ಸಮಾಜದಲ್ಲಿರುವ ಲಿಂಗ ಶ್ರೇಣೀಕರಣ ವ್ಯವಸ್ಥೆಯಿಂದಾಗಿ ಮಹಿಳೆಯರು ಸದಾ ಸಮಸ್ಯೆಗಳನ್ನು, ಶೋಷಣೆಯನ್ನು ಎದುರಿಸುತ್ತಲೇ ಇದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ದ್ವಿತೀಯ ದರ್ಜೆಯವಳನ್ನಾಗಿಯೇ ನೋಡುವ ಪರಿಪಾಠ ಇವತ್ತಿಗೂ ಅಸ್ತಿತ್ವದಲ್ಲಿರುವುದು ಕಟುಸತ್ಯವಾಗಿದೆ. ಅದು ಸರ್ವವೇದ್ಯವೂ ಆಗಿದೆ. ''ಮಹಿಳಾ ಅಧ್ಯಯನ ಮಹಿಳೆಯ ಅಭಿವೃದ್ಧಿ, ಅನೇಕ ಕಾರ್ಯಯೋಜನೆಗಳ ಮೂಲಕ ಆಕೆಯ ಸಬಲೀಕರಣ ಈ ನಿಟ್ಟಿನಲ್ಲಿ ರಾಷ್ಟ್ರೀಯ ಅಂತರಾಷ್ಟ್ರೀಯ ಸಂಸ್ಥೆಗಳು ಕೈಗೊಂಡಿರುವ ಕಾರ್ಯಕ್ರಮಗಳನ್ನು ಕುರಿತು ಚಿಂತನೆಗಳನ್ನು ಮಾಡುತ್ತದೆ. ಇದು ಮಹಿಳೆಯರ ಪಾರಂಪರಿಕ ಹಾಗೂ ಪ್ರಸ್ತುತ ಪಾತ್ರಗಳು, ಜೊತೆಗೆ ಆಧುನಿಕ ತಾಂತ್ರಿಕ ವೈಜ್ಞಾನಿಕ ಜಗತ್ತಿನಲ್ಲಿ ಬದಲಾಗುವ ಹೆಣ್ಣಿನ 'ಲಿಂಗ' ಪಾತ್ರಕ್ಕಿಂತ 'ಲಿಂಗತ್ವದ' ಪರಿಕಲ್ಪನೆಯನ್ನು ಒಂದು ವ್ಯಾಪ್ತವಾದ ಕೇಂದ್ರದಲ್ಲಿ ಚರ್ಚಿಸುತ್ತದೆ. ಹೆಣ್ಣಿನ ಲಿಂಗತ್ವಕ್ಕೆ, ಲಿಂಗ ಪರಿಕಲ್ಪನೆಗಿಂತ ಹೆಚ್ಚಿನ ಶಕ್ತಿ ಇದೆ. ಕೆಲಸಕಾರ್ಯಗಳ ವಿವರಣೆ ಲಿಂಗತಾರತಮ್ಯ, ಲಿಂಗತ್ವ ಅಸಮಾನತೆ ಇಂತಹ ಲಿಂಗಾಧಾರಿತ ಅಸಮಾನತೆಗಳನ್ನು ಸೃಷ್ಟಿಮಾಡಿದ ಲಿಂಗರಾಜಕಾರಣಗಳೂ ಇಲ್ಲಿಯ ಚರ್ಚೆಯ ವಿಷವಾಗುತ್ತವೆ. ಸಮಾಜದಲ್ಲಿ ಹೆಣ್ಣನ್ನು ಕುರಿತ ಕ್ರಮಬದ್ಧ ಅಧ್ಯಯನವೇ ಮಹಿಳಾ ಅಧ್ಯಯನದ ಗುರಿ.''[೧೨]

''ಮಹಿಳೆಯ ಬಗೆಗೊಂದು ಭ್ರಮಾತ್ಮಕ ಲಿಂಗತ್ವದ ಪರಿಕಲ್ಪನೆ ಹಾಗೂ ಮಾದರಿಗಳು ಸೃಷ್ಟಿಗೊಂಡಿದ್ದು ಅದರಲ್ಲಿ ಶ್ರೇಷ್ಠತ್ವ, ಕನಿಷ್ಠತ್ವದ ಪ್ರಶ್ನೆಗಳು ಕಾಣಿಸಿಕೊಂಡಿವೆ. ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ನಂಬಿಕೆ ಸ್ಥಾಪಿತಗೊಂಡಿದ್ದು, ಸಾಮಾಜಿಕ ಪರಂಪರೆ ಆರೋಪಿಸಿರುವ ಹೆಣ್ಣು ಗಂಡುಗಳ ಪಾತ್ರ, ಕೆಲಸ ಕಾರ್ಯಗಳು, ತನ್ಮೂಲಕ ಯಾರೋ ಒಬ್ಬರಿಗೆ ಉಂಟಾಗುತ್ತಿರುವ ಲಾಭ, ಮತ್ತೊಬ್ಬರ ನಷ್ಟವಾಗಿ ರೂಪಗೊಳ್ಳುತ್ತಿರುವ ಸಾಮಾಜಿಕ ಅನ್ಯಾಯವನ್ನು ಮಹಿಳಾ ಅಧ್ಯಯನ ಪ್ರಶ್ನಿಸುತ್ತದೆ. ಜೈವಿಕ ನೆಲೆಯಲ್ಲಿ ರೂಪಗೊಂಡಿರುವ ಲಿಂಗ ಭಿನ್ನತೆಯನ್ನು 'ತರ' 'ತಮದ' ಮಾನದಂಡವಾಗಿ ಬಳಸಿಕೊಳ್ಳುವದರ ವಿರುದ್ಧ ಮಹಿಳಾ ಅಧ್ಯಯನ ರೂಪಗೊಳ್ಳಲು ಕಾರಣವಾಗಿದೆ.''[೧೩] ''ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಹಿಳೆಯರ ಸಾಮರ್ಥ್ಯಗಳನ್ನು ಎತ್ತಿಹಿಡಿಯುತ್ತಲೇ, ಅವಳನ್ನು ಶೋಷಣೆಗೆ ಒಳಗುಮಾಡಿ ತನ್ನ ದಮನಕಾರಿ ಪ್ರವೃತ್ತಿಯನ್ನು ತೋರಿಸುವ ಪ್ರಧಾನ ಸಂಸ್ಕೃತಿಯ ದಬ್ಬಾಳಿಕೆಯನ್ನು ವಿರೋಧಿಸುವುದೂ ಕೂಡ ಮಹಿಳಾ ಅಧ್ಯಯನದ ಗುರಿಯಾಗಿದೆ. ಇಂತಹ ಅಧ್ಯಯನಗಳು ಮಹಿಳೆಯ ಬಹುಮುಖಿ ಸತ್ವವನ್ನು ಗುರುತಿಸಲು ಸಹಾಯಕವಾಗಿದ್ದು, ಒಟ್ಟು ಬದುಕಿನ ವಿವಿಧ ಕ್ಷೇತ್ರಗಳ ಜೊತೆಗೆ ಅವಳ ಸಂಬಂಧವನ್ನು ಗುರುತಿಸುತ್ತದೆ. ಜೊತೆ ಜೊತೆಗೆ ಇಂದಿನ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಅವಳ ಬದಲಾದ ಪಾತ್ರ ಮತ್ತು ಅಂತಸ್ತುಗಳಲ್ಲಿನ ತ್ವರಿತಗತಿಯ ಬದಲಾವಣೆಗಳನ್ನು ವಿಶ್ಲೇಷಿಸುತ್ತದೆ. ಹೊಸ ಪಾತ್ರ ವ್ಯವಸ್ಥೆಗಳಲ್ಲಿ, ಅವಳ ಮನೋಭಾವದಲ್ಲಿ ಉಂಟಾದ ಬದಲಾವಣೆಗಳು ಶಿಕ್ಷಣ, ಉದ್ಯೋಗ ತನ್ಮೂಲಕ ಕೌಟುಂಬಿಕ ಪರಿಸ್ಥಿತಿಗಳು, ಇಂತಹ ಬದಲಾದ ಪರಿಸ್ಥಿತಿಯ ಮೂಲಕ ಆಕೆ ಪಡೆದದ್ದು, ಕಳೆದುಕೊಂಡದ್ದು. ಇವೆರಡರ ಚರ್ಚೆಯ ಅಧ್ಯಯನವು ಮಹಿಳಾ ಅಧ್ಯಯನವೂ ಇಲ್ಲುಂಟು.''[೧೪]

''ಮಹಿಳಾ ಅಧ್ಯಯನ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವುದರೊಂದಿಗೆ ಅವರಲ್ಲಿ ಜಾಗೃತಿ ಮೂಡಿಸುವತ್ತ ಹಾಗೂ ಇದಕ್ಕಾಗಿ ಪರಿಹಾರ ಕಾರ್ಯಕ್ರಮಗಳು, ಯೋಜನೆಗಳನ್ನು ರೂಪಿಸುತ್ತಲೂ ದುಡಿಯುತ್ತಿದೆ. ಇದು ಇಂದು ವಿಶ್ವವಿದ್ಯಾಲಯಗಳಲ್ಲಿ ಐಚ್ಛಿಕ ವಿಶೇಷ ವಿಷಯಗಳಾಗಿ ಅಧ್ಯಯನಕ್ಕೆ ಒಳಪಡುತ್ತಿದೆ. ಸೈದ್ಧಾಂತಿಕ ತಾತ್ವಿಕ ನೆಲೆಗಳಲ್ಲಿ ಪದವಿ ಕಾಲೇಜು, ವಿಶ್ವವಿದ್ಯಾಲಯ ಮಟ್ಟಗಳಲ್ಲಿ ಅಧ್ಯಯನಕ್ಕೆ ಒಳಪಡುತ್ತಿದೆ. ಎನ್.ಜಿ.ಓಗಳು ಮಹಿಳಾ ಸ್ವಯಂ ಸೇವಾಸಂಸ್ಥೆಗಳ ಮೂಲಕ ಕಾರ್ಯಾಚರಣೆಗೂ ಇಳಿಯುತ್ತಲಿದೆ. ಹೆಣ್ಣು ಮಕ್ಕಳು ಅವರು ಯಾವುದೇ ವರ್ಗಕ್ಕೆ ಸೇರಿದವರಾದರೂ ಶೋಷಣೆಯ ಸಂದರ್ಭದಲ್ಲಿ ಒಂದೇ ರೀತಿಯ ಶೋಷಣೆ, ದೌರ್ಜನ್ಯ, ಅನ್ಯಾಯಗಳಿಗೆ ಒಳಗಾಗುತ್ತಾರೆ. ಎಂದು ನಂಬಿ ಅದರ ವಿರುದ್ಧ ಹೋರಾಡುತ್ತದೆ. ಹೆಣ್ಣುಮಕ್ಕಳು ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿ ಅನುಭವಿಸಬಹುದಾದ ಲಿಂಗಾಧಾರಿತ ಅಸಮಾನತೆಗಳನ್ನು ವಿರೋಧಿಸುತ್ತದೆ. ಮಹಿಳಾ ಅಧ್ಯಯನ ಮಹಿಳೆಯಿಂದ ಆರಂಭವಾಗಿ ಒಟ್ಟು ಮಾನವ ಸಂತತಿಯನ್ನು ಒಳಗೊಳ್ಳುತ್ತದೆ. ಒಟ್ಟು ವ್ಯವಸ್ಥೆಯನ್ನು ಮಹಿಳಾ ಪರ ದೃಷ್ಟಿಯಿಂದ ವಿಶ್ಲೇಷಿಸಲು ಬಯಸುತ್ತದೆ. ಅಂತಹ ಪ್ರಯತ್ನವನ್ನು ಸ್ತ್ರೀ ಪುರುಷ ಬೇಧ ಒಳಗೊಳ್ಳುವದಿಲ್ಲ ಎಂಬುದು ಮುಖ್ಯವಾಗುತ್ತದೆ.''[೧೫] ಇದೇ ರೀತಿ ಚರ್ಚಿಸುತ್ತಾ ಹೋರಟರೇ ಹೀಗೆಯೇ ಅದು ಆಳವಾದ ಚರ್ಚೆಗೆ ಜಾರಿ ಬಿಡುತ್ತದೆ. ಹಾಗಾಗಿ ನನ್ನ ಅಧ್ಯಯನವು 'ಧರ್ಮ' ಎಂಬ ಸಾಮಾಜಿಕ ಸಂಸ್ಥೆಗೆ ಸೇರಿದ್ದರ ಹಿನ್ನೆಲೆಯಲ್ಲಿ ಬ್ರಾಹ್ಮಣಮಹಿಳೆಯ ಕುರಿತು ಅಧ್ಯಯನ ನಡೆಸಬಯಸುತ್ತೇನೆ.

ಮಾನವ ವಿಕಾಸದ ಇತಿಹಾಸದೊಂದಿಗೆ ತಳುಕುಹಾಕಿಕೊಂಡು ಬಂದಿರುವ ಪದವೆಂದರೇ 'ಧರ್ಮ' ಧರ್ಮ ಎನ್ನುವ ಪದಕ್ಕೆ ಸಂವಾದಿಯಾಗಿ ರಿಲಿಜನ್ (Religion)ಎನ್ನುವ ಪದವನ್ನು ಇಂಗ್ಲಿಷ ಭಾಷೆಯಲ್ಲಿ ಬಳಸಲಾಗುತ್ತಿದೆ. ಲ್ಯಾಟಿನ್ ಭಾಷೆಯಲ್ಲಿ ಬಳಕೆಯಲ್ಲಿರುವ 'ರಿಲಿಗೋ'ಎನ್ನುವ ನಾಮಪದದಿಂದ ಇದು ನಿಷ್ಪತ್ತಿಹೊಂದಿದೆ. 'ರಿಲಿಗೋ' ಪದಕ್ಕೆ ಒಂದಕ್ಕಿಂತ ಹೆಚ್ಚು ಅರ್ಥಗಳಿವೆ. ಭಕ್ತಿಯಿಂದ ಕೂಡಿದ ಪೂಜಾ ಕೈಂಕರ್ಯ (ಪವಿತ್ರ)ಒಂದು ಅರ್ಥವಾದರೆ, ರಿಲಿಗೇರ್ (Religare) (Re: back, and ligare to bind) ಹಿಂದಿನದನ್ನು ಒಟ್ಟು ಗೂಡಿಸುವ ಎನ್ನುವ ಅರ್ಥವನ್ನು ರಿಲಿಗೇರ್ (Religare) ಎನ್ನುವುದು ಹತ್ತಿರ ಸಂಬಂಧ ಹೊಂದು ಎನ್ನುವ ಅರ್ಥವನ್ನು ಕೊಡುತ್ತವೆ. ಈ ಮೂರು ಕ್ರಿಯಾಪದಗಳ ಅರ್ಥಗಳೆಲ್ಲವನ್ನು ಒಳಗೊಂಡಿರುವ ನಾಮಪದವೆಂದರೇ 'ರಿಲಿಗೋ' ಎನ್ನುವುದು. Religion ಎಂದರೇ to tie back ಎನ್ನುವ ಅರ್ಥವಿರಬಹುದು ಎನ್ನುವುದು ವಿದ್ವಾಂಸರ ಅಭಿಪ್ರಾಯ. ಎಂದರೇ 'ಹಿಂದಿನದಕ್ಕೆ ಅಂಟಿಕೊಂಡಿರು' ಎಂತಲೂ ಆಗುತ್ತದೆ. ರಿಲಿಜನ್ ಪದಕ್ಕೆ ಲ್ಯಾಟಿನ್ ಭಾಷೆಯಲ್ಲಿ 'ಪೂಜ್ಯ' (Reverence)ಎನ್ನುವ ಅರ್ಥವಿರುವುದರಿಂದ ಅದು 'ಪವಿತ್ರವಾದ' ಎನ್ನುವ ಅರ್ಥವನ್ನು ಪಡೆಯಬಹುದು ಈ ಅರ್ಥದಲ್ಲೆ ರಿಲಿಜನ್ ಎನ್ನುವ ಪದ ಹೆಚ್ಚು ಬಳಕೆಯಲ್ಲಿರುವುದು ಎನ್ನುವುದು ಬಹುಜನ ವಿದ್ವಾಂಸರ ಅಭಿಪ್ರಾಯ.

ಧರ್ಮವು ಮಾನವರ ಸಮೂಹ ಜೀವನದ ಬಿಡಿಸಲಾರದ ಒಂದು ಭಾಗವಾಗಿದೆ. ''ಮನುಷ್ಯ ಕೇವಲ ರೊಟ್ಟಿಯಿಂದ ಬದುಕಲಾರ ಅವನಿಗೆ ಧರ್ಮ ಬೇಕು ದೇವರು ಬೇಕು.''[೧೭] ಸಂಸ್ಕೃತ ಭಾಷಾ ಜನ್ಯವಾದ ''ಧೃ'' ಪದದ ಮೂಲಧಾತು ಆಗಿದೆ 'ಧೃ' ಎಂದರೇ ಧರಿಸು, (hold) ಧಾರಣೆಮಾಡು, ಬೆಂಬಲಿಸು, ಅಥವಾ ಪೋಷಣೆಮಾಡು, ಹಿಡಿದಿಟ್ಟುಕೊಳ್ಳುವುದು ಎತ್ತಿಹಿಡಿ (uphold) ಮೊದಲಾದ ಅರ್ಥಗಳನ್ನು ಹೊಂದಿದೆ. ಮಹಾಭಾರತದ ಕರ್ಣಪರ್ವದಲ್ಲಿ ''ಧಾರಣಾತ್ ಧರ್ಮ, ಇತಾಹುಃ 'ಧರ್ಮಾಧಾರಯತಿ ಪ್ರಜಾ''[೧೮] ಎನ್ನುವ ಮಾತು ಬರುತ್ತದೆ ಅಂದರೆ ನಾವು ಧರ್ಮವನ್ನು ಅನುಸರಿಸಿದರೆ, ಪೋಷಣೆಮಾಡಿದರೇ ಧರ್ಮವು ನಮ್ಮನ್ನು ಬೆಂಬಲಿಸುತ್ತದೆ. ಎತ್ತಿಹಿಡಿಯುತ್ತದೆ ತೀರ ಸಾಮಾನ್ಯವಾಗಿ ಹೇಳಬೇಕೆಂದರೇ ಅತಿಮಾನುಷ ಶಕ್ತಿಗಳ ಬಗ್ಗೆ ಇಟ್ಟುಕೊಂಡಿರುವ ನಂಬಿಕೆಯೇ ಧರ್ಮವಾಗಿದೆ.

ವಾಖ್ಯೆಗಳು

ಇ.ಬಿ. ಟೈಲರ್: ''ದೈವಿಕ ಜೀವಿಗಳಲ್ಲಿರುವ ಶ್ರದ್ಧೆಯೇ ಧರ್ಮ''

ಮೆಕೈವರ್: ''ಮಾನವ ತನಗಿಂತ ಮಿಗಿಲಾದ ಶಕ್ತಿಯಲ್ಲಿ ಇಟ್ಟುಕೊಂಡಿರುವ ನಂಬಿಕೆಯೇ ಧರ್ಮವಾಗಿದೆ''

ಆಗ್‌ಬರ್ನ ಮತ್ತು ನಿಫಕಾಪ್: ''ಅಲೌಕಿಕ ಅಥವಾ ಅಗೋಚರವಾದ ಶಕ್ತಿಗಳ ಬಗ್ಗೆ ಮಾನವನಿಗಿರುವ ಮನೋಭಾವವೇ ಧರ್ಮ''

ಡರ್ಕಿಂ: ''ಪ್ರತ್ಯೇಕಿಸಲ್ಪಟ್ಟ ಮತ್ತು ನಿಷೇದಿಸಲ್ಪಟ್ಟಿರುವ ಪವಿತ್ರ ವಸ್ತುಗಳ ಬಗ್ಗೆ ಮಾನವನ ನಂಬಿಕೆ ಮತ್ತು ಆಚರಣೆಗಳ ಒಟ್ಟು ಮೊತ್ತದ ವ್ಯವಸ್ಥೆಯೇ ಧರ್ಮ''

ಮ್ಯಾಕ್ಸಮುಲ್ಲರ: ''ಅನಂತವಾದ ದಿವ್ಯಶಕ್ತಿಯ ಕೃಪೆಗೆ ಪಾತ್ರನಾಗಲು ಮಾನವನಿಗೆ ಸಹಾಯಕವಾಗುವ ಅವನ ಪ್ರವೃತ್ತಿಯೇ ಧರ್ಮವಾಗಿದೆ''

ಸಮಕಾಲೀನ ಬದುಕಿನಲ್ಲಿ ಮಹಿಳೆಯರ ಸ್ಥಾನ ಹಾಗೂ ಪಾತ್ರಗಳನ್ನು ಭಯ ಹುಟ್ಟಿಸುವಂಥಹ ರೀತಿಗಳಲ್ಲಿ ಪ್ರಭಾವಿಸುತ್ತಿರುವ ವ್ಯವಸ್ಥೆಗಳಲ್ಲಿ ಧರ್ಮವೂ ಒಂದು. ಎಲ್ಲ ಧರ್ಮಗಳಲ್ಲೂ ಪ್ರಗತಿಪರ ಮೌಲ್ಯಗಳು ಹಾಗೂ ಆಚರಣೆಗಳು ಅಸ್ತಿತ್ವದಲ್ಲಿದ್ದರೂ, ಅವುಗಳಿಗೆ ಹೆಚ್ಚು ಪ್ರಚಾರವಿಲ್ಲ. ಇದಕ್ಕೆ ಪ್ರತಿಯಾಗಿ ಧರ್ಮಗಳು ಸ್ತ್ರೀಯರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ನಡೆಸಿಕೊಳ್ಳುತ್ತಿವೆ. ಧರ್ಮಗಳು ಸ್ತ್ರೀಯರ ಬಗೆಗೆ ದ್ವಂದ್ವಭಾವಗಳನ್ನು ಪ್ರತಿಪಾದಿಸುತ್ತವೆ. ಒಂದೆಡೆ ಆಕೆಯನ್ನು ದೇವತೆ ಎನ್ನುವುದು, ಇನ್ನೊಂದೆಡೆ ಆಕೆಯ ಕ್ರೌರ್ಯಕ್ಕೆ ಈಡು ಮಾಡುವುದನ್ನು ಮಾಡಿಕೊಂಡು ಬಂದಿವೆ.

ಇದುವರೆವಿಗೂ ಧರ್ಮ ಎನ್ನುವ ಸಂಸ್ಥೆಯು ಹುಟ್ಟಿಕೊಂಡಿದ್ದು ಪುರುಷನ ಮನಸ್ಸಿನಲ್ಲಿ ಮತ್ತು ಅದಕ್ಕೆ ರೂಪರೇಷಗಳನ್ನು ಹಾಕಿದವರೆಲ್ಲಾ ಪುರುಷರೇ. ಧಾರ್ಮಿಕ ಆಚರಣೆಗಳನ್ನು ನಿರ್ದೇಶಿಸುತ್ತಿದ್ದವರು ಹೆಚ್ಚಾಗಿ ಪುರುಷರೇ ಹಾಗಾಗಿ ಸ್ತ್ರೀಗೆ ಒಂದು ಸ್ವತಂತ್ರ ಅಸ್ತಿತ್ವವಿದೆ ಆಕೆ ವ್ಯಕ್ತಿಯಾಗಿ ಎಲ್ಲ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸಬಹುದೆಂಬ ಅಂಶಕ್ಕೆ ಪ್ರಾಮುಖ್ಯತೆಯನ್ನೆ ನೀಡಲಿಲ್ಲ.

ವರ್ಗ ವರ್ಣ ಪದ್ಧತಿಯ ಮೂಲಕ ರೂಪಗೊಂಡಂತಹ ಸಮಾಜದಲ್ಲಿ ಶ್ರೇಷ್ಠ ಕನಿಷ್ಠ ಎಂಬ ಭಾವನೆಗಳು ಉಗಮಗೊಳ್ಳತೊಡಗಿದವು. ''ಬ್ರಹ್ಮ ವಿರಾಟ '(ಪುರುಷನ) ತಲೆಯಿಂದ ಬ್ರಾಹ್ಮಣರು, ತೋಳಿನಿಂದ ಕ್ಷತ್ರಿಯರು ತೊಡೆಯಿಂದ ಶೂದ್ರರು, ಪಾದದಿಂದ ವೈಶ್ಯರು ಹುಟ್ಟಿಕೊಂಡರೆಂಬ ಪ್ರತೀತಿ ಇದೆ. ನಿಜವಾದ ಅರ್ಥದಲ್ಲಿ ಹೆಳುವದಾದರೇ ವ್ಯಕ್ತಿಗಳುಮಾಡುವ ವೃತ್ತಿಯ ಆಧಾರದಮೇಲೆ ಅವರನ್ನು ಗುರುತಿಸಲಾಗುತ್ತಿತ್ತು. ವಿಪರ್ಯಾಸವೆಂದರೇ ಸೃಷ್ಠಿಯಲ್ಲಿ ನಿಮಿತ್ತಮಾತ್ರನಾದ ಗರ್ಭಾಶಯವೇ ಇಲ್ಲದ ಪುರುಷ ಇಲ್ಲಿ ತನ್ನ ತಲೆ ತೋಳು, ತೊಡೆ ಕಾಲುಗಳಲ್ಲಿ ಸೃಷ್ಟಿ ಕ್ರಿಯೆಮಾಡತೊಡಗಿದ'' ಇದು ಮುಂದೆ ಶ್ರೇಷ್ಠ ಕನಿಷ್ಠ ಭಾವನೆಗಳನ್ನು ಹುಟ್ಟುಹಾಕಿ ಜಾತಿ ಬೇಧದಂತಹ ಶ್ರೇಣೀಕರಣದ ಸಮಸ್ಯೆಗೆ ಎಡೆಮಾಡಿಕೊಟ್ಟಿತು. ಹೆಣ್ಣು ಕೂಡ ಇಲ್ಲಿ ಒಂದು ಜಾತಿಯಾಗಿ ಗುರುತಿಸಲ್ಪಡುತ್ತಾಳೆ. ಕನಿಷ್ಠ ವರ್ಗದ ಹೆಣ್ಣು, ಸೇವಕಿಯಾಗಿ ಸ್ಥಾನ ಪಡೆದರೇ ಶ್ರೇಷ್ಠವೆಂದು ಹೇಳಿಕೊಳ್ಳುವ ಬ್ರಾಹ್ಮಣರಲ್ಲಿಯೂ ಅವಳ ಸ್ಥಾನ ಸೇವಕಿಯದೇ ಆಗಿದೆ. ಶ್ರೇಷ್ಠತೆಯ ತೆರೆಮರೆಯಲ್ಲಿ ಅವಳ ಶೋಷಣೆ ನಡೆಯುತ್ತಿದೆ. ಲಿಖಿತ ಮತ್ತು ಮೌಖಿಕ ಪರಂಪರೆಯಲ್ಲಿ ನೈಜವಾದ ಅವಳ ಚಹರೆಯ ಹುಡುಕಾಟ ಮತ್ತು ಗುರುತಿಸುವಿಕೆಯು ಸಾಮಾಜಿಕ ಅಧ್ಯಯನದ ಗಂಭೀರ ವಿಷಯವಾಗಿದೆ ಇದು ನನ್ನ ಅಧ್ಯಯನದ ಉದ್ದೇಶವೂ ಆಗಿದೆ. ಪ್ರತಿಧರ್ಮದಲ್ಲೂ ಎರಡು ದೃಷ್ಟಿಕೋನಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಅವುಯಾವವೆಂದರೇ

೧. ಲಿಖಿತ ಧಾರ್ಮಿಕ ಇತಿಹಾಸ Written history.

೨. ಮೌಖಿಕ ಧಾರ್ಮಿಕ ಇತಿಹಾಸ Oral history.

೧. ಲಿಖಿತ ಧಾರ್ಮಿಕ ಇತಿಹಾಸದಲ್ಲಿ ಹೆಣ್ಣು ಎಂದರೇ ಹೀಗೇ ಇರಬೇಕು ಪ್ರತಿ ಅವಸ್ಥೆಯಲ್ಲೂ ಅವಳು ಹೀಗೇ ಇರಬೇಕು, ವರ್ತಿಸಬೇಕೆಂದು ದಾಖಲಿಸಲಾಗುತ್ತದೆ.

೨. ಮೌಖಿಕ ಧಾರ್ಮಿಕ ಇತಿಹಾಸದಲ್ಲಿ ದಾಖಲೆ ಇರದೇ ರೂಢಿ ಸಂಪ್ರದಾಯ ಆಚರಣೆಗಳ ಮೂಲಕ ನೀತಿ ನಿಯಮಾವಳಿಗಳನ್ನು ನಡೆಸಿಕೊಂಡು ಬರಲಾಗುತ್ತದೆ. ಇಲ್ಲಿ ಲಿಖಿತ ದಾಖಲೆಗಳಲ್ಲೂ ಇರದೇ ಇರುವ ಕೆಲವು

ಆಚರಣೆಗಳನ್ನು ಹೆಣ್ಣಿನ ಮೇಲೆ ಹೇರಲಾಗುತ್ತಿವೆ. ದಾಖಲೆಗಳಲ್ಲೂ ಇರದೇ ಇರುವ ಕೆಲವು ಆಚರಣೆಗಳನ್ನು ಹೆಣ್ಣಿನ ಮೇಲೆ ಹೇರಲಾಗುತ್ತವೆ. ಈ ಮೂಲಕ ಹೆಣ್ಣಿನ ನಿಯಂತ್ರಣ ಸಾಧಿಸಲಾಗುತ್ತದೆ.

೧.೨. ಅಧ್ಯಯನದ ಉದ್ದೇಶ

ಪ್ರತಿ ಧರ್ಮಗಳೂ ಹೆಣ್ಣನ್ನು ಆಚರಣಾವಲಯದಲ್ಲಿ ಕೇಂದ್ರದಂತೆ ಬಳಸಿಕೊಂಡು, ಎಲ್ಲ ಉಪವಾಸ ವ್ರತಾಚರಣೆಗಳನ್ನು ಅವಳಿಗೆ ಮೀಸಲಿರಿಸಿವೆ. ಆದರೆ ಪಲಾಫಲಗಳು ಮಾತ್ರ ಗಂಡಿಗೆ ಎನ್ನುವಂತಹ ರೀತಿಯಲ್ಲಿ ವರ್ತಿಸುತ್ತವೆ. ಕಾರಣ ಇಷ್ಟೆ ಗಂಡು ಚೆನ್ನಾಗಿದ್ದರೇ ತಾನು ಚೆನ್ನಾಗಿ, ಬದ್ರವಾಗಿರಬಹುದೆಂಬ ವಿಚಾರಗಳು ಆಕೆಯ ಮನಸ್ಸಿನಲ್ಲಿವೆ. ಇದನ್ನು ಆಕೆಯ ದೌರ್ಬಲ್ಯ ಎಂದು ತಿಳಿದ ನಮ್ಮ ಪಿತೃ ಪ್ರಧಾನ ವ್ಯವಸ್ಥೆ ಕೆಲವು Seenಗಳನ್ನು Creat ಮಾಡುವ ಮೂಲಕ ಇಂತಹ ಭಾವನೆಗಳಿಗೆ ಪುಷ್ಠಿಯನ್ನು ನೀಡುತ್ತಾ ಹೋಗುತ್ತವೆ. ಇದು ಪ್ರತಿಧರ್ಮ ಜಾತಿಗಳಲ್ಲಿ ನಡೆಯುತ್ತಿರುವ ನಿತ್ಯನೂತನ ಸಂಗತಿಗಳಾಗಿವೆ ಎಂದು ಹೇಳಬಹುದು. ಜಗತ್ತಿನ ಬಹುತೇಕ ಧರ್ಮಗಳಲ್ಲಿ ಹೆಣ್ಣು ಅಧೀನಳಾಗಿ ಥಾಮಸಶಕ್ತಿಯಂತೆ, ಕೇಡಿನ ಮೂಲದಂತೆ, ಪುರುಷನ ಧರ್ಮಸಾಧನೆಗೆ ಅಡ್ಡಿಯುಂಟುಮಾಡುವಳಂತೆ ಪರಿಗಣಿಸಲಾಗಿದೆ ತಾಯಿಯಾಗಿ ಮನ್ನಣೆ ನೀಡಿದವರು ಆಕೆಯ ಉಳಿದ ಪಾತ್ರಗಳನ್ನು ತಿರಸ್ಕಾರ, ಅಪನಂಬಿಕೆ, ಅವಹೇಳನಕ್ಕೆ ಗುರಿಮಾಡಿ ಅನಿಷ್ಠ ದೇವತೆಯೆಂದು ಅನಾದರಿಸಿದ್ದಾರೆ. ಧರ್ಮದ ಹೆಸರಿನಲ್ಲಿ ಧರ್ಮದ ಚಿನ್ನದ ಚೌಕಟ್ಟಿನಲ್ಲಿ ನಾನಾರೀತಿಗಳಿಂದ ಹೆಣ್ಣನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಪಡಿಸಲಾಗುತ್ತದೆ. ಇದಕ್ಕಾಗಿ ಪುರುಷರು ವಿವಿಧ ಸಾಮಾಜಿಕ ವೇಷಗಳನ್ನು ಕಟ್ಟುತ್ತಾರೆ. ಇಂಥ ವ್ಯಕ್ತಿ ಹಾಗೂ ಘಟನೆಗಳಿಗೆ ಹೆಣ್ಣು ತಾನೇ ಬಲಿಯಾಗಬೇಕು. ಇದು ವಿಪರ್ಯಾಸವಾಗಿ ಕಾಣಬಹುದು. ಆದರೆ ಇಂದಿನ ಬದುಕಿನಲ್ಲಿ ಇದು ಅನಿವಾರ್ಯವಾಗುತ್ತಿದೆ. ಇದರಿಂದ ಇಡೀ ಸ್ತ್ರೀ ಕುಲವೇ ಶೋಷಣೆಗೆ ಒಳಗಾದ ವಿಷ ಸತ್ಯ ಹೊರಬರುತ್ತದೆ.

'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಹೇಳುವ ಧರ್ಮಶಾಸ್ತ್ರಗಳು ''ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರದೇವತಾಃ ಯತ್ರೈತಾಸ್ತ್ರು ನ ಪೂಜ್ಯಂತೆ ಸ್ವರ್ವಾಸ್ತತ್ರಾ ಫಲಾಃ ಕ್ರೀಯಾ'' ಎಂದು ಹೇಳಿವೆ. ಆದರೆ ಒಂದೇ ನಿಶ್ಚಿತ ಅಭಿಪ್ರಾಯವನ್ನು ಹೊಂದದ ಧರ್ಮಶಾಸ್ತ್ರಗಳ ಮೂಲ ಉದ್ದೇಶದಲ್ಲೆಲ್ಲೂ ಯಾವುದೇ ಅಳುಕಿನ ಎಳೆ ಕಾಣಸಿಗುತ್ತದೆ. ಇಲ್ಲಿ ಹೆಣ್ಣನ್ನು ಹಿಡಿದಿಡುವ ಪ್ರಯತ್ನವನ್ನು ಮಾಡಲಾಗಿದೆ ಎಂಬುದು ಗೋಚರವಾಗುವ ಸಂಗತಿಯಾಗಿದೆ.

ಈ ಮೂಲಕ ಅವಳನ್ನು ನಿಯಂತ್ರಣದಲ್ಲಿರಿಸಬಯಸುತ್ತದೆ. ಅವಳ ವ್ಯಕ್ತಿತ್ವ ಅಂದರೇ ಕೇವಲ ಪತಿಸೇವೆ, ಮಕ್ಕಳ ಪಾಲನೆ, ವೃದ್ದರ ಪೋಷಣೆ, ಇಷ್ಟಕ್ಕೆ ಸೀಮಿತವೇ? ಇದನ್ನು ಹೊರತುಪಡಿಸಿ, ಮಹಿಳೆಯಾಗಿ ಸಮಾಜದಲ್ಲಿ ಅವಳಿಗೆ ಯಾವುದೇ ವ್ಯಕ್ತಿತ್ವ ಇಲ್ಲವೆ? ಎಂಬರ್ಥದಲ್ಲಿ ವರ್ತಿಸುತ್ತಿವೆ. ಇವೆಲ್ಲವುಗಳ ಮಧ್ಯೆ ಹೆಣ್ಣಿಗೆ ತನ್ನದೇ ಆದ ಒಂದು ಸ್ವಂತ ವ್ಯಕ್ತಿತ್ವ ವಿದೆಯೇ? ತನ್ನ ನೈಜ ಚಹರೆಯ ಹುಡುಕಾಟವನ್ನು ಇತ್ತೀಚಿನ ಅಧ್ಯಯನ ಸಂಶೋಧನೆಗಳ ಮೂಲಕ ಕಂಡುಕೊಳ್ಳಲಾಗುತ್ತಿದೆ. ಬೇರೆ ಬೇರೆ ಧರ್ಮ ಅಥವಾ ಜಾತಿಗಳಲ್ಲಿ ಮಹಿಳೆಯ ನೈಜ ಹುಡುಕಾಟವನ್ನು ನಡೆಸಿವೆ. ಒಂದು ಕಾಲಕ್ಕೆ ಉಚ್ಚ, ಶ್ರೇಷ್ಠ ಎಂದು ಕರೆಯಿಸಿಕೊಂಡಿದ ಬ್ರಾಹ್ಮಣರಲ್ಲಿಯೂ ಕೂಡ ಹೆಣ್ಣು ಕೆಳವರ್ಗದ ಮಹಿಳೆ ಅನುಭವಿಸುವ ನೋವು ಯಾತನೆಗಳನ್ನು ಹೇಳಹೆಸರಿಲ್ಲದೇ ತೆರೆಮರೆಯಲ್ಲಿ

ಮನುಭವಿಸುವಂತಹ ವ್ಯವಸ್ಥೆ ಸೃಷ್ಟಿಗೊಂಡಿದೆ. ಇಂಥ ಬ್ರಾಹ್ಮಣ ಮಹಿಳೆಯ ಬದುಕಿನ ನೆಲೆಗಳನ್ನು ಅರ್ಥೈಸಿಕೊಳ್ಳುವ ಉದ್ದೇಶದಿಂದ ಈ ವಿಷಯವನ್ನು ಸಂಶೋಧನಾ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ವಿಷಯವು ಕೆಲವು ಗುರಿ ಮತ್ತು ಉದ್ದೇಶಗಳನ್ನು ಹೊಂದಿದೆ ಅವು ಈ ಕೆಳಗಿನಂತಿವೆ.

೧. ಮುಟ್ಟು, ಗೃಹಿಣಿತ್ವ, ಹೆರಿಗೆ, ವೈಧವ್ಯ, ಮುಪ್ಪು ಮುಂತಾದ ಪ್ರತಿ ಅವಸ್ಥೆಯಲ್ಲೂ ಹೆಣ್ಣಿನ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಗುತ್ತದೆ. ಇದು ಲಿಖಿತ ದಾಖಲೆಗಳಲ್ಲಿಯೇ ಇದೆಯೋ ಅಥವಾ ಅವಳನ್ನು ಹತೋಟಿಯಲ್ಲಿಡುವ ಪುರುಷ ಪ್ರಾಧಾನ್ಯತೆಯ ಹುನ್ನಾರವೋ ಎಂಬುದನ್ನು ಅರಿಯಬೇಕಾಗಿದೆ.

೨. ಸಂಪ್ರದಾಯದ ಆಚರಣೆಗಳನ್ನು ಹೆಣ್ಣು ತನ್ನ ಇಚ್ಛೆಯಿಂದ ಅನುಸರಿಸುತ್ತಾಳೋ ಅಥವಾ ಪುರುಷನ ಸ್ಥಾನಮಾನ ಸಮುದಾಯದ ಗಂಡಸರಿಗಾಗಿ ಅನುಸರಿಸುವತ್ತಾಳೋ ಅಥವಾ ಅಧಿಕಾರಶಾಹಿ ನೆಲೆಯಲ್ಲಿರುವ ಪುರುಷನ ಓಲೈಕೆಗಾಗಿ ಅನುಸರಿಸುತ್ತಾಳೋ ಎಂಬುದನ್ನು ಅಧ್ಯಯನ ಮಾಡಬೇಕಿದೆ.

೩. 'ಪವಿತ್ರ' ಎಂಬ ಭಾವನೆಯನ್ನು ಧರ್ಮದ ಬಗೆಗೆ ಹೊಂದಿದ್ದರೂ, ಅದಕ್ಕಾಗಿ ಹೆದರಿ ನಡೆಯುವರಿದ್ದರೂ ಕೂಡ ಅದು ತನ್ನ ಭಕ್ತರಿರಬಹುದು ಅಥವಾ ಅನುಯಾಯಿ ಇರಬಹುದು. ಅಂಥವರಲ್ಲಿ ಗಂಡು ಹೆಣ್ಣು ಎಂಬ ಭಾವನೆಯಿಂದ ಮೇಲು ಕೀಳೆಂದು ಪರಿಗಣಿಸಿ, ಹೆಣ್ಣಿಗೆನೇ ತನ್ಮೂಲಕ ನಿರ್ಬಂಧ ಹೇರಬಯಸುತ್ತದೆಯೇ? ಎಂಬುದಕ್ಕೆ ಉತ್ತರ ಕಂಡುಕೊಳ್ಳಬೇಕಿದೆ.

೪. ಒಂದು ಕಾಲಕ್ಕೆ ಉಚ್ಛಕುಲ ಪವಿತ್ರ ಕುಲವೆಂಬ ಪರಿಗಣೆಗೆ ಒಳಪಟ್ಟಿದ್ದ ಬ್ರಾಹ್ಮಣರಲ್ಲಿಯೂ ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿರುವಂತಹ ಗಂಡು ಹೆಣ್ಣುಗಳ ಬಗ್ಗೆ ಇರುವ ಶ್ರೇಷ್ಠ ಕನಿಷ್ಠ ಎಂಬ ತಾರತಮ್ಯ ಪರಿಕಲ್ಪನೆಗಳಿಗೆ ಇರುವ ಕಾರಣವನ್ನರಿಯುವ ಉದ್ದೇಶ ಈ ಅಧ್ಯಯನಕ್ಕಿದೆ.

೫. ಮೊದಲು ಮಾತೃದೇವತೆಯ ಆರಾಧನೆ ಜಾರಿಯಲ್ಲಿದ್ದರೂ ಕೂಡ, ಮಹಿಳೆಗೆ ದ್ವಿತೀಯ ದರ್ಜೆಯನ್ನು ನೀಡಿರುವುದಕ್ಕೆ ಕಾರಣಗಳ ಹುಡುಕಾಟವನ್ನು ಮಾಡುವುದಾಗಿದೆ.

೬. ಧರ್ಮದಲ್ಲಿರುವ ಏಕಮುಖಿ ಚಿಂತನೆಗೆ ಕಾರಣವೇನೆಂದು ಕಂಡುಕೊಳ್ಳುವುದಾಗಿದೆ.

೭. ಲಿಖಿತ ಧಾರ್ಮಿಕ ಇತಿಹಾಸವು ಹೆಣ್ಣಿನ ಬಗೆಗೆ ಎಂತಹ ಭಾವನೆಗಳನ್ನು ಇಟ್ಟುಕೊಂಡಿವೆ. ಎಂಬುದನ್ನು ಗಮನಿಸುವುದಾಗಿದೆ.

೮. ಧಾರ್ಮಿಕ ಮೌಲ್ಯಾಚರಣೆಗಳು ಹೆಣ್ಣಿನ ದ್ವಿತೀಯ ದರ್ಜೆಗೆಯಾವ (ದೈಹಿಕ, ಮಾನಸಿಕ) ಬಲಹೀನತೆಯನ್ನು ಪರಿಗಣಿಸುತ್ತವೆ.

೯. ಸಂಪ್ರದಾಯ ಆಚರಣೆ (ಮೌಖಿಕ) ಗಳು ಹೆಣ್ಣಿನ ಬಗೆಗೆ ಎಂತಹ ಭಾವನೆಗಳನ್ನು ತಾಳುತ್ತವೆ.

೧೦ ಬ್ರಾಹ್ಮಣ ಮಹಿಳೆ ಕುಟುಂಬ ವಿವಾಹ ರಾಜಕೀಯ ಆರ್ಥಿಕ, ಧಾರ್ಮಿಕ ಸಂಸ್ಥೆಗಳಲ್ಲಿ ಹೇಗೆ ಪರಿಗಣಿಸಲ್ಪಡುತ್ತಾಳೆ. ಅವುಗಳಿಗೆ ಕಾರಣಗಳನ್ನು ಮತ್ತು ಈ ಸಂಸ್ಥೆಗಳಲ್ಲಿ ಅವಳ ಕೊಡುಗೆಗೆ ಯಾವ ರೀತಿಯ ಮೌಲ್ಯವಿದೆ ಎಂಬುದನ್ನು ಅಧ್ಯಯನ ಮಾಡುವುದು ಇಲ್ಲಿಯ ಅವಶ್ಯಕತೆಯಾಗಿದೆ.

೧೧. ಸ್ತ್ರೀವಾದಿ ದೃಷ್ಟಿಕೋನದಿಂದ ವೈದಿಕ ಮಹಿಳೆಯ ಆಚರಣೆಗಳ ಸಾಂಸ್ಕೃತಿಕ ನಿರ್ವಚನವನ್ನು, ಇಲ್ಲಿಯ ಮಹಿಳೆಯ ನಿಜವಾದ ಅಸ್ತಿತ್ವದ ಹುಡುಕಾಟವನ್ನು ದಾಖಲಿಸುವುದು ಈ ಅಧ್ಯಯನದ ಆಶಯವಾಗಿದೆ.

೧೨. ಕೊನೆಯದಾಗಿ ಬದಲಾದ ಸಂದರ್ಭಗಳಲ್ಲಿ ಬ್ರಾಹ್ಮಣ ಮಹಿಳೆಯ ಸ್ಥಿತ್ಯಂತರಕ್ಕೆ ಇರುವ ಕಾರಣಗಳನ್ನು ಪ್ರಸ್ತುತಪಡಿಸುವುದಾಗಿದೆ.

ನಮ್ಮ ಸಮಾಜವು ಯಾವ ರೀತಿಯ ಸಾಮಾಜಿಕರಣಕ್ಕೆ ಬ್ರಾಹ್ಮಣ ಮಹಿಳೆಯನ್ನು ಒಳಪಡಿಸುತ್ತದೆ. ಈ ಮೂಲಕ ಏನನ್ನು ಸಾಧಿಸ ಬಯಸುತ್ತದೆ. ಎಂಬುದನ್ನು ಕಂಡುಕೊಳ್ಳುವುದಾಗಿದೆ.

''ಗೃಹಿಣಿ ಗೃಹ ಮುಚ್ಛತೆ''

ಎಂದು ಹೇಳುವ ಅದರ ದಾಟಿಯನ್ನು ಗಮನಿಸುತ್ತಾ ಹೋದರೇ ಗೃಹಿಣಿಯಾದವಳು ಪಾಲನೆ ಪೋಷಣೆ ಗೃಹ ನಿರ್ವಹಣೆ, ಇದರೊಂದಿಗೆ ಇತರ ಯಾವುದೇ ಆರ್ಥಿಕ ಆದಾಯದ ಕೆಲಸ ಮಾಡುವಂತೆ ಸೂಚಿಸುತ್ತದೆ. ಆಕೆಯಲ್ಲಿ ಸಹನೆ ತಾಳ್ಮೆಗಳನ್ನು ತುಂಬುವ ರೀತಿಗಳನ್ನು ನೋಡಿದರೇ ಪಿತೃ ಪ್ರಧಾನ ಸಂಸ್ಕೃತಿಯ ಅಸ್ತಿತ್ವವನ್ನು ಅವಳೇ ಕಾಪಾಡುವಂತೆ ಮಾರ್ಪಡಿಸುತ್ತವೆ.

ಇಲ್ಲಿಯೂ ಕೂಡ ಮಹಿಳೆಗೆ ಇತರ ಧರ್ಮಗಳಂತೆ ಷಡ್‌ಗುಣಗಳನ್ನು ಬೆಳೆಸಿಕೊಳ್ಳುವಂತೆ ಪ್ರಚೋದಿಸಲಾಗುತ್ತದೆ ಎಂದು ಹೇಳಬಹುದು.

ಬ್ರಾಹ್ಮಣ ಮಹಿಳೆಯು ಧರ್ಮ ಎನ್ನುವ ವ್ಯವಸ್ಥೆಯಲ್ಲಿ ಹೇಗೆ ಪರಿಗಣಿಸಲ್ಪಡುತ್ತಾಳೆ. ಈ ವ್ಯವಸ್ಥೆಯು ಅವಳ ಸ್ವಂತ ವ್ಯಕ್ತಿತ್ವಕ್ಕಾಗಿ ಯಾವುದಾದರೂ ಕ್ರಮವನ್ನು ಕೈಗೊಂಡಿದೆಯೇ ಎಂಬುದರ ಕುರಿತು ಅರಿಯ ಹೋಗುತ್ತಾ ಧರ್ಮಾಚರಣೆಯನ್ನು ಅನಿವಾರ್ಯವಾಗಿ ಅವಳ ಮೇಲೆ ಹೇರಿದೆಯೇ ಎಂಬುದನ್ನು ಅರಿಯುವುದಾಗಿದೆ. ಎಂದು ಹೇಳಬಹುದು ಈ ವ್ಯವಸ್ಥೆ ಮಹಿಳೆಗೆ ನೆಮ್ಮದಿಯನ್ನು ತಂದು ಕೊಟ್ಟಿದೆಯೇ ಎಂಬುದನ್ನು ಗಮನಿಸಬೇಕಾಗಿದೆ.

ಧಾರ್ಮಿಕ ವಯವಸ್ಥೆಯಲ್ಲಿ ತನ್ನ ಬಗೆಗೆ ಇರುವಂತಹ ದೋಷಗಳನ್ನು ಬ್ರಾಹ್ಮಣ ಮಹಿಳೆ ಗೃಹಿಸಿದ್ದಾಳೆಯೇ ಅದರ ಪರವಾಗಿ ಧ್ವನಿ ಎತ್ತಿದ್ದಾಳೆಯೇ? ತನಗಾಗಿ ತನ್ನ ವ್ಯಕ್ತಿತ್ವಕ್ಕಾಗಿ ಅದರಲ್ಲೇನಾದರೂ ಬದಲಾವಣೆಗಳನ್ನು ತರಬಯಸಿದ್ದಾಳೆಯೇ? ಈ ಬದಲಾವಣೆಗಳನ್ನು ಸ್ವತಃ ತಾನೇ ಒಪ್ಪಿಕೊಂಡಿದ್ದಾಳೋ ಅಥವಾ ಕುಟುಂಬ ಸಮಾಜ ಬೆಳವಣಿಗೆಯ ಗತಿಗೆ ಅನುಸಾರವಾಗಿ ಮಾರ್ಪಡಿಸಿಕೊಂಡಿದ್ದಾಳೆಂಬುದನ್ನು ಕಂಡುಕೊಳ್ಳುವುದಾಗಿದೆ.

ಬ್ರಾಹ್ಮಣ ಮಹಿಳೆ ಆರ್ಥಿಕ ರಾಜಕೀಯ ಶೈಕ್ಷಣಿಕ ವ್ಯವಸ್ಥೆಗಳ ಒಳಗಡೆ ಯಾವ ಸ್ಥಾನಮಾನವನ್ನು ಪಡೆದುಕೊಂಡಿದ್ದಾಳೆಂಬುದನ್ನು ಪತ್ತೆ ಹಚ್ಚುವ ಕೆಲಸ ನಡೆಯಬೇಕಾಗಿದೆ. ಇಕೆಗೆ ಸಾಮಾಜಿಕ ಅಂತಸ್ತುಗಳಲ್ಲಿಯಾವ ಸ್ಥಾನಮಾನವಿದೆ. ಮೇಲಿನ ಸ್ಥಾನವಿದೆಯೆಂದು ಮೇಲುನೋಟಕ್ಕೆ ಕಾಣುವ ಸಂಗತಿಯಾಗಿದೆಯೇ ಅಥವಾ ಅದರ ಒಳ ಮರ್ಮ ಬೇರೆಯಾವುದಾದರೂ ಇದೆಯೋ ಎಂಬುದನ್ನು ಅರಿಯಬೇಕಿದೆ.

ಗೃಹಿಣಿಯಾಗಿ ಅವಳು ಪಡೆದಿರುವ ಸ್ಥಾನಕ್ಕಿಂತ ತಾಯಿ ಸ್ಥಾನವು ಹೆಚ್ಚಿನ ಗೌರವವನ್ನು ತಂದು ಕೊಡುವಂತಾಹುದಾಗಿದೆ ಇದಕ್ಕೆ ಮೋಕ್ಷದ ಕಲ್ಪನೆ ಬಿಟ್ಟರೆ ಇನ್ಯಾವ ಮಹಾಕಾಣವಿದೆ ಎಂಬುದನ್ನು ಪತ್ತೆ ಹಚ್ಚುವುದಾಗಿದೆ. ಮಹಿಳೆ ಎಂದರೆ ಸಾಮಾನ್ಯವಾಗಿ ಅಲಂಕಾರ ಪ್ರೀಯಳು ಎನ್ನುವ ಭಾವನೆ ಇದೆ. ಈ ಅಲಂಕಾರಕ್ಕಾಗಿ ಹೆಣ್ಣು ಮಗುವಿಗೆ, ಭಾವನಾತ್ಮಕತೆ (ಕಳ್ಳು) ಜಾಸ್ತಿ ಎಂಬ ಕಾರಣಕ್ಕಾಗಿ ಹೆಣ್ಣು ಸಂತಾನ ಇಷ್ಟ ಪಡುತ್ತಾಳೋ ಅಥವಾ ತಾನು ಅನುಭವಿಸುವ ನೋವು, ಯಾತನೆಗಳಿಂದಾಗಿ ಹೆಣ್ಣು ಮಗುವನ್ನು ತಿರಸ್ಕರಿಸಿ, ಗಂಡು ಸಂತಾನವನ್ನು,

ಮೋಕ್ಷಕ್ಕಾಗಿ ಬಯಸುವ ಹಂಬಲ ವಿದೆಯೆಂಬುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅವಳ ಆಳವಾದ ಅಧ್ಯಯನದ ಅಗತ್ಯವಿದೆ.

೧.೩. ಅಧ್ಯಯನದ ವ್ಯಾಪ್ತಿ

ಈ ಸಂಶೋಧನೆಗೆ ನಾನು ಆಯ್ಕೆ ಮಾಡಿಕೊಂಡಿರುವ ವ್ಯಾಪ್ತಿ ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕು.

ಎಲ್ಲಾ ವರ್ಗ, ವರ್ಣಗಳಲ್ಲಿಯೂ ಮಹಿಳೆಯ ಶೋಷಣೆ ಅವ್ಯಾಹತವಾಗಿದೆ. ನಡೆದಿದೆ ಮತ್ತು ನಡೆಯುತ್ತಲೂ ಇದೆ. ಅಧ್ಯಯನ ಮಿತಿಯ ಕಾರಣದಿಂದ ಬ್ರಾಹ್ಮಣ ಮಹಿಳೆಯ ಬಗ್ಗೆ ಮಾತ್ರ ಅಧ್ಯಯನ ಕೈಗೊಳ್ಳಬಯಸುತ್ತೇನೆ. ಇಲ್ಲಿ ಸ್ಮಾರ್ಥ ಬ್ರಾಹ್ಮಣರು, ಮತ್ತು ವೈಷ್ಣವ ಬ್ರಾಹ್ಮಣ ಸ್ತ್ರೀಯರ ಸಾಮಾಜಿಕತೆ ಪ್ರಮುಖ ವಿಷಯ ವಸ್ತುವಾಗಿದ್ದಾರೆ. ಇದರಲ್ಲಿ ಮತ್ತೆ ಉಪ ಜಾತಿಗಳೇನಾದರೂ ಇದ್ದರೇ ಅದನ್ನು ಸೇರಿಸಿಕೊಳ್ಳಬಯಸುತ್ತೇನೆ. ಜಮಖಂಡಿಯಲ್ಲಿ ಒಟ್ಟು ಜನಸಂಖ್ಯೆ ೩೧೪೬ ಇದೆ ಇದರಲ್ಲಿ ೧೨೫೬ ಮಹಿಳೆಯರಿದ್ದು, ೧೮೯೦ ಪುರುಷರಾಗಿದ್ದಾರೆ. ಇಲ್ಲಿಯ ಶೈಕ್ಷಣಿಕ ಮಟ್ಟ ೮೨.೨೩ರಷ್ಟಾಗಿದೆ. ಆಧಾರದ ಮೇಲೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಸಂಶೋಧನಾ ಚೌಕಟ್ಟು ವ್ಯಾಪ್ತಿಯನ್ನು ನಿರ್ಧರಿಸುವ ಅಂಶಗಳಲ್ಲಿ ಒಂದಾಗಿದೆ. ಇದರಲ್ಲಿ ಇನ್ನೂ ಅನೇಕ ಸೂಕ್ಷ್ಮ ಒಳನೋಟಗಳ ಕಡೆಗೆ ಕಣ್ಣು ಹಾಯಿಸಬಹುದಾಗಿದೆ. ಮಿತಿಯ ಹಿನ್ನೆಲೆಯಲ್ಲಿ ಕೆಲವೊಂದು ಅಂಶಗಳನ್ನು ಕೈ ಬಿಡಲಾಗಿದ್ದು ಮುಂದಿನ ಸಂಶೋಧನೆಗಳಿಗೆ ಸಹಕಾರಿಯಾಗಬಹುದು.

೧.೪. ಅಧ್ಯಯನದ ವೈಧಾನಿಕತೆ

ಸಂಶೋಧನೆಗೆ ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆ ಎಂಬ ವಿಷಯವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಲಿಖಿತ ಧಾರ್ಮಿಕ ಗ್ರಂಥಗಳಾದ ವೇದಗಳು ಸ್ಮೃತಿಗಳು, ಉಪನಿಷತ್ತು, ರಾಮಾಯಣ, ಮಹಾಭಾರತ ಮಹಾಕಾವ್ಯಗಳನ್ನು ಆಯ್ದುಕೊಳ್ಳಲಾಗಿದೆ. ಆಚರಣೆ ಸಂಪ್ರದಾಯಗಳಲ್ಲಿ ಮುಟ್ಟು, ವಿವಾಹ, ಗೃಹಿಣಿತ್ವ, ಹೆರಿಗೆ ವೈಧವ್ಯ ಮುಪ್ಪುಗಳಲ್ಲಿ ಬ್ರಾಹ್ಮಣ ಮಹಿಳೆಯ ಸ್ಥಿತಿಯನ್ನು ಸ್ತ್ರೀವಾದ ಹಾಗೂ ಮಹಿಳಾ ಅಧ್ಯಯನದ ದೃಷ್ಠಿಕೋನಗಳನ್ನು ತಾತ್ವಿಕ ಹಿನ್ನೆಲೆಯಾಗಿಟ್ಟುಕೊಂಡು ಈ ಅಧ್ಯನವನ್ನು ನಡೆಸಲಾಗುವುದು. ಮಹಿಳೆಯ ಅಸ್ತಿತ್ವ ಅದನ್ನು ಸಾಮಾಜಿಕ ನೀತಿ ನಿರೂಪಣೆಗಳ ಕಾರಣದಿಂದಾಗಿ ಉಂಟಾಗುವ ಚಹರೆಗಳನ್ನು ಅಧ್ಯಯನ ಮಾಡಲೇ ಬೇಕಾಗ, ಅದರ ಚಾರಿತ್ರಿಕ ಸ್ವರೂಪ ಹಾಗೂ ವಿವಿಧ ಕಾಲಘಟ್ಟಗಳಲ್ಲಿ ಒದಗಿ ಬಂದ ಸ್ಥಿತ್ಯಂತರಗಳನ್ನು ಗ್ರಹಿಸಲೇ ಬೇಕಾಗುತ್ತದೆ. ಈ ಕಾರಣಗಳಿಗೋಸ್ಕರ ಇಲ್ಲಿ ಹಲವು ಬಗೆಯ ವೈಧಾನಿ ಕತೆಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಉದಾಹರಣೆಗೆ ಮೂಲಭೂತವಾಗಿ ಮಾಹಿತಿ ಸಂಗ್ರಹಣೆಯ ಹಂತದಲ್ಲಿ ಕ್ಷೇತ್ರ ಕಾರ್ಯದ ಚೌಕಟ್ಟನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಪ್ರಶ್ನಾವಳಿಗಳ ಸಿದ್ದತೆ, ಸಂದರ್ಶನಗಳನ್ನು ನಡಸಲೇ ಬೇಕಾದ ಅಗತ್ಯತೆ, ಮಾಹಿತಿಗಳನ್ನು ವಿಶ್ಲೇಷಣೆಗಾಗಿ ಆಧರಿಸಬೇಕಾದಾಗ ಗುಣಾತ್ಮಕ ವಿಧಾನದ ಗ್ರಹಿಕೆ ಮಹಿಳಾ ವಿಷಯವನ್ನು ವಿಶ್ಲೇಷಿಸಲು ಬೇಕಾದ ವ್ಯಕ್ತಿನಿಷ್ಠ ದೃಷ್ಟಿಕೋನ ಇತ್ಯಾದಿಗಳ ಕಡೆಗೆ ಒಂದುಸ್ಥೂಲ ಗ್ರಹಿಕೆಯನ್ನು ಇಲ್ಲಿ ಒದಗಿಸಲಾಗಿದೆ. ಆ ಮೂಲಕ

ಪ್ರಸ್ತುತ ಸಂದರ್ಭದಲ್ಲಿ ಬಳಕೆಗೊಳಪಟ್ಟ ವಿಧಾನಗಳ ಒಂದು ಸಾರಭೂತ ವಿವರಣೆಯನ್ನು ಈ ಕೆಳಗಿಈನಂತೆ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನೆಯ ವಿಷಯಕ್ಕೆ ಈ ಕೆಳಗಿನ ಸಂಶೋಧನಾ ವಿಧಾನಗಳನ್ನು ಅನ್ವಯಿಸಿಕೊಳ್ಳುತ್ತಿದ್ದೇನೆ.

ಅ. ಪ್ರಶ್ನಾವಳಿ

i. ರಚಿತ ಪ್ರಶ್ನಾವಳಿ

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಆಯ್ದುಕೊಂಡು ಕ್ಷೇತ್ರ ಕಾರ್ಯಕ್ಕೆ ಆಕ್ಷೇತ್ರದ ಮಹಿಳೆಯರ ಜೊತೆ ಚರ್ಚಿಸಲು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳುವುದು. ಇಲ್ಲಿ ಭಾವನಾತ್ಮಕ ಉತ್ತರಗಳಿರುವುದಿಲ್ಲ. ಇಲ್ಲಿ ಭೌತಿಕ ಅಂಶಗಳಿಗಷ್ಟಕ್ಕೆ ಅವಕಾಶವಿರುತ್ತದೆ. ನೇರ ಉತ್ತರ ಹಾಗೂ ಖಚಿತ ಉತ್ತರದೊರೆಯುತ್ತದೆ. ಇಲ್ಲಿ ಮುಚ್ಚಿಡುವ ಪ್ರಸಂಗವಿರುವದಿಲ್ಲ. ನಾವು ರಚಿಸಿದ ಪ್ರಶ್ನೆಗೆ ನೇರಬರುವುದರಿಂದ ಇಲ್ಲಿ ವ್ಯತ್ಯಾಸದ ಪ್ರಮೇಯ ವಿರುವದಿಲ್ಲ.

ಬ್ರಾಹ್ಮಣ ಮಹಿಳೆಯ ಚಹರೆಯ ಹುಡುಕಾಟದೆಡೆಗೆ ಸಾಗಿದಾಗ ಧರ್ಮವು ಅವಳನ್ನು ಯಾವ ದೃಷ್ಟಿಯಲ್ಲಿ ನೋಡುತ್ತದೆ. ಎಂಬ ಪ್ರಶ್ನೆಮಾಡಿದಾಗ ಪುರುಷರು ಪವಿತ್ರ ಎಂದು ಹೇಳುತ್ತಾರಷ್ಟೆ, ಆದರೆ ಅದೇ ಪ್ರಶ್ನೆಯನ್ನು ಮಹಿಳೆಗೆ ಕೇಳಿದಾಗ ಪವಿತ್ರ ಎಂದು ಮೇಲುನೋಟಕ್ಕೆ ಕರೆದರೂ ಅಪವಿತ್ರ 'ನಸ್ತ್ರಿ ಸ್ವಾತಂತ್ರ್ಯಂ ಅರ್ಹತಿ'ಯಂತಹ ಭಾವನೆಗಳನ್ನು ಹೊಂದಿರುವುದು ಕಾಣಸಿಗುತ್ತದೆ.

ii).ಅರಚಿತ ಪ್ರಶ್ನಾವಳಿ

ಇಲ್ಲಿನಾವು ಪ್ರಶ್ನೆಗಳನ್ನು ರಚಿಸಿಕೊಂಡಿರುತ್ತೇವೆ. ಆದರೆ ಅವುಗಳಿಗೆ ಸರಿಯಾದ ನೇರ ಉತ್ತರ ಬರುವುದಿಲ್ಲವೆಂದಾಗ, ಅಲ್ಲಿ (Indirict) ಆಗಿ ಮಾಹಿತಿ ಪಡೆಯುವ ಮೂಲಕ ಅರಚಿತ ಪ್ರಶ್ನಾವಳಿ ಎನಿಸುತ್ತದೆ. ರಚಿತ ಪ್ರಶ್ನಾವಳಿಯೇ ಆಗಿದ್ದು. ಉತ್ತರ ದೊರಕದಿದ್ದಾಗ ಅದನು ಕಥೆಗಳ ಮೂಲಕ ಉತ್ತರ ಪಡೆಯುವ ಶೈಲಿಯಾಗಿದೆ. ಆಪ್ತತೆಯನ್ನು ಸಾಧಿಸುವುದು ಇಲ್ಲಿ ಬಹಳ ಮುಖ್ಯ. ಮಾದರಿಗೆ ಅವಶ್ಯವಾಗಿರುವ ವ್ಯಕ್ತಿಗೆ ಬೇಸರವಾಗದ ರೀತಿ ಸ್ನೇಹ ಜೀವಿ ನೆಲೆಯಲ್ಲಿ ಮಾದರಿಗೆ ಧಕ್ಕೆಯಾಗದಂತೆ ಮಾಹಿತಿ ಸಂಗ್ರಹಿಸಬೇಕು ಕಥಾನಕ ರೂಪದಲ್ಲಿ ಉತ್ತರ ಬರುವಂತೆ ಮಾಡಿದರೇ ಅವರು ಒಳ್ಳೆಯ ಸ್ತ್ರೀವಾದಿ ಸಂಶೋಧಕರು ಎನಿಸಿಕೊಳ್ಳುತ್ತಾರೆ.

ಮಹಿಳಾ ಪ್ರಶ್ನೆಗಳು ಹೆಚ್ಚಾಗಿ ನೇರವಾಗಿ ತಟ್ಟಲಾರವು, ಅವರಿಗೆ ಅಂದರೆ ಬ್ರಾಹ್ಮಣ ಮಹಿಳೆಗೆ ವಿಧವಾ ವ್ಯವಸ್ಥೆಯಲ್ಲಿ ಹಿಂಸೆ ಎನಿಸುತ್ತದೆಯೇ ಎಂದರೆ ಅವರು ಇಲ್ಲ ಎಂದು ಹೇಳುತ್ತಾರೆ. ಅದನ್ನೆ (Indirict) ಆಗಿ ಬೇರೆಯವರ ಕಥೆಗೆ ಹೋಲಿಸಿದಾಗ ತಮ್ಮ ನೈಜ ಅನುಭವಗಳನ್ನು ಬೆಸೆದು ಹೇಳುತ್ತಾರೆ. ತಮ್ಮ ನಿಜವಾದ ಸ್ಥಿತಿಯ ಬಗೆಗೆ ಹೇಳುತ್ತಾರೆ.

ಇಲ್ಲಿ ಪ್ರಶ್ನಾವಳಿಯಷ್ಟೆ ಮಹತ್ವವನ್ನು ಅರಚಿತ ಪ್ರಶ್ನಾವಳಿಯು ಪಡೆದುಕೊಳ್ಳುತ್ತದೆ. ನನ್ನ ಅಧ್ಯಯನಕ್ಕೆ ಇವು ಅಷ್ಟೆ ಮಹತ್ವದ್ದವುಗಾಗಿವೆ. ರಚಿತ ಪ್ರಶ್ನಾವಳಿಯಿಂದ ವಸ್ತು ನಿಷ್ಠೆ ಫಲಿತಾಂಶಗಳನ್ನು ಪಡೆಯಬಹುದು. ಅರಚಿತ ಪ್ರಶ್ನಾವಳಿಯಿಂದ ವ್ಯಕ್ತಿ ನಿಷ್ಠತೆಯನ್ನು ಅರಿಯುವುದು ಅವಶ್ಯವಾಗಿದೆ.

ಬ. ಕೇಸ್ ಸ್ಟಡಿ

ಬ್ರಾಹ್ಮಣ ಮಹಿಳೆಯ ನಿಜವಾದ ಚಹರೆಯನ್ನು ಕಂಡುಕೊಳ್ಳಬೇಕಾದರೇ ಆ ಮಹಿಳೆಯರೊಂದಿಗೆ ನೇರವಾಗಿ ಮಾತನಾಡಿಸಲು ವ್ಯಕ್ತಿ ಅಧ್ಯಯನ ಅಥವಾ ಪ್ರಕರಣ ಅಧ್ಯಯನ ವಿಧಾನವನ್ನು ಇಲ್ಲಿ ಬಳಸಿಕೊಳ್ಳಲಾಗುವುದು. ವ್ಯಕ್ತಿ ನಿಷ್ಠತೆಯನ್ನು ಪರಿಶೀಲಿಸುದರ ಮೂಲಕ ವಸ್ತು ನಿಷ್ಠತೆಯ ಹಿಂದಿರುವ ಸತ್ಯಾಸತ್ಯತೆಗಳನ್ನು ಅರಿಯಲು ಇದು ಸಹಕಾರಿಯಾಗಿದೆ. ಬ್ರಾಹ್ಮಣ ಮಹಿಳೆಯ ನೈಜ ಚಿತ್ರಣವನ್ನು ಕಂಡುಕೊಳ್ಳಬೇಕಾದರೇ ಈ ವಿಧಾನವು ಅವಶ್ಯತೆಯಾಗಿದೆ. ವ್ಯಕ್ತಿ ನಿಷ್ಠತೆಯನ್ನು ಅರಸುತ್ತಾ, ಕೇವಲ ಅದನ್ನೆಬಳಸಿಕೊಳ್ಳುವುದರಿಂದ ಕೆಲವೊಂದುಸಲ ವಸ್ತು ನಿಷ್ಠೆತೆಗೆ ಅಭಾಸ ಉಂಟಾಗುವ ಸಂಭವವಿರುತ್ತದೆ. ಮಹಿಳಾ ಅಧ್ಯಯನದಲ್ಲಿ ವಸ್ತು ನಿಷ್ಠತೆ ಅತ್ಯಾವಶ್ಯಕ ವಾಗಿದ್ದು, ಇದಕ್ಕೆ ಪ್ರಕರಣ ಅಧ್ಯಯನವು ಬಹು ಮಹತ್ವದ ಮಾಹಿತಿ ಸಂಗ್ರಹಣಾ ವಿಧಾನವಾಗಿದೆ.

ಕ. ಅವಲೋಕನ ವಿಧಾನ

ಬ್ರಾಹ್ಮಣ ಮಹಿಳೆಯ ಸ್ಥಿತಿಗತಿಯ ಕುರಿತು ಸೂಕ್ಷ್ಮವಾಗಿ ಅವಲೋಕಿಸುವುದು. ಎಂದರೆ ಕಣ್ಣಿಗೆ ಕಂಡದ್ದನ್ನು ಹಾಗೆಯೇ ತಿಳಿಸುವುದಲ್ಲ. ನಿಜವಾಗಿ ಅಲ್ಲಿರುವ ಸ್ಥಿತಿಯನ್ನು ಅಭ್ಯಸಿಸುವುದಾಗಿದೆ. ಕಣ್ಣಿಗೆ ಕಾಣಿಸುವುದೆಲ್ಲವೂ ಸತ್ಯವಲ್ಲ. ಹಾಗಾಗಿ ಸೂಕ್ಷ್ಮ ಅವಲೋಕನವು ನೈಜ ಚಹರೆಯ ಹುಡುಕಾಟಕ್ಕೆ ಸಹಾಯವನ್ನು ಪಡೆಯುವುದಾಗಿದೆ. ಈ ಅವಲೋಪನದಲ್ಲಿ ಸಹಬಾಗಿ ಅವಲೋಚನ, ಅಸಹಬಾಗಿ ಅವಲೋಕನ ಎಂಬ ವಿಧಗಳುಂಟು.

ಸಹಭಾಗಿ ಅವಲೋಕನ

ಇದು ಸಮುದಾಯದ ಅಧ್ಯಯನಕ್ಕೆ ಸೂಕ್ತವಾದುದಾಗಿದೆ. ಅವರ ಜೊತೆ, ಅವರಿಗೆ ಗೊತ್ತಿಲ್ಲದಂತೆ ಅಥವಾ ಗೊತ್ತು ಮಾಡಿಕೊಂಡು ಅವರೊಟ್ಟಿಗೆ ಬೆರೆತು ಅವಲೋಕನಮಾಡಿ ಮಾಹಿತಿ ಸಂಗ್ರಹಿಸುವುದಾಗಿದೆ. ಇದು ಸ್ತ್ರೀವಾದಿ ಸಂಶೋಧನೆಗೆ ಬಹಳ ಪರಿಣಾಮಕಾರಿಯಾದ ವಿಧಾನವಾಗಿದೆ.

ಅಸಹಭಾಗಿ ಅವಲೋಕನ

ಆ ಸಮುದಾಯದ ಹೊರಗಡೆ ಇದ್ದು, ಅವಲೋಕನ ಮಾಡಿ, ಮಾಹಿತಿ ಸಂಗ್ರಹಿಸುವುದಾಗಿದೆ. ಇದು ಪರಿಣಾಮಕಾರಿಯಾಗಲಾರದೆನೋ ಏಕೆಂದರೇ ಅಲ್ಲಿಂದ ಹೊರಗಡೆ ಉಳಿದು ಕೊಂಡು ಮೇಲ್ ನೋಟಕ್ಕೆ ಮಾಹಿತಿ ಸಂಗ್ರಹಿಸಬಹುದಾಗಿದೆ. ಕೆಲವೊಂದು ಸಂದರ್ಭದಲ್ಲಿ ಹೆಣ್ಣಿನ ಸಮಸ್ಯೆಗಳ ಬಗೆಗೆ ಅಧ್ಯಯನ ಮಾಡುವಾಗ ಅವಳು ಅನುಭವಿಸುವ ನೋವು ಯಾತನೆಗಳಲ್ಲಿ ಭಾಗವಹಿಸಲಾಗುವುದಿಲ್ಲ. ಆದರೆ ದೂರ ಇದ್ದುಕೊಂಡು ಮಾಹಿತಿ ಸಂಗ್ರಹಿಸಬಹುದಾಗಿದೆ.

ಡ. ಸಂದರ್ಶನ ವಿಧಾನ

ಸಂಶೋಧನಾ ವಿಷಯಕ್ಕೆ ಸಂಬಂಧಪಟ್ಟಂತೆ ಬ್ರಾಹ್ಮಣ ಮಹಿಳೆಯರನ್ನು ಮತ್ತು ಲಿಖಿತ ಧಾರ್ಮಿಕ ಗ್ರಂಥಗಳನ್ನು ಓದಿಕೊಂಡು ಪುರುಷರನ್ನು ಸಂದರ್ಶಿಸಿ ಮಾಹಿತಿ ಪಡೆದುಕೊಳ್ಳುವುದು. ಸಂದರ್ಶದಿಂದ ಭಾವನೆಗಳನ್ನು ಕೆದಕಲು ಸಹಕಾರಿಯಾಗಿದೆ. ಈ ಮೂಲಕ ನಿಜವಾದ ಅಥವಾ ಸತ್ಯಕ್ಕೆ ಹತ್ತಿರವಾದ ಚಿತ್ರಣವನ್ನು ಕಂಡುಕೊಳ್ಳಬಹುದು. ಈ ಸಂದರ್ಶನದಿಂದ ಮುಖಾಮುಖಿ ಸಂಬಂಧ ಏರ್ಪಟ್ಟು ಅವರು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಹಾಯಕವಾಗುವುದು.

ಈ ವಿಧಾನದಲ್ಲಿ ನೇರ ಸಂಪರ್ಕ ವಿರುವುದರಿಂದ ಮುಕ್ತ ಮಾತುಕತೆಗೆ ಅಡ್ಡಿಯಾಗುವುದಿಲ್ಲ. ತಮ್ಮ ಅನುಭವದ ಬುತ್ತಿಯನ್ನು ಹಂಚಿಕೊಳ್ಳಲು ಇದು ಸಹಾಯಕ ಈ ವಿಧಾನಕ್ಕೂ ಕೂಡ ರಚಿತ, ಅರಚಿತ ಪ್ರಶ್ನಾವಳಿಗಳ ಸಹಕಾರ ಅಗತ್ಯ ಸಂದರ್ಶನಕ್ಕೆ ಒಳಪಡುವ ವ್ಯಕ್ತಿಯ ಬಗ್ಗೆಕೆಲವು ಸಾಮಾನ್ಯ ಮಾಹಿತಿಗಳನ್ನು ಸಂದರ್ಶಕನು ಪಡೆದುಕೊಳ್ಳುವುದು ಅನಿವಾರ್ಯಯವಾಗುತ್ತದೆ. ಅವರ ಜೀವನ ಅವರ ಚಿಂತನೆ, ಪರಿಕಲ್ಪನೆಗಳ ಬಗ್ಗೆ ಸ್ವಲ್ಪ ಮಟ್ಟಿನ ಮಾಹಿತಿ ಹೊಂದಿರಬೇಕು. ಸಮಯವನ್ನು ತಿಳಿಸಿರಬೇಕು. ಇಲ್ಲಿ ಕೇವಲ ಪ್ರಶ್ನೆಗಳನ್ನು ಓದಿ ಅವರಿಂದ ಉತ್ತರ ಹೊರಡಿಸುವುದಲ್ಲ. ಒಂದೊಂದು ಪ್ರಶ್ನೆಕೇಳುತ್ತಾ ಆ ಪ್ರಶ್ನೆಯ ಬಗೆಗೆ ಇರುವ ಅರಚಿತ ಪ್ರಶ್ನೆಯ ಕಡೆಗೂ ಗಮನಹರಿಸಬೇಕು. ಕೇವಲ ಸಂದರ್ಶಕರೇ ಎಲ್ಲ ಮಾತನ್ನು ಅಥವಾ ಉತ್ತರ ನೀಡಬಾರದು ಅವರಿಂದ ಉತ್ತರ ಹೊರಡಿಸಬೇಕು. ಅವನು ನಿಜವಾದ ಸಂದರ್ಶಕ, ಸಂದರ್ಶನ ಯಾವ ವಿಷಯದ ಬಗ್ಗೆ ನಡೆಯುತ್ತಿದೆ ಅದರೆಡೆಗೆ ಮಾತ್ರ ಗಮನವಿಟ್ಟು ಅನವಶ್ಯಕ ಸಂದರ್ಶನಕ್ಕೆ ಎಡೆಮಾಡಿಕೊಡಬಾರದು.

೩. ಮಾಹಿತಿ ಆಕರಗಳು

೧. ಮೂಲ ಆಕರಗಳು

ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸುವುದಾಗಿದ್ದು, ಇದಕ್ಕೆ ಪ್ರಶ್ನಾವಳಿ, ವೈಧಾನಿಕತೆ, ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳನ್ನು ಅನ್ವಯಿಸಲಾಗುವುದು. ಯಾವ ಕಾಲಕ್ಕೆ ಯಾವ ಸಂದರ್ಭಕ್ಕೆ ಯಾವ ವಿಧಾನ ಮಹತ್ವವನ್ನು ಪಡೆದು ಕೊಳ್ಳುತ್ತದೆಯೋ ಆ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲು ಯೋಗ್ಯ ವಿಧಾನವನ್ನು ನನ್ನ ಸಂಶೋಧನೆಗೆ ಬಳಸಿಕೊಳ್ಳುತ್ತೇನೆ. ನಾವೇ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವ ವಿಧಾನವಾಗಿದೆ ಎನ್ನಬಹುದು.

೨. ಆನುಷಂಗಿಕ ಆಕರಗಳು

ಸಂಶೋಧನಾ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಅಧ್ಯಯನ ಮಾಡಿ ವರದಿಮಾಡಿರುವುದು ಬಳಸುವುದಕ್ಕೆ ಹೆಚ್ಚು ಸಹಕಾರಿಯಾಗಿದೆ. ಪ್ರಾಯೋಗಿಕವಾಗಿ ಗುಣಾತ್ಮಕವಾಗಿ ಬಳಸುವುದೂ ಕೂಡ ಹೆಚ್ಚು ವಸ್ತು ನಿಷ್ಠವಾಗಿರುತ್ತದೆ. ಇದು ಸಂಶೋಧನೆಗಿಂತಲೂ ಮೊದಲೇ ರಚನೆಯಾಗಿರುತ್ತದೆ.

ಉದಾ: ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ದೊರೆಯುವ ಗ್ರಂಥಗಳು ನಿಯತ ಕಾಲಿಕೆಗಳು, ದಾಖಲೆಗಳು, ವ್ಯಕ್ತಿಗತ ಜೀವನಕ್ಕೆ ಸಂಬಂಧಿಸಿದ ಕಾಗದ ಪತ್ರಗಳು, ದಿನಚರಿಗಳು, ಜೀವನ ಚರಿತ್ರೆ, ಪುಸ್ತಕಗಳು, ನಕ್ಷೆಗಳು, ಮಹಿಳಾ ಅಧ್ಯಯನ ಸಂಚಿಕೆಗಳು, ಇತರ ಅಕಾಡೆಮಿಕ್ ಮಾಹಿತಿಯನ್ನು ಪಡೆದುಕೊಳ್ಳುವುದು ಈ ಮೂಲಕ ಲಭ್ಯವಾಗುವ ಮಾಹಿತಿಯನ್ನು ಆನುಷಂಗಿಕ ವಿಧಾನದಲ್ಲಿ ಬಳಸಿಕೊಳ್ಳಲಾಗುವುದು.

ಮಾಹಿತಿಗಳನ್ನು ವಿಶ್ಲೇಷಣೆಗಾಗಿ ಆಧರಿಸಬೇಕಾದಾಗ ಗುಣಾತ್ಮಕ, ಪರಿಣಾಮಾತ್ಮಕ ವಿಧಾನದ ಗ್ರಹಿಕೆ, ಮಹಿಳಾ ವಿಷಯವನ್ನು ವಿಶ್ಲೇಷಿಸಲು ಬೇಕಾದ ವ್ಯಕ್ತಿನಿಷ್ಠ ದೃಷ್ಟಿಕೋನಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು.

೧.೪. ಅಧ್ಯಯನದ ಮಹತ್ವ

ಪ್ರತಿಯೊಂದು ಅಧ್ಯಯನಕ್ಕೆ ತನ್ನದೇ ಆದ ಪ್ರಾಮುಖ್ಯತೆ ಇರುತ್ತದೆ. ಪ್ರಸ್ತುತ ಅಧ್ಯಯನ ಮಹಿಳಾ ಅಧ್ಯಯನದ ಭಾಗವಾಗಿದೆ. ಅದಕ್ಕಾಗಿ ಈ ಅಧ್ಯಯನ ಮಹಿಳಾ ಅಧ್ಯಯನದ ಜ್ಞಾನಶಾಖೆಯ ಸಿದ್ಧಾಂತಕ್ಕೆ ಪುಷ್ಠಿ ನೀಡುತ್ತದೆ.

ಸ್ತ್ರೀವಾದವು ಸಮಾಜದ ಎಲ್ಲಾ ಕ್ಷೇತ್ರಗಳು ಪುರುಷ ಪ್ರಧಾನವಾಗಿದೆ ಎಂಬುದನ್ನು ಖಚಿತ ಪಡಿಸಿವೆ. ಈ ನೆಲೆಯಲ್ಲಿ ಮಹಿಳಾ ಅಧ್ಯಯನದ ಸಂಶೋಧನೆಗಳು ನಡೆಯುತ್ತಿವೆ. ಈ ಅಧ್ಯಯನವು ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆಯನ್ನು ಒರೆಗೆ ಹಚ್ಚಿದೆ ಎಂದು ಹೇಳಬಹುದು.

ಸಮಾಜವು ಸುವ್ಯವಸ್ಥಿತವಾಗಿ ನಡೆಯಲು, ಸ್ಥಾಪನೆ ಗೊಂಡಂತಹ ಸಂಸ್ಥೆಗಳುಯಾರ ಪರವಾಗಿವೆ? ಅಸಮಾನತೆಯನ್ನು, ಲಿಂಗಶ್ರೇಣಿಕರಣವನ್ನು ಎತ್ತಿ ತೋರುವ ಈ ಸಂಸ್ಥೆಗಳು ಪುರುಷ ಹಿತ ಕಾಪಾಡಲು ಮುಟ್ಟು, ವಿವಾಹ, ಗೃಹಿಣಿತ್ವ ತಾಯ್ತತನ, ವೈಧವ್ಯ, ಮುಪ್ಪು, ಮುಂತಾದ ಪ್ರತಿ ಅವಸ್ಥೆಗಳಲ್ಲಿಯೂ ಮಹಿಳೆಯನ್ನು ಯಾವ ರೀತಿಯಲ್ಲಿ ನೋಡುತ್ತವೆ. ಅಥವಾ ಪರಿಗಣಿಸಲ್ಪಡುತ್ತವೆ. ವೈಧಿಕ ಧರ್ಮ ಬ್ರಾಹ್ಮಣ ಮಹಿಳೆಯ ಬಗೆಗೆ ಯಾವರೀತಿಯ ಭಾವನೆಗಳನ್ನು ತಾಳುತ್ತವೆ. ಈ ಹಿನ್ನೆಲೆಯಲ್ಲಿ ಲಿಂಗತಾರತಮ್ಯಕ್ಕೆಇರುವವ ಕಾರಣವನ್ನು ಅರ್ಥಮಾಡಿಕೊಳ್ಳಲಾಗುತ್ತದೆ. ಲಿಂಗಾತಾರತಮ್ಯಕ್ಕೆ ಕಾರಣವಾದ ಪ್ರಮುಖ ಅಂಶಗಳ ಕಡೆಗೆ ಗಮನಹರಿಸಿ ಅದನ್ನು ಹೋಗಲಾಡಿಸಲು ಏನೇನು ಕ್ರಿಯೆಗಳನ್ನು ಕೈಗೊಳ್ಳಬೇಕೆಂಬುದನ್ನು ಮತ್ತು ಯಾವ ತಂತ್ರಗಳನ್ನು ಬಳಸಿ ಇವುಗಳನ್ನು ಹೋಗಲಾಡಿಸಬೇಕೆಂಬ ಬಗ್ಗೆ ಅಧ್ಯಯನವನ್ನು ಇದು ಮಾಡಬಯಸುತ್ತದೆ.

ಬ್ರಾಹ್ಮಣ ಮಹಿಳೆಯ ಅಧ್ಯಯನವು ಸಂಶೋಧನಾ ಕ್ಷೇತ್ರದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಬೇರೆ, ಬೇರೆ ಧರ್ಮಗಳ ಬಗೆಗೆ ಅಧ್ಯಯನಗಳು ನಡೆಯುತ್ತಲಿದ್ದು, ನಡೆಯುತ್ತಿವೆ. ಒಂದು ಕಾಲಕ್ಕೆ ಶ್ರೇಷ್ಠವೆನ್ನಿಸಿಕೊಂಡಿದ್ದಂತಹ ಬ್ರಾಹ್ಮಣರಲ್ಲಿಯೂ ಅನೇಕ ದೋಷಗಳಿದ್ದು. ಈ ಬ್ರಾಹ್ಮಣ ಮಹಿಳೆಯರ ಬದುಕಿನ ನೆಲೆಗಳನ್ನು ಅರಿಯುವುದು ಅವಶ್ಯಕವಾಗಿದೆ. ಶೋಷಣೆಗೆ ಗುರಿಪಡಿಸುತ್ತಿದಂತಹ ಬ್ರಾಹ್ಮಣ ಧರ್ಮದಲ್ಲಿ, ಮಹಿಳೆ ತಾನೇ ಸ್ವತಃ ಶೋಷಣೆಗೆ ಗುರಿ ಯಾಗುತ್ತಿದ್ದಾಳೆ. ಇದಕ್ಕೆ ಕಾರಣಗಳನ್ನು ಕಂಡುಕೊಳ್ಳುವುದು ಈ ಅಧ್ಯಯನದ ಮಹತ್ವವನ್ನು ಸಾರಿ ಹೇಳುತ್ತದೆ.

ಕೆಳ ಜಾತಿಯ ಶೋಷಣೆಯಲ್ಲಿ ತೊಡಗಿರುವಂತಹ ಬ್ರಾಹ್ಮಣರಲ್ಲಿ ಮಹಿಳೆಯರ ಸ್ಥಿತಿಗತಿಗಳು ಹೇಗಿವೆ. ಪುರುಷ ಪ್ರಾಧನತೆಯ ಛಾಯೆ ಈ ಮಹಿಳೆಯರ ಮೇಲೆ ಯಾವ ರೀತಿಯಲ್ಲಿ ಪ್ರಭಾವಿಸಿವೆ. ಎಂಬುದನ್ನು ಕಂಡುಕೊಳ್ಳುವುದು. ತನ್ನ ನೈಜ ಚಹರೆಯ ಬಗೆಗೆ ತಿಳಿದಿದೆಯೋ ಇಲ್ಲವೋ ಅಥವಾ ಅವಳ ಚಹರೆ ಇದೆ ಎಂದು ಹೇಳಿರುವುದನ್ನು ನಂಬಿಕೊಂಡು ಬದುಕುತ್ತಿರುವ ಸ್ತ್ರೀಗೆ ತನ್ನ ಮೂಲ ಚಹರೆಯ ಹುಡುಕಾಟದ ಅವಶ್ಯಕತೆ ಇದೆಯೇ ಇಲ್ಲವೋ ಎಂಬುದನ್ನು ಅರಿತುಕೊಳ್ಳುವುದು. ಧರ್ಮತನೆಗೆ ಸಂಕೋಲೆಗಳನ್ನು ಹೇರುತ್ತದೆಯೋ ಅಥವಾ ತನ್ನ ಸಮ್ಮತಿಯಮೇರೆಗೆ ಇವನ್ನು ಅನುಸರಿಸಿಕೊಂಡು ಹೋಗುತ್ತಿದ್ದಾಳೋ ಎಂಬುದನ್ನು ಕಂಡುಕೊಳ್ಳುವುದು ಮಹತ್ವವನ್ನು ಬಯಸುತ್ತದೆ.

ಮಾತೃದೇವತೆಯ ಆರಾಧನೆಯನ್ನು ನಂಬಿರುವಂತವರಿರುವಾಗ "ಯತ್ರನಾರ್ಯಂತು ಪೂಜ್ಯಂತೆ ರಮಂತು ತಂತ್ರದೇವತಹ" ಎನ್ನುವ ಮಾತಿಗೆ ಇನ್ನೂ ಅಸ್ತಿತ್ವವಿದೆ ಎಂದುಕೊಳ್ಳುವಾಗ "ನಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎನ್ನುವ ಮಾತಿಗೆ ಇನ್ನೂ ಬೆಲೆ ಕೊಟ್ಟು ತಲೆಬಾಗಿ ನಡೆಯುವ ನಮ್ಮ ಮಹಿಳೆಯರ ಮೇಲೆ ಬದಲಾವಣೆಯಗಾಳಿ ಬಸಿಲ್ಲವೇ ಎಂಬುದನ್ನು ಕಂಡುಕೊಳ್ಳಬೇಕಿದೆ. ನಾಲ್ಕು ಗೋಡೆಗಳ ಮಧ್ಯೆ ಬದುಕುವ ಇಚ್ಛೆಯನ್ನು ಹೊದಿರುವಳೋ ಇವೆಲ್ಲ ಪ್ರಶ್ನೆಗಳಿಗೆ ಸಾಕಾರ ರೂಪವನ್ನು ಪಡೆಯಲು ಈ ಅಧ್ಯಯನ ಮಹತ್ವ ಪಡೆದುಕೊಳ್ಳುತ್ತದೆ.

ಲಿಖಿತ ಧಾರ್ಮಿಕ ಪರಂಪರೆಗೂ ಮೌಖಿಕ ಧಾರ್ಮಿಕ ಪರಂಪರೆಗೂ ಇರುವ ಕಾರ್ಯಕಾರಣಗಳನ್ನು ತೌಲನಿಕವಾಗಿ ನೋಡುವುದು, ಅಗತ್ಯವಾಗಿದೆ. ಇದರಲ್ಲಿ ಇತ್ತಿಚನ ಬದಲಾವಣೆಗಳು ನಡೆಯುತ್ತಿವೆಯೋ, ಮಹಿಳೆಯರು ಇದನ್ನು ಒಪ್ಪಿಕೊಂಡಿರುತ್ತಾರಾ? ನಮ್ಮ ಪಿತೃ ಪ್ರಧಾನ ಸಮಾಜ ಇದನ್ನು ಯಾವ ರೀತಿ ಪರಿಭಾವಿಸುತ್ತದೆ. ಎಂಬುದನ್ನು ಅರಿಯಲು ಕುತುಹಲಕಾರಿಯಾದ ಅಂಶಗಳನ್ನು ಕಂಡುಕೊಳ್ಳುವುದು ಈ ಅಧ್ಯಯನದ ಪ್ರಾಮುಖ್ಯತೆಯಾಗಿದೆ ಎಂದು ಹೇಳಬಹುದು.

ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನಗಳು ಮಹಿಳೆಯರ ಚಹರೆಗಳನ್ನು ಒರೆಗೆ ಹಚ್ಚಬೇಕಾದರೇ ಎಂತಹ ಸ್ಥಿತ್ಯಂತಗಳನ್ನು ಬಯಸುತ್ತಾರೆ. ಹೆಣ್ಣಿನ ಶೋಷಣೆಯನ್ನು ಧರ್ಮದ ಮೂಲಕ ಪ್ರತಿಪಾದಿಸಲಾಗುತ್ತದೆಯೇ ಅಥವಾ ಹೆಣ್ಣನ್ನು ನಿಯಂತ್ರಿಸಬಯಸುವ ಗಂಡಿನ ಮನೋಸ್ಥಿತಿಯನ್ನು ಅರಿಯಲು ಇದು ಸಹಕಾರಿಯಾಗಿದೆ.

ಬ್ರಾಹ್ಮಣ ಮಹಿಳೆ ತನ್ನ ಈ ಶೋಷಣಾತ್ಮಕ ಸ್ಥಿತಿಗೆ ಯಾರನ್ನು ದೂರುತ್ತಾಳೆ. ಪುರುಷನನ್ನೋ ಅಥವಾ ಧರ್ಮವನ್ನೋ ಎಂಬುದು ಇಲ್ಲಿ ಬಹಳ ಮುಖ್ಯವಾಗುತ್ತದೆ. ಅವಳು ತನ್ನೆಲ್ಲಾ ಇವತ್ತಿನ ಸ್ಥಿತಿಗೆ ಹಣೆಬರಹ, ಕರ್ಮದ ಮೇಲೆ ಎಲ್ಲಾ ತಪ್ಪನ್ನು ಹೇರಿ ಸುಮ್ಮನೇ ಕೂತಿದ್ದಾಳೆ. ಇದು ಅವಳ ಅಸಾಹಾಯಕತೆಯೇ ಎಂಬುದನ್ನು ಅರಿಯಲು ಇದು ಅವಶ್ಯಕವಾದುದಾಗಿದೆ. ನಿತ್ಯ ನೋವು ಯಾತನೆಗಳ ಮಧ್ಯೆ ಸಹನೆ, ತಾಳ್ಮೆಯೊಂದಿಗೆ ಪಾಲನೆ, ಪೋಷಣೆಯ ಜವಾಬ್ದಾರಿ ಹೊತ್ತಿರುವ ಅವಳ ಬದುಕಿನ ಮಜಲುಗಳನ್ನು ಅರಿಯುವುದು ಇಲ್ಲಿ ಮಹತ್ವಯುತವಾಗಿದೆ.

ಇಷ್ಟೆಲ್ಲಾ ಆದರೂ ಅವಳು ಯಾವ ಪುರುಷಾರ್ಥಕ್ಕಾಗಿ, ಸ್ವಾರ್ಥಕ್ಕಾಗಿ ತನ್ನ ನೈಜತೆಯನ್ನು ಬಿಟ್ಟು, ಪುರುಷನ ವಾಖ್ಯಾನದಂತೆ ನಡೆದುಕೊಳ್ಳಲು ಇರುವ ಕಾರಣಗಳನ್ನು ಕಂಡುಕೊಳ್ಳುವುದು ಅವಶ್ಯಕವಾಗಿದೆ. ಅವಳ ವ್ಯಕ್ತಿತ್ವದ ಹುಡುಕಾಟಕ್ಕೆ ಅವಳು ಕೈಹಾಕಿಲ್ಲವೇ? ಕೈಹಾಕಿದ್ದರೇ ಪುರುಷರ ಪಾಡೇನಾಗಬಹುದು ಎಂಬ ಆಲೋಚನೆಗಳನ್ನು ಇದು ಹುಟ್ಟುಹಾಕುತ್ತದೆ. ಮೇಲಿನ ಸಂದೇಹಗಳಿಗೆ ಸ್ಪಂದಿಸುವುದಾದರೇ ಈ ಅಧ್ಯಯನ ಮಹತ್ವದ ವಸ್ತುವಿಷಯವಾಗುತ್ತದೆ.

ಟಿಪ್ಪಣಿಗಳು

೧. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ-೧ ಪು.೯

೨. ಮಂಗಳಾಪ್ರಿಯದರ್ಶಿನಿ ಡಿ. ಸ್ತ್ರಿವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರೇವೇಶಿಕೆ ಪು.೧

೩. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ-೧ ಪು.೧೦

೪. ಅದೇ ಪು.೧೦

೫. ಅದೇ ಪು.೧೦

೬. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ -೧ ಪು. ೧೦-೧೧

೭. ಅದೇ -೧ ಪು.೧೧

೮. ಮಂಗಳಾ ಪ್ರಿಯದರ್ಶಿನಿ.ಡಿ, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ -೧ ಪು. ೭

೯. ಅದೇ -೧ ಪು. ೭

೧೦. ಅದೇ -೧ ಪು. ೨೩

೧೧. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ ಪು ೧೧

೧೨. ಮಂಗಳಾ ಪ್ರಿಯದರ್ಶಿನಿ ಡಿ. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ ಪು. ೩

೧೩. ಅದೇ -೧ ಪು. ೩

೧೪. ಅದೇ -೧ ಪು. ೩-೪

೧೫. ಅದೇ ಪು. ೪

❐

ಅಧ್ಯಾಯ : ಎರಡು

ಬ್ರಾಹ್ಮಣ ಮಹಿಳೆಯ ಅಧ್ಯಯನದ ತಾತ್ವಿಕ ನೆಲೆಗಳು

೨.೧. ಅಧ್ಯಯನದ ಮುಖ್ಯ ಪರಿಕಲ್ಪನೆಗಳು

೨.೧.೧. ಪಿತೃಪ್ರಧಾನತೆ

೨.೧.೨. ಮಾತೃಪ್ರಧಾನತೆ

೨.೧.೩. ಸಾಮಾಜೀಕರಣ

೨.೧.೪. ಸ್ಥಿರ ಮಾದರಿ/ಸಿದ್ಧಮಾದರಿ ಪಾತ್ರಗಳು

೨.೧.೫. ಗೃಹಿಣಿತ್ವ

೨.೧.೬. ಲಿಂಗ ಅಸಮಾನತೆ

೨.೧.೭. ಜಂಡರ್ ಸ್ಟಡೀಸ್

೨.೨. ಹಿಂದೂ ಧರ್ಮ ಮತ್ತು ಮಹಿಳೆ

೨.೩. ಬ್ರಾಹ್ಮಣ ಮಹಿಳೆ ಮತ್ತು ಧರ್ಮ

ಅಧ್ಯಾಯ : ಎರಡು

ಬ್ರಾಹ್ಮಣ ಮಹಿಳೆಯ ಅಧ್ಯಯನದ ತಾತ್ವಿಕ ನೆಲೆಗಳು

ಸಂಶೋಧನಾ ವಿಷಯವು ಮನದಟ್ಟಾಗಲು ಪರಿಕಲ್ಪನೆಗಳು ಪ್ರಮುಖ ಪಾತ್ರವಹಿಸುತ್ತವೆ. ಇದು ಸಂಶೋದಕರ ವಾಖ್ಯಾನವನ್ನು ಅರ್ಥೈಸಿಕೊಳ್ಳಲು ಪರಿಣಾಮಕಾರಿಯಾದ ವಿಧಾನವೂ ಆಗಿದೆ. ಸಂಶೋಧಕರ ಮನಸ್ಥಿತಿಗೆ ಓದುಗರನ್ನು ಕೊಂಡೊಯ್ಯಲು ಸಹಕಾರಿಯಾಗಿದೆ. ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆಯನ್ನು ಅರ್ಥೈಸಿಕೊಳ್ಳಲು ಪಿತೃಪ್ರಧಾನತೆ, ಮಾತೃ ಪ್ರಧಾನತೆ, ಸಾಮಾಜಿಕರಣದ ಅಂಶಗಳನ್ನು ಅರಿಯುವುದು ಅವಶ್ಯಕವಾಗುತ್ತದೆ. ಸಿದ್ಧಮಾದರಿ ಪಾತ್ರಗಳು, ಗೃಹಿಣಿತ್ವ ಇವುಗಳು ಅವಳ ಚಲನೆಯನ್ನು ಕಂಡುಕೊಳ್ಳಲು ಸಹಕಾರಿಯಾಗಿವೆ. ಲಿಂಗ ಅಸಮಾನತೆಯ ನೆಲೆಯಲ್ಲಿ ಬ್ರಾಹ್ಮಣ ಮಹಿಳೆಯ ನೈಜ ಸ್ಥಿತಿಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಇದು ಬ್ರಾಹ್ಮಣ ಮಹಿಳೆಯ ಸಮಸ್ಯೆ ಮಾತ್ರವಾಗಿರದೆ, ಇಡೀ ಸ್ತ್ರೀ ಕುಲದ ಸಮಸ್ಯೆಯಾಗಿದೆ. ಅಧ್ಯಯನದ ಮಿತಿಯ ಕಾರಣದಿಂದ ಕೇವಲ ಬ್ರಾಹ್ಮಣ ಮಹಿಳೆಯ ಅಧ್ಯಯನ ಕೈಗೊಳ್ಳಲಾಗಿದೆ. ಮಹಿಳಾ ಅಧ್ಯಯನದ ಗುರಿಗಳಲ್ಲೊಂದಾದ ಲಿಂಗ ಅಸಮಾನತೆಯನ್ನು ಹೋಗಲಾಡಿಸಿ, ಲಿಂಗ ಸಮಾನತೆಸಾಧನೆ ಹಾದಿಯಲ್ಲಿ ಜಂಡರ್ ಸ್ಟಡೀಸ್ ಪರಿಕಲ್ಪನೆ ಸಹಕಾರಿಯಾಗಿದೆ. ಜೈವಿಕತೆಯನ್ನು ಆಧರಿಸಿ ಬ್ರಾಹ್ಮಣ ಮಹಿಳೆಯ ಮೇಲೆ ಹೇರಲಾಗಿರುವ ಸ್ಥಿರ ಮಾದರಿಗಳಿಗೆ ವಿರೋಧಿಯಾಗಿರುವಂತಹ ಸಮಾನ ಲಿಂಗ ವ್ಯವಸ್ಥೆಯನ್ನು ರೂಪಿಸಲು ಜಂಡರ್ ಸ್ಟಡಿ ಎಂಬ ಪರಿಭಾಷೆಯನ್ನು ಬಳಸುವುದು ಅವಶ್ಯಕವಾಗಿದೆ.

ಬ್ರಾಹ್ಮಣ ಮಹಿಳೆ ಮತ್ತು ಧರ್ಮವನ್ನು ಗ್ರಹಿಸಬೇಕಾದರೆ, ಹಿಂದೂಧರ್ಮ ಮತ್ತು ಮಹಿಳೆಯನ್ನು ಗಮನಿಸುವುದು ಅನಿವಾರ್ಯವಾಗುತ್ತದೆ. ಹಿಂದೂ ಧರ್ಮ ಮಹಿಳೆಯನ್ನು ಹೇಗೆ ಪರಿಭಾವಿಸುತ್ತದೆ ಎಂಬುದು ಅಧ್ಯಯನದಲ್ಲಿ ಪ್ರಮುಖ ವಿಷಯವಾಗಿದೆ. ಈ ಮೂಲಕ ಬ್ರಾಹ್ಮಣ ಮಹಿಳೆಯನ್ನು ಧರ್ಮ ಯಾವನೆಲೆಯಲ್ಲಿ ನೋಡುತ್ತಿದೆ. ಎಂಬುದನ್ನು ಕಂಡುಕೊಳ್ಳಲು ಸಹಾಯಕವಾಗಿದೆ. ಹಿಂದೂಧರ್ಮ ಮತ್ತು ಇವುಗಳನ್ನು ತುಲನಾತ್ಮಕ ಹಿನ್ನೆಲೆಯಲ್ಲಿ ಗಮನಿಸಿದಾಗ ಇವೆರೆಡರಲ್ಲೂ ಪ್ರಮುಖ ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ. ನೇರವಾಗಿ ಶೋಷಣೆ ಮಾಡುವುದಕ್ಕೂ ತೆರೆಮರೆಯಲ್ಲಿ ಶೋಷಣೆ ಮಾಡುವುದಕ್ಕೂ ವ್ಯತ್ಯಾಸವಿರುವುದರಿಂದ, ಬ್ರಾಹ್ಮಣ ಮಹಿಳೆಯ ಮೌನ ನೋವಿಗೆ ಸ್ಪಂದಿಸುವುದು ಅವಶ್ಯವಾಗಿದೆ. ಬ್ರಾಹ್ಮಣ ಮಹಿಳೆಯನ್ನು ಗ್ರಹಿಸುವ ಬಗ್ಗೆ ಮತ್ತು

ಆ ಆಚರಣೆಗಳ ಮೂಲಕ ಅವಳನ್ನು ಹಿಡಿದಿಡುವ ಬಗೆಯನ್ನು ಇಲ್ಲಿ ಅಭ್ಯಸಿಸಬಹುದು. ಜೈವಿಕತೆಯನ್ನಾಧರಿಸಿ, ಅಪವಿತ್ರಳನ್ನಾಗಿಸುವ ಧರ್ಮದ ಸೂಕ್ಷ್ಮವನ್ನು ಈ ಅಧ್ಯಾಯದಲ್ಲಿ ಗ್ರಹಿಸಬಹುದಾಗಿದೆ. ಇದಕ್ಕೆ ಪರಿಕಲ್ಪನೆಗಳು ಒತ್ತಾಸೆಯಾಗಿ ನಿಲ್ಲುತ್ತವೆಂದು ಹೇಳಬಹುದಾಗಿದೆ.

೨.೧ ಅಧ್ಯಯನದ ಮುಖ್ಯಪರಿಕಲ್ಪನೆಗಳು

೨.೧.೧ ಪಿತೃ ಪ್ರಧಾನತೆ

ಪ್ರಸ್ತುತ ಸಂದರ್ಭದಲ್ಲಿ ಪಿತೃಪ್ರಧಾನತೆ ಪುರುಷಪ್ರಧಾನತೆಯೆಂದು ಪರಿಭಾವಿಸಲ್ಪಡುತ್ತದೆ. ಇಲ್ಲಿ ತಂದೆಯ ಅಥವಾ ಪ್ರಜಾಪ್ರಭುತ್ವದ ಯಜಮಾನಿಕೆ ಎಂಬರ್ಥವನ್ನು ಕೊಡುತ್ತದೆ. "ಹೆಂಗಸರು, ಕಿರಿಯ ಗಂಡಸರು, ಮಕ್ಕಳು ಮತ್ತು ಗುಲಾಮರು ಮನೆಗೆಲಸದವರನ್ನು ಒಳಗೊಂಡಂತೆ ಪುರುಷನೊಬ್ಬನ ಅಧೀನದಲ್ಲಿರುವ ಕುಟುಂಬವನ್ನು ವರ್ಣಿಸಲು ಪಿತೃಪ್ರಧಾನತೆ ಪದವನ್ನು ಬಳಸಲಾಯಿತು. ಆದರೆ ಇದು ಕುಟುಂಬಕ್ಕೆ ಮಾತ್ರ ಸೀಮಿತವಾಗಿರದೇ ಇಡೀ ಸಮಾಜದಲ್ಲಿ ವಿವಿಧ ರೂಪ, ಸ್ಥರ ಹಾಗೂ ಆಯಾಮಗಳಲ್ಲಿ ವಿಸ್ತರಿಸಿಕೊಂಡು ವಿಶಾಲಾರ್ಥದಲ್ಲಿ ಬಳಕೆಯಾಗುತ್ತಿದೆ. ಹಾಗಾಗಿ ಇದನ್ನು "ಪುರುಷ ಪ್ರಧಾನ" ಎಂಬ ಪದದ ಬಳಕೆ ಪ್ರಾರಂಭವಾಯಿತು. ಈಗ ಇದನ್ನು ಪುರುಷ ಪ್ರಾಬಲ್ಯ, ಪುರುಷನು ಮಹಿಳೆಯ ಮೇಲೆ ತನ್ನ ಹಿಡಿತ ಸಾಧಿಸುವ ಸಲುವಾಗಿ ಇರುವ ಅಧಿಕಾರ ಸಂಬಂಧಗಳು ಮತ್ತು ಮಹಿಳೆಯನ್ನು ಬಹು ಬಗೆಯಲ್ಲಿ ದಬ್ಬಾಳಿಕೆಗೆ ಒಳಪಡಿಸುವ ವ್ಯವಸ್ಥೆಯನ್ನು ಅರ್ಥೈಸಲು ಬಳಸಲಾಗುತ್ತಿದೆ. ಪುರುಷರಿಂದ ಪುರುಷರಿಗಾಗಿ, ಪುರುಷರೇ ರೂಪಿಸಿ ನಡೆಸುವ ಸಾಮಾಜಿಕ ವ್ಯವಸ್ಥೆ. ದೇಶ, ರಾಜ್ಯ, ಧರ್ಮ, ಜಾತಿ, ಜನಾಂಗ ಮತ್ತು ಕಾಲಾತೀತವಾಗಿ ಹಬ್ಬಿರುವ ಈ ಪುರುಷ ಪ್ರಧಾನತೆ ಮಹಿಳೆಯರ ಪರಾಧೀನತೆಗೆ ಕಾರಣವಾಗಿದೆ. ದಿನ ನಿತ್ಯ ಬದುಕಿನಲ್ಲಿ ಕುಟುಂಬ ಹಾಗೂ ಕುಟುಂಬದ ಹೊರಗೆ ಮಹಿಳೆಯರು ಅನುಭವಿಸುವ ಈ ಪರಾಧೀನತೆ ಬಹುಮುಖಿ ನೆಲೆಯನ್ನು ಪಡೆದುಕೊಂಡಿದೆ. ಮಹಿಳೆಯರ ಮೇಲಿನ ತಾರತಮ್ಯ, ನಿರ್ಲಕ್ಷ್ಯ, ಅಪಮಾನ, ನಿಯಂತ್ರಣ, ಶೋಷಣೆ, ದಬ್ಬಾಳಿಕೆ ಮತ್ತು ಹಿಂಸೆಗಳೆಲ್ಲವೂ ಪುರುಷ ಪ್ರಧಾನ ವ್ಯವಸ್ಥೆಯ ಪ್ರತಿಬಿಂಬಗಳಾಗಿವೆ."[೧]

"ಗಂಡು ಮಕ್ಕಳನ್ನು ಬಯಸುವುದು ಆಹಾರದಲ್ಲಿ ಹೆಣ್ಣು ಮಕ್ಕಳಿಗೆ ತಾರತಮ್ಯ, ಹೆಂಗಸರು ಮತ್ತು ಹೆಣ್ಣು ಮಕ್ಕಳ ಮೇಲೆ ಕೆಲಸದ ಹೊರೆ, ಹೆಣ್ಣು ಮಕ್ಕಳಿಗೆ ಶಿಕ್ಷಣದಿಂದ ವಂಚನೆ, ಅವರ ಚಲನವಲನದ ಮೇಲೆ ನಿಯಂತ್ರಣ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ, ಮಹಿಳೆಯರಿಗೆ ಆಸ್ತಿ ಹಕ್ಕು ಹಾಗೂ ಉತ್ತರಾಧಿಕಾರತ್ವ ಇಲ್ಲದಿರುವುದು ಇವೆಲ್ಲವೂ ಕುಟುಂಬ ಅಥವಾ ಸಮಾಜದಲ್ಲಿರುವ ಪುರುಷ ಪ್ರಧಾನತೆಯನ್ನು ಸೂಚಿಸುತ್ತದೆ. ಪುರುಷ ಪ್ರಧಾನತೆಯ ಸ್ವರೂಪ ಎಲ್ಲಾ ಕಡೆ ಒಂದೆ ರೀತಿಯಾಗಿರುವುದಿಲ್ಲ. ವಿವಿಧ ಸಮಾಜ, ವರ್ಗ, ಜಾತಿ, ಧರ್ಮ ದೇಶ ಮತ್ತು ಜನಾಂಗಗಳ ಮೇಲೆ ಬೇರೆ ಬೇರೆಯಾಗಿರುತ್ತದೆ. ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಅವರ ಸ್ವರೂಪ ಬೇರೆ ಬೇರೆಯಾಗಿರುತ್ತದೆ. ಪ್ರತಿಯೊಂದು ಸಾಮಾಜಿಕ ವ್ಯವಸ್ಥೆ ಇಲ್ಲವೆ ಚರಿತ್ರೆಯ ಕಾಲಘಟ್ಟವು ಪುರುಷ ಪ್ರಧಾನತೆಯಲ್ಲಿ ತನ್ನದೆ ಆದ ಭಿನ್ನತೆಯನ್ನು ಹೊಂದಿರುತ್ತದೆ. ಇದು ಭಿನ್ನ ಸಾಮಾಜಿಕ ಮತ್ತು ಕಾನೂನುಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ಎತ್ತಿಹಿಡಿಯುವ ಆಧಾರ ಸ್ತಂಭಗಳಾಗಿವೆ. ಹಿಂದಿನಿಂದಲೂ ಈ ಮೂರು ವ್ಯವಸ್ಥೆಗಳು ಪುರುಷ

ಪ್ರಧಾನತೆಯನ್ನು ಬೆಂಬಲಿಸುತ್ತಾ ಅದಕ್ಕೆ ಪೂರಕವಾಗಿ ಕೆಲಸಮಾಡುತ್ತಾ ಬಂದಿವೆ. ಈ ಪುರುಷ ಪ್ರಧಾನತೆಯನ್ನು ತೊಡೆದುಹಾಕಿ ಸಮಾನತೆಯ ಸಮಾಜವನ್ನು ಕಟ್ಟುವುದು ಸ್ತ್ರೀವಾದದ ಗುರಿಯಾಗಿದೆ.''೨

''ಪುರುಷ ಪ್ರಧಾನ ವ್ಯವಸ್ಥೆಯು ಮೂರು ಆಯಾಮಗಳನ್ನು ಹೊಂದಿದೆ. ಪುರುಷ ಆಳ್ವಿಕೆ, ಪುರುಷ ವಾಸಸ್ಥಳ ಮತ್ತು ಪುರುಷ ಉತ್ತರಾಧಿಕಾರತ್ವ ಪುರುಷ ಆಳ್ವಿಕೆ, ಆಳುವ ಮತ್ತು ಆಳಲ್ಪಡುವ ಗುಂಪುಗಳ ನಡುವಿನ ಸಂಬಂಧವನ್ನು ವಿವರಿಸುತ್ತದೆ. ಪುರುಷರು ಆಳುವವರಾದರೆ ಮಹಿಳೆಯರು ಆಳಲ್ಪಡುವವರಾಗಿರುತ್ತಾರೆ. ಇಬ್ಬರ ನಡುವಿನ ಪರಸ್ಪರ ಒಪ್ಪಂದ ಮತ್ತು ಹಕ್ಕುಗಳನ್ನು ಗುರುತಿಸುವುದರ ಮೂಲಕ ಪುರುಷ ಅಧಿಕಾರವನ್ನು ಕಡಿಮೆ ಮಾಡಬಹುದು. ಕುಟುಂಬದಲ್ಲಿ ಕಂಡುಬರುವ ಪುರುಷ ಪ್ರಧಾನತೆಯಿಂದಲೇ ಪುರುಷ ಅಧಿಕಾರ ಅಥವಾ ಆಳ್ವಿಕೆ ಹುಟ್ಟಿಕೊಂಡಿದೆ. ಎಂದು ಅದರ ಐತಿಹಾಸಿಕ ಮೂಲದಿಂದ ತಿಳಿದುಬರುತ್ತದೆ. ಆ ಕುಟುಂಬದಲ್ಲಿ ತಂದೆಗೆ ಇತರ ಸದಸ್ಯರ ಮೇಲೆ ಸಂಪೂರ್ಣ ಅಧಿಕಾರವಿರುತ್ತದೆ. ಇದಕ್ಕೆ ಪ್ರತಿಯಾಗಿ ಅವನು ಸದಸ್ಯರಿಗೆ ಆರ್ಥಿಕ ಬೆಂಬಲ ಮತ್ತು ರಕ್ಷಣೆಯನ್ನು ನೀಡಬೇಕಾಗುತ್ತದೆ. ಆದರೆ ಅವನ ಅಧಿಕಾರ ಮತ್ತು ಜವಾಬ್ದಾರಿಗಳು ಕುಟುಂಬದ ಸದಸ್ಯರೊಂದಿಗೆ ಬೇರೆ ಬೇರೆಯಾಗಿರುತ್ತವೆ.''೩

'**ಉದಾಹರಣೆಗೆ**: ಗಂಡು ಮಗುವಿನ ಮೇಲಿನ ತಂದೆಯ ಜವಾಬ್ದಾರಿ ತಾತ್ಕಾಲಿಕವಾಗಿರುತ್ತದೆ. ಮಗನು ಮನೆಯ ಯಜಮಾನನಾಗುವ ತನಕ ತಂದೆಯ ನಿಯಂತ್ರಣದಲ್ಲಿರುತ್ತಾನೆ. ಆದರೆ ಹೆಣ್ಣು ಮಕ್ಕಳು ಮತ್ತು ಹೆಂಡತಿಯರ ಜೀವನ ಪೂರ್ತಿ ಪುರುಷನ ಅಧೀನದಲ್ಲಿರಬೇಕು. ಹೆಣ್ಣು ಮಕ್ಕಳು ಮದುವೆಯಾದ ನಂತರ ಮತ್ತೊಬ್ಬ ಪುರುಷನ ಆಳ್ವಿಕೆ ಮತ್ತು ರಕ್ಷಣೆಗೆ ಒಳಪಡುತ್ತಾಳೆ. ಈ ರೀತಿಯ ರಕ್ಷಣೆ ಮತ್ತು ಆರ್ಥಿಕ ಬೆಂಬಲಕ್ಕೆ ಪ್ರತಿಯಾಗಿ ಮಹಿಳೆಯರು ಪುರುಷರಿಗೆ ಲೈಂಗಿಕ ಸೇವೆ ಮತ್ತು ವೇತನವಿಲ್ಲದ ಮನೆ ಕೆಲಸವನ್ನು ಮಾಡಬೇಕಾಗುತ್ತದೆ.''೪

''ಪುರುಷ ವಾಸಸ್ಥಳವು ಕುಟುಂಬ ಸದಸ್ಯರ ವಾಸಸ್ಥಳವನ್ನು ವಿಶೇಷವಾಗಿ ಮಹಿಳೆಯರ ವಾಸಸ್ಥಳವನ್ನು ನಿರ್ಧರಿಸುವ ವ್ಯವಸ್ಥೆಯಾಗಿದೆ. ಸ್ತ್ರೀಯರ ವಾಸಸ್ಥಳ ಪುರುಷರ ವಾಸಸ್ಥಳವನ್ನು ಅವಲಂಬಿಸಿರುತ್ತದೆ. ಇದರಲ್ಲಿ ಸ್ತ್ರೀಯು ತಾನು ಹುಟ್ಟಿದ ಕುಟುಂಬವನ್ನು ಬಿಟ್ಟು ತನ್ನ ಗಂಡನ ಅಥವಾ ಅವನ ಕುಟುಂಬ ವಾಸಿಸುವಲ್ಲಿ ಇರಬೇಕು. ಈ ವ್ಯವಸ್ಥೆ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದುಕೊಂಡು ಹೋಗುತ್ತಿದೆ. ಕುಟುಂಬದಲ್ಲಿ ಗಂಡು ಮಗುವಿಗೆ ಆದ್ಯತೆ ಮತ್ತು ಸ್ತ್ರೀ ವಿರೋಧಿ ಮನೋಭಾವ ಬೆಳೆಯಲು ಮತ್ತು ಕಾರ್ಯಗಳು ನಡೆಯಲು ಈ ಪುರುಷ ವಾಸಸ್ಥಳ ಮುಖ್ಯಕಾರಣವಾಗಿದೆ. ಈ ವ್ಯವಸ್ಥೆ ಹೆಣ್ಣು ಮಕ್ಕಳು ತಂದೆ, ತಾಯಿ, ಮನೆ ಹಾಗೂ ಗಂಡನ ಮನೆ ಎರಡರಲ್ಲೂ ಹೊರಗಿನವರಾಗಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಜೀವನ ಪೂರ್ತಿ ಹೋರಾಡುವಂತೆ ಮಾಡುತ್ತದೆ.''೫

''ಪ್ರಾಚೀನ ಭಾರತ ಮತ್ತು ಚೀನಾ, ದೇಶದಲ್ಲಿದ್ದಂತೆ ಸ್ತ್ರೀಯರು ಬಾಲ್ಯದಲ್ಲಿ ತಂದೆಗೆ ನಂತರ ಗಂಡನಿಗೆ ಮತ್ತು ವೈದವ್ಯ ಪ್ರಾಪ್ತಿಯಾದಾಗ ಮಗನಿಗೂ ವಿಧೇಯಳಾಗಿರಬೇಕಾಗಿತ್ತು ಸ್ತ್ರೀಯರಿಗೆ ಆಸ್ತಿಯನ್ನು ಹೊಂದುವ ಹಕ್ಕು ಇರಲಿಲ್ಲ. ಗಂಡನ ವಿರುದ್ಧ ಹೆಂಡತಿಗೆ ಯಾವ ನ್ಯಾಯವೂ ಆಗುತ್ತಿರಲಿಲ್ಲ. ಕುಟುಂಬದ ಧಾರ್ಮಿಕ ಕಾರ್ಯಗಳಲ್ಲಿಯೂ ಪುರುಷರದೇ ಪ್ರಧಾನ ಪಾತ್ರವಿರುವುದು. ಸ್ತ್ರೀಯರು ಸಾರ್ವಜನಿಕ ಜೀವನದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತಿರಲಿಲ್ಲ. ಅವರಿಗೆ ಹೆಚ್ಚಿನ ವಿದ್ಯಾಭ್ಯಾಸವು ದೊರೆಯುತ್ತಿರಲಿಲ್ಲ. ಮನೆಕೆಲಸಗಳಲ್ಲಿ ಮಾತ್ರ ಅವರಿಗೆ

ತರಬೇತಿ ನೀಡಲಾಗುತ್ತಿತ್ತು. ಪಿತೃ ಪ್ರಧಾನ ಕುಟುಂಬದಲ್ಲಿ ಸ್ತ್ರೀಗೆ ಆಸ್ತಿ, ಅಧಿಕಾರ, ಅಂತಸ್ತು ಉತ್ತರಾಧಿಕಾರತ್ವ ಯಾವುದೂ ಇರಲಿಲ್ಲವಾದ್ದರಿಂದ ಸ್ತ್ರೀಯರ ಸ್ಥಾನ - ಮಾನ ಕೀಳು ಮಟ್ಟದ್ದಾಗಿತ್ತು. ಎಲ್ಲದ್ದಕ್ಕೂ ಪುರುಷರ ಮೇಲೆ ಅವಲಂಬಿತವಾಗುವ ಅನಿವಾರ್ಯತೆ ಇತ್ತು.''[೬]

''ಪುರುಷ ಉತ್ತರಾಧಿಕಾರತ್ವದಲ್ಲಿ ಉತ್ತರಾಧಿಕಾರತ್ವ ತಂದೆಯಿಂದ ಮಗನಿಗೆ ಬರುತ್ತದೆ. ಅಂದರೆ ಕುಟುಂಬದ ಅಧಿಕಾರ ಹಕ್ಕುಬಾಧ್ಯತೆ ಚರಾ, ಚಿರಾಸ್ತಿಗಳೆಲ್ಲವೂ ಒಬ್ಬ ಪುರುಷನಿಂದ ಮತ್ತೊಬ್ಬ ಪುರುಷನಿಗೆ ಹೋಗುತ್ತದೆ. ಇದೇ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತದೆ. ಇದು ಪುರುಷರಿಗೆ ಕುಟುಂಬದ ಎಲ್ಲಾ ಸದಸ್ಯರ ಮೇಲೆ ನಿಯಂತ್ರಣ ಹೊಂದುವಂತೆ ಅಧಿಕಾರವನ್ನು ನೀಡುತ್ತದೆ. ಇಂತಹ ಕುಟುಂಬ ವ್ಯವಸ್ಥೆಯಲ್ಲಿ ಮನೆ, ಭೂಮಿ ಹಾಗೂ ಮಹಿಳೆ ಪುರುಷನ ಆಸ್ತಿಯ ಒಂದು ಭಾಗ ಎಂದು ಪರಿಗಣಿಸಲ್ಪಡುತ್ತಾರೆ.''[೭]

೨.೧.೨. ಮಾತೃಪ್ರಧಾನತೆ

'ಈ ವ್ಯವಸ್ಥೆಯಲ್ಲಿ ಮಹಿಳೆಯರು ಆಳುವವರಾಗಿರುತ್ತಾರೆ. ಮಾತೃ ಪ್ರಧಾನತೆಯನ್ನು ಪಿತೃಪ್ರಧಾನ ವ್ಯವಸ್ಥೆಗೆ ವಿರೋಧವಾಗಿ ನೋಡಿದಾಗ ಕಂಡುಬರುವ ಸಂಗತಿ. ಆದರೆ ಈ ವರೆಗಿನ ಮಹಿಳಾ ಚರಿತ್ರೆಯ ಕಾಲಘಟ್ಟಗಳನ್ನು ಅವಲೋಕಿಸಿದಾಗ, ಅಲ್ಲಿ ಮಹಿಳೆಯ ಆಳ್ವಿಕೆಯ ಕುರುಹು ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತವೆ. ಅವಕಾಶಸಿಕ್ಕಾಗಲೂ ಅವಳು ಅಧಿಕಾರದ ಬಲಪ್ರಯೋಗಮಾಡಿದ ಉದಾಹರಣೆ ದೊರಕಲಾರದು, ದೊರಕಿಲ್ಲ ಕೂಡ. ಫೆಡ್ರಿಕ್ ಎಂಗೆಲ್ಸನು ತನ್ನ ''ಆರಿಜನ್ ಆಫ್ ಫಾಮಿಲಿ ಫ್ರೈವೆಟ್ ಪ್ರಾಪರ್ಟಿ ದಿ ಸ್ಟೇಟ ಆ್ಯಂಡ'' (The Origin of Family, Private property And The State) (೧೮೮೪) ಎಂಬ ಪುಸ್ತಕದಲ್ಲಿ ಆಧುನಿಕ ಸಮಾಜದ ಪೂರ್ವದಲ್ಲಿ ಮತ್ತು ಖಾಸಗಿ ಆಸ್ತಿಯ ಪರಿಕಲ್ಪನೆ ಹುಟ್ಟಿಕೊಳ್ಳುವ ಮೊದಲು ಮಾತೃ ಪ್ರಧಾನ ವ್ಯವಸ್ಥೆ ಇತ್ತು ಎಂದು ಹೇಳುತ್ತಾನೆ. ಈ ವ್ಯವಸ್ಥೆ ಪುರುಷಾಧಿಕಾರ ಸಾರ್ವತ್ರಿಕವಾದುದಲ್ಲ ಎಂಬುದನ್ನು ಸೂಚಿಸುತ್ತದೆ. ಈ ವ್ಯವಸ್ಥೆಯ ಕುಟುಂಬದಲ್ಲಿ ತಾಯಿಯೇ ಯಜಮಾನಿಯಾಗಿದ್ದು ಇಡೀ ಕುಟುಂಬವು ಅವಳ ನಿಯಂತ್ರಣದಲ್ಲಿರುತ್ತದೆ. ಇಲ್ಲಿ ಪುರುಷನು ತಾನು ಹುಟ್ಟಿದ ಮನೆಯನ್ನು ಬಿಟ್ಟು ಬಂದು ಹಂಡತಿ ಅಥವಾ ಅವಳ ಕುಟುಂಬದೊಂದಿಗೆ ವಾಸಿಸುತ್ತಾನೆ. ಆದ್ದರಿಂದ ಹೆಂಡತಿ ಎಲ್ಲಿ ವಾಸಿಸುತ್ತಾಳೆ ಎನ್ನುವುದು ಪುರುಷನ ವಾಸಸ್ಥಳವನ್ನು ನಿರ್ಧರಿಸುತ್ತದೆ. ಉತ್ತರಾಧಿಕಾರವು ತಾಯಿಯಿಂದ ನಿರ್ಧರಿಸಲ್ಪಟ್ಟು ಅವಳಿಂದ ಮಗಳಿಗೆ ವರ್ಗಾವಣೆಯಾಗುತ್ತದೆ.''[೮]

''ಈ ವ್ಯವಸ್ಥೆ ಕೆಲವೇ ಸಮಾಜಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡದ ಬಂಟ್ಸ್ ಜನಾಂಗದಲ್ಲಿರುವ ಅಳಿಯ ಸಂತಾನ ಪದ್ಧತಿ ಹಾಗೂ ಕೇರಳದ ನಾಯರ್ ಜನಾಂಗದಲ್ಲಿ ಕಂಡುಬರುವ ಮಾತೃ ಪ್ರಧಾನ ಕುಟುಂಬಗಳು ಇದನ್ನು ಸ್ತ್ರೀ ಪ್ರಾಧಾನ್ಯ ವ್ಯವಸ್ಥೆಯೆಂದು ಕರೆಯಲಾಗುವದಿಲ್ಲ ಏಕೆಂದರೇ ಇದರ ವ್ಯಾಪ್ತಿ ಬಹಳ ಕಡಿಮೆ. ಕೆಲವೇ ಸಮಾಜ ಮತ್ತು ಕುಟುಂಬಗಳಿಗೆ ಸೀಮಿತವಾಗಿದೆ. ಪುರುಷ ಪ್ರಧಾನತೆಯ ಪ್ರಭಾವ ಈ ಸಮಾಜಗಳಿಗೂ ಹರಡಿ ಈ ಪದ್ಧತಿಯು ಅಳಸಿಹೊಗಿದೆ ಎಂದು ಕೆಲವಿದ್ವಾಂಸರ ಅಭಿಪ್ರಾಯ. ಮತ್ತು ಇದು ಸಮಾಜದ ಇತರ ಸ್ತರಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಅಸ್ತಿತ್ವಹೊಂದಿಲ್ಲ. ಅವುಗಳ ಮೇಲೆ ಪ್ರಭಾವವನ್ನು ಬೀರುವದಿಲ್ಲ. ಈ ವ್ಯವಸ್ಥೆಯಲ್ಲಿ ಉತ್ತರಾಧಿಕಾರವು ತಾಯಿಯಿಂದ ಮಗಳಿಗೆ ಹೋಗುವುದು ನೆಪಕ್ಕೆ ಮಾತ್ರ.

ಅವರಿಗೆ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರುವುದಿಲ್ಲ. ಕುಟುಂಬದ ಎಲ್ಲಾ ವ್ಯವಹಾರವನ್ನು ಅಣ್ಣ ತಮ್ಮಂದಿರು ನೋಡಿಕೊಳ್ಳುತ್ತಾರೆ. (ತಂದೆ ಅಥವಾ ಗಂಡನಿಗೆ ಬದಲಾಗಿ) ಇಲ್ಲಿಯೂ ಸ್ತ್ರೀಯರು ಪುರುಷರ ಅಧೀನದಲ್ಲೆ ಇರಬೇಕಾಗುತ್ತದೆ. ಪುರುಷರ ಸಂಬಂಧ ಮಾತ್ರ ಬೇರೆಯಾಗಿರುತ್ತದಷ್ಟೆ ಎಂದು ಹೇಳಲಾಗುತ್ತದೆ. ಕೆಲವು ಬುಡಕಟ್ಟು ಜನಾಂಗಗಳಲ್ಲಿಯೂ ಸ್ತ್ರೀ ಪ್ರಧಾನ ವ್ಯವಸ್ಥೆಯಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆಯೇ ಅಂತಿಮವಲ್ಲ. ಸಾರ್ವತ್ರಿಕವಲ್ಲ. ಅದಕ್ಕೊಂದು ಪರ್ಯಾಯ ಇತ್ತು. ಇದೆ ಎಂಬುದನ್ನು ಮಾತೃಪ್ರಧಾನ ವ್ಯವಸ್ಥೆ ಸೂಚಿಸುತ್ತದೆ."[೯] ಇಲ್ಲಿ ಮಹಿಳೆಯು ತನ್ನ ಜೀವನ ಹಾಗೂ ಮಕ್ಕಳ ಮೇಲೆ ನಿಂತ್ರಣ ಹೊಂದಿರುತ್ತಾಳೆ. ವಿವಾಹ ಮುರಿದು ಹೋದರೂ ಮಕ್ಕಳು ಅವಳ ಬಳಿಯೇ ಉಳಿಯುತ್ತಾರೆ.

ಮಾತೃಪ್ರಧಾನ ಎನ್ನುವುದು ಹೆಣ್ಣು ತಾಯಿಯಾದಾಗ ಮಾತ್ರ ಪ್ರಾಮುಖ್ಯತೆ ದೊರೆಯುವುದನ್ನು ಧ್ವನಿಸುತ್ತದೆ. ಒಂದು ವೇಳೆ ಅವಳು ತಾಯಿಯಾಗದೇ ಹೋದರೆ ಅವಳಿಗೊಂದು ಚಹರೆ ಸಿಕ್ಕುವದಿಲ್ಲವೆಂದೆ ಹೇಳಬೇಕು. ''ಮಾತೃ ಪ್ರಧಾನ ಎನ್ನುವ ಪರಿಕಲ್ಪನೆಯು ಹೆಣ್ಣು ತಾಯಿಯಾಗಲೇಬೇಕೆಂದು ಒತ್ತಾಯಿಸುತ್ತದೆ. ಮಾತೃತ್ವವನ್ನು ಮುಂದುಮಾಡುವ ಮಾತೃ ಪ್ರಧಾನ ಪರಿಕಲ್ಪನೆಯು ಪಿತೃಪ್ರಧಾನ ವ್ಯವಸ್ಥೆಯ ಒಂದು ಭಾಗವಾಗಿ ನಿಂತುಕೊಳ್ಳುತ್ತದೆ.೩ ಮಾತೃತ್ವವನ್ನೆ ಹೆಣ್ಣಿನ ಘನತೆಯನ್ನಾಗಿ ಎತ್ತಿಹಿಡಿಯುವ ಮಾತೃ ಪ್ರಧಾನ ಪರಿಕಲ್ಪನೆಯು ಹೆಣ್ಣು ಮಾತೃತ್ವದ ಮೂಲಕವೇ ಚಹರೆ ಪಡೆದುಕೊಳ್ಳುವ ಸತ್ಯವನ್ನೆ ಪ್ರತಿಪಾದಿಸುತ್ತದೆ. ವಿವಾಹಿತ ಮಹಿಳೆಗೆ ಕುಟುಂಬದಲ್ಲಿ ಹೆಂಡತಿಯ ಪಾತ್ರಕ್ಕಿಂತಲೂ, ತಾಯಿ ಪಾತ್ರ ಹೆಚ್ಚು ಸುರಕ್ಷತೆಯನ್ನು ಅಧಿಕೃತತೆಯನ್ನು ಜೊತೆಗೆ ಚಹರೆಯನ್ನು ಕಲ್ಪಿಸಿಕೊಡುತ್ತದೆ. ಮಾತೃಪ್ರಧಾನತೆ ಎಂಬ ಶಬ್ದಾರ್ಥವೇ ಇದನ್ನೆ ಪ್ರತಿಬಿಂಬಿಸುವಂಥದಾಗಿದೆ ಎನ್ನಬಹುದು.

ಸ್ತ್ರೀವಾದಿ ಚಿಂತಕರೆಂದು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟ ಮೇರಿ ವುಲ್‌ಸ್ಟ್ ಕ್ರಾಫ್ಟ್, ಸಿಮೋನ್‌ದ ಬೋವಾನಿಂದ ಹಿಡಿದುಕೊಂಡು ಇವತ್ತಿನವರೆಗಿನ ಎಲ್ಲ ಸ್ತ್ರೀವಾದಿಗಳು ಹೆಣ್ಣನ್ನು ಜೈವಿಕ (ಪಕೃತಿ) ನೆಲೆಯಲ್ಲಿ, ಗಂಡನ್ನು ಸಂಸ್ಕೃತಿ (ಬೌದ್ಧಿಕ) ನೆಲೆಯಲ್ಲಿ ಗುರುತಿಸುವುದನ್ನು ವಿರೋಧಿಸುತ್ತಾರೆ. ಭಾರತೀಯ ಹಾಗೂ ಕರ್ನಾಟಕದ ಸ್ತ್ರೀವಾದಿ ಚಿಂತನಾಕಾರರು ಇದಕ್ಕೆ ಹೊರತಾಗಿಲ್ಲ. ಸ್ತ್ರೀವಾದಿ ಚಿಂತಕರು ಕುಟುಂಬದಲ್ಲಿ ಸಮಾಜದಲ್ಲಿ ಹೆಣ್ಣು ಜೈವಿಕ ಕಾರಣದಿಂದಾಗಿಯೇ ಹೇಗೆ ಎರಡನೆಯ ದರ್ಜೆಯ ಪ್ರಜೆಯಾಗಿರುವಳು ಎನ್ನುವುದನ್ನು ವಿಶ್ಲೇಷಿಸುತ್ತಾರೆ. ಜೈವಿಕ ಸಹಜವಾದ ಲೈಂಗಿಕ ಭಿನ್ನತೆಯನ್ನು ಆಧಾರವಾಗಿಟ್ಟುಕೊಂಡು ಶ್ರೇಷ್ಠ-ಕನಿಷ್ಠ ಸಂಸ್ಕೃತಿ ಪಕೃತಿ ಎಂದು ತಾರತಮ್ಯವನ್ನು ಸೃಷ್ಟಿಸಿದ ಪುರುಷ ಪ್ರಧಾನ ಮೌಲ್ಯಗಳ ಹಿಂದಿರುವ ರಾಜಕಾರಣವನ್ನು ಪ್ರಶ್ನಿಸುತ್ತಾರೆ.

ಏಂಗೆಲ್ಸ್ ಮಾತೃ ಪ್ರಧಾನತೆಯು ಪಿತೃಪ್ರಧಾನತೆಗೆ ಎಡೆಕೊಟ್ಟ ಚಾರಿತ್ರಿಕ ಹಂತವೇ ಹೆಣ್ಣಿನ ಪಾಲಿನದೊಡ್ಡ ಸೋಲು, ದುರಂತ ಎಂಬ ವ್ಯಾಖ್ಯಾನಕ್ಕೆ ಬೋವಾ ಅವರು 'ಅಂಥ ಸುವರ್ಣಯುಗವೊಂದು ಹೆಣ್ಣಿನ ಪಾಲಿಗೆ ಎಂದೂ ಒದಗಲಿಲ್ಲ. ಎಂದು ವಾದಿಸುತ್ತಾಳೆ.' ಚರಿತ್ರೆಯ ವಿವಿಧ ಹಂತಗಳಲ್ಲಿ ಗಂಡು ಹೆಣ್ಣನ್ನು ಬಹುಬಗೆಯ ನಿರೀಕ್ಷೆ ಆತಂಕ ತಲ್ಲಣ ಹಾಗೂ ಭಯಗಳಲ್ಲಿ ನೋಡುತ್ತಾ ಭೂಮಿಎಂದೋ, ತಾಯಿಎಂದೋ, ದೇವತೆಎಂದೋ ದೂರವಾಗಿಯೇ ಇರಿಸಿ ತನ್ನಿಂದ ಹೊರತಾದದ್ದೆಂದು ತಿಳಿದನೇ ಹೊರತು ತನ್ನ ಸಹಜೀವಿಯಾಗಿ ಎಂದೂ ಅವಳನ್ನು ನೋಡಲಿಲ್ಲ. ಸಮಾಜ ಎಂದರೆ ಎಂದಿದ್ದರೂ ಪುರುಷರೇ ಎಂದರ್ಥ. ಪ್ರಾಚೀನ ಸಮಾಜಗಳನ್ನು ತೀವ್ರವಾಗಿ

ಅಧ್ಯಯನ ಮಾಡಿದ ಲೇವಿಸ್ಟ್ರಸ್ 'ಸಾಮಾಜಿಕ ಅಧಿಕಾರ ಯಾವಾಗಲೂ ಪುರುಷನದೇ ಎಂದೇ ಗ್ರಹಿಸಿದ್ದಾನೆ.' ಇದನ್ನು ಸಮರ್ಥಿಸುವ ಮುಖ್ಯನಿದರ್ಶನವಾಗಿ ಮಾತೃವಂಶಿಯ ವ್ಯವಸ್ಥೆಯನ್ನು ನೋಡಬಹುದು. ಅಲ್ಲಿ ವಂಶದ ಮುಂದುವರಿಕೆ ಹೆಣ್ಣು ತಲೆಮಾರಿನಲ್ಲೆ ಆದರೂ ಮನೆತನದ ಅಧಿಕಾರ ಮಾತ್ರ ಗಂಡು ಮಕ್ಕಳಲ್ಲೆ ನೆಲೆಯಾಗುತ್ತದೆ. ಅಲ್ಲಿ ಅವಳು ಅಧಿಕಾರದ ಮಾಧ್ಯಮವೇ ಹೊರತು, ಅದರ ವಾರಸುದಾರಳಲ್ಲ. ಇತ್ತ ಆಸ್ತಿ-ಪಾಸ್ತಿಯ ನಿರ್ವಹಣೆ ಸೋದರನಿಗೆ ಸಲ್ಲುತ್ತದೆ, ಅತ್ತ ಮಕ್ಕಳ ಹೊಣೆ ಗಂಡನಿಗೆ ಸಲ್ಲುತ್ತದೆ. ಸೋದರನೇನೂ ಸದಾಕಾಲ ಸೋದರಿಯ ಪರವಾಗಿರುವುದಿಲ್ಲ. ಸಮಯಬಂದರೆ ಅವನು ತಂದೆಯಾಗಿ ತನ್ನ ಸ್ಥಾನವನ್ನು ನಿರೂಪಿಸಲು ಬಯಸುತ್ತಾನೆಯೇ ಹೊರತು ಸೋದರನಾಗಿ ಅಲ್ಲ.

ಹಾಗಾಗಿಯೇ ನಾಗರೀಕತೆಯ ವಿಕಾಸದಲ್ಲಿ ಮಾತೃವಂಶಿಯತೆಗೆ ಉಳಿಗಾಲವಿಲ್ಲವಾದದ್ದು, ಪಿತೃಪ್ರಧಾನ ವ್ಯವಸ್ಥೆ ಆಕಸ್ಮಿಕವಾಗಿ ನೆಲೆಯೂರಿದ್ದು ಅಲ್ಲ. ಮಾನವ ಜನಾಂಗದಲ್ಲಿ ಗಂಡಸು ಹುಟ್ಟಿನಿಂದಲೇ ಹೆಣ್ಣಿಗಿಂತ ಅನುಕೂಲಕರವಾಗಿ ದೈಹಿಕ ರಚನೆಯನ್ನು ಪಡೆದದ್ದೆ ಕಾರಣವಾಗಿ ತನ್ನನ್ನು ಉನ್ನತನೆಂದು ಸ್ಥಾಪಿಸಿಕೊಳ್ಳಲು ಸಾಧ್ಯವಾಯಿತು. ತಾನೇ ಪ್ರಧಾನ ಸೃಷ್ಟಿ ಎಂದು, ಹೆಣ್ಣು ಒಂದು ಪರಿಕರವೆಂದೂ ಹೇಳುತ್ತಾ ಅವಳನ್ನು ಗುಲಾಮಳನ್ನಾಗಿ ಅಥವಾ ಗೊಂಬೆಯನ್ನಾಗಿ ನಡೆಸಿಕೊಳ್ಳುವಲ್ಲಿ ಯಶಸ್ವಿಯಾದ ತನ್ನ ಪಾತ್ರವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಸಂದರ್ಭಗಳು ಹೆಣ್ಣಿಗೆಂದೂ ಒದಗಲೇ ಇಲ್ಲ. ಸೂತ್ರದಾರನಾಗಿ, ನಿರ್ದೇಶಕನಾಗಿ ಗಂಡು ಹೇಳಿದಂತೆ ಮಾತ್ರವೇ ಅವಳು ಪಾತ್ರ ನಿರ್ವಹಿಸುತ್ತಿದ್ದಾಳೆ. ಬಹುಶಃ ಉತ್ಪಾದಕ ಹಂತದಲ್ಲಿ ಭಾಗವಹಿಸುವುದು ಅವಳಿಗೆ ಸಾಧ್ಯವಾಗಿದ್ದರೆ ಪುರುಷನ ಸಹಜೀವಿಯಾಗಿ ತನ್ನನ್ನು ಸ್ಥಾಪಿಸಿಕೊಳ್ಳಲು ಅವಳಿಗೆ ಸಾಧ್ಯವಾಗುತ್ತಿತ್ತೊ ಏನೋ? ಮಾನವರು ಎಂದರೇ ಸ್ತ್ರೀಯರೂ ಒಳಗೊಂಡ ವರ್ಗ ಎಂಬ ಸಹಜತೆಯನ್ನು ನಿರೀಕ್ಷಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಅವನು ಪಕೃತಿಯನ್ನು ಆಕ್ರಮಿಸಿ ಒಡೆತನವನ್ನು ಸ್ಥಾಪಿಸಿದಂತೆ ಹೆಣ್ಣನ್ನು ಆಕ್ರಮಿಸಿ ಒಡೆತನವನ್ನು ಸ್ಥಾಪಿಸಿದ. ಅವಳನ್ನು ಉಪಜೀವಿಯಾಗಿ ಕಂಡದಿನದಿಂದಲೇ ಹೆಣ್ಣು ಗಂಡಿನ ಸಂಬಂಧಗಳು ಸಹಜತೆಯನ್ನು ಉಳಿಸಿಕೊಳ್ಳಲೇ ಇಲ್ಲ.

ಇದು ಅವಳಲ್ಲಿ ನೋವು, ಹಿಂಸೆ, ಅಪಮಾನಗಳನ್ನು ತುಂಬಿದರೇ, ಅವನಲ್ಲಿ ಹೆದರಿಕೆ ಆತಂಕ ಅಪಾಯಗಳನ್ನು ತುಂಬಿಸಿತು ಅವಳ ಮೇಲೆ ಆಕ್ರಮಣಮಾಡುವ ಮೂಲಕ ತನ್ನ ಭಯವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿದ. ಏಕೆಂದರೇ ಅವನಲ್ಲಿ ಅಧಿಕಾರವಿದೆ. ಅವನೇ ಹುಟ್ಟುಹಾಕಿದ ಧರ್ಮ, ಕಾನೂನು, ನಿಯಮಗಳು ಅವಳನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿವೆ. ಪುರಾಣಗಳ ಸೃಷ್ಟಿಯ ಸಂದರ್ಭದಲ್ಲಿ ಪಿತೃಪ್ರಧಾನ ಸ್ಥಿರವಾದುದು ನಿಜ. ಹಾಗಾಗಿ ಹೆಣ್ಣನ್ನು ಕುರಿತು ಅವನು ಕಲ್ಪಿಸಿದ ಮಿಥ್‌ಗಳೆಲ್ಲವೂ ಹೆದರಿಕೆ, ಅಪಾಯ, ಆತಂಕಗಳನ್ನೆ ತುಂಬಿಕೊಂಡಿವೆ. ಇತಿಹಾಸದುದ್ದಕ್ಕೂ ಅವಳ ಜೊತೆಗೆ ಸಕಲ ಚರಾಚರ ಜೀವಿಗಳನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸಬೇಕೆಂಬ ಅವನ ಕನಸುಗಳೇ ಅಲ್ಲಿ ಪ್ರಧಾನವಾಗಿವೆ. ತನ್ನ ಕನಸು ನನಸಾಗಬೇಕಾದರೆ ಹೆಣ್ಣು ಅಸ್ತಿತ್ವದ ಅಗತ್ಯ ವಿದೆ. ಎಂಬುದು ಅವನಿಗೆ ಗೊತ್ತು. ಸಮಾಜದಲ್ಲಿ ಅವಳಿಗೊಂದು ಸಮಗ್ರ ಸ್ಥಾನ ನೀಡುವ ಅಗತ್ಯವೂ ಇದೆ. ತನ್ನ ನಿಯಮಗಳನ್ನು ಅವಳು ಒಪ್ಪಿಕೊಂಡು ಬಾಳುವಷ್ಟು ಕಾಲವೂ ಅವಳಿಗೆ ಇಂಥ ಸ್ಥಾನವನ್ನು ನೀಡಲು ಅವನದೇನೂ ಅಭ್ಯಂತರವಿಲ್ಲ.

೨.೧.೩. ಸಾಮಾಜೀಕರಣ

ಮಹಿಳೆಯರ ಜೀವನ ಮತ್ತು ಸ್ಥಾನಗಳ ಮೇಲೆ ಪ್ರಭಾವ ಬೀರುವ ಮತ್ತೊಂದು ಸಾಮಾಜಿಕ ಪ್ರಕ್ರಿಯೆ ಎಂದರೇ ಸಾಮಾಜೀಕರಣ. ಸಾಮಾಜೀಕರಣವೆಂದರೆ ವ್ಯಕ್ತಿಯನ್ನು ಸಮಾಜ ಯೋಗ್ಯವಾಗಿ ಮಾಡುವ ಪ್ರಕ್ರಿಯೆ ಅಂದರೆ ಸಮಾಜವು ತನ್ನ ಸದಸ್ಯರನ್ನು ಪರಿಪೂರ್ಣ ಸಾಮಾಜಿಕ ಜೀವಿಯನ್ನಾಗಿಸಲು ರೂಪಿಸಿರುವಂಥ ನೀತಿ-ನಿಯಮಗಳ ಕಂತೆ. ಇದು ವ್ಯಕ್ತ ಮತ್ತು ಅವ್ಯಕ್ತ ತರಬೇತಿಗಳ ಮೂಲಕ ನಡೆಯುತ್ತಿರುತ್ತದೆ. ತಂದೆ, ತಾಯಿ, ಶಿಕ್ಷಕರು, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳು ಈ ಸಾಮಾಜೀಕರಣದ ಏಜೆಂಟರುಗಳಾಗಿವೆ. ಕಲೆ ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳ ಮೂಲಕ ಕೂಡ ಸಾಮಾಜೀಕರಣ ನಡೆಯುತ್ತಿರುತ್ತದೆ.

ಈ ಸಾಮಾಜೀಕರಣ ಲಿಂಗ ವಿಭಜನೆಗೂ ಕಾರಣವಾಗಿದೆ. ಮಕ್ಕಳು ಹೇಗೆ ಲಿಂಗವ್ಯವಸ್ಥೆಯ ಅನನ್ಯತೆಯನ್ನು ಬೆಳೆಸಿಕೊಳ್ಳುತ್ತವೆ. ಮತ್ತು ಲಿಂಗ ವ್ಯವಸ್ಥೆ ವಿಭಜನೆಯನ್ನು (ಸ್ತರಗಳನ್ನು) ಕಲಿಯುತ್ತವೆ ಎಂಬುದೆ ಲಿಂಗ ವ್ಯಸ್ಥೆ ಸಾಮಾಜೀಕರಣ. ಮಗು ಜನ್ಮತಾಳಿದಾಗ ಜೈವಿಕ ಲಿಂಗದ ಆಧಾರದ ಮೇಲೆ ಹೆಣ್ಣು, ಗಂಡು ಮಗು ಎಂದು ಗುರುತಿಸಲಾಗುತ್ತದೆ. ಆ ಮಗು ಬೆಳೆದಂತೆ ಲಿಂಗವ್ಯವಸ್ಥೆಯ ಅನನ್ಯತೆಯನ್ನು ಮೈಗೂಡಿಸಿಕೊಳ್ಳುತ್ತದೆ. ಅಂದರೆ ಮಗು ತಾನು ಹುಡುಗನೋ ಅಥವಾ ಹುಡುಗಿಯೋ ಎಂಬ ಭಾವನೆ ಮತ್ತು ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತದೆ. ಲಿಂಗ ವ್ಯವಸ್ಥೆಗೆ ತಕ್ಕಂತೆ ಪಾತ್ರ, ನಂಬಿಕೆ ಮನೋಭಾವ ಮತ್ತು ನಡವಳಿಕೆಗಳನ್ನು ಹುಡುಗ ಹುಡುಗಿಯರು ಕಲಿಯುತ್ತಾ ಹೋಗುತ್ತಾರೆ. ಕುಟುಂಬದ ಹೊರಗೆ ಹಾಗೂ ಹೊರಗೆ ನಡೆಯುವ ವಿವಿಧ ಕ್ರಿಯೆ, ಪರಸ್ಪರ ಕ್ರಿಯೆ, ಜನರ ನಡುವಳಿಕೆ, ಮನೋಭಾವ, ಆಚರಣೆ ಪದ್ಧತಿ, ನೀತಿ ಹಾಗೂ ನಿಯಮಗಳಿಂದ ಲಿಂಗ ವ್ಯವಸ್ಥೆಯ ಪ್ರತೀಕಗಳನ್ನು ಬೆಳೆಸಿಕೊಳ್ಳುತ್ತಾರೆ. ಈ ಕಲಿಕೆಯ ಪ್ರಕ್ರಿಯೆಯೇ ಸಾಮಾಜೀಕರಣ. ಇದರಲ್ಲಿ ಲಿಂಗ ವ್ಯವಸ್ಥೆಯ ಬೇಧಗಳನ್ನು ಗುರುತಿಸಬಹುದು. ಹೆಣ್ಣು ಮಗುವಿಗೆ ನೀಡುವ ಆಟಿಕೆಗಳೂ, ಅದರಲ್ಲಿ ತಾಂತ್ರಿಕ ಕೌಶಲ್ಯ, ಶೌರ್ಯ ಸಾಹಸ ಮತ್ತು ಆಕ್ರಮಣಶೀಲ ಪ್ರವೃತ್ತಿಯನ್ನು ಬೆಳೆಸುತ್ತವೆ.

ಕಥೆ, ಕಾದಂಬರಿ, ಚಲನಚಿತ್ರ ಮತ್ತು ಟಿ.ವಿ. ಧಾರಾವಾಹಿಗಳು ರೂಢಿಬದ್ಧ ಸಾಂಪ್ರದಾಯಿಕ ಪಾತ್ರಗಳನ್ನು ಬಲಗೊಳಿಸುತ್ತಾ ಪುನರ್‌ಸ್ಥಾಪಿಸುತ್ತವೆ. ಮಹಳೆಯರನ್ನು ತ್ಯಾಗಿಗಳು ಎಲ್ಲಾ ಕಷ್ಟಗಳನ್ನು ಮೌನವಾಗಿ ಸಹಿಸುವವರು, ಎಂದೂ ಸ್ವಂತಿಕೆ ಇಲ್ಲದ ವ್ಯಕ್ತಿಗಳನ್ನಾಗಿ ನೋಡುತ್ತವೆ. ನಿಷ್ಕ್ರೀಯ ಸಾಧುಸ್ವಭಾವದ, ಪರದಾಹಾಕುವ, ಲಕ್ಷ್ಮಣ ರೇಖೆಯನ್ನು ದಾಟದ, ಸಮಾಜ ನಿರೀಕ್ಷಿಸುವ ಪಾತ್ರ ಮತ್ತು ನಡುವಳಿಯಕೆಯನ್ನು ರೂಢಿಸಿಕೊಂಡಿರುವ ಮಹಿಳೆಯರನ್ನು ಆದರ್ಶ ಮಹಿಳೆ ಎಂದೂ ಚಿತ್ರಿಸಲಾಗುತ್ತದೆ. ಈ ಗುಣಗಳು ಇಲ್ಲದ ಸಮಾಜದ ನಿರೀಕ್ಷೆಯನ್ನು ಮೀರಿ ನಡೆಯುವ ಮಹಿಳೆಯನ್ನು ಮಾಯಗಾತಿ, ಶೀಲಗೆಟ್ಟವಳು ಎಂದು ಚಿತ್ರಿಸಲಾಗುತ್ತದೆ. ಅತ್ಯಂತ ಪ್ರಭಾವಯುಕ್ತ ಮಾಧ್ಯಮಗಳಾದ ಜಾಹಿರಾತು ಮತ್ತು ಭಾಷೆ, ಲಿಂಗ ಸಾಮಾಜೀಕರಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಮಹಿಳೆಯರನ್ನು ಮನೆಗೆಲಸ ಮತ್ತು ಮಕ್ಕಳನ್ನು ನೋಡಿಕೊಳ್ಳುವ ಗೃಹಿಣಿಯರನ್ನಾಗಿ ಮತ್ತು ಗಂಡಸರನ್ನು ಆಕರ್ಷಿಸಲು ಸೌಂದರ್ಯವರ್ಧಕಗಳನ್ನು ಬಳಸುವ ಗ್ರಾಹಕರನ್ನಾಗಿ ಚಿತ್ರಿಸಿದರೇ, ಗಂಡಸರು ಬುದ್ಧಿವಂತರು,

ಶೌರ್ಯ, ಸಾಹಸ ಉಳ್ಳವರು, ತಂತ್ರಜ್ಞರು, ಆಟವಾಡುವವರು ಮತ್ತು ಯಶಸ್ವಿ ಕೆಲಸಗಾರರನ್ನಾಗಿ ತೋರಿಸಲಾಗುತ್ತದೆ. ಇಂತವುಗಳನ್ನು ನೋಡುವ ಮಕ್ಕಳು ಇತರ ಸ್ತ್ರೀ ಪುರುಷರಲ್ಲಿ ಅದೇ ಗುಣಗಳನ್ನು ನಿರೀಕ್ಷಿಸುತ್ತವೆ, ಮತ್ತು ತಾವು ಬೆಳೆಸಿಕೊಳ್ಳುತ್ತವೆ. ಭಾಷೆ ಕೂಡ ಲಿಂಗ ತಾರತಮ್ಯ ಮತ್ತು ವ್ಯತ್ಯಾಸವನ್ನು ಸೂಚಿಸುತ್ತದೆ. ಲಿಂಗ ವ್ಯವಸ್ಥೆ ವಿಭಜನೆಗೂ ಕಾರಣವಾಗುತ್ತಿದೆ. ಹುಡುಗನೇನಾದರೂ ಅತ್ತರೇ 'ಹೆಣ್ಣಿಗ' ಎಂದೂ, ತುಂಬ ಮೃದು ಸ್ವಭಾವದವನಾಗಿದ್ದು, ಪ್ರತಿಭಟನೆ ತೋರದಿದ್ದರೆ 'ಹೆಂಗಸಿನಂತೆ ಬಳೆತೊಟ್ಟುಕೋ' ಎಂದು, ಮನೆಗೆಲಸದಲ್ಲಿ ಗಂಡ ಹೆಂಡತಿಗೆ ಸಹಾಯ ಮಾಡಿದರೆ 'ಹೆಂಡತಿಯ ಗುಲಾಮ' ಎಂದು ಹೀಯಾಳಿಸುತ್ತಾರೆ. ಅಂದರೆ ಹೆಂಗಸರ ಗುಣ ಸ್ವಭಾವಗಳು ಉಪಯೋಗಿಸುವ ವಸ್ತುಗಳನ್ನು ಕೀಳಾಗಿಸಿ ಅವುಗಳನ್ನು ಅಪಮಾನಕರ ರೀತಿಯಲ್ಲಿ ಬಳಸಲಾಗುತ್ತದೆ. ಇವೆಲ್ಲವೂ ಎಳೆಯ ವಯಸ್ಸಿನ ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ ಸ್ತ್ರೀ ವಿರೋಧಿಯಾದ ಮಹಿಳೆಯರ ಅಭಿವೃದ್ಧಿಗೆ ಮಾರಕವಾದಂಥ ಪಾತ್ರ ನಿರೀಕ್ಷೆಗಳನ್ನು ತೊಡೆದುಹಾಕಲು ಲಿಂಗ ಸೂಕ್ಷ್ಮತೆಯಿಂದ ಕೂಡಿದ ಸಾಮಾಜೀಕರಣದ ಅಳವಡಿಕೆ ಅವಶ್ಯಕವಾಗಿದೆ.

ಮಗುವು ಬೆಳೆದಂತೆಲ್ಲ ತನ್ನ ಸುತ್ತ ಮುತ್ತ ಪರಿಸರ ವ್ಯಕ್ತಿಗಳು ಹಾಗೂ ಘಟನೆಗಳ ಬಗ್ಗೆ ಅರಿವನ್ನು ಪಡೆಯುತ್ತದೆ. ಇಂಥ ಕಲಿಕೆ ಜೀವನದುದ್ದಕ್ಕೂ ಸಮಾಜದಲ್ಲಿ ಕುಟುಂಬದ ಮೂಲಕ ನಡೆಯುತ್ತ ಹೋಗುವುದರಿಂದ ಇದನ್ನು ಸಾಮಾಜೀಕರಣವೆನ್ನಲಾಗಿದೆ. ವ್ಯಕ್ತಿಯ ಅಂತಃ ಸಾಮರ್ಥ್ಯವು ಸಹಜವಾಗಿ ವಿಕಾಸವಾಗಬೇಕಾದರೆ ಬಾಲ್ಯ ಜೀವನದಲ್ಲಿ ಸೂಕ್ತ ಕೌಟುಂಬಿಕ ವಾತಾವರಣ ಅತ್ಯಗತ್ಯ. ಕುಟುಂಬದ ಎಲ್ಲ ಸದಸ್ಯರು ಜವಾಬ್ದಾರಿಯನ್ನು ಸಮಾನವಾಗಿ ಹಂಚಿಕೊಳ್ಳಬೇಕು. ಒಬ್ಬರು ಮತ್ತೊಬ್ಬರ ಮೇಲೆ ನಿರ್ಬಂಧ ಒತ್ತಡ ಹಾಕಬಾರದು. ಆಗ ಕುಟುಂಬದ ಹಿರಿಯ ಮಕ್ಕಳು ಹಾಗೂ ಎಳೆಯ ಮಕ್ಕಳ ವ್ಯಕ್ತಿವಿಕಾಸ ಸಾಧ್ಯ. ವ್ಯಕ್ತಿಯು ಸಮಾಜ ವ್ಯವಸ್ಥೆಯಲ್ಲಿ ಹೇಗೆ ಭಾಗವಹಿಸಬೇಕೆಂಬುದನ್ನು ರೂಪಿಸಿರುವ ಪ್ರಕ್ರಿಯೆ ಸಾಮಾಜೀಕರಣವಾಗಿದೆ. 'ಇದರಲ್ಲಿ ಕಲಿಕೆಯ ಮೂಲಕ ಪಡೆಯುವ ತಿಳಿವಳಿಕೆ ಹಾಗೂ ಪ್ರಯತ್ನಪೂರ್ವಕವಾಗಿ ಪಾಲಿಸಬೇಕಾದ ಮೌಲ್ಯಗಳು ಸೇರುತ್ತವೆ. ಇಂಥ ಪ್ರಕ್ರಿಯೆಯಲ್ಲಿ ಮಹಿಳೆಗೆ ಮೌಲ್ಯಗಳನ್ನು ಆಯ್ಕೆಮಾಡಿಕೊಳ್ಳುವ ಅವಕಾಶ ನೀಡಿಲ್ಲ. ಹೀಗಾಗಿ ಆಕೆ ಆ ಬಗ್ಗೆ ತಿರಸ್ಕಾರ, ಅನಾಶಕ್ತಿ, ಅಸಮಾಧಾನಗಳನ್ನು ವ್ಯಕ್ತಪಡಿಸಿದರೂ ಕೂಡ ಆ ವ್ಯವಸ್ಥೆಯಲ್ಲಿ ತಾನು ಹೊಂದಿಕೊಳ್ಳುವುದು ಅನಿವಾರ್ಯ ಹಾಗೂ ಅಗತ್ಯವಾಗುತ್ತದೆ. ಆದ್ದರಿಂದ ಸಮಾಜವು ತನ್ನನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಅವಳು ಒಳ್ಳೆಯ ತಾಯಿ ಹೆಂಡತಿ, ಮಗಳು, ಗೆಳತಿ, ಅತ್ತೆ, ಸೊಸೆ, ಸೇವಕಿಯಾಗಿ ಮಾನ್ಯತೆಪಡೆಯಲು ಮಾನಸಿಕ ಪ್ರೇರಣೆಯನ್ನು ರೂಢಿಸಿಕೊಳ್ಳುತ್ತಾಳೆ. ಅದಕ್ಕೆ ತಕ್ಕಂತೆ ವರ್ತಿಸುತ್ತಾಳೆ. ಸಮಾಜದಲ್ಲಿ ಸ್ತ್ರೀ ಪುರುಷರಿಬ್ಬರೂ ಆದಾಗಲೇ ಸಿದ್ಧಗೊಂಡ ಸಾಮಾಜಿಕ ರಚನೆಗೆ ಹೊಂದಿಕೊಳ್ಳಲು ಕಲಿತ ಅಥವಾ ತಿಳಿದವರೇ ಆಗಿರುತ್ತಾರೆ. ಆದ್ದರಿಂದ ಇಬ್ಬರೂ ಸಾಮಾಜಿಕರಣಕ್ಕೆ ಒಳಗಾಗಿ ಮಹಿಳೆ ಆತನ ಪಾತ್ರ ನಿರೀಕ್ಷೆಗೆ ತಕ್ಕಂತೆ ಪರಿವರ್ತಿತಳಾಗುತ್ತಾಳೆ. ಎಂದರೆ ಇದು ಏಕಮಾರ್ಗಿಯ ಪ್ರಕ್ರಿಯೆಯಾಗುತ್ತದೆ.

ಮಹಿಳೆಯೇ ಬಯಸುವ ಅಥವಾ ಸಾಧಿಸಲು ಪ್ರಯತ್ನಿಸುವ ಪಾತ್ರಗಳನ್ನು ಮರೆಮಾಚುವ ಅಥವಾ ಇನ್ನೊಬ್ಬ ಹೆಣ್ಣಿಗೂ ದಕ್ಕದಂತೆ ಮಾಡುವ ಸಂಚಿನ ಸಂಬಂಧವನ್ನು ಕೂಡ ಗಮನಿಸಬಹುದು. ಈ ಸಾಮಾಜೀಕರಣ ಪ್ರಕ್ರಿಯೆ

ಕಾಲಕ್ಕೆ ತಕ್ಕಂತೆ ಬದಲಾದ ಪರಿಸರ ವಾತಾವರಣ ಹಾಗೂ ರಾಜಕೀಯ ಆರ್ಥಿಕ ರೀತಿ-ನೀತಿಗಳಿಗೆ ತಕ್ಕಂತೆ ಪರಿವರ್ತನೆ ಕಾಣುತ್ತದೆ. ಹೊಸ ಹೊಸ ಬೇಡಿಕೆಗಳಿಗೆ ಅನುಗುಣವಾಗಿ ಸಮಾಜವು ಸ್ವೀಕರಿಸಬಹುದಾದ ರೂಪದಲ್ಲಿ ವರ್ತನೆ ಮನೋಭಾವ, ಮೌಲ್ಯಗಳನ್ನು ವ್ಯಕ್ತಿಗಳು ಅವಳವಡಿಸಿಕೊಳ್ಳುತ್ತಾರೆ ಉಡುಗೆ-ತೊಡೆಗೆ ಆಹಾರ-ವಿಹಾರಗಳ ಜೊತೆಗೆ ಭಾಷಾಬಳಕೆ ಸಾಂಸ್ಕೃತಿಕ ಆಚರಣೆಗಳವರೆಗೆ ವ್ಯಕ್ತಿಗಳ ನಡುವಳಿಕೆ ಬದಲಾಗುತ್ತಿರುತ್ತದೆ. ಆಧುನಿಕ ಪಾಶ್ಚಾತ್ಯ ಜೀವನ ಮಾಹಿತಿ ತಂತ್ರಜ್ಞಾನದ ಪರಿಣಾಮವಾಗಿ ಜಾಗತೀಕರಣದ ಮಜಲುಗಳಲ್ಲಿ ಈಗ ಸಾಮಾಜೀಕರಣದ ಮತ್ತೊಂದು ವಿರ್ಯಾಸ ಎದ್ದುಕಾಣುತ್ತಿದೆ. ಇದರಿಂದ ಜೀವನ ಶೈಲಿ ಬದಲಾಗಿದೆ. ಈ ಅತ್ಯಾಧುನಿಕ ಬದುಕು ಹಿಂದಿನ ಮತ್ತು ಇಂದಿನ ತಲೆಮಾರುಗಳಲ್ಲಿ ಹೊಂದಾಣಿಕೆ ಸಮಸ್ಯೆಯನ್ನು ಹುಟ್ಟುಹಾಕಿದೆ. ಹೀಗಾಗಿ ಲಿಂಗ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಭಿನ್ನ ಗುರಿಗಳನ್ನು ಸೂಚಿಸುವುದು, ಜವಾಬ್ದಾರಿಗಳನ್ನು ನಿಗದಿಪಡಿಸುವುದು ಮುಂತಾದ ಲಿಂಗಾಧಾರಿತ ಸಮಾಜಿಕರಣ ಬೇರೊಂದು ತಿರುವು ಅಥವಾ ಕವಲು ಕಾಣುತ್ತಿದೆ. ಆದರೆ ಸಂದಿಗ್ಧ ಪರಿಸ್ಥಿತಿಯಿರುವ ಈ ಸಂಧಿಕಾಲದಲ್ಲಿಯೂ ಯುವತಿಯರಿಗೆ ಎಷ್ಟರ ಮಟ್ಟಿಗೆ ಸಮಾನತೆಯನ್ನು ಸಾಧಿಸಲು ಸಾಧ್ಯವಾಗಿದೆ ಎಂಬುದು ಇನ್ನೂ ಸ್ಪಷ್ಟವಾಗುತ್ತಿಲ್ಲ. ಆದರೆ ಕುಟುಂಬದಲ್ಲಿ ಪ್ರಾರಂಭವಾಗುವ ಸಾಮಾಜೀಕರಣದ ಪ್ರಕ್ರಿಯೆ ವ್ಯಕ್ತಿಯು ತನ್ನ ಭವಿಷ್ಯ ಜೀವನದಲ್ಲಿ ತಳೆಯುವ ನಿಲುವುಗಳಿಗೆ ಅಡಿಗಲ್ಲಾಗುತ್ತದೆ ಎಂಬುದು ಸತ್ಯ.

ಜಾಗತೀಕರಣದ ವಿಶಾಲ ವೇದಿಕೆಯತ್ತ ವೇಗವಾಗಿ ಸಾಗುವ ಜನರು ಒಂದು ಕಡೆಯಾದರೇ, ಇನ್ನೂ ಹಳೆಯ ಸಾಮಾಜಿಕ ವ್ಯವಸ್ಥೆಯ ವಿನ್ಯಾಸದಿಂದ ಹೊರಬರದ ಅಥವಾ ಹೊರಗಿನ ವಿಶ್ವವನ್ನು ನೋಡುವ ಅದರಲ್ಲಿ ಒಂದಾಗುವ ಮನಸ್ಸನ್ನು ಹೊಂದಿರದ ಬಹುಸಂಖ್ಯಾತರು ಮತ್ತೊಂದೆಡೆ ಇದ್ದಾರೆ. ಅನೇಕ ಕುಟುಂಬಗಳಲ್ಲಿ ಗರ್ಭಿಣಿಯಾಗುವುದಕ್ಕೆ ಮೊದಲು ಗಂಡು ಮಗುವನ್ನು ಹಾರೈಸುತ್ತ ಅನಂತರ ಹುಟ್ಟುವ ಮಗು ಹೆಣ್ಣೋ ಗಂಡೋ ಎಂಬ ಚರ್ಚೆ ನಡೆದಿರುತ್ತದೆ. ಹೀಗಾಗಿ ತಾಯಿಯಾಗುವ ಹೆಣ್ಣಿಗೆ ದೈಹಿಕ ತೊಂದರೆಗಳ ಜೊತೆಗೆ ಮಾನಸಿಕ ಕಿರುಕುಳ, ಭೀತಿ, ತಳಮಳ ಉಂಟಾಗುತ್ತದೆ. ಅಷ್ಟೇ ಏಕೆ ಋಗ್ವೇದದಲ್ಲಿರುವ ಪ್ರಾರ್ಥನೆ ಬೇಡಿಕೆಗಳೆಲ್ಲವೂ ಗಂಡು ಸಂತಾನಕ್ಕಾಗಿ ಇವೆಯೇ ವಿನಃ ಹೆಣ್ಣು ಮಗುವಿನ ಬಗೆಗಲ್ಲ. ಇಂದಿಗೂ ಹೆಣ್ಣು ಮಗುವನ್ನು ಹಡೆದ ಸ್ತ್ರೀಯನ್ನು ಜರೆಯುವುದು, ಮಗುವನ್ನು ನೋಡದಿರುವುದು, ಗಂಡನಿಗೆ ಮತ್ತೊಂದು ವಿವಾಹ ಮಾಡುವ ಬೆದರಿಕೆ ಒಡ್ಡುವುದು, ತವರಿಗೆ ಕಳಿಸುವುದು ಮುಂತಾದ ಪ್ರವೃತ್ತಿಗಳು ವರದಿಯಾಗುತ್ತಿವೆ. ಬೇಡದ ಹೆಣ್ಣು ಶಿಶು ಹುಟ್ಟುವುದಕ್ಕಿಂತ ಭ್ರೂಣಹತ್ಯೆಯೇ ಮೇಲೆಂದು ಬಾವಿಸುವಂಥ ಕ್ರೂರ ಪರಿಸರ ಉಂಟಾಗಿದೆ. ಇಷ್ಟಾಗ್ಯೂ ಹೆಣ್ಣು ಮಗು ಬದುಕಿ ಹುಟ್ಟಿದರೇ ಅದನ್ನು ತಾರಮ್ಯಕ್ಕೆ ಗುರಿಮಾಡಿ ಕೌಟುಂಬಿಕ ಹಿಂಸೆ ಅಲ್ಲಿಂದಲೇ ಆರಂಭವಾಗುತ್ತದೆ. ಹೆಣ್ಣು ಮಕ್ಕಳು ವಿನಯದಿಂದ, ತಾಳ್ಮೆಯಿಂದ ವರ್ತಿಸಬೇಕು. ಯಾವುದಕ್ಕೂ ಪ್ರಶ್ನಿಸಬಾರದು ತಂದೆ-ತಾಯಿ ಅಣ್ಣ-ತಮ್ಮಂದಿರು ಇವರೆಲ್ಲರ ಬೇಕು ಬೇಡಗಳನ್ನು ಗಮನಿಸಬೇಕು. ತಾನು ಕುಟುಂಬದ ಇತರರಿಗಾಗಿ ತನ್ನೆಲ್ಲ ಆಸೆ, ಆಕಾಂಕ್ಷೆಗಳನ್ನು ಒತ್ತೆಯಿಟ್ಟು ಬಲಿಪಶುಗಳಾಗಬೇಕು. ಆದರೆ ದುಡಿತ ತಪ್ಪಿದ್ದಲ್ಲ. ಇದಕ್ಕಾಗಿಯೇ ಸ್ತ್ರೀವಾದಿ ಚಿಂತಕರು ಕುಟುಂಬವನ್ನು ಸ್ತ್ರೀ ಶೋಷಣೆಯ ಮೂಲ ಎಂದು ಹೇಳುತ್ತಾರೆ. ಆಧುನಿಕ ಶಿಕ್ಷಣ, ಉದ್ಯೋಗಾವಕಾಶ, ಒಂಟಿ ಸ್ತ್ರೀಯರಿಗಾಗಿ ಇರುವ

ವಸತಿ ಸೌಲಭ್ಯ ಇವೆಲ್ಲವನ್ನೂ ಬಳಸಿಕೊಂಡು ಮಹಿಳೆ ದಿಟ್ಟ ನಿಲುವುತಳೆದು ಬದುಕಬೇಕು ಹಾಗೂ ನಿರ್ಬಂಧಿತ ಕುಟುಂಬದಿಂದ ಹೊರಬಂದು, ಹೊಸಬಾಳುಕಟ್ಟಿಕೊಳ್ಳಬೇಕು. ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾರೆ. ಇದರಿಂದ ಅವರ ವಿಮೋಚನೆ ಸಾಧ್ಯ. ಇಂತಹ ಮಹಿಳೆಯರು ಹೆಚ್ಚಾಗುತ್ತಿದ್ದಾರಾದರೂ ಕುಟುಂಬದ ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳು ಸಾವಿರಾರು ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಈಗಲೂ ಸಾಮಾಜಿಕರಣದ ಸೂತ್ರವನ್ನು ಬದಲಿಸಲು ಮತ್ತು ಹೆಣ್ಣು ಕೀಳು, ಗಂಡು ಮೇಲು ಎಂಬ ಹಳೆಯ ಮೌಲ್ಯವನ್ನು ಒಪ್ಪಿಕೊಳ್ಳುವಂತೆ, ಅದೇರೀತಿಯ ಶಿಕ್ಷವನ್ನು ಕೊಡುವುದುಂಟು. ಇದರ ವಿರುದ್ಧ ವ್ಯಾಪಕ ಟೀಕೆ ನಡೆಯುತ್ತಿದ್ದರೂ ಇದು ಅವ್ಯಾಹತವಾಗಿ ನಡೆದುಕೊಂಡು ಸಾಗುತ್ತಲಿರುವುದು ಒಂದು ವಿಪರ್ಯಾಸವೇ ಸರಿ.

೨.೧.೪. ಸ್ಥಿರ ಮಾದರಿ/ಸಿದ್ಧಮಾದರಿ ಪಾತ್ರಗಳು (Steriotypes):

ಸ್ತ್ರೀ ಮತ್ತು ಪುರುಷರ ಸಾಮರ್ಥ್ಯವನ್ನು ಇಂತಿಷ್ಟೆ ಎಂಬುದಾಗಿ ಲೆಕ್ಕಾಚಾರಮಾಡಿ ನಿರೂಪಿಸಲಾಗಿದೆ. ಯಾವುದೇ ನಾಗರಿಕತೆಯ ಪರಮೊನ್ನತ ಹಾಗೂ ಅತಿಹೀನ ಸ್ಥಿತಿಗಳು ಆಯಾಕಾಲದಲ್ಲಿ ಮಹಿಳೆಯರಿಗೆ ಇರುವ ಸ್ಥಾನ-ಮಾನವನ್ನು ಅವಲಂಬಿಸಿರುತ್ತದೆ. ಸಾಮಾಜಿಕೃತವಾದ ಕೌಟುಂಬಿಕ ವ್ಯವಸ್ಥೆಯಲ್ಲಂತೂ ಮಹಿಳೆಗೆ ತ್ಯಾಗಮಯಿಯ ಸಿದ್ಧಮಾದರಿಯ ಪಾತ್ರವನ್ನೆ ಪ್ರಧಾನವನ್ನಾಗಿಸಿದೆ. ಅಷ್ಟೆ ಅಲ್ಲ ಈ ಮೂಲಕ ವ್ಯಕ್ತಿಯಾಗಿ ತನ್ನ ಸಹಜ ಆಕಾಂಕ್ಷೆ, ಅವಶ್ಯಕತೆಗಳನ್ನು ಕೂಡ ಪೂರೈಸಿಕೊಳ್ಳಲಾರದಂಥ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ. ಗಂಡ ಹಾಗೂ ಗಂಡುಮಕ್ಕಳಿಗೆ ಪೌಷ್ಠಿಕ ಆಹಾರ ಅಥವಾ ಇದ್ದುದನ್ನು ಕೊಟ್ಟು ಹೆಂಡತಿ ಹಾಗೂ ಹೆಣ್ಣು ಮಕ್ಕಳು ಉಳಿದ ಹಾಗೂ ತಂಗಳು ಆಹಾರವನ್ನು ತಿನ್ನಬೇಕಾಗಿದ್ದು, ಇಂಥ ಮೂಲ ಅವಶ್ಯಕತೆಯಲ್ಲೇ ತಾರತಮ್ಯವಿರುವುದನ್ನು ಕಾಣಬಹುದು. ಹೀಗಾಗಿ ಇನ್ನಿತರ ಅಂಶಗಳಾದ ಬಟ್ಟೆ, ಶಿಕ್ಷಣ, ಉದ್ಯೋಗ ಹಾಗೂ ಸ್ವತ್ತುಗಳಿರಲಿ ಚಲನೆಯ ಬಗ್ಗೆ ಇರುವ ತಾರತಮ್ಯವನ್ನು ಊಹಿಸಿಕೊಳ್ಳಬಹುದು.

ಸಾಮಾನ್ಯವಾಗಿ ಕೌಟುಂಬಿಕ ಸಂಸ್ಥೆಯಲ್ಲಿ ವಿಧೇಯತೆಯನ್ನು ಪ್ರಧಾನಮೌಲ್ಯವನ್ನಾಗಿ ಅಳವಡಿಸಿಕೊಳ್ಳಲಾಗಿದೆ. ಏಕೆಂದರೇ ಸ್ತ್ರೀ-ಪುರುಷರ ಸಿದ್ಧಮಾದರಿಗಳನ್ನು ನಿರ್ಧಿಷ್ಟ ಪಾತ್ರ ನಿರ್ವಹಣೆಯಿಂದಲೇ ತೋರಿಸಿಕೊಡಬೇಕು, ಹೀಗಾಗಿ ಕೌಟುಂಬಿಕ ನೆಲೆಯಲ್ಲಿ ಗಂಡನಿಗೆ ಹೆಂಡತಿ, ತಂದೆಗೆ ತಾಯಿ, ಅಣ್ಣನಿಗೆ ತಮ್ಮಂದಿರು, ಅತ್ತೆಗೆ ಸೊಸೆ ಹೀಗೆ ವಿಧೇಯರಾಗಿರಬೇಕಾಗುತ್ತದೆ. ದೇವರಿಗೆ, ರಾಜನಿಗೆ ಪ್ರಜೆ, ಮಾಲಿಕನಿಗೆ ಸೇವಕ ವಿಧೇಯರಾಗಿರುತ್ತಾರೆ. ಈ ಮೌಲ್ಯ ಹೆಣ್ಣಿನ ಗಂಡಿಗೆ ಅಧೀನತೆಯನ್ನು ಸ್ಥಿರಗೊಳಿಸಿದೆ. ಹೆಂಡತಿಗೆ ಗಂಡ ಕೇವಲ ಪತಿಮಾತ್ರವಾಗಿರದೆ ಅವನೆ ದೇವರು "ಪತಿಯೇ ಪರದೈವ" ಅವನೇ ರಾಜ, ಆಜ್ಞಾಧಾರಕ ಹಾಗೂ ಮಾಲಿಕ. ನಂಬಿಕೆ ವಿನಮ್ರತೆಯನ್ನು ತೋರಿಸಬೇಕು. ಕುಟುಂಬದಲ್ಲಿ ಹೆಣ್ಣು ಮಗುವಿಗೆ ಬಾಲ್ಯದಿಂದಲೇ ವಿಧೇಯ ಪತ್ನಿಯ ಪಾತ್ರ ಮಾದರಿಯನ್ನು ತಿಳಿಸಿ, ಅದನ್ನು ಅವಳಲ್ಲಿ ಬೆಳೆಸಲಾಗುತ್ತದೆ. ಗಂಡನು ಕಿರುಕುಳ ಕೊಟ್ಟು ದೌರ್ಜನ್ಯ ತೋರಲಿ, ಲಂಪಟನಾಗಿ ಕುಡಕನಾಗಿ ಎಷ್ಟೆ ದುರ್ಮಾರ್ಗಿಯಾದರೂ ಆತ ಪತಿಯಾಗಿ ದೈವವಾಗಿ ಪತ್ನಿಗೆ ಪೂಜ್ಯನೀಯನಾದ್ದರಿಂದ ಪತ್ನಿ ಅವನಿಗೆ ಎಂಥದೇ ಸಂದರ್ಭದಲ್ಲೂ ವಿಧೇಯಳಾಗಿರಬೇಕೆಂದು ನಿಯಮವಿದೆ. ಕನ್ಯತ್ವದ ರಕ್ಷಣೆಗೆ ಹೆಣ್ಣಿನ ನಿಷ್ಠೆಯನ್ನು ವಿಧಿಸಿದಂತೆ ತನ್ನ ಅಧೀನದಲ್ಲಿರುವ ಹೆಣ್ಣಿಗೆ ಸದಾ ರಕ್ಷಣೆ ನೀಡಿ ಅವಳ ಪ್ರಾಣ, ಮಾನ ರಕ್ಷಣೆ

ಮಾಡುವ ಜವಾಬ್ದಾರಿ ಪುರುಷನಿಗಿದೆ. ಅದೇ ರೀತಿ ರಾಷ್ಟ್ರವನ್ನು ತಾಯಿ, ದೇವಿಯೆಂದು ಭಾವಿಸಿ ಹೆಣ್ತನವನ್ನು ಕಲ್ಪಿಸಿ ಅದರ ಸ್ವಾತಂತ್ರ್ಯ ರಕ್ಷಣೆ ಮಾಡುವ ಮತ್ತು ಅದಕ್ಕಾಗಿ ಹೋರಾಡುವ ಜವಾಬ್ದಾರಿಯನ್ನು ಪುರುಷನಿಗೆ ವಹಿಸಲಾಗಿದೆ. ಹೀಗೆ ಇಂಥ ಪಾತ್ರ ಮಾದರಿಗಳು ನಮ್ಮ ಪೌರಾಣಿಕ ಕಾವ್ಯಗಳಲ್ಲಿ ಇತಿಹಾಸ ದಾಖಲೆಗಳ ಉದ್ದಕ್ಕೂ ಹಾಸು ಹೊಕ್ಕಾಗಿ ಹೋಗಿವೆ.

ಸಾಮಾಜಿಕ ವ್ಯವಸ್ಥೆ ಕಾಲಕಾಲಕ್ಕೆ ಬದಲಾದಂತೆಲ್ಲಾ ಸ್ತ್ರೀ ಪುರುಷ ಮಾದರಿಗಳು ಹಾಗೂ ಅದರ ನಿರೀಕ್ಷೆಗಳೂ ಕೂಡ ಬದಲಾಗುತ್ತವೆ. ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಷಾಹಿ ಪದ್ಧತಿಗೆ ಒಗ್ಗಿಕೊಂಡ ಸಾಮಾಜಿಕ ವ್ಯವಸ್ಥೆಯು ಮಹಿಳೆಯರಿಗೆ ಶಿಕ್ಷಣ, ಉದ್ಯೋಗಗಳ ಅವಕಾಶವನ್ನು ಕಲ್ಪಿಸಿತು. ಆದ್ದರಿಂದ ನಾಲ್ಕು ಗೋಡೆಗಳ ಮಧ್ಯೆ ಬಂಧನದಲ್ಲಿರುವ ಮಹಿಳೆಗೆ ಹೊಸ್ತಿಲ ಹೊರಗೆ ಇರುವ ಜನಜೀವನವನ್ನು ತಿಳಿಯುವ ಚಲನ ಶೀಲತೆಯನ್ನು ಪಡೆಯಲು ಸಾಧ್ಯವಾಯಿತು. ಮುಂದುವರೆದಂತೆ ಸಮೂಹ ಮಾಧ್ಯಮಗಳು, ಕಲೆಗಳ ಅಭಿವ್ಯಕ್ತಿ ಮಾಧ್ಯಮಗಳು ಸುಶಿಕ್ಷಿತ ಹಾಗೂ ಉದ್ಯೋಗಿ ಮಹಿಳೆಯರಲ್ಲಿ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಿದವು. ಆದರೂ ಪುರುಷಪ್ರಧಾನ ವ್ಯವಸ್ಥೆಯ ಕೈವಾಡ ಇಲ್ಲಿ ಇನ್ನೂ ಕ್ರೂರವಾಗಿ ಪ್ರಕಟವಾಗತೊಡಗಿತು. ಪುರುಷರಲ್ಲಿ ಅಸೂಯೆ, ಸ್ವಾರ್ಥ, ಕೀಳರಿಮೆ ಉಂಟಾಗಿ ಹೆಣ್ಣಿನ ದೈಹಿಕ ಮಾನಸಿಕ ಒತ್ತಡದ ಜೊತೆಗೆ ಶಿಕ್ಷೆ ನೀಡಿ ಇನ್ನಷ್ಟು ಘಾಸಿಗೊಳಿಸಲಾಗುತ್ತಿದೆ.

ವ್ಯಕ್ತಿಯು ಕ್ರೀಯಾಶೀಲ ಸ್ವತಂತ್ರ ಮನೋಭಾವವನ್ನು ಹೊಂದಿದ್ದರೆ ಲಿಂಗಪಾತ್ರವನ್ನು ಮೀರಲು ಸಾಧ್ಯವಾಗಬಹುದು. ಇಂಥ ವ್ಯಕ್ತಿಗಳಿಗೆ ತಲೆತಲಾಂತರಗಳಿಂದ ಬುದ್ಧಿ ಹೃದಯಗಳಲ್ಲಿ ಆಳವಾಗಿ ಬೇರೂರಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರಶ್ನಿಸುವ ತ್ಯಜಿಸುವ ಸಾಹಸ ಸವಾಲಾಗುತ್ತದೆ. ಇಂಥ ಸವಾಲುಗಳಿಗೆ ತಕ್ಕಂಥ ಪಾತ್ರದ ಮಾದರಿಗಳನ್ನು ಹೊಸದಾಗಿ ಮಹಿಳೆ ರೂಪಿಸಬೇಕಾಗಿದೆ. ಕುಟುಂಬ, ಶಾಲೆ, ಉದ್ಯೋಗ, ಮಾಧ್ಯಮಗಳು ಇವೆಲ್ಲದರ ಬಗ್ಗೆ ಆಧುನಿಕ ಪಾತ್ರಮಾದರಿಗಳು ಸಿದ್ಧವಾಗಬೇಕು. ಅಥವಾ ಈಗಿರುವಂಥವುಗಳಲ್ಲಿ ಬದಲಾವಣೆಗಳಾಗಬೇಕು. ತಾಯಿ ಪಾತ್ರವಂತೂ ಮಹಿಳೆಗೆ ಪುರುಷ ಪ್ರಧಾನ ವ್ಯವಸ್ಥೆ ನೀಡಿರುವ ಅತ್ಯಂತ ಗೌರವದ ಸ್ಥಾನವಾಗಿದೆ. ಪತ್ನಿ ಪಾತ್ರಕ್ಕಿಂತಲೂ ತಾಯಿಯ ಸ್ಥಾನ ಅತೀ ಮಹತ್ವದ್ದಾಗಿದೆ. ಪಾಲನೆ, ಪೋಷಣೆ ಮೂಲಕ ಸಂತಾನದ ರಕ್ಷಣೆ, ಸಮಾಜದಲ್ಲಿ ಸ್ಥಾನ ನೀಡಲು ಸಿದ್ಧಗೊಳಿಸುವ ಗುರುತರ ಹೊಣೆ ಮಹಿಳೆಯದು. ಹೀಗಾಗಿ ಚಿಕ್ಕಮಕ್ಕಳಾಗಿರುವಾಗಲೇ ಹೆಣ್ಣು ಮಕ್ಕಳಿಗೆ ಗೊಂಬೆಯಾಟದ ತಾಯ್ತನದ ಸಿದ್ಧ ಪಾತ್ರದ ಕಲ್ಪನೆ ಮೂಲಕ ಸಾಮಾಜಿಕರಣ ನಡೆಯುತ್ತದೆ. ಮುಂದೆ ಮಕ್ಕಳನ್ನು ಹೆರದಿದ್ದರೆ ಬಂಜೆತನ ಶಾಪವೆಂದು ಆಕೆಯನ್ನು ಅವಹೇಳನ ಮಾಡಲಾಗುತ್ತದೆ. ಆದರೆ ಈಗ ಆಧುನಿಕ ಕಾಲದ ಹಾಗೂ ವಿಚಾರವಂತ ಮಹಿಳೆಯರು ವಿವಾಹವಾಗದೇ ಬಸಿರು, ಹೆರಿಗೆ ಇಲ್ಲದೆಯೇ ಮಕ್ಕಳನ್ನು ದತ್ತು ಪಡೆದು ತಾಯಿಯರಾಗುತ್ತಿದ್ದಾರೆ. ಇನ್ನು ಮುಂದುವರೆದು ಜೈವಿಕ ವಿಶೇಷವಾಗಿ ಒಂಟಿ ಸ್ತ್ರೀಯರೂ ಕೂಡ ಬಾಡಿಗೆ ತಾಯಂದಿರಾಗುವ ವೈದ್ಯಕೀಯ ಆಧರಿತ ತಾಯ್ತನವೂ ಲಭ್ಯವಿದೆ. ತಮ್ಮ ಕರ್ತವ್ಯದಿಂದ ಮಕ್ಕಳನ್ನು ಮನೆಯಲ್ಲಿ, ಶಿಶುಪಾಲನಾ ಕೇಂದ್ರದಲ್ಲಿ ಇನ್ನೊಬ್ಬರ ಸುಪರ್ದಿನಲ್ಲಿ ಬಿಟ್ಟುಹೋಗಿ ಉದ್ಯೋಗ ಮಾಡುವ ಮಹಿಳೆಯರಿಗೆ ಅಪರಾಧಿ ಪ್ರಜ್ಞೆ ಕಾಡುತ್ತದೆ. ತನ್ನ ಕರ್ತವ್ಯಪಾಲನೆ ಯುಕ್ತವಾಗಿಲ್ಲವೆಂದು ದುಃಖವಾಗುತ್ತದೆ.

ಜೊತೆಗೆ ಗಂಡನಿಗಿಂತ ಅವಳೇ ಹೆಚ್ಚು ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇತರರ ದೋಷಣೆ, ಅವಹೇಳನೆ, ಚಾಡಿಮಾತುಗಳಿಂದ ಆಕೆಗೆ ಇನ್ನಷ್ಟು ಪಾಪ ಪ್ರಜ್ಞೆಯ ಹೊರೆಹೆಚ್ಚಾಗಬಹುದು. ಲಿಂಗ ವ್ಯವಸ್ಥೆಯ ಪಾತ್ರಕ್ಕೆ ತಕ್ಕಂತೆ ತಾಯ್ತನದ ಪಾತ್ರಕ್ಕೆ ಸಿದ್ಧವಾಗುವುದು ಅನಿವಾರ್ಯವಾಗುತ್ತದೆ. ವಿವಿಧ ಪಾತ್ರಗಳನ್ನು ಆಕೆ ನಿರ್ವಹಿಸುವುದು ಆಕೆಯ ಹೊಣೆಗಾರಿಕೆಯಾಗಿದೆ ಮತ್ತು ಭಾರತೀಯ ಮಹಿಳೆಯ ಸಂಪ್ರದಾಯಿಕ ಮೌಲ್ಯವೂ ಆಗಿದೆ.

ಕೌಟುಂಬಿಕ ರಚನೆಯಲ್ಲಿರುವ ಅವಕಾಶಗಳನ್ನು ಕುರಿತ ಲಿಂಗವ್ಯವಸ್ಥೆಯ ತಾರತಮ್ಯ ಲಿಂಗವ್ಯವಸ್ಥೆಯನ್ನು ಜೈವಿಕ ಲಿಂಗತ್ವಕ್ಕಿಂತ ಭಿನ್ನವಾದುದೆಂದು ವಿವರಿಸಲಾಗಿದೆ. ಜೈವಿಕ ಲಿಂಗತ್ವ ಸ್ತ್ರೀ ಪುರುಷರ ದೈಹಿಕ ಅಸ್ತಿತ್ವವನ್ನು ಮಾತ್ರವೆ ಸೂಚಿಸುತ್ತದೆ. ಲೈಂಗಿಕತೆಯು ವ್ಯಕ್ತಿಯ ಲಿಂಗಾಸಕ್ತಿ, ಪ್ರಾಶಸ್ತ್ಯ ಹಾಗೂ ವರ್ತನೆಗಳೆಲ್ಲವನ್ನು ಒಳಗೊಂಡಿರುತ್ತದೆ ಎನ್ನಲಾಗಿದೆ. ಸಮಾಜ ವ್ಯವಸ್ಥೆಯಲ್ಲಿ ಆಕಸ್ಮಿಕವಾಗಿ ಆಗುವ ಸ್ವರೂಪವನ್ನು (ಎಂದರೇ ಸ್ತ್ರೀ ಪುರುಷನಾಗಿ ಹುಟ್ಟುವುದು.) ಲೆಕ್ಕಕ್ಕೆ ತಾರದೆ ಲೈಂಗಿಕತೆಗೆ (ಪುರುಷಾಧಿಕಾರ, ಗಂಡಸುತನ) ಸಿದ್ಧ ಲಿಂಗ ಗುಣಗಳ ಮಾದರಿಯನ್ನು ಕೃತಕವಾಗಿ ಸೃಷ್ಟಿಸಲಾಗಿದೆ. ಆದ್ದರಿಂದ ಕೌಟುಂಬಿಕ ಸಂಸ್ಥೆಯಲ್ಲಿ ಹೆಣ್ಣು ಗಂಡುಗಳಿಗೆ ಭಿನ್ನವಾದ ಕಾರ್ಯಗಳನ್ನು ನಿಯೋಜಿಸಿದೆ. ಲಿಂಗ ಪ್ರತ್ಯೇಕತೆ ಕುಟುಂಬದಲ್ಲಿ ಅತ್ಯಂತ ಎದ್ದು ಕಾಣುವಂತದ್ದು, ಮನೆಗೆ ಅತಿಥಿಗಳು ಬಂದಾಗ ಅವರಿಗೆ ಆಹಾರ ಉಟೋಪಚಾರದಿಂದ ಹಿಡಿದು ಸಕಲ ಕಾರ್ಯಗಳನ್ನು ಅಚ್ಚುಕಟ್ಟಾಗಿ ಒದಗಿಸುವವಳು ಹೆಂಡತಿ. ಆದರೆ ಗಂಡ ಕೇವಲ ಸಂಪಾದನೆಯ ನಿರ್ದಿಷ್ಟಭಾಗವನ್ನು ಆಕೆಯ ಕೈಲಿಟ್ಟು ತಾನು ಕೇವಲ ಯಜಮಾನನಾಗುತ್ತಾನೆ. ಮಕ್ಕಳು ವಿಶೇಷವಾಗಿ ಗಂಡು ಮಕ್ಕಳಪಾಲನೆ, ಮನೆಗೆಲಸ ಮುಂತಾದವುಗಳ ಮೂಲಕ ವೇತನವಿಲ್ಲದೆ ದಿನವಿಡೀ ದುಡಿಯುವ ಪತ್ನಿಯ ಸಿದ್ಧ ಪಾತ್ರದ ಕರ್ತವ್ಯಗಳು ಪುರುಷನಿಗೆ ಎಂದೂ ಇರುವುದಿಲ್ಲ.

ಸ್ತ್ರೀ ಅಬಲೆ ದೈಹಿಕ ಶಕ್ತಿ, ಮಾನಸಿಕ ಶಕ್ತಿ ವಿವೇಚನಾಚಾತುರ್ಯ ಇಲ್ಲದ ಅಜ್ಞಾನಿ, ಮುರ್ಖಳು, ಚಂಚಲೆ ಅಸೂಯಾಪರೆ, ಕೋಮಲೆ ಮುಂತಾದ ಗುಣ ಸ್ವಭಾವಗಳನ್ನು ಆರೋಪಿಸಿದ ಪುರುಷ ಪ್ರಧಾನ ಸಮಾಜ ಆಕೆಯನ್ನು ಹೀಗಳೆಯುತ್ತದೆ. ಆದರೆ ಇಂಥ ಗುಣಸ್ವಭಾವವನ್ನು ಹುಟ್ಟುಹಾಕುವಷ್ಟು ನೀರೆರೆಯುವ ನಂತರ ನಿಂದಿಸಿ ಅವಹೇಳನವನ್ನೂ ಸಹ ಚಾಚೂತಪ್ಪದೆ ಮಾಡುತ್ತಲೇ ಬಂದಿದೆ. ಪುರುಷನನ್ನು ಶ್ರೇಷ್ಠನೆಂದು ಸಾರುತ್ತ ಸ್ತ್ರೀಯನ್ನು ಕನಿಷ್ಠಗೊಳಿಸಿ ಅಥವಾ ಎರಡನೆ ದರ್ಜೆಗಿಳಿಸಿರುವುದೂ ಕೂಡ ಪುರುಷ ನಿರ್ಮಿತ ನಿಯಮಗಳಿಂದಲೇ ಮಾನವ ಜನಾಂಗಕ್ಕೆ ಪಕೃತಿಯ ಸ್ವಭಾವ ಗುಣಾವಗುಣ, ದೌರ್ಬಲ್ಯ, ಸಾಮರ್ಥ್ಯ ಎಲ್ಲವನ್ನು ಸ್ತ್ರೀ-ಪುರುಷ ಬೇಧವಿಲ್ಲದೇ ನೀಡಿದೆ. ವೈವಿಧ್ಯಗಳು ಆಯಾ ವ್ಯಕ್ತಿಗತವಾಗಿ ಉಂಟಾಗುತ್ತದೆಯಲ್ಲದೆ ಲಿಂಗವ್ಯತ್ಯಾಸದಿಂದಲ್ಲ. ಆದರೆ ಪುರುಷ ತಾನೇ ಸ್ವಾರ್ಥಿಯಾಗಿ ತನ್ನ ಸಂಗಾತಿಯ ಅಸ್ತಿತ್ವನ್ನೆ ಶಿಥಿಲಗೊಳಿಸುತ್ತ ಬಂದಿರುವುದನ್ನು ಮಾನವ ಇತಿಹಾಸದ ಅಧ್ಯಯನದಿಂದ ತಿಳಿಯಬಹುದು. ಹೆಣ್ಣಿನ ಬದುಕಿನ ಪರಿಸರವನ್ನೆ ಪ್ರತಿಕೂಲಕರವಾಗಿ ಮಾಡಿ ಅವಳ ಸಾಮರ್ಥ್ಯ ಆತ್ಮವಿಶ್ವಾಸವನ್ನು ಕುಗ್ಗಿಸಲಾಗಿದೆ. ಅವಳ ದೌರ್ಬಲ್ಯವನ್ನು ಗೇಲಿಮಾಡಿ ವಂಚನೆಯ ಮೂಲಕ ಅವಳೇ ತನ್ನನ್ನು ತಾನೇ ಅಸಾಹಯಕಳೆಂದು ಒಪ್ಪಿಕೊಳ್ಳುವಂತ ಷಡ್ಯಂತ್ರ ರಚಿಸಲಾಗಿದೆ ಇದಕ್ಕೆ ಪೂರಕವಾಗಿ ಅವಳು ಹೀಗೆ ಇರಬೇಕು, ಹಾಗೆಯೇ ಮಾಡಬೇಕು ಎಂದು ನಿಯಮ ವಿಧಿಸಿ ಅವಳು ಅಂಥದ್ದನ್ನು ಎಂದೂ ಮೀರದಂತೆ ನಿಯಂತ್ರಿಸಲಾಗಿದೆ.

ಧರ್ಮವೂ ಕೂಡ ಇದಕ್ಕೆ ಹೊರತಾಗಿಲ್ಲ. ತನ್ನೆಲ್ಲಾ ನೀತಿ-ನಿಯಮಗಳನ್ನು ಹೆಣ್ಣಿಗೆ ಎಂದು ನಿರ್ಧರಿಸಿಬಿಟ್ಟಂತ ಧರ್ಮ, ಅದಕ್ಕೆ ಪೂರಕವಾದಂಥ ಕಥೆಗಳನ್ನು ಹೆಣೆದಿದೆ. ಸತಿ-ಸಾವಿತ್ರಿ, ನಳ-ದಮಯಂತಿ, ರಾಮ-ಸೀತೆಯರನ್ನು

ಉದಾಹರಣೆಯಾಗಿ ಕಾಣಬಹುದು. ಗಂಡ ಎಷ್ಟೆ ಕೆಟ್ಟವನಾಗಿದ್ದರೂ, ಅವನು ತನ್ನನ್ನು ಹೇಗೆ ಕಂಡಿದ್ದಾನೆ ಎಂಬುದನ್ನು ಗಮನಿಸದೆ ಅವನಿಗೋಸ್ಕರ ತಮ್ಮ ಜೀವನವನ್ನೆ ತೇಯ್ದಂಥ, ಬಲಿಪಶುಗಳಾದಂತಹ ಮಹಾಪತಿವ್ರತಾ ಶಿರೋಮಣಿಗಳಿವರು, ಇವರ ಪಾತ್ರಗಳ ಮೂಲಕ ಹೆಣ್ಣಿಗೆ ಆದರ್ಶನಾರಿಯ ಗುಣಗಳನ್ನು ಬೆಳೆಸಿಕೊಳ್ಳುವಂತೆ ಪ್ರೇರೆಪಿಸುತ್ತದೆ. ಉಪವಾಸ ವ್ರತಾಚರಣೆಗಳನ್ನು ಹೆಣ್ಣು ಮಾಡುವುದರಿಂದ ಕುಟುಂಬದ ಶ್ರೇಯೋಭಿವೃದ್ಧಿ, ಸಾಧ್ಯವಾಗಬಹುದೆಂಬಂತೆ ಹೇಳಿ ಎಲ್ಲ ಉಪವಾಸಗಳನ್ನು ಅವಳಿಂದ ಮಾಡಿಸುತ್ತದೆ. ಅಲ್ಲದೇ ಹೆಣ್ಣು, ಹೊನ್ನು, ಮಣ್ಣುಗಳೆಲ್ಲ ಮಾಯೆ ಅವಳನ್ನು ನಂಬಬಾರದು ಎಂಬೆಲ್ಲಾ ಮಿಥ್‌ಗಳನ್ನು ಸೃಷ್ಟಿಸಿ ತನ್ನ ಕಾರ್ಯವನ್ನು ಸಾಧಿಸಿಕೊಂಡಿದೆ. ನೀತಿನಿಯಮಗಳೆಲ್ಲವೂ ಹೆಣ್ಣಿಗೆ, ಗಂಡು ಇವನ್ನು ಪಾಲಿಸದಿದ್ದರೆ 'ಅವನು ಗಂಡಸು ಏನಾದರೂ ಮಾಡಬಹುದು' ಎಂಬ ವಾತಾವರಣದ ಸೃಷ್ಟಿಗೆ ಪ್ರೇರಣೆ ನೀಡಿದೆ. ಈ ಮೂಲಕ ಅವಳ ಮಾದರಿಯನ್ನು ಸ್ಥಿರಗೊಳಿಸಿಬಿಟ್ಟಿದೆ. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಅವಳನ್ನು ಶಿಕ್ಷೆಗೆ ಗುರಿಪಡಿಸುತ್ತದೆ. ಈ ಶಿಕ್ಷೆ ಕೇವಲ ದೈಹಿಕವಾಗಿರದೆ, ಮಾನಸಿಕವಾಗಿಯೂ ನಾಟುವಂತೆ ಕುತಂತ್ರವನ್ನು ಹೂಡುವ ಮೂಲಕವಾಗಿ ಅವಳನ್ನು ನಿಯಂತ್ರಿಸುತ್ತದೆ ಎನ್ನಬಹುದು.

೨.೧.೫. ಗೃಹಿಣಿತ್ವ

ಗೃಹಿಣಿತ್ವ ಎಂದು ಇದು ವಿವಾಹಾ ನಂತರ ಬರುವ ಭೌತಿಕ ಪಲ್ಲಟ ಎಂದು ಹೆಳುಬಹುದಾಗಿದೆ. ಕುಟುಂಬ ಅವಳ ಮುಖ್ಯ ಕಕ್ಷೆ. ಗೃಹಿಣಿಯಾದವಳು ಹೇಗಿರಬೇಕು. ಇದನ್ನು ನಮ್ಮ ಸಾಮಾಜಿಕರಣ ತಿಳಿಸಿಕೊಡುತ್ತದೆ. ಅಲ್ಲದೇ ಅದನ್ನು ಹೆಣ್ಣು ಬೆಳೆಸಿಕೊಳ್ಳಬೇಕು, ಮೈಗೂಡಿಸಿಕೊಳ್ಳುವಂತೆ ಮಾಡಲಾಗುತ್ತದೆ. ಇಲ್ಲಿ ಹೆಂಡತಿಯ ಪಾತ್ರವು ಗಂಡನ ಪಾತ್ರಕ್ಕೆ ಪೂರಕವಾಗಿ ಅವನನ್ನು ಆಶ್ರಯಿಸುವಂತೆ, ಹೊಗಳುವಂತೆ, ಅವನಿಗೆ ಅಧೀನಳಾಗಿ ಅಸಾಹಾಯಕಳಾಗಿ ವರ್ತಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಭೌತಿಕವಾಗಿ ಮನೆಯ ಅಥವಾ ಕುಟುಂಬದ ಸದಸ್ಯರ ಕೆಲಸಕಾರ್ಯ, ಯೋಗಕ್ಷೇಮ ಅವಳ ಬಾಧ್ಯತೆಗಳೇ ಆಗಿವೆ. ಭಾವನಾತ್ಮಕವಾಗಿ ಗೃಹಿಣಿಗೆ ಕೆಲವು ಸೃಜನಶೀಲತೆಗಳಿವೆ. ಅತ್ತೆಮಾವಂದಿರ ಯೋಗಕ್ಷೇಮ ನೋಡಿಕೊಳ್ಳುವುದು ಅವರಿಗೆ ಬೇಕಾದಂತಹ ಆಹಾರವನ್ನು ತಯಾರಿಸಿಕೊಡುವುದು ಅವರು ಪ್ರಸನ್ನರಾಗುವಂತೆ ನೋಡಿಕೊಳ್ಳಬೇಕು. ಇನ್ನು ಪತಿರಾಯನಿಗೆ ಎದುರಾಡದೆ ಅವನ ಇಚ್ಛೆಗನುಗುಣವಾಗಿ ಅಲಂಕಾರಮಾಡಿಕೊಳ್ಳುವುದು. ಅವನು ಇಷ್ಟಪಡುವ ಬಟ್ಟೆ ಧರಿಸಿಕೊಂಡು ಅವನು ಬರುವ ವೇಳೆಗೆ ಎಂತಹ ಜ್ವಾಲಾಮುಖಿ ಸಿಡಿಯುತ್ತಿದ್ದರೂ, ಅದನ್ನು ಸಹಿಸಿಕೊಂಡು, ತೋರಗೊಡದೆ ನಗನಗುತ್ತಾ ಅವನನ್ನು ಎದುರುಗೊಳ್ಳಬೇಕು ಅವನನ್ನು ಪ್ರಸನ್ನಚಿತ್ತನನ್ನಾಗಿ ನೋಡಿಕೊಳ್ಳುವ ಹೊಣೆ ಅವಳದು. ಇಲ್ಲದಿದ್ದರೆ ತನ್ನ ಸ್ಥಾನವನ್ನು ಕಳೆದುಕೊಳ್ಳುವಂಥ ಸ್ಥಿತಿ ಬಂದೊದಗಬಹುದು. ಇನ್ನು ಮಕ್ಕಳು ಅವುಗಳನ್ನು ತನ್ನ ಇಚ್ಛೆಯಂತೆ ಬೆಳಸಲಾಗದೆ ಸಾಮಾಜಿಕತೆಗೆ ಅನುಗುಣವಾಗಿ ಸಾಮಾಜಿಕರಣಗೊಳಿಸಬೇಕು ಇಷ್ಟೆಲ್ಲಾ ಹೊಣೆಯನ್ನು ಅವಳು ನಿಭಾಯಿಸಬೇಕಾದಂತಹ ಗುರುತರ ಜವಾಬ್ದಾರಿ ಅವಳ ಹೆಗಲಮೇಲಿದೆ ಇದನ್ನೆಲ್ಲಾ ಮಾಡಲೇಬೇಕಾದಂತಹ ಪರಿಸ್ಥಿತಿ ಪುರುಷರಿಗೆ ಇಲ್ಲ. ಹೀಗಾಗಿ ಪುರುಷರು, ಮಹಿಳೆಯ ಮೇಲೆ ತನ್ನ ಹಕ್ಕನ್ನು ಚಲಾಯಿಸಲು ಸಾಧ್ಯವಾಯಿತು. ಮತ್ತು ಸ್ತ್ರೀಯು ಪುರುಷನ ಅಧೀನವಾಗಿ ಬದುಕುವುದು ಅನಿವಾರ್ಯವಾಯಿತು.

ಲಿಂಗವ್ಯವಸ್ಥೆಯ ತಾರತಮ್ಯ ವೇತನ ಪಡೆಯುವ ಉದ್ಯೋಗಕ್ಷೇತ್ರದಲ್ಲಿ ಬೇರೂರಿದೆ ಎಂದರೆ ತಪ್ಪಾಗಲಾರದು. ಮನೆಯಿಂದ ಹೊರಗೆ ಹೋದರೆ ಕುಟುಂಬದ ಸಮಸ್ತ ಕೆಲಸಗಳನ್ನು ನಿರ್ವಹಿಸುವ ಗೃಹಿಣಿಗೆ ಅದೇ ತನ್ನ ಪಾಲಿನ ಸ್ವರ್ಗ ಎಂದು ಭಾವಿಸುವಳೆಂದು ಕೆಲವು ಸಲ ಹೇಳುವುದುಂಟು. ಆ ಮಾತನ್ನು ಗೌರವ ಸಂಕೋಚದಿಂದ ಹೇಳಬಹುದು. ಆದರೆ ಯಾರೂ ಕೂಡ ದುಡಿಮೆಯನ್ನು ಸ್ವರ್ಗದಲ್ಲಿನ ಶ್ರಮವೆಂದು ತಿಳಿದು ಸಂತೋಷಪಡುವುದು ಅಸಾಧ್ಯವೇ ಸರಿ. ಇದು ಕೇವಲ ಪುರುಷರು ಸ್ತ್ರೀಯರನ್ನು ಕುಟುಂಬದೊಳಗೆ ಮನೆಯಲ್ಲಿ ಕಟ್ಟಿಹಾಕಲು ನೀಡುವ ಹೊಗಳಿಕೆಯ ಹಗ್ಗ ಅಷ್ಟೆ. ಆಕೆ ಆ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಲು ಬಯಸುವುದಿಲ್ಲ ಎಂದು ಹೇಳಲಾಗುತ್ತದೆ. ಹಾಗಿದ್ದರೂ ಒಬ್ಬ ಹೆಣ್ಣು ತಾನು ಬಯಸಿದಂತೆಯೇ ತನ್ನ ಗಂಡನ ಮನೆಯನ್ನು ವಿನ್ಯಾಸಗೊಳಿಸಲು ಸಂಪೂರ್ಣವಾಗಿ ಸಾಧ್ಯವಾಗುವುದಿಲ್ಲ. ಏಕೆಂದರೆ ಸದಾಕಾಲ ಇತರರ ಯೋಗಕ್ಷೇಮ ಸಂತಸಕ್ಕೆ ಸ್ಪಂದಿಸಿ ಜೀವ ತೇಯುವ ಹೆಂಗಸಿಗೆ ತನ್ನ ವ್ಯಕ್ತಿತ್ವ, ಸ್ವಂತ ಅಗತ್ಯತೆಗಳನ್ನು ಕಂಡುಕೊಳ್ಳುವ ತನ್ನ ಪ್ರತಿಭೆಯನ್ನು ಹವ್ಯಾಸವನ್ನು, ಜ್ಞಾನದಾಹವನ್ನು ತೃಪ್ತಿಯಾಗುವಂತೆ ಈಡೇರಿಸಿಕೊಳ್ಳುವತ್ತ ಗಮನವೇ ಇರುವುದಿಲ್ಲ. ಹೀಗಾಗಿ ಮಹಿಳೆಯ ವ್ಯಯಕ್ತಿಕ ಅಗತ್ಯತೆಗಳಿಗೆ ಕುಟುಂಬದಲ್ಲಿ ಲಕ್ಷವನ್ನು ಕೊಡಲಾಗುವುದಿಲ್ಲ ಇದೆ ಮಾತು ಗಂಡನಿಗೆ ಅನ್ವಯಿಸಲು ಸಾಧ್ಯವಿಲ್ಲ. ಆತನ ಆಸೆ, ಆಕಾಂಕ್ಷೆ, ಬೇಕು ಬೇಡಗಳು, ಹವ್ಯಾಸ, ಅಭ್ಯಾಸಗಳು ಆಧ್ಯಾತ್ಮ ವಿಧ್ಯೆ ಎಲ್ಲದರ ಈಡೇರಿಕೆಗೆ ಸಾಮಾಜಿಕ ವ್ಯವಸ್ಥೆ ಸಕಲ ಪ್ರೋತ್ಸಾಹ, ಒತ್ತಾಸೆ ನೀಡಿ ಅವನು ಬಯಸಿದ ಜೀವನ ಮಾರ್ಗವನ್ನು ಆಯ್ದುಕೊಳ್ಳಲು ಅವಕಾಶ ಕಲ್ಪಿಸಿದೆ. ಇನ್ನು ಮಹಿಳೆ ಸಾಕಷ್ಟು ಶಿಕ್ಷಣ ಪಡೆದು ಉದ್ಯೋಗಕ್ಕಾಗಿ ಹೊರಗೆ ಹೋದಾಗ ಆಕೆ ವಹಿಸಬೇಕಾದ ದ್ವಿಮುಖಪಾತ್ರಗಳಿಗೂ ಆಕೆಯನ್ನೆ ಹೊಣೆಮಾಡಲಾಗುತ್ತದೆ.

ಗೃಹಿಣಿಪದಕ್ಕೆ 'ಸಂಬಳ ರಹಿತ' ಮನೆಕೆಲಸದಾರಿಕೆಯೆಂದು ಕರೆಯದಿದ್ದರೂ ಆಕೆ ಉದ್ಯೋಗ ಸ್ಥಳದಲ್ಲಿ ಗಂಡಸಿನಷ್ಟೆ ಕೆಲವೊಮ್ಮೆ ಇನ್ನೂ ಹೆಚ್ಚು ಕೆಲಸ ನಿರ್ವಹಿಸಬೇಕಾಗುತ್ತದೆ. ಮನೆಗೆಲಸ ಕನಿಷ್ಠವೆಂದು ಭಾವಿಸಿ, ಅಡುಗೆಮಾಡು, ಪಾತ್ರೆ ತೊಳೆ, ಬಟ್ಟೆ ಒಗೆ, ಊಟಬಡಿಸು, ಆಧರಿಸು, ಸೇವೆಮಾಡು ಇವೆಲ್ಲವೂ ಪ್ರತಿದಿನವೂ ಹಗಲು ರಾತ್ರಿಮಾಡುವ ಕೆಲಸ ಎಂದರೆ ದೈಹಿಕ ಕೆಲಸವಾದರೂ, ಅದರಿಂದ ಉತ್ಪಾದನೆಯಿರುವದಿಲ್ಲ. ಹಾಗಾಗಿ ಅವಳ ಸುಲಭ ಆಗಿಂದಾಗ್ಗೆ, ವಿಶ್ರಾಂತಿ ದೊರೆಯುತ್ತದೆ ಎಂದು ಹೀಯಾಳಿಸಿ ಅದಕ್ಕೆ ಹೆಣ್ಣನ್ನು ಸೋಮಾರಿ ಎಂದು ಹಣೆಪಟ್ಟಿ ಕಟ್ಟಲಾಗುತ್ತದೆ. ಆಧುನಿಕ ಕಾಲದಲ್ಲಿ ಹಲವಾರು ಗೃಹೋಪಯೋಗಿ ಯಂತ್ರಗಳು, ಪದಾರ್ಥಗಳು ಬಂದಿರುವುದರಿಂದ ಗೃಹಿಣಿಯ ಕಷ್ಟ ಕಡಿಮೆಯಾಗಿದೆಯೆಂದು ಪುರುಷರು ಕುರುಬುವ ಅಥವಾ ಹೀಯಾಳಿಸುವ ಸಂದರ್ಭಗಳಿರುತ್ತವೆ. ಆದರೆ ಯಂತ್ರಗಳ ಮೂಲಕ ಮಾಡುವ ಕೆಲಸಕ್ಕಾಗಿ ಇನ್ನು ಹೆಚ್ಚು ಸಮಯ ಮನೆಗೆಲಸದಲ್ಲಿ ತೊಡಗಬೇಕಾಗುವುದೆಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಈ ಉಪಕರಣಗಳೆಲ್ಲವೂ ''ಮಹಿಳಾ ಶ್ರಮಕ್ಕೆ ನೆರವು'' ಎಂಬ ಹೆಸರಿನಲ್ಲಿ ಇರುವ ಅಧಿಕ ಶ್ರಮಕ್ಕೆ ಅಥವಾ ಒತ್ತಡಕ್ಕೆ ಈಡುಮಾಡುಂತಹ ಸಂದರ್ಭಗಳಿವೆ. ಯಂತ್ರಗಳು ಬೇಗನೇ ಕೆಲಸಮುಗಿಸಿಬಿಡುತ್ತವೆ. ಇವು ಮಹಿಳೆ ಕೆಲಸವಿರದೆ ಇರದ ಹಾಗೆ ಮತ್ತೊಂದು ಕೆಲಸವನ್ನು ನಿರ್ವಹಿಸಲು ಪ್ರೇರೇಪಿಸುತ್ತವೆ. ಈಗಾಗಲೇ ಇರುವ ತ್ರಿಗುಣ (ತಾಯ್ತನ, ಮನೆ ಹೊರಗೆ, ಮನೆ ಒಳಗೆ) ಕೆಲಸದ ಹೊರೆಯನ್ನು ಮತ್ತಷ್ಟು ಹೆಚ್ಚಾಗಿಸುತ್ತಿವೆ ಎಂದೇ ಹೇಳಬಹುದಾಗಿದೆ.

ಮನೆಯಲ್ಲಿದ್ದಾಗ ಹೊರಗಿನ ಅಥವಾ ಉದ್ಯೋಗದ ಚಿಂತೆ ಹಾಗೂ ಉದ್ಯೋಗದ ಸ್ಥಳದಲ್ಲಿ ಮನೆಗೆಲಸದ, ಮನೆಯವರ ಯೋಗಕ್ಷೆಮದ ಬಗೆಗಿನ ಆತಂಕದಿಂದಾಗಿ ಮಹಿಳೆ ಉದ್ಯೋಗಿಯಾಗಿ ಇನ್ನೂ ಹೆಚ್ಚು ಸಮಸ್ಯೆಗಳಿಗೆ ಒತ್ತಡಗಳಿಗೆ ಸಿಲುಕುತ್ತಿದ್ದಾಳೆ. ಹೀಗೆ ಸಮಸ್ಯೆಯನ್ನು ತನ್ನೊಳಗೆ ಬಚ್ಚಿಟ್ಟುಕೊಳ್ಳುವ ಹೆಂಗಸು ಬೇರೆ ಬೇರೆ ಪರ್ಯಾಯಗಳನ್ನು ಕೂಡ ಯೋಚಿಸುತ್ತಾಳೆ. ವೇಷ-ಭೂಷಣ, ಒಡವೆ, ಪಾರ್ಟಿಗಳು, ಅಲಂಕಾರ, ಟೀವಿನೋಡುವುದು ಮುಂತಾದವುಗಳಿಗೆ ಶರಣಾಗುತ್ತಾಳೆ. ಆದರೆ ಅದರಲ್ಲೂ ಕೀಳಿರಿಮೆ ಹಾಗೂ ಮೇಲಿರಿಮೆಯಿಂದಾಗಿ ತತ್ತರಿಸುತ್ತಾಳೆ. ಇಂಥ ಮನೋಸ್ಥಿತಿಯನ್ನು ಮನೋರೋಗತಜ್ಞರೊಬ್ಬರು 'ಗೃಹಿಣಿ ಬಾಧೆ' (HouseWifesyndrome) ಎಂದು ಕರೆದಿದ್ದಾರೆ. ಇದರಿಂದ ಮಹಿಳೆಯರು ಮನೋರೋಗಿಗಳಾಗುವ ಸಂಭವವೂ ಇದೆ. ಕುಟುಂಬದ ಸಂಪನ್ಮೂಲಗಳನ್ನು ಸ್ತ್ರೀ-ಪುರುಷರಿಗೆ ಸಮಾನವಾಗಿ ಹಂಚಿಕೆ ಮಾಡುವುದರೊಂದಿಗೆ ಮಹಿಳೆಯನ್ನು ತನ್ನತಂತೆಯೇ ಎಂದು ಪುರುಷ ಭಾವಿಸುವವರೆಗೆ ಇಂಥ ಮನೋಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಹೇಳಬಹುದು.

''ಗೃಹಿಣಿ ಗೃಹಮುಚ್ಯತೆ''

ಗೃಹಸ್ಥನ ಮನೆಯ ಕರ್ತವ್ಯ, ಜವಾಬ್ದಾರಿಗಳನ್ನು ಗೃಹಿಣಿಯೇ ನೋಡಿಕೊಳ್ಳುವಳು. ಗಂಡ ನಿರ್ವಹಿಸಧೇ ಇರುವ ಕೆಲಸಗಳನ್ನು ಹೆಣ್ಣು ಮಾಡಲೇಬೇಕೆಂದು ಗೃಹಿಣಿಯ ಮೇಲೆ ಅದರ ಭಾರವನ್ನು ಹೇರಲಾಗಿದೆ. ಆದ್ದರಿಂದ ಗೃಹಿಣಿಗೂ ಗೃಹಕ್ಕೂ ವ್ಯತ್ಯಾಸವೇ ಇಲ್ಲ. ಅವಳು ತನ್ನ ಮುತ್ತು ಗಂಡನ ಪಾಲಿನ ಪೂಜೆಯನ್ನು ಮಾಡಬೇಕು. ಮನೆಯಲ್ಲಿ ಶುಚಿತ್ವ ಕಾಪಾಡಿಕೊಳ್ಳಬೇಕು. ಚೆನ್ನಾಗಿ ಆಹಾರ ತಯಾರಿಸಬೇಕು. ಗಂಡನಿಗೆ ಎದುರಾಡಬಾರದು ಹೊಂದಾಣಿಕೆ ಸಹನೆ, ತಾಳ್ಮೆಗಳನ್ನು ಅನಿವಾರ್ಯವಾಗಿಯಾದರೂ ರೂಢಿಸಿಕೊಳ್ಳಬೇಕು. ಇವು ಗೃಹಿಣಿಯ ಕರ್ತವ್ಯಗಳಾಗಿವೆ. ಸಂಪೂರ್ಣವಾಗಿ ಸ್ವಾಧೀನವಾಗಿ ಪತಿಹಿತಕ್ಕೆ ಅನುಸಾರವಾಗಿ ನಡೆಯಬೇಕೆಂದು ಹೇಳಲಾಗಿದೆ.

''ವಾಸಕ್ಕೆ ಮನೆಯಿರಲು

ವೆಚ್ಚಕ್ಕೆ ಹೊನ್ನಿರಲು

ಇಚ್ಛೆಯನರಿತು ನಡೆವ ಸತಿ ಇರಲು

ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ''

ವಸತಿಗಷ್ಟು ಜಾಗ, ಖರ್ಚಿಗೆ ಹಣ ಪತಿಯಾಜ್ಞೆಯಂತೆ, ಅವನಿಗೆ ವಿರೋಧ ಮಾಡದೆ,ಅವನನ್ನರಿತು ನಡೆವ ಸತಿ ಇರಲು ಸ್ವರ್ಗ ಸುಖವನ್ನು ಇಲ್ಲಿಯೇ ಪಡೆಯಬಹುದೆಂಬ ಸರ್ವಜ್ಞನ ವಚನ, ಅವಳ ವರ್ತನೆಯ ಬಗ್ಗೆ, ಗೃಹಿಣಿಯಾದವಳ ಸ್ಥಾನ, ಗಂಡನ ನಿರೀಕ್ಷೆಗಳನ್ನು ಇದು ಎತ್ತಿತೋರಿಸುತ್ತದೆ.ಇಲ್ಲಿ ಅವಳ ಪರವಾದಂತಹ ಒಂದು ಶಬ್ದವೂ ಇಲ್ಲವೆಂಬುದನ್ನು ಕಾಣಬಹುದು.

"ಕಾರ್ಯೇಷುದಾಸಿ, ಕರುಣೇಶು ಮಂತ್ರಿ

ಪೂಜ್ಯೇಷು ಮಾತಾ, ರೂಪೇಶು ಲಕ್ಷ್ಮಿ

ಕ್ಷಮಯಾ ಧರಿತ್ರಿ, ಶನೇಷು ರಂಬಾ"

ಎಂಬ ಷಡ್‌ಗುಣಗಳನ್ನು ಆರೋಪಿಸುವ ಮೂಲಕ, ಅವಳ ನಡತೆ ಯಾವ ಸಂದರ್ಭಕ್ಕೆ, ಯಾವ ರೀತಿಯಲ್ಲಿರಬೇಕು, ಅವಳ ಕಾರ್ಯಕ್ಷೇತ್ರ, ಕುಟುಂಬದಲ್ಲಿ ಅವಳ ಸ್ಥಾನ-ಮಾನ, ಗುಣ ಸ್ವಭಾವಗಳನ್ನು ಹೇರಿರುವುದು ಮೇಲಿನ ವಾಕ್ಯದಿಂದ ಕಂಡುಕೊಳ್ಳಬಹುದು. ಇವು ಗೃಹಿಣಿತ್ವದ ನಿದರ್ಶನಳೇ ಆಗಿವೆ ಎಂದು ಹೇಳಬಹುದು.

ಗೃಹಣಿಯಾಗುವುದರಿಂದ ಎಷ್ಟೊಂದು ಎಂಜಲುಗಳಿಗೆ ಒಳಗಾಗಬೇಕಾಗುತ್ತದೆ. ಇಷ್ಟ ಕಷ್ಟದ ಪ್ರಶ್ನೆಯೇ ಇಲ್ಲಿ ಉದ್ಭವವಾಗುವದಿಲ್ಲ. ಅಲ್ಲದೇ ಪವಿತ್ರ, ಅಪವಿತ್ರ, ಶ್ಲೀಲ, ಅಶ್ಲೀಲದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇದು ಪುರುಷ ಪ್ರಧಾನತೆಯ ರಾಜಕಾರಣವೇ ಆಗಿದೆ. ಆ ರೀತಿ ಅವಳನ್ನು ಭಾವನಾತ್ಮಕವಾಗಿ ಪುರುಷ ಅವಳ ಮೇಲೆ ತನ್ನ ಹಿಡಿತವನ್ನು ಸಾಧಿಸುತ್ತಾನೆ ಎಂದು ಹೇಳಬಹುದು.

೨.೧.೬. ಲಿಂಗ ಅಸಮಾನತೆ

ಲಿಂಗ ಅಸಮಾನತೆಯು ಹುಟ್ಟಿನಿಂದ ಪ್ರಾರಂಭವಾಗುವಂತಹುದು. ಲಿಂಗ ಅಸಮಾನತೆ ಎಂದರೆ ಹೆಣ್ಣು-ಗಂಡು ಎಂದು ಭೇದಭಾವ ತೋರುವುದೆ ಆಗಿದೆ. ಹುಟ್ಟಿನಿಂದಲೇ ಇದರ ಪ್ರಭಾವ ಅನ್ನುವುದಕ್ಕಿಂತ ಗರ್ಭಿಣಿಯಾದ ಮಹಿಳೆಗೆ, ಗಂಡು ಮಗುವಿನ ಜನನಕ್ಕಾಗಿ, ಹರಕೆಹೊರುವುದು ಮತ್ತು ಹಿರಿಯರು ಅದೆ ರೀತಿಯ ಆಶಿರ್ವಾದಮಾಡುವುದನ್ನು ಕಾಣಬಹುದು ನಂತರ ಸ್ಕ್ಯಾನಿಂಗ್ ಮುಂತಾದವುಗಳಿಂದ ಭ್ರೂಣ ಹೆಣ್ಣೋ ಗಂಡೋ ಎಂದು ಕಂಡು ಹಿಡಿದು ಹೆಣ್ಣು ಭ್ರೂಣದ ಹತ್ಯೆಮಾಡುವುದು. ಇದು ಏಕಕಾಲದಲ್ಲಿ ಎರೆಡು ಹೆಣ್ಣುಗಳ ಮೇಲೆ ನಡೆಯುವ ದೌರ್ಜನ್ಯವಾಗಿದೆ ಎಂದು ಹೇಳಬಹುದು. ಇದು ಈಗ ಕಾನೂನು ಬಾಹಿರವಾದ್ದರಿಂದ ಹೆಣ್ಣು ಶಿಶುಹತ್ಯೆ ನಡೆಯುತ್ತಿದೆ. ಇಷ್ಟೇ ಏಕೆ 'ಅಮ್ನಿಯೋ ಸೆಂಟಸಿಸ್' ಮೂಲಕ ಭ್ರೂಣವನ್ನು ಗಂಡಾಗಿಸಲು ಶೂಟ್ ಮಾಡುವ ವಿಧಾನವನ್ನು ಅನುಸರಿಸಲಾಗುತ್ತಿದೆ. ಇದು 'ಪುತ್' ಎಂಬ ನಕರದಿಂದ ಪಾರುಮಾಡಲು ಗಂಡು ಮಗುವಿನ ಜನನವನ್ನು ಪ್ರೋತ್ಸಾಹಿಸುವ ಲಿಂಗ ಅಸಮಾನತೆಯ ಮೊದಲಹಂತವಾಗಿದೆ.

ಎರಡನೇ ಹಂತವೇಂದರೆ ಇಷ್ಟೆಲ್ಲಾ ಪ್ರಯತ್ನ ಪಟ್ಟು ಮಗು ಜನಿಸಿದರೆ ಬಾಣಂತಿತನದ ಆರೈಕೆಯನ್ನು ಸರಿಯಾಗಿ ಮಾಡುವುದಿಲ್ಲ ಎದೆಹಾಲನ್ನು ಕುಡುಸಲು ಬಿಡುವುದಿಲ್ಲವೆಂದು ಹೇಳಬಹುದು. ಮುಂದಿನ ಸಾಮಾಜಿಕರಣದ ಹಂತದಲ್ಲಿ ನಮ್ಮ ಪಿತೃ ಪ್ರಾಧನ ಸಮಾಜ ತನ್ನ ಛಾಪನ್ನು ಒಂದೊಂದಾಗಿ ಒತ್ತುತ್ತಾ ಹೋಗುತ್ತದೆ. ಬೆಳವಣಿಗೆಯ ಹಂತದಲ್ಲೆ ಮಗು ಹೋಗಿ ಹೆಣ್ಣು ಮತ್ತು ಗಂಡು ಮಕ್ಕಳಾಗಿ ಬೆಳೆಯುವುದಕ್ಕೆ ಸಾಮಾಜಿಕರಣ ಪ್ರೇರಣೆ ನೀಡುತ್ತದೆ. ಅಂದರೆ ಅದಕ್ಕೆ ನೀನು ಹೆಣ್ಣು ಇಂಥ ಕೆಲಸಗಳನ್ನು ಮಾಡಬೇಕು. ನೀನು ಗಂಡು ಇಂಥ ಕೆಲಸಗಳನ್ನು ಮಾಡಬಾರದು

ಎಂದು ಹೇಳಿ ಅವರ ಮನಸ್ಸಿನಲ್ಲಿ ಪಿತೃ ಪ್ರಧಾನತೆಯ ಪಡಿಯಚ್ಚುಗಳನ್ನು ರೂಪಿಸುತ್ತಾ ಹೋಗುತ್ತದೆ. ಈ ರೀತಿಯಲ್ಲಿ ಸಾಮಾಜಿಕರಣಕ್ಕೆ ಒಳಗಾದ ಮಕ್ಕಳು ತಾನು ಹೆಣ್ಣು ನಯ, ವಿನಯ, ಸಹನೆ, ತಾಳ್ಮೆ, ಶೀಲ, ಪಾತಿವ್ರತ್ಯದ ಕಲ್ಪನೆಯನ್ನು ಹೊತ್ತು ಸಮಾಜ ನಿರೀಕ್ಷಿಸುವ ಗೌರವದ ಪಾತ್ರಗಳಿಗೆ ಇಷ್ಟಪಟ್ಟು ಅಥವಾ ಕಷ್ಟಪಟ್ಟು, ಜೀವಸೆಲೆಯನ್ನು ತುಂಬುತ್ತಾ ಹೋಗುತ್ತಾಳೆ. ಅದೆ ಗಂಡು ಮಕ್ಕಳು, ಧೈರ್ಯ, ಸಾಹಸಗಳನ್ನು ತನ್ನ ಹಕ್ಕೆಂದು, ಅದು ತನ್ನ ಗುಣಸ್ವಭಾವ ಎಂದು ಹೇಳುವ ಮೂಲಕ ತಾನು ಮಾಡಿದ್ದೇ ಸರಿ, ತನ್ನನ್ನು ಪ್ರಶ್ನಿಸಲಾಗುವುದಿಲ್ಲ, ನಿರ್ಬಂಧಿಸಲಾಗುವುದಿಲ್ಲ, ತಾನು ಸ್ವತಂತ್ರ ವ್ಯಕ್ತಿ ಎಂದು ಮನಬಂದಂತೆ ನಡೆದುಕೊಳ್ಳುತ್ತಾನೆ. ಇದೇ ಹೆಣ್ಣು ಗಂಡುಗಳಲ್ಲಿ ಮೂಲ ಅಸಮಾನತೆಯನ್ನು ಸೃಷ್ಟಿಸಲು ಕಾರಣವಾಗಿದೆ.

ಮುಂದುವರಿದಂತೆ ಹೆಣ್ಣು-ಗಂಡು ಮಕ್ಕಳಲ್ಲಿ ಆಹಾರ ಪದ್ಧತಿಯಲ್ಲೂ ತಾರತಮ್ಯ ಮಾಡುವುದನ್ನು ಕಾಣುತ್ತೇವೆ. ಗಂಡುಮಗು ತಂದೆ ಮಾಡುವ ಕೆಲಸಮಾಡಿ, ಅವನೊಂದಿಗೆ ಬಿಸಿಯಾದ ಆಹಾರವನ್ನು ಮೊದಲಿಗೆ ಸೇವಿಸುತ್ತಾನೆ. ಆದರೆ ಹೆಣ್ಣು ಮಗು ತಾಯಿಗೆ ಸಹಾಯಮಾಡುತ್ತಾ, ತಾಯಿಯೊಂದಿಗೆ ಕೊನೆಗೆ ಉಳಿದ ಅಪೌಷ್ಟಿಕ ಆಹಾರ ಸೇವನೆ ಮಾಡಬೇಕು. ಶಿಕ್ಷಣದ ವಿಷಯದಲ್ಲೂ ಅಷ್ಟೆ ಹೆಣ್ಣು ಮಗು ಮತ್ತು ಗಂಡುಮಕ್ಕಳಿಗೆ ಇಬ್ಬರಿಗೂ ಸಮಾನವಾಗಿ ಶಿಕ್ಷಣ ನೀಡುತ್ತಿದ್ದಾರಾದರೂ, ಹೆಣ್ಣು ಮಗುವಿಗೆ ಸರಕಾರಿ ಶಾಲೆಗೆ ಸೇರಿಸಿ ಕನ್ನಡ ಮಾಧ್ಯಮ ಕಲಿಯಲು ಹೆಳುತ್ತಾರೆ. ಗಂಡು ಮಗುವಿಗೆ ಖಾಸಗಿ ಶಾಲೆಗಳಲ್ಲಿ ಸೇರಿಸಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಕಲಿಯಲು ಹೇಳುತ್ತಾರೆಂದು ಹೇಳಬಹುದು. ಇಲ್ಲಸಲ್ಲದ ವಿಚಾರಗಳನ್ನು ಚಿಕ್ಕವಯಸ್ಸಿನಲ್ಲೆ ತುಂಬಿ, ಅವುಗಳೂ ಕೂಡ ಅದೆ ರೀತಿಯ ಸಾಮಾಜಿಕರಣಕ್ಕೆ ಒಳಪಡುವಂತೆ ಪೋಷಕರು ಮಾಡುತ್ತಾರೆಂದು ಹೇಳಬಹುದು.

ನಮ್ಮ ಸಂಸ್ಕೃತಿಯಲ್ಲಿ ವಿವಾಹವೆ ಹೆಣ್ಣಿನ ಅಂತಿಮ ಗುರಿ ಎಂಬ ಆದರ್ಶವನ್ನು ಹುಟ್ಟಿನಿಂದಲೇ ನಿರ್ಧರಿಸಲಾಗುತ್ತದೆ. ಪುರುಷರಂತೆಯೇ ವಿವಾಹ ಸ್ತ್ರೀಯರ ಜೀವನದ ಒಂದು ಘಟ್ಟ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ವಿವಾಹ ಎಂದರೆ ಗಂಡು ಮತ್ತು ಹೆಣ್ಣು ಎಂಬ ಇಬ್ಬರು ವ್ಯಕ್ತಿಗಳ ನಡುವೆ ಮಾತ್ರ ಏರ್ಪಡುವಂಥ ಒಂದು ಸಂಬಂಧವಲ್ಲ. ಈ ಸಂಬಂಧದಲ್ಲಿ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಕುಟುಂಬಗಳೂ ಕೂಡ ಬಂಧಿತರಾಗುತ್ತಾರೆ. ''ಭಾರತೀಯ ಸಮಾಜದಲ್ಲಿ ಹೆಣ್ಣೊಬ್ಬಳು ವಿವಾಹವಾಗುವುದು ಒಬ್ಬ ವ್ಯಕ್ತಿಯನ್ನು ಮಾತ್ರವಲ್ಲ ಒಂದು ಇಡೀ ಕುಟುಂಬವನ್ನು'' ಎನ್ನುತ್ತಾರೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹ ಎನ್ನುವ ಸಂಬಂಧದೊಳಗೆ ಪ್ರವೇಶಿಸಿದ ಹೆಣ್ಣಿನ ಮೇಲೆ ಅನೇಕ ಜವಾಬ್ದಾರಿಗಳು ಬೀಳುತ್ತವೆ. ಬಹುತೇಕ ಸಂದರ್ಭಗಳಲ್ಲಿ ವಿವಾಹ ಎನ್ನುವ ಸಂಬಂಧ ಏರ್ಪಾಡಾಗುವುದೆ ಅಸಮಾನತೆಯ ತತ್ವವನ್ನು ಆಧರಿಸಿ. ಗಂಡು ಶ್ರೇಷ್ಠ ಆತ ಹಾಗೂ ಆತನ ಕುಟುಂಬದವರ ಬೇಡಿಕೆಗಳಿಗೆಲ್ಲಾ ಆ ಹೆಣ್ಣು ಹಾಗೂ ಆಕೆಯ ಕುಟುಂಬದವರು ಮಣಿಯಬೇಕು ಎನ್ನುವುದು ವಿವಾಹ ಸಂದರ್ಭದಲ್ಲಿ ಸಾಮಾನ್ಯವಾಗಿ ನಿರೀಕ್ಷಿಸುವಂಥ ಪಾತ್ರ ಮಾದರಿ. ವಿವಾಹ ಎಂದಾಕ್ಷಣ ತೆಗೆದುಕೊಳ್ಳುವ ಹಾಗೂ ಕೊಡುವ ವ್ಯವಹಾರಗಳು ಪ್ರಾರಂಭವಾಗಿ ಗಂಡಿನ ಬೇಡಿಕೆಗಳು ನಾನಾ ರೂಪಗಳಲ್ಲಿ ವ್ಯಕ್ತವಾಗುತ್ತವೆ. ''ಹೆಣ್ಣಿಗೆ ವಿವಾಹವೇ ಜೀವನದ ಅಂತಿಮ ಗುರಿ ಅಥವಾ ಪರಮ ಗುರಿ'' ಎನ್ನುವ ತತ್ವಕ್ಕೆ ಇಂದಿಗೂ ಬದ್ಧವಾಗಿರುವ ಬಹುತೇಕ ಕುಟುಂಬಗಳು ವಿವಾಹದ ಮೂಲಕ ಸಂಭವಿಸುವ ಹೆಣ್ಣಿನ ವ್ಯಕ್ತಿತ್ವ ನಾಶದ ಬಗ್ಗೆ ಕಾಳಜಿಗಳನ್ನು

ಸಾಮಾನ್ಯವಾಗಿ ವ್ಯಕ್ತಪಡಿಸುವುದಿಲ್ಲ. ಹೆಣ್ಣಾಗಿ ಹುಟ್ಟಿದ ಮೇಲೆ ಅವಮಾನ, ಅವಹೇಳನಗಳನ್ನು ಅನುಭವಿಸುವುದು ಇವರಿಗೆ ಸಹಜವೆನಿಸುತ್ತದೆ. ಬಹುತೇಕ ಸ್ತ್ರೀಯರು ತಮ್ಮ ಅಭಿರುಚಿ, ಆಕಾಂಕ್ಷೆಗಳು, ಆಸಕ್ತಿಗಳು ಎಲ್ಲಕ್ಕಿಂತ ಹೆಚ್ಚಾಗಿ ಆಯ್ಕೆಯ ಸ್ವಾತಂತ್ರ್ಯವನ್ನೆ ವಿವಾಹಾನಂತರ ಕೈಬಿಡಬೇಕಾದಂತಹ ಪರಿಸ್ಥಿತಿ ಏರ್ಪಡಾಗುತ್ತದೆ. ಕೆಲವು ಕುಟುಂಬಗಳಲ್ಲಿ ವಿವಾಹವಾದ ಸ್ತ್ರೀಯ ಮೂಲ ಹೆಸರನ್ನೆ ಪತಿಯ ಮನೆಯಲ್ಲಿ ಬದಲಾಯಿಸಿಬಿಡುವಂಥ ಪದ್ಧತಿ ಆಚರಣೆಯಲ್ಲಿದೆ. ಸಾರ್ವಜನಿಕ, ಖಾಸಗಿ ಬದುಕುಗಳೆರಡರಲ್ಲೂ ಸ್ತ್ರೀಯರನ್ನು ಗುರುತಿಸುವುದು ಇಂಥವನ ಹೆಂಡತಿ ಎಂದೇ ಹೊರತು ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿರುವಂಥ ಒರ್ವಹೆಣ್ಣಾಗಿಯಲ್ಲ.

ಕೇವಲ ವಿವಾಹ ಸಂಸ್ಥೆಯಲ್ಲಷ್ಟೆ ಅಲ್ಲದೇ ಶಿಕ್ಷಣ, ರಾಜಕೀಯ, ಆರ್ಥಿಕ, ಮನರಂಜನೆ, ಧರ್ಮ ಕಟುಂಬ ಮುಂತಾದ ಸಂಸ್ಥೆಗಳಲ್ಲಿಯೂ ಕೂಡ ಲಿಂಗ ತಾರತಮ್ಯ ಎದ್ದು ಕಾಣುವಂತಾಗಿದೆ. ಇತ್ತೀಚೇಗೆ ಲಿಂಗ ತಾರತಮ್ಯ ನಶಿಸಿ ಹೋಗುತ್ತಿದೆ ಎಂದುಕೊಳ್ಳುವಾಗಲೆ ಅದು ಇನ್ನೊಂದು ಹೊಸ ಆಕಾರವನ್ನು ಪಡೆದು ರೂಪಾಂತರ ಹೊಂದಿ, ಮತ್ತೆ ಬೇರೆ ಬೇರೆಯಾದ ಹತ್ತು ಹಲವು ಸಮಸ್ಯೆಗಳನ್ನು ಎದುರಿಸುವಂತೆ ಮಾಡಿದೆ. ಲಿಂತಾರತಮ್ಯವು ಪಿತೃ ಪ್ರಧಾನತೆ ಹೇರಿರುವ ಬಹುಮುಖ್ಯ ಕಾರ್ಯಗಳಲ್ಲಿ ಒಂದಾಗಿದೆ ಎಂದರೆ ತಪ್ಪಾಗಲಾರದು. ಲಿಂಗತಾರತಮ್ಯದಿಂದಾಗಿ ಇಂದು ಹೆಣ್ಣು ಗಂಡಿನ ಅನುಪಾತದಲ್ಲಿ ಎಷ್ಟೊಂದು ಅಂತರವನ್ನು ತಂದೊಡ್ಡಿದೆ ಎಂದರೆ, ಹೆಣ್ಣಿನ ಸಂಖ್ಯೆ ಇಳಿಮುಖವಾಗುತ್ತಿದೆ. ಮುಂದೊಂದು ದಿನ ಹೆಣ್ಣು ಮಕ್ಕಳು ನಶಿಸಿಹೋಗುವ, ಅವಸಾನದ ಅಂಚಿನಲ್ಲಿರುವ ಪ್ರಾಣಿಗಳ ಗುಂಪಿನಲ್ಲಿ ಸೇರಿಸಬಹುದು ಎಂದರೆ ಆಶ್ಚರ್ಯವಲ್ಲ.

೨.೧.೭. ಜಂಡರ್ ಸ್ಟಡೀಸ್

ಶ್ರೇಣಿಕೃತವಾದ ನಮ್ಮ ಸಾಮಾಜಿಕ ಸಂರಚನೆಯಲ್ಲಿ ಜಾತಿ, ವರ್ಗ, ಮತಗಳ ಆಧಾರದ ಮೇಲೆ ಒಡಕು ಉಂಟಾಗಿರುವಂತೆ ಲಿಂಗಾಧಾರಿತವಾಗಿ ಇನ್ನೂ ಹೆಚ್ಚು ತಾರತಮ್ಯ, ವ್ಯತ್ಯಾಸಗಳನ್ನು ಕಾಣಬಹುದು. ಲಿಂಗವ್ಯವಸ್ಥೆಯ ನಿರ್ಮಾಪಕನೂ ಆಗಿರುವ ಪುರುಷವರ್ಗವು ತನ್ನ ಆಶಯಕ್ಕೆ ತಕ್ಕಂತೆ ಮಹಿಳಾ ವರ್ಗವನ್ನು ನಿರ್ಮಿಸಿಕೊಂಡಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ನಿಯಂತ್ರಣ ಹೊಂದಿರುವ ಪುರುಷ ವರ್ಗ ತಾನುಸೂಚಿಸಿದ ಮೌಲ್ಯಗಳನ್ನು ಸಾಮಾಜಿಕ, ಸಾಂಸ್ಕೃತಿಕ ಪರಮ ಮೌಲ್ಯಗಳೆಂದು ಅರ್ಥೈಸಿದೆ. ಹಾಗೂ ಹೆಣ್ಣನ್ನು ಅದರಂತೆಯೇ ಒಪ್ಪಿಸಿಕೊಂಡಿದೆ. ಸ್ತ್ರೀ-ಪುರುಷರು ಬದುಕಬೇಕಾದ ರೀತಿ-ನೀತಿಗಳನ್ನು ತಿಳಿಯುವ ಹಾಗೂ ನಿರ್ದೇಶಿಸುವ ಆಲೋಚನೆಗಳು ಪುರುಷ ಕೇಂದ್ರಿತವಾಗಿದ್ದು, ಅದೆ ಪ್ರಧಾನವಾಹಿನಿಯ ಮೂಲವಾಗಿದೆ. ಆದ್ದರಿಂದ ಹೆಣ್ಣು ಗಂಡಿನಿಂದ ನಿರ್ಮಿತಳಾದ ವ್ಯಕ್ತಿ ಎನಿಸಿಕೊಂಡಿದ್ದಾಳೆ.

ಲಿಂಗ ಒಂದು ಜೈವಿಕಪದ. ಜೈವಿಕ ಆಧಾರದ ಮೇಲೆ ಮನುಷ್ಯರನ್ನು ಗಂಡಸು ಅಥವಾ ಹೆಂಗಸು ಎಂದು ಗುರುತಿಸುವ ಪದ. ಸ್ತ್ರಿ-ಪುರುಷರ ನಡುವಿನ ಜೈವಿಕ ವ್ಯತ್ಯಾಸ ಸಹಜವಾದದ್ದು, ಪ್ರಕೃತಿದತ್ತವಾದುದು. ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಕೆಲವು ವಿಷಯಗಳಲ್ಲಿ ಗಂಡಸರು ವಿಶೇಷ ಆಸಕ್ತಿ ಅಥವಾ ದುರ್ಬಲತೆಯನ್ನು ಪಡೆದಿದ್ದರೆ ಇನ್ನು ಕೆಲವು ವಿಷಯಗಳಲ್ಲಿ ಸ್ತ್ರೀಯರು ವಿಶೇಷ ಆಸಕ್ತಿ ಅಥವಾ ದುರ್ಬಲತೆಯನ್ನು ಹೊಂದಿರುತ್ತಾರೆ.

ಈ ವ್ಯತ್ಯಾಸವನ್ನು ಶ್ರೇಣಿಕರಣಗೊಳಿಸಿ ಗಂಡಸರು ಕೀಳು ಅಬಲೆಯರು, ಆಳಲ್ಪಡುವವರು ಎಂದು ನೋಡಲಾಗುತ್ತದೆ. ಸ್ತ್ರೀ-ಪುರುಷರ ಮೇಲೆ ಹೇರಿರುವ ಸಾಮಾಜಿಕ ಪಾತ್ರ ಮತ್ತು ನಡುವಳಿಕೆಗಳನ್ನು ವಿವರಿಸಲು ಮತ್ತು ಸ್ತ್ರೀ-ಪುರುಷರನ್ನು ಅಸಮಾನವಾಗಿ ನೋಡುವುದನ್ನು ಸಮರ್ಥಿಸಿಕೊಳ್ಳಲು ಈ ಜೈವಿಕ ಅಂಶಗಳನ್ನು ಬಳಸಲಾಗುತ್ತದೆ. ಆದೇ ರೀತಿ ಸ್ತ್ರೀ-ಪುರುಷರ ಸಾಂಪ್ರದಾಯಿಕ ರೂಢಿಬದ್ಧ ಪಾತ್ರಗಳನ್ನು ಪ್ರಚುರಪಡಿಸಲು ಬಲಪಡಿಸಲು ಮತ್ತು ಪುನರ್‌ಸ್ಥಾಪಿಸಲು ಜೈವಿಕ ಅಂಶಗಳನ್ನು ಆಧಾರವಾಗಿಟ್ಟುಕೊಳ್ಳಲಾಗುತ್ತದೆ. ಲಿಂಗಾಧಾರದ ಮೇಲೆ ಸ್ತ್ರೀ ಅಥವಾ ಪುರುಷರಲ್ಲಿ ಯಾರೊಬ್ಬರೂ ಮೇಲು ಅಥವಾ ಕೀಳು ಎಂದು ರುಜುವಾತುಪಡಿಸಲು ಯಾವ ಸಾಕ್ಷಾಧಾರವೂ ಇಲ್ಲ. ಈ ಜೈವಿಕ ವ್ಯಾತ್ಯಾಸವನ್ನು ನಾವು ಸಹಜವೆಂದು ಒಪ್ಪಿಕೊಳ್ಳಬೇಕು. ಜೈವಿಕ ವ್ಯತ್ಯಾಸದಲ್ಲಿರುವ ಮೇಲು ಕೀಳೆಂಬ ಭಾವನೆಯನ್ನು ಹೋಗಲಾಡಿಸಬೇಕು.

"ಸ್ತ್ರೀಯು ಮೂಲತಃ ರೂಪಿಸಲ್ಪಟ್ಟವಳು, ಹೆಣ್ಣು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಗಳಿಂದ ಆಗುತ್ತಾಳೆಯೇ ವಿನಾಃ ಯಾರೂ ಹೆಣ್ಣಾಗಿ ಹುಟ್ಟುವುದಿಲ್ಲ". ಹೀಗಾಗಿ ಹೆಣ್ಣಿನ ನೈಜ ಸ್ವರೂಪ ಅನನ್ಯತೆ ಮತ್ತು ಅಂತಃ ಸತ್ವಗಳು ಸಂಸ್ಕೃತಿಯ ಇತಿಹಾಸದಲ್ಲಿ ನಮೂದಾಗಲೇ ಇಲ್ಲ. ಸ್ತ್ರೀ-ಪುರುಷರ ನಡುವಿನ ಸಾಮಾಜಿಕ, ಸಾಂಸ್ಕೃತಿಕ ಸಂಬಂಧ ಪಾತ್ರ ಮತ್ತು ನಡುವಳಿಕೆಯನ್ನು ಗುರುತಿಸುವ ಪದವೇ ಲಿಂಗ ವ್ಯವಸ್ಥೆ. ಇದು ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸ್ತ್ರೀ-ಪುರುಷರಿಗೆ ಬೇರೆ ಬೇರೆ ಗುಣಪಾತ್ರ ಮನೋಭಾವ ನಡುವಳಿಕೆ ಮತ್ತು ಮೌಲ್ಯಗಳನ್ನು ಸೂಚಿಸುತ್ತದೆ. ದುರದೃಷ್ಟವಶಾತ್ ಈ ಲಿಂಗ ವ್ಯವಸ್ಥೆಯು ಮೇಲು ಕೀಳೆಂದು ಶ್ರೇಣಿಕೃತಗೊಂಡು ಸ್ತ್ರಿ-ಪುರುಷರ ನಡುವೆ ವ್ಯತ್ಯಾಸ ಮತ್ತು ಅಸಮಾನತೆಯನ್ನು ಸೃಷ್ಟಿಸುತ್ತದೆ. ಪುರುಷರು ಮಾಡವುದೆಲ್ಲ ಶ್ರೇಷ್ಠ ಅವರು ಬಲಾಢ್ಯರು, ದೈವಸಂಭೂತರು, ಹೆಚ್ಚು ಬುದ್ದಿವಂತರು ಆಳಲು ಅರ್ಹರು. ಆದರೆ ಸ್ತ್ರೀಯರು ಕೀಳು, ಕಡಿಮೆ ಬುದ್ಧಿವಂತರು ಅಬಲೆಯರು ಆಳಲ್ಪಡಲು ಅರ್ಹರು ಎಂಬ ನಂಬಿಕೆಯನ್ನು ಹುಟ್ಟುಹಾಕಿದೆ. ಆದರೆ ಅನೇಕ ಅಧ್ಯಯನಗಳು ಈ ನಂಬಿಕೆಯನ್ನು ಸುಳ್ಳಾಗಿಸಿವೆ. ಬೌದ್ದಿಕ ಶಕ್ತಿಯಲ್ಲೂ ಕೆಲವು ವಿಷಯಗಳಲ್ಲಿ ಪುರುಷರು ಹೆಚ್ಚು ಸಾಮರ್ಥ್ಯ ತೋರಿಸಿದರೆ ಇನ್ನೂ ಕೆಲವು ವಿಷಯಗಳಲ್ಲಿ ಮಹಿಳೆಯರು ಹೆಚ್ಚು ಸಾಮರ್ಥ್ಯ ತೋರಿಸಿದ್ದಾರೆ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆ ಕೆಲವು ವ್ಯತ್ಯಾಸಗಳನ್ನು ಅಸಮಾನವಾಗಿ ರೂಪಿಸಿ, ಮಹಿಳೆಯರನ್ನು ಕೀಳಾಗಿಸುತ್ತದೆ. ಮತ್ತು ತುಳಿತಕ್ಕೆ ಒಳಪಡಿಸುತ್ತದೆ. ಆದುದರಿಂದ ಮಹಿಳೆಯರ ಹಣೆಬರಹವನ್ನು ನಿರ್ಧರಿಸುವುದು ಈ ಸಾಮಾಜಿಕ ರಚನೆ ಅಂದರೆ ಲಿಂಗವ್ಯವಸ್ಥೆಯೇ ಹೊರತು ಜೈವಿಕತೆ ಅಥವಾ ಲಿಂಗವಲ್ಲ.

ಸ್ತ್ರೀ-ಪುರುಷರ ನಡುವಿನ ವ್ಯತ್ಯಾಸ ಅಸಮಾನತೆಗೆ ಸಾಮಾಜಿಕ ವ್ಯವಸ್ಥೆಯೇ ಕಾರಣ ಲಿಂಗವಲ್ಲ. ಹಿಂದೆ ಮಹಿಳೆಯರು ಮಾಡಬಾರದು, ಮಾಡಲಾಗದು ಎಂದು ಹೇಳುತ್ತಿದ್ದ ಕೆಲಸಗಳನ್ನು ಇಂದು ಆಧುನಿಕ ಯುಗದಲ್ಲಿ ಮಹಿಳೆಯರು ಅತ್ಯಂತ ಸಮರ್ಥವಾಗಿ ಮಾಡಿತೋರಿಸುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಲಿಂಗ ವ್ಯವಸ್ಥೆಯನ್ನು ಬದಲಾಯಿಸಲಾಗುವುದಿಲ್ಲ. ಆದರೆ ಅಸಮಾನತೆಯಿಂದ ಕೂಡಿರುವಲಿಂಗ ವ್ಯವಸ್ಥೆಯನ್ನು ಬದಲಾಯಿಸಬಹುದು. ಶಾರೀರಿಕ ರಚನೆ ಸಂತಾನೋತ್ಪತ್ತಿ ಮತ್ತು ಹಾರ್ಮೋನ್ ವ್ಯತ್ಯಾಸಗಳು, ಲಿಂಗ ಸ್ವರೂಪಿ ವ್ಯತ್ಯಾಸಗಳು ಕುಟುಂಬದಲ್ಲಿ ತಂದೆ-ತಾಯಿ, ಗಂಡ-ಹೆಂಡತಿ, ಹೆಣ್ಣು-ಗಂಡು, ಮಕ್ಕಳ ಪಾತ್ರ ರಚನೆ ಎಡುಪು ಶ್ರಮವಿಭಜನೆ, ಭಾಷೆ ಮತ್ತು

ಸಾಮಾಜಿಕ ಮೌಲ್ಯ, ಮುಂತಾದವುಗಳಲ್ಲಿ ಸ್ತ್ರೀ-ಪುರುಷರ ನಡುವೆ ಕಂಡುಬರುವ ವ್ಯತ್ಯಾಸವೇ ಲಿಂಗ ವ್ಯವಸ್ಥೆ. ಪ್ರಸ್ತುತ ಇರುವ ಅಸಮಾನ ಲಿಂಗ ವ್ಯವಸ್ಥೆಯನ್ನು ಹೋಗಾಲಾಡಿಸಿ, ಸಮಾನ ಲಿಂಗ ವ್ಯವಸ್ಥೆಯನ್ನು ತರುವುದೇ ಮಹಿಳಾ ಅಧ್ಯಯನದ ಗುರಿಯಾಗಿದೆ.

ಪ್ರತಿಯೊಂದು ಸಮಾಜದಲ್ಲೂ ವ್ಯಕ್ತಿಯ ಲಿಂಗ ಮತ್ತು ವಯಸ್ಸಿನ ಮೂಲಕ ಪಾತ್ರ ಹಂಚಿಕೆ ವ್ಯವಸ್ಥೆ ಇರುತ್ತದೆ. ಜೈವಿಕ ರಚನೆಯಕಾರಣ ಮಕ್ಕಳಪಾಲನೆ ಮಹಿಳೆಯರ ಜವಾಬ್ದಾರಿಯಾಯಿತು. ಮನೆಯಲ್ಲಿರುವ ಮಹಿಳೆಯ ಕೆಲಸ ಅನುತ್ಪಾದಕ ಎಂಬ ಮನೋಭಾವದಿಂದ ಗಂಡಸು ಮನೆಯಹೊರಗೆ ದುಡಿದು ಆಹಾರ ಉತ್ಪಾದನೆ ಮಾಡುವುದರಿಂದ ಅವನು ಉತ್ಪಾದಕ ಎಂಬ ಅಭಿಪ್ರಾಯ ತಳೆದು ತನ್ಮೂಲಕ ಸಂಸ್ಕೃತಿ ಲಿಂಗಭೇಧ ಸ್ಥಾಪಿಸಿಬಿಟ್ಟಿದೆ. ಧರ್ಮ ಸಮಾಜದ ಮೇಲೆ ಸಮಗ್ರವಾದ ಪ್ರಭಾವ ಬೀರಿರುವುದರಿಂದ ಧರ್ಮವೇ ಸಂಸ್ಕೃತಿಯ ಅಡಿಗಲ್ಲು ಎಂದು ಹೇಳಲಾಗುತ್ತದೆ. ಹೀಗಾಗಿ ಧಾರ್ಮಿಕ ಪದ್ಧತಿಗಳು ಸ್ತ್ರೀ ವಿರೋಧಿಯಾಗಿದ್ದರೂ ಸಂಸ್ಕೃತಿಯ ನೆಲೆಗಳಲ್ಲಿ ಸೇರ್ಪಡೆಯಾಗಿ ಬಲವಂತವಾಗಿ ಆಚರಣೆಯಲ್ಲಿವೆ. ಇದು ಕನ್ನಡಿಯಲ್ಲಿ ಗಂಟು ತೋರಿಸಿ ಕತ್ತುಹಿಸುಕಿ ಕೊಲ್ಲುವಂತ ವಂಚಕ ಪ್ರವೃತ್ತಿಯೇ ಆಗಿದೆ.

ಲಿಂಗ ಅಸಮಾನತೆ ಸಂಸ್ಕೃತಿ ಮತ್ತು ಧರ್ಮ ಇವೆರಡರಿಂದಲೂ ಉಂಟಾಗಿದ್ದು, ಮಹಿಳೆಗೆ ತನ್ನ ಗುರುತು, ಅಸ್ತಿತ್ವವನ್ನು ಹುಡುಕುವ ತಂತ್ರಜ್ಞಾನದ ಅಭಿವೃದ್ಧಿಯಿಂದ, ಈಗ ಸಾಕಷ್ಟುರಂಗಗಳಲ್ಲಿ ಸ್ತ್ರೀ-ಪುರುಷರಲ್ಲಿ ಸಮಾನತೆ ಹಾಗೂ ಸ್ತ್ರೀಯರಿಗೆ ಸ್ಥಾನ-ಮಾನ ದೊರಕುತ್ತದೆ. ಆಕೆಗೆ ಮುಕ್ತ ಅವಕಾಶಗಳು ಶಿಕ್ಷಣ ಉದ್ಯೋಗ ರಂಗಗಳಲ್ಲಿ ಅದರದೇ ಆದ ರೀತಿಯಲ್ಲಿ ಅಡ್ಡಿಯುಂಟುಮಾಡುತ್ತಿದೆ. ಮುಕ್ತಲೈಂಗಿಕತೆ, ಸ್ವೇಚ್ಛಾಜೀವನ ಮುಂತಾದ ಪಾಶ್ಚಾತ್ಯೀಕರಣದತ್ತ ಇಡೀ ಪೀಳಿಗೆಯನ್ನು ಎಳೆದಿದೆ. ಆದರೆ ಮಹಿಳೆಯರಿಗೆ ತಮ್ಮದೇ ಆದ ಸಮಸ್ಯೆಗಳೊಂದಿಗೆ ಕೌಟುಂಬಿಕ ಜೀವನ, ಉದ್ಯೋಗಸ್ಥ, ಎರಡೂ ಕಡೆ ಪುರುಷರ ದಬ್ಬಾಳಿಕೆಯನ್ನು ನೆಮ್ಮದಿ ರಹಿತ, ಮಾನಸಿಕ, ದೈಹಿಕ ತುಡಿತ ಉಂಟಾಗುತ್ತದೆ. ಲಿಂಗವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ, ಮಾರ್ಪಾಡುಗಳನ್ನು ಪುರುಷ ಪ್ರಧಾನ ಸಂಸ್ಥೆ ಅಂಗೀಕರಿಸಲು ಸಿದ್ಧವಾಗುವುದಿಲ್ಲ. ಆದರೆ ಮಹಿಳಾ ಸಂಸ್ಕೃತಿಯು ಮತ್ತೊಮ್ಮೆ ಸುಲಭವಾಗಿ ಸೆಡ್ಡುಹೊಡೆದು ಪ್ರಧಾನ ವ್ಯವಸ್ಥೆಯನ್ನು ಮಾರ್ಪಡಿಸಲು ಸಾಧ್ಯವಾಗುವುದಾದರೆ ಲಿಂಗವ್ಯವಸ್ಥೆಯಲ್ಲಿ ಅಸಮಾನತೆಯು ಬೇರೂರಲು ಸಾಧ್ಯವಾಗುತ್ತದೆ.

೨.೨. ಹಿಂಧೂ ಧರ್ಮ ಮತ್ತು ಮಹಿಳೆ

ಹಿಂದೂ ಧರ್ಮವು ಸನಾತನ ಧರ್ಮ ಎಂದು ಕರೆಯಿಸಿಕೊಳ್ಳುತ್ತದೆ. ಇದು ಅಪೌರುಷೇಯವೆಂತಲೂ ಕರೆಯಲಾಗುತ್ತದೆ. ಪ್ರತಿಯೊಬ್ಬ ಧಾರ್ಮಿಕ ಸ್ವಭಾವದ ಹಿಂದೂ ವ್ಯಕ್ತಿಗೂ ಧರ್ಮದ ಬಗ್ಗೆ ತನ್ನದೇ ಆದ ಅಭಿಪ್ರಾಯವಿರುತ್ತದೆ. ಸಮಾಜಿಕ ಹಾಗೂ ವಯಕ್ತಿಕ ಧರ್ಮಗಳಿರುತ್ತವೆ. ಜನ್ಮ ಜನ್ಮಾಂತರಗಳಲ್ಲಿನ ಪಾಪ ಅಥವಾ ಪುಣ್ಯ ಕರ್ಮಹಾಗೂ ಸಂಸ್ಕಾರಗಳು ಈ ಅನಂತವಾದ ಜೀವನದಿಯಂತಹ ಪ್ರಪಂಚದಲ್ಲಿ ವ್ಯಕ್ತಿಗಳ ಮೇಲೆ ಪರಿಣಾಮ ಬೀರುತ್ತವೆ ಎಂಬುದು ಸಂಪ್ರದಾಯವಾದಿಗಳ ಅನಿಸಿಕೆ. ಹಿಂಧೂ ಧರ್ಮದಲ್ಲಿ ಹೆಣ್ಣಿನ ಬಗ್ಗೆ ಕಾಣುವ ಧೋರಣೆಗಳು ತೀರವೈವಿಧ್ಯಮಯ. ಒಂದೇ ಶತಮಾನ, ಒಂದೇ ಪ್ರದೇಶದಲ್ಲಿ ಹೆಣ್ಣಿನ ಸ್ವಭಾವ ಅರ್ಹತೆಗಳ ಬಗ್ಗೆ ಪರಸ್ಪರವಿರುದ್ಧ ದೃಷ್ಟಿಗಳಿರಬಹುದು. ಹಿಂದೂ ಧರ್ಮವು ನಿಕೃಷ್ಟವೆಂದು ಕಾಣುವ ನಂಬಿಕೆ ವಿಚಾರಗಳನ್ನು

ಉದ್ದೇಶ ಪೂರ್ವಕವಾಗಿ ಪ್ರತಿಪಾದಿಸುತ್ತದೆ. ಸ್ತ್ರೀಯೊಂದಿಗೆ ಸ್ನೇಹ ಎಂಬುದಿಲ್ಲ.''[೧೧] ಅವರು ತೋಳದಂತ ಹೃದಯದವರು'' ''ಸ್ತ್ರೀಎಂದರೇ ಸುಳ್ಳು ಅವಳು ಸುಳ್ಳನ್ನೇ ಆಚರಿಸುತ್ತಾಳೆ''[೧೨] ಎಂಬ ನುಡಿಗಳು ಸ್ಪಷ್ಟವಾದ ಸ್ತ್ರೀ ವಿರೋಧಿಭಾವ ತೋರಿ ಮುಂದಿನವರಿಗೆ ಪ್ರಮಾಣ ವಾಕ್ಯಗಳಾದವು.

ಶಿಕ್ಷಣ ಅಭಾವ, ಬಾಲ್ಯ ವಿವಾಹ, ಪರಾಧೀನತೆ, ಬಹುಪತ್ನಿತ್ವದ ಒತ್ತಡಗಳಿಂದಾಗಿ ಸ್ತ್ರೀಯರ ಬದುಕು ಹಿಂದೂ ಧರ್ಮದಡಿ ಅಸಹನೀಯ ಯಾತನೆಗಳಿಂದ ಕೂಡಿತ್ತು. ಇದಕ್ಕೆ ಸ್ಮೃತಿಕಾರ ವಿಧಿಸಿದ ನೂರಾರುದಿಗ್ಬಂಧನಗಳು ಮುಖ್ಯಕಾರಣ. ಒಟ್ಟು ಕುಟುಂಬಗಳಲ್ಲಿ ದಬ್ಬಾಳಿಕೆಗೆ ನಿರಂತರ ಒಳಗಾಗುತ್ತಿದ್ದ ಸ್ತ್ರೀಯರಲ್ಲಿ ಅಸೂಯೆ ಹೆಚ್ಚು ಒಬ್ಬರಿಗೊಬ್ಬರನ್ನು ಶೋಷಿಸುತ್ತಾ ಗಂಡಿನ ಪ್ರೇಮಕ್ಕಾಗಿ ಸ್ಪರ್ಧಿಸುತ್ತಾ ಬಡಿದಾಡುವ ಹಪಾಹಪಿಗಳು ಬೆಳೆದು ಕ್ರಿ.ಶ.ಸುಮಾರು ೩೦೦ರ ವೇಳೆಗೆ ಅದರ ಬದುಕಿನ ಪರೀದಿ ತೀರ ಸಂಕುಚಿತವಾಯಿತು. ಉಪನಯನವಿಲ್ಲದ್ದರಿಂದ ವೇದಾಧ್ಯಯನ ತಪ್ಪಿ ಶಿಕ್ಷಣವಿಲ್ಲದೆ ಶೂದ್ರ ಸಮಾನಳೆನಿಸಿದ ಹೆಣ್ಣು, ಧಾರ್ಮಿಕವಾಗಿ ಹೇಗೋ ಹಾಗೆಯೇ ಸಾಮಾಜಿಕವಾಗಿಯೂ ಕೆಳಕ್ಕಿಳಿದಳು. ವಾಸ್ತವ ಬದುಕಿನಲ್ಲಿ ಹೆಣನ್ನು ಕಾಣುತ್ತಿದ್ದ ಈಬಗೆಗಳೇ ಬೇರೆ. ಆಧ್ಯಾತ್ಮಿಕವಾದ ಪರಮಸತ್ಯವು ಸ್ತ್ರೀ ಮತ್ತು ಪುರುಷಾಂಶಗಳೆರಡನ್ನೂ ಒಳಗೊಂಡದ್ದೆಂದು ದ್ವಂದ್ವಾತ್ಮಕವಾಗಿ ಗ್ರಹಿಸುವುದು ಭಾರತದ ವಿಶಿಷ್ಟ ಚಿಂತನಾವಿಧಾನದಲ್ಲಿದೆ. ಈ ಎರೆಡರ ಪರಸ್ಪರ ಸಂಬಂಧ ಲೋಕದೊಂದಿಗಿನ ಇವುಗಳ ಸಂಬಂಧಗಳು ಹೇಗಿವೆ ಎಂಬುದುರ ಬಗ್ಗೆ ಬೇರೆ-ಬೇರೆ ದಾರ್ಶನಿಕ ಪಂಥಗಳು ಬೇರೆ ಬೇರೆ ವಿವರಣೆ ನೀಡುತ್ತವೆ. ವೇದಾಂತದಲ್ಲಿ ಸ್ತ್ರೀ ತತ್ವವು 'ಮಾಯೆ'ಯಾಗಿ ಸಾಂಖ್ಯದಲ್ಲಿ 'ಪ್ರಕೃತಿ'ಯಾಗಿ ತಂತ್ರದರ್ಶನದಲ್ಲಿ 'ಶಕ್ತಿ'ಯಾಗಿ ಗ್ರಹಿತವಾಗುತ್ತದೆ. ಜ್ಞಾನ ಅಥವಾ ಪರಮಪ್ರಜ್ಞೆಯು ಪುರುಷಾತ್ಮಕವಾದದ್ದು, ಶಾಶ್ವತವಾದದ್ದಾಗಿದೆ.

ಹೆಣ್ಣು ಗಂಡುಗಳನ್ನು ಒಂದೇ ಆತ್ಮದ ಎರೆಡು ಅಪರಿಪೂರ್ಣ, ಆದ್ದರಿಂದಲೇ ಪೂರಕ ಅಂಶಗಳೆಂದು ಗ್ರಹಿಸುವ ದೃಷ್ಟಿಯು ಇಬ್ಬರೂ ಸಮಾನರೆಂಬುದನ್ನೇ ಸೂಚಿಸುವಂಥಹುದಾಗಿದೆ. ದ್ಯಾವಾ-ಪೃಥ್ವಿಗಳ (ಭೂಮಿ-ಆಕಾಶ) ಮಿಲನದಿಂದ ಜೀವಲೋಕವು ಹುಟ್ಟಿದೆ. ಎಂಬ ದ್ವಂದ್ವಾತ್ಮಕ ಆಧ್ಯಾತ್ಮಿಕ ದೃಷ್ಟಿ ವೇದಕಾಲದಲ್ಲೂ ಇತ್ತು. ಆದರೆ ಪಿತೃಪ್ರಧಾನ ವ್ಯವಸ್ಥೆಯ ಜೊತೆಗೆ ಬೆಳೆದ ತಾತ್ವಿಕ ಚಿಂತನೆಯು ಪುರುಷನನ್ನೇ ಏಕೈಕ ಸೃಷ್ಟಿಕರ್ತ, ಅವನ ಸೃಷ್ಟಿ ಸ್ತ್ರೀ. ಅವಳು ಪ್ರತಿನಿಧಿಸುವ ಸೃಷ್ಟಿಯು ಪರಮಾತ್ಮದ ನೆಲೆಗೂ ಪುರುಷನಿಗೂ ಒಂದು ಅಡ್ಡಿಯಂತೆ ಭಾವಿಸಿತು. ಆದರೂ ಆತ್ಮರೂಪಿಯಾದ ಪುರುಷ ಸ್ತ್ರೀ ತತ್ವವಾದ ಪ್ರಕೃತಿಗಳು ಶಾಶ್ವತವಾಗಿ ಪರಸ್ಪರ ಪೂರಕವಾದುದೆಂದು ವೇದಾಂತವು ಗುರುತಿಸಿತು. ಪುರುಷ ಚೈತನ್ಯ ಮತ್ತು ವಸ್ತುರೂಪಿ ಪ್ರಕೃತಿಯ ಸಂಯೋಗವೇ ಸೃಷ್ಟಿ ಮೂಲವೆಂದು ಸಾಂಖ್ಯದರ್ಶನವು ಹೇಳಿತು. ಪುರಾಣಗಳು ಅರ್ಧನಾರೀಶ್ವರ ಪರಿಕಲ್ಪನೆಯ ಮೂಲಕ ಇದನ್ನು ಸಾಂಕೇತಿಕವಾಗಿ ಸೂಚಿಸಿದವು. ಬಲಭಾಗ ಪುರುಷನಾಗಿದ್ದು, ಎಡಭಾಗ ಸ್ತ್ರೀಯಾಗಿರುವ ಈ ಸಂಯುಕ್ತ ಸ್ಥಿತಿಯಲ್ಲಿ ಎರೆಡಕ್ಕೂ ಬೇಧವಿಲ್ಲ. ಆದರೆ ಸಾಮಾನ್ಯ ನೆಲೆಯಲ್ಲಿ ಇವುಗಳಿಗೆ ಬೇರೆ ಬೇರೆ ಅಸ್ತಿತ್ವವಿದ್ದು ಅವು ಲಿಂಗಯೋನಿಗಳ ಅನೇಕ ಬಗೆಯ ಸಂಕೇತಗಳಲ್ಲಿ ಬಿತ್ತರಗೊಳ್ಳುತ್ತವೆ.

ತರ್ಕ ವಿಚಾರಗಳೇ ಮುಖ್ಯವಾದ ದರ್ಶನಗಳಿಗೆ ಶಿವವಿಷ್ಣು ಆರಾಧನಾ ಪಂಥಗಳಿಗೆ ಭಿನ್ನವಾಗಿ ಸ್ಪಷ್ಟವಾಗಿದೆ. ಸ್ತ್ರೀ ಕೇಂದ್ರಿತ ಚಿಂತನೆಪಡೆದ ತಂತ್ರ ಧರ್ಮವು ಸ್ತ್ರೀತ್ವಕ್ಕೆ ಬೇರೆಲ್ಲೂ ಕಂಡುಬರದಂತಹ ಪ್ರಾಮುಖ್ಯತೆ ನೀಡಿತು.

೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಹುಟ್ಟಿದ ವೀರಶೈವ ಭಕ್ತಿಪ್ರಧಾನ ಧರ್ಮವು ಹೊರಗಿನ ಹೆಣ್ಣು ಗಂಡೆಂಬ ವ್ಯತ್ಯಾಸಗಳನ್ನು ನಿರಾಕರಿಸಿ, ಆತ್ಮದ ನೆಲೆಯಲ್ಲಿ ಎಲ್ಲರೂ ಸಮಾನರೆಂದು ಸಾರಿತು. ಜಗತ್ತೆಲ್ಲ ಹೆಣ್ಣು, ಶಿವನೊಬ್ಬನೇ ಗಂಡು ಇವೆರೆಡರ ಐಕ್ಯದ ಸ್ಥಿತಿಯೇ ಕೈವಲ್ಯ ಬಯಲು ಅಥವಾ ಶೂನ್ಯ ಸ್ಥಿತಿ ಎಂಬತಾತ್ವಿಕ ನಂಬಿಕೆಯಿಂದ ಈ ಧರ್ಮ ಹುಟ್ಟಿಕೊಂಡಿತು. ಇದು ಭಕ್ತಿ ಆಂದೋಲನದ ರೂಪತಳೆದು ಜಾತಿ, ವರ್ಗ, ಲಿಂಗಬೇಧಗಳನ್ನು ನಿರಾಕರಿಸಿ ಸ್ತ್ರೀಯರಿಗೂ ಶೂದ್ರರಿಗೂ ಮೋಕ್ಷದ ಅರ್ಹತೆಯನ್ನು ಎತ್ತಿಹಿಡಿಯಿತು. ಈ ಆಂದೋಲನದ ಸಂದರ್ಭದಲ್ಲಿ ಶಿವಶರಣೆಯರಾದಿಯಾಗಿ ಆಧ್ಯಾತ್ಮಿಕವಾಗಿ ಪುರುಷ ತಮ್ಮ ಆಧ್ಯಾತ್ಮಿಕ ಅನುಭವಕ್ಕೆ ವಚನಗಳ ರೂಪದಲ್ಲಿ ಅಭಿವ್ಯಕ್ತಿಯನ್ನು ನೀಡಿದ್ದು ಜಾಗತಿಕ ಧಾರ್ಮಿಕ ಇತಿಹಾಸದಲ್ಲಿ ಮಹತ್ವದ ಸಂಗತಿಯಾಗಿದೆ.

ಧರ್ಮಶಾಸ್ತ್ರದ ಮೂಲಅರ್ಥ ದೇವರ ಬಗ್ಗೆ ಅಧ್ಯಯನ ಮಾಡುವುದು ಎಂದರೆ ದೇವರನ್ನು ಸೂಕ್ಷ್ಮದರ್ಶಕದಲ್ಲಿಟ್ಟು ಅಭ್ಯಸಿಸುವುದು ಎಂದರ್ಥವಲ್ಲ. ವ್ಯಕ್ತಿಗೆ ದೇವರ ಬಗ್ಗೆ ಇರುವ ನಂಬಿಕೆಯನ್ನು ಮಾನವೀಯ ದೃಷ್ಟಿಯಿಂದ ಪ್ರಕಟಿಸುವುದು ಎಂದು ತಿಳಿಯಬಹುದು. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸಂದರ್ಭಗಳಲ್ಲಿ ರೂಪಗೊಳ್ಳುವ ಮಾನವ ಸಂಬಂಧಗಳನ್ನು ಧರ್ಮಗ್ರಂಥಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಧರ್ಮಶಾಸ್ತ್ರಕುರಿತ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಮಹಿಳೆಯ ಅನುಭವವನ್ನು ಪ್ರಾರಂಭಿಕ ಬಂಧುವಿನಿಂದ ಗಮನಿಸಲಾಗಿದೆ. ಅಲ್ಲದೆ ಯಾವುದೇ ಸಂದರ್ಭದಲ್ಲಿ ಮಹಿಳೆಯರು ತಾವು ಮಹಿಳೆಯರೆಂಬ ಒಂದೇ ಕಾರಣಕ್ಕಾಗಿ ಅನುಭವಿಸಬೇಕಾಗಿ ಬಂದ ಅವಮಾನ, ಪಕ್ಷಪಾತ, ಔದಾಸಿನ್ಯ, ಹೀನಾಯತನ, ಉಚ್ಚಾಟನೆ, ಅವಕಾಶವಂಚನೆಗಳನ್ನು ಕೂಲಂಕುಷವಾಗಿ ಅಧ್ಯಯನ ನಡೆಸಬೇಕಾಗಿದೆ. ವಿಭಿನ್ನ ರಾಜಕೀಯ, ಸಾಮಾಜಿಕ ಸಂದರ್ಭದಲ್ಲಿನ ಮಾನವ ಸಂಬಂಧಗಳ ಮತ್ತು ವ್ಯಕ್ತಿಗಳ ಮೌಲ್ಯವನ್ನು ರೂಪಿಸುವಲ್ಲಿ ಲಿಂಗಬೇಧವಷ್ಟೆ ಅಲ್ಲ. ಪಿತೃ ಪ್ರಾಧಾನ್ಯತೆ, ವರ್ಗ ವೈಷಮ್ಯ, ವರ್ಣಬೇಧ ಇವೆಲ್ಲವೂ ನಿರ್ಣಾಯಕ ಪಾತ್ರ ವಹಿಸುವುದನ್ನು ಆಫ್ರಿಕನ್, ಅಮೇರಿಕನ್ ಮಹಿಳೆಯರ ಅನುಭವದಿಂದ ತಿಳಯಬಹುದು. ಕಾರ್ಲ್‌ಮಾರ್ಕ್ಸ್ ಧರ್ಮ ಸಮಾಜದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಶೋಷಣಾ ವ್ಯವಸ್ಥೆಯ ಮತ್ತೊಂದು ಮುಖವಷ್ಟೆ ಎಂದು ಹೇಳುತ್ತಾನೆ.

ಧರ್ಮ ಸಾಮಾಜಿಕರಣದ ಅತ್ಯಂತ ಪ್ರಮುಖವಾದ ನಿಯೋಗಿಗಳಲ್ಲಿ ಒಂದಾಗಿದೆ. ಜೀವನವನ್ನು ಕುರಿತ ವ್ಯಕ್ತಿಗಳ ದೃಷ್ಟಿಕೋನಗಳನ್ನು ಧರ್ಮ ಪ್ರಭಾವಿಸುವುದ್ದರಿಂದ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಧರ್ಮದಪಾತ್ರ ಮಹತ್ವವಾದುದು. ನ್ಯಾಯ, ಅನ್ಯಾಯ ಸರಿತಪ್ಪುಗಳನ್ನು ಕುರಿತು ಕಲ್ಪನೆಗಳು ಸೇವೆ ಶಿಸ್ತು, ಸಾಮಾಜಿಕ ಕಾಳಜಿ ಪ್ರಗತಿಪರ ನಿಲುವುಗಳು ಅಥವಾ ಪ್ರಗತಿವಿರೋಧಿ ದೋರಣೆಗಳು ಇಂತಹ ಮೌಲ್ಯಗಳನ್ನು ಬೆಳೆಸುವುದರಲ್ಲಿ ಧರ್ಮದ ಕೊಡುಗೆ ಅಪಾರ.

ಧರ್ಮವು ಸಾಮಾಜಿಕ ಮೌಲ್ಯಗಳನ್ನು ರೂಪಿಸುವಲ್ಲಿ ಹಾಗೂ ಆಚರಣೆಗಳನ್ನು ನಿರ್ದೇಶಿಸುವಲ್ಲಿ ಪ್ರಮುಖವಾದ ಪಾತ್ರ ವಹಿಸಿರುವುದರಿಂದ ಮಹಿಳೆಯರನ್ನು ಕುರಿತ ಸಮಾಜದ ದೋರಣೆಗಳು ಯಾವ ಸ್ವರೂಪವನ್ನು ಪಡೆಯುತ್ತವೆ ಎಂಬುದನ್ನು ಪ್ರಭಾವಿಸುತ್ತದೆ. ಇದು ಹೆಚ್ಚು ಕಡಿಮೆ ಸಂಪೂರ್ಣವಾಗಿ ಪುರುಷಪ್ರಧಾನ ಸಂಸ್ಥೆಗಳಲ್ಲಿ ಒಂದಾಗಿದೆ. ಪುರುಷ ಚಿಂತನೆಯಲ್ಲಿ ಉಗಮವಾಗಿ ಪುರುಷರ ನಿಯಂತ್ರಣದಲ್ಲಿಯೇ ಬೆಳೆದು ಬಂದಿರುವಂಥ ಧಾರ್ಮಿಕ ವ್ಯವಸ್ಥೆ

ಸ್ತ್ರೀಗೆ ಸ್ವತಂತ್ರವಾದ ಒಂದು ವ್ಯಕ್ತಿತ್ವವಿದೆ. ಆಕೆಗೂ ಜ್ಞಾನವನ್ನು ಅನುಭವಿಸುವ ಹಕ್ಕಿದೆ ಎಂಬ ತತ್ವಕ್ಕೆ ಮಾನ್ಯತೆಯನ್ನು ನೀಡಿಲ್ಲ. ಧರ್ಮಗ್ರಂಥಗಳ ರಚನಾಕಾರರು ಅವುಗಳನ್ನು ಅರ್ಥೈಸಿ, ವಿಶ್ಲೇಷಿಸುವವರು ಹಾಗೂ ಧರ್ಮದ ಹೆಸರಿನಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವವರು ಇವರೆಲ್ಲರೂ ಪುರುಷರೇ ಆಗಿರುವುದರಿಂದ ಈ ವ್ಯವಸ್ಥೆಯಲ್ಲಿ ಸ್ತ್ರೀಗಿರುವ ಸ್ಥಾನ ಗೌಣವೇ ಆಗಿದೆ. ಒಂದೆಡೆ ಆಕೆಯನ್ನು ಪೂಜಿಸಿ, ಗೌರವಿಸಬೇಕೆಂದು ಹೇಳುವುದು. ಮತ್ತೊಂದೆಡೆ ಸ್ತ್ರೀ ವಿರೋಧಿ ಪ್ರವೃತ್ತಿಗಳು ಹಾಗೂ ಆಚರಣೆಗಳನ್ನು ಪ್ರತಿಪಾದಿಸುವುದು ಇದು ಧರ್ಮದ ದ್ವಿಮುಖ ಮೌಲ್ಯಗಳಿಗೆ ಸಾಕ್ಷಿಯಾಗಿದೆ.

ಮಹಿಳೆಯರಿಗೆ ಪ್ರಶ್ನೆಗಳನ್ನು ಕೇಳುವ ಹಾಗೂ ಪ್ರತಿಭಟನೆಯನ್ನು ಸೂಚಿಸುವ ಹಕ್ಕು ಇಲ್ಲವೆಂಬ ತತ್ವವನ್ನೆ ಎಲ್ಲ ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ಸಾರಿಹೇಳುತ್ತವೆ. ಧರ್ಮವನ್ನು ಅದರ ಮೂಲ ಸ್ವರೂಪದಲ್ಲಿ ಅರಿಯಲೂ ಕೂಡ ಬಹುತೇಕ ಮಹಿಳೆಯರಿಗೆ ಅವಕಾಶವಿಲ್ಲ. ಧರ್ಮದ ಹೆಸರಿನಲ್ಲಿ ಮಹಿಳೆಯರ ಸ್ವಾತಂತ್ರ್ಯವನ್ನು ದಮನಮಾಡಲು ಭಯೋತ್ಪಾದನೆಯ ಸಂಸ್ಕೃತಿಯನ್ನು ವಿಶ್ವದ ನಾನಾಭಾಗಗಳಲ್ಲಿ ಮೂಲಭೂತವಾದಿಗಳು ಹುಟ್ಟುಹಾಕಿದ್ದಾರೆ. ಹಿಂದೂ ಧರ್ಮ, ವಿವಾಹವನ್ನು ಪವಿತ್ರ ಸಂಸ್ಕಾರವೆಂದು ಅದರಲ್ಲಿ ಅನೇಕ ಹಿಂಸೆಗಳಿದ್ದರೂ ವಿಚ್ಛೇದನೆಗೆ ಅವಕಾಶ ಕೊಡಬಾರದೆಂದು ಹೇಳುತ್ತದೆ. ಇದು ಆದರ್ಶನಾರಿಯ ಪಾತಿವ್ರತ್ಯದ ಕಲ್ಪನೆಗಳನ್ನು ಭಿತ್ತಿ ಹೆಣ್ಣನ್ನು Emocational Blackmail ಮಾಡುತ್ತದೆ. ಇದು ತನ್ನದೇ ಆದ ಹಲವು ಮೌಲ್ಯ ಆಚರಣೆಗಳ ಮೂಲಕ ಹೆಣ್ಣನ್ನು ನಿರ್ಭಂಧಿಸುತ್ತದೆ. ಅವಳ ಬಗೆಗೆ ನಕಾರಾತ್ಮಕ ಭಾವನೆಗಳನ್ನು ಭಿತ್ತಿ, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಪೂರಕವಾದಂತಹ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂದು ಹೇಳಬಹುದು. ಆದರೆ ಇತ್ತೀಚಿನ ಬದಲಾಗುತ್ತಿರುವ ಸಂದರ್ಭದಲ್ಲಿ ಅವೇ ಮೌಲ್ಯಗಳನ್ನು ರೂಪಾಂತರಗೊಳಿಸಿ ತನ್ನ ಅಸ್ತಿತ್ವದ ಉಳುವಿಗಾಗಿ ಶತಪ್ರಯತ್ನವನ್ನು ಮುಂದುವರಿಸಿದ್ದಾಳೆ.

೨.೩. ಬ್ರಾಹ್ಮಣ ಮಹಿಳೆ ಮತ್ತು ಧರ್ಮ

ಜಗತ್ತಿನ ಧರ್ಮಗಳ ಚರಿತ್ರೆಯು ಮಾತೃ ದೇವತೆಯ ಆರಾಧನೆಯ ನೆಲೆಯಿಂದ ಆರಂಭವಾಗಿ, ಮಾನವ ನಾಗರೀಕತೆಯ ಬೆಳವಣಿಗೆಯ ಜೊತೆಯಲ್ಲಿ ಬೆಳೆದುಬಂದಿದೆ. ಈ ಚರಿತ್ರೆಯಲ್ಲಿ ಹೆಣ್ಣು ಆರಾಧನೆಯ ಅಥವಾ ಆಳಲ್ಪಡುವ ಸ್ಥಿತಿಗಳಲ್ಲಿ ಸೇರಿಕೊಂಡಿದ್ದಾಳೆ. ಜಗತ್ತಿನ ಸಕಲಸೃಷ್ಟಿಯೂ ಮೂಲದಲ್ಲಿರುವ ಪರತತ್ವವನ್ನು ಸ್ತ್ರೀಯರೂಪದಲ್ಲಿ ಕಂಡಂಥ ಧಾರ್ಮಿಕ ಪಂಥಗಳ ದೃಷ್ಟಿ ಹೆಣ್ಣನ್ನು ಅತ್ಯುಚ್ಛಸ್ಥಾನದಲ್ಲಿ ಇರಿಸುತ್ತದೆ. ಧಾರ್ಮಿಕ, ಆಧ್ಯಾತ್ಮಿಕ ಸ್ತರಗಳಲ್ಲಿ ಹೆಣ್ಣೂ ಒಬ್ಬ ಸ್ವತಂತ್ರ ವ್ಯಕ್ತಿ ಎಂದಾಗಲಿ ಆತ್ಮವೆಂದಾಗಲೀ, ಗುರುತಿಸದೇ ಆಕೆಯನ್ನು ನಿಕೃಷ್ಟ ಪ್ರಾಣಿಯಂತೆ ಕಾಣುವ ಧಾಮಿಕ ಪರಿಕಲ್ಪನೆಗಳು ಈ ಚರಿತ್ರೆಯ ಇನ್ನೊಂದು ಮುಖವಾಗಿದೆ. ಧರ್ಮದ ಜೊತೆ ಹೆಣ್ಣು ಹೊಂದಿರುವ ಸಂಬಂಧವು ಈ ಎರೆಡು ಅತಿರೇಕಗಳ ನಡುವೆ ಹಲವು ಸ್ತರಗಳಲ್ಲಿ ಹರಡಿಕೊಂಡಿದೆ. ಈ ಸಂಬಂಧದ ಸ್ವರೂಪ ಸಾಪೇಕ್ಷವಾದುದು. ಏಕೆಂದರೆ ಹೆಣ್ಣನ್ನು ದೈವವಾಗಿಸಿಕೊಂಡ ಪರಿಕಲ್ಪನೆ ಕೂಡ ಗಂಡಿನದೆ ಆಗಿದೆ. ಧರ್ಮದೇವರು ಜಗತ್ತು ಸೃಷ್ಟಿ, ಅದರಲ್ಲಿನ ತನ್ನ ಅಸ್ತಿತ್ವಕ್ಕೆ ಅರ್ಥ ಮುಂತಾದ ವಿಷಯಗಳಲ್ಲಿ ಕೇವಲ ಹೆಣ್ಣಿನದು. ಅಥವಾ ಹೆಣ್ಣೆ ಚಿಂತಿಸಿರುವುದು ಎನ್ನುವಂಥದ್ದು ಏನಾದರೂ ಇತ್ತು ಅಥವಾ ಇದೆ ಎನ್ನುವುದು

ಅನುಮಾನಾಸ್ಪದ. ಇದುವರೆಗಿನ ಧಾರ್ಮಿಕ ಚರಿತ್ರೆ ಬರೆದಿರುವವರು ಪುರುಷರು. ಆದ್ದರಿಂದ ಈ ಚರಿತ್ರೆಯಲ್ಲಿ ಹೆಣ್ಣಿನ ಬಗ್ಗೆ ವ್ಯಕ್ತವಾಗಿರುವ ಭಾವನೆ, ಧೋರಣೆ ವಿಚಾರಗಳು ಹೆಣ್ಣಿನ ವಿಷಯದಲ್ಲಿ ಪುರುಷರು ತಳೆದಿದ್ದ ನಿಲುವುಗಳನ್ನು ಸೂಚಿಸುತ್ತವೆ.

ಯಾವುದೇ ಧರ್ಮವನ್ನು ತೆಗೆದುಕೊಂಡರೂ ಕೂಡ ಅದು ಹೆಣ್ಣಿನ ಶೋಷಣೆಯನ್ನು ತೆರೆಮರೆಯಲ್ಲಿ ಅವ್ಯಾಹತವಾಗಿ ನಡೆಯಿಸಿಕೊಂಡು ಹೊರಟಿದೆ. ಇದಕ್ಕೆ ವೈದಿಕ ಧರ್ಮವು ಹೊರತಾದುದ್ದಲ್ಲ. ಎಲ್ಲ ಜಾತಿಗಳೂ ಕೂಡ ಈ ಕಾರ್ಯವನ್ನು ಮಾಡುತ್ತಿವೆ. ಇದಕ್ಕೆ ಬ್ರಾಹ್ಮಣ ಸ್ತ್ರೀಯೂ ಹೊರತಾಗಿಲ್ಲವೆಂದು ಹೇಳಬಹುದು. ''ವಸುದೇವ ಕುಟುಂಬಕಂ'' ಎಂದು ಹೇಳುತ್ತಾ ಸಕಲ ಜೀವರಾಶಿಗಳಿಗೆ ಲೇಸನ್ನೆ ಬಯಸುವ ಕಾರ್ಯವನ್ನು ಧರ್ಮಗಳು ಮಾಡಿಕೊಂಡು ಹೊರಟಿವೆ. ಎಂದು ಧರ್ಮಗಳು ಮೇಲ್ನೋಟಕ್ಕೆ ತೋರಹೊರಟಿವೆ. ಆದರೆ ಕೆಲವೇ ಕೆಲವು ಧರ್ಮಗಳು ಸಕಲಜೀವಿಗಳಿಗೂ ಆತ್ಮದ ನೆಲೆಯಿಂದ ಸಮಾನ ಎಂದು ಸಾರಿಹೇಳಿದ್ದು, ಅವುಗಳಲ್ಲಿ ಸ್ತ್ರೀ ಕೂಡ ಸನ್ಯಾಸವನ್ನು ಆರಿಸಿಕೊಂಡು ಪುರುಷನಂತೆ ತನ್ನ ಆಧ್ಯಾತ್ಮಿಕ ಹುಡುಕಾಟದಲ್ಲಿ ತೊಡಗಲು ಅವಕಾಶವಿತ್ತು. ಭಾರತದ ವೈದಿಕ ಧರ್ಮದಲ್ಲಿ ಜಿಜ್ಞಾಸೆ ನಡೆಸಿದ ಹೆಣ್ಣುಗಳಿದ್ದರೂ ಆದರೆ ಅವರು ಕಂಡುಕೊಂಡ ತಾತ್ವಿಕ ಉತ್ತರಗಳು ಬಹುಮಟ್ಟಿಗೆ ಆ ಯುಗದ ಅಥವಾ ಆಯಾ ಧರ್ಮದ ಸಂಸ್ಥಾಪಕರು ನಾಯಕರೋ ಪ್ರತಿಪಾದಿಸುತ್ತಿದ್ದಂತ ದಾರ್ಶನಿಕ ನಂಬಿಕೆಗಳೇ ಆಗಿರುತ್ತಿದ್ದವು. ಈ ಬಗೆಯ ಯತ್ನಗಳೂ ತೀರವಿರಳವಾದವು. ಇವನ್ನು ಬಿಟ್ಟರೆ ಉಳಿದಂತೆ ಹೆಣ್ಣಿಗೂ ಧರ್ಮಕ್ಕೂ ಇರುವಸಂಬಂಧವು ಆಯಾಧರ್ಮದಲ್ಲಿ ಮದುವೆ, ದಾಂಪತ್ಯ ಜೀವನ, ಕೌಟುಂಬಿಕ ಬದುಕು, ಸಾಮಾಜಿಕವಲಯ ಮುಂತಾದ ವಿಷಯಗಳಲ್ಲಿ ಸ್ತ್ರೀಯರಿಗಾಗಿ ವಿಧಿಸಲಾದ ನೀತಿನಿಯಮಾವಳಿಗಳಿಂದ ರೂಪಗೊಂಡಂಥದ್ದು. ಈ ನೀತಿ ನಿಯಮಗಳು ಹೆಣ್ಣಿನ ಹುಟ್ಟನ್ನು ಅವಹೇಳನದಿಂದ ಕಾಣುವುದರಿಂದ ಹಿಡಿದು ಆಕೆಯೇ ಮಾನವನ ಹುಟ್ಟಿಗೆ ಆಧಾರ ಎಂದು ಕೊಂಡಾಡುವವರೆಗೂ ಹರಡಿಕೊಂಡಿವೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಉಚ್ಚಕುಲ, ಶ್ರೇಷ್ಠವೆಂದು ಕರೆಯಿಸಿಕೊಂಡಿದ್ದ ಬ್ರಾಹ್ಮಣರಲ್ಲಿಯೂ ಹೆಣ್ಣುಕನಿಷ್ಠವೆಂದು ಪರಿಗಣಿಸಲ್ಪಡುತ್ತಿದ್ದಳು. ಉಚ್ಚ ಅಥವಾ ಕಡಿಮೆ ಕುಲದ ಹೆಣ್ಣು ತನ್ನ ಮನಬಂದಂತೆ ಸ್ವೇಚ್ಛಾಜೀವನ ನಡೆಸಬಹುದಾಗಿತ್ತು. ಅವಳಿಗೆ ತನ್ನ ಜಾತಿಯಿಂದ ಶೋಷಣೆ ಒಂದು ಕಡೆಯಾದರೆ ಉಚ್ಚಕುಲದವರ ಶೋಷಣೆ ಇನ್ನೊಂದು ಕಡೆ. ಹೀಗೆ ಎರಡೆರಡುರೀತಿಯ ಶೋಷಣೆಗೆ ಗುರಿಯಾಗಬೇಕಿತ್ತು. ಇವಳು ಬ್ರಾಹ್ಮಣ ಪುರುಷನೊಂದಿಗೆ ಸಂಬಂಧ ಬೆಳಸಬಹುದಾಗಿತ್ತು. ಅದು ಅವಳು ದೇವರಿಗೆ ಸಲ್ಲಿಸುವ ಸೇವೆ, ಭಕ್ತಿಯ ಹೆಸರಿನಲ್ಲಿ ಆ ರೀತಿ ವರ್ತಿಸಲು ವೈದಿಕ ಪುರುಷರು ತಮ್ಮ ಆಸೆ ಈಡೇರಿಕೆಗೆ ಇಂಥ ಹೇಳಿಕೆಗಳನ್ನು ಸೃಷ್ಟಿಸಿದ್ದರೂ ಸೃಷ್ಟಿಸಿರಬಹುದು. ಇಲ್ಲಿ ಹೆಣ್ಣಿನ ವರ್ತನೆಯ ಬಗೆಯಾಗಲಿ ಅಥವಾ ಆ ಹೆಣ್ಣನ್ನು ಅವಹೇಳನ ಅಪಮಾನ ಮಾಡುವ ಉದ್ದೇಶ ಈ ಅಧ್ಯಯನಕ್ಕಿಲ್ಲ. ಅವಳು ಆ ರೀತಿ ವರ್ತಿಸುವಂತೆಮಾಡುವ ಶಕ್ತಿಯಾವುವು ಎಂಬುದನ್ನು ಈ ಮೊದಲೆ ಹೇಳಿದೆ. ಬ್ರಾಹ್ಮಣ ಮಹಿಳೆಗೆ ಇಂಥ ವರ್ತನೆಗಳಿಗೆ ಅವಕಾಶವಿರಲಿಲ್ಲ. ಅವಳಿಗೆ ಜಾತಿಯ ಬಿಗುವು ಹೆಚ್ಚಾಗಿದ್ದು, ಅವುಗಳಿಂದ ಅವಳು ಪ್ರಭಾವಿತಗೊಂಡಿದ್ದಳು. ಆದರ್ಶನಾರಿಯ ಪಾತ್ರ ಮಾದರಿಯನ್ನು ಅವಳ ಮೈಮನಸ್ಸುಗಳಲ್ಲಿ ತುಂಬಿಬಿಟ್ಟಿದ್ದರು. ಪತಿಸೇವೆ ಧರ್ಮಕಾರ್ಯದಲ್ಲಿ ಭಾಗಿಯಾಗುವ ಸಂತಾನೋತ್ಪತ್ತಿಯೊಂದಿಗೆ ಉತ್ತಮ ಸಂಸ್ಕಾರ

ನೀಡುವ ಹೊಣೆಯೂ ಅವಳ ಮೇಲಿತ್ತು ಈ ಕೆಲಸಗಳನ್ನು ಅವಳು ನಿರ್ವಹಿಸದಿದ್ದರೆ ಬ್ರಹ್ಮಹತ್ಯಾದೋಷ ಬರುತ್ತದೆ ಎಂದು ಹೇಳಿ ಅವಳ ಮೇಲೆ ಇವನ್ನು ಒತ್ತಾಯ ಪೂರ್ವಕವಾಗಿ ಹೇರಲಾಗುತ್ತಿತ್ತು.

''ಬ್ರಾಹ್ಮಣ ಹೆಣ್ಣು ಮಕ್ಕಳೆಂದರೆ ಸಪ್ಪೆ ಮೊರೆಯ

ತೊವ್ವೆಯ ವಾಸನೆ ಬರುವ, ಮೋಟುಜಡೆಯ

ಮೈ, ಕೈತುಂಬಿಕೊಂಡಿರದ, ಅಶಕ್ತ ದೇಹ (ಮಾಟ)

ಹೊಂದಿರುವಳೆಂಬ ಹೇಳಿಕೆಗಳುಂಟು''[೧೩]

ಈ ಕಾರಣಕ್ಕಾಗಿ ಬ್ರಾಹ್ಮಣ ಪುರುಷರು, ಕೆಳವರ್ಗದ ಹೆಣ್ಣು ಮಕ್ಕಳು ಮಾಂಸಾಹಾರ ಉಪ್ಪು, ಖಾರ, ಹೆಚ್ಚು ತಿನ್ನುವ, ಕುಟ್ಟಿ ಕುಟ್ಟಿ ಮಾಡಿದಂತಹ ದೇಹಮಾಟ ಹೊಂದಿರುವವರನ್ನು ತಮ್ಮ ಕಾಮತೃಷೆಗಾಗಿ ಬಳಸಿಕೊಳ್ಳುತ್ತಿದ್ದರು. ಇದಕ್ಕೆ ಒಪ್ಪದೆ ಹೋದರೆ, ದೇವರು ಶಾಪಕೊಡುವನೆಂದು ಹೇಳಿ ಹೆದರಿಸಲಾಗುತ್ತಿತ್ತು. ಆದರೆ ಹೆಣ್ಣು ಮಕ್ಕಳು ಬ್ರಾಹ್ಮಣ ಹೆಣ್ಣುಗಳು ಈ ವಿಷಯ ತಿಳಿದಿದ್ದರೂ ಸುಮ್ಮನೆ ಮೌನವಾಗಿರುವಂಥ ಸನ್ನಿವೇಶವನ್ನು ಸೃಷ್ಟಿಸಿ ತಮ್ಮ ಕಾರ್ಯಸಾಧಿಸಿಕೊಳ್ಳುತ್ತಿದ್ದರು. ಪತಿಗೆ ಎದುರಾಡಬಾರದು ಎಂದುಹೇಳಿ ಅವರ ಬಾಯಿಯನ್ನು ಮುಚ್ಚಿ ಬಿಡುತ್ತಿದ್ದರು. ಈ ರೀತಿಯಾಗಿ ಬ್ರಾಹ್ಮಣ ಮಹಿಳೆ ಗಂಡ ಮತ್ತು ಮಕ್ಕಳಿಗಾಗಿ ಉಪವಾಸ ವ್ರತಾಚರಣೆಗಳನ್ನು ಮಾಡಿ, ಮಾಡಿ ತಮ್ಮ ದೈಹಿಕ ಶಕ್ತಿಯನ್ನುಕುಗ್ಗಿಸಿಕೊಳ್ಳುತ್ತಿದ್ದರು. ಇದಕ್ಕಾಗಿಯೇ ಬ್ರಾಹ್ಮಣ ಹೆಣ್ಣು ಮಕ್ಕಳು ಗಟ್ಟಿಗರಲ್ಲ. ಹೊಲಗದ್ದೆಗಳಲ್ಲಿ ಅವರಿಗೆ ದುಡಿಯುವುದು ಸಾಧ್ಯವಾಗುವುದಿಲ್ಲ ಎಂಬ ಮಾತುಗಳು ಹುಟ್ಟಿಕೊಂಡು ಇಂದಿಗೂ ಅವು ಮುಂದುವರಿಯುವಂತೆ ಮಾಡಿವೆ. ಇದು ಅವಳ ಶಕ್ತಿಗೆ ನೀಡಿದ ಅಪವಾದವೇ ಆದರೂ ಮೌನ ನೋವನ್ನು ನುಂಗಿ ಬದುಕುತ್ತಿದ್ದಾರೆನ್ನಬಹುದು.

ಉಚ್ಛ ಕುಲದಲ್ಲಿ ಅವಳ ಜನನವಾಗಿದ್ದುರೂ ಕೂಡ ಈ ಮಹಿಳೆಗೆ ಶೂದ್ರಳಸ್ಥಾನವಿತ್ತು. ಅಂದರೆ ಅವಳು ದಾಸಿಗೆ ಸಮನಾಗಿ ಪರಿಗಣಿಸಿಲ್ಪಡುತ್ತಿದ್ದಳು. ಅವಳು ಪೂಜೆಗೆ ಅರ್ಹಳಲ್ಲ ಧರ್ಮಶಾಸ್ತ್ರಗಳು ಹೇಳುವ ಪ್ರಕಾರ ಸ್ತ್ರೀಯಾದವಳು ದೇವ, ದೇವತೆಯನ್ನು ಪೂಜೆಮಾಡುವಂತಿಲ್ಲ. ಇತ್ತೀಚಿನ ಸ್ಥಿತ್ಯಂತರಗಳಿಂದಾಗಿ ಕೆಲವೇ ಕೆಲವು ದೇವರುಗಳನ್ನು ಪೂಜಿಸುತ್ತಿದ್ದಾಳೆ. (ಉದಾಹರಣೆಗೆ: ಕೃಷ್ಣ, ಗಂಗಾಜಲ, ಅನ್ನಪೂರ್ಣ, ಆಕಳು) ಇದಕ್ಕೆ ಕಾರಣವನ್ನು ಕೇಳಿದರೆ ಅವಳಿಗೆ ನಿರ್ವಹಿಸಲು ಹೇಳಿರುವ ಅಡುಗೆ ತಯಾರಿಸುವುದು, ಪೂಜೆಗೆ ಸಿದ್ಧತೆ ಮಾಡಿಕೊಡುವುದು. ಮಕ್ಕಳ ಲಾಲನೆ, ಪಾಲನೆ ಇಷ್ಟೊಂದು ಕೆಲಸವನ್ನು ಅವಳು ನಿರ್ವಹಿಸಿದರೆ ಸಾಕು, ಪೂಜೆ ಮಾಡಿದ್ದಕ್ಕಿಂತ ಹೆಚ್ಚಿನ ಫಲದೊರಕುತ್ತದೆ. ಇಷ್ಟೆಲ್ಲಾ ಇದ್ದಮೇಲೆ ದೇವರ ಪೂಜೆಯ ಹೊರೆ ಅವಳಿಗೇಕೆ? ಎಂಬ ಜಾರಿಕೆಯ ಮಾತನ್ನು ಹೇಳುವುದುಂಟು.

ನಮ್ಮ ಧರ್ಮಶಾಸ್ತ್ರಗಳು ಹೆಣ್ಣು ತನಗಾಗಿ, ತನ್ನ ಸ್ವಂತ ವ್ಯಕ್ತಿತ್ವಕ್ಕಾಗಿ ಯಾವುದೇ ಕಾರ್ಯವನ್ನು ಮಾಡಬಾರದು. ನಿಷ್ಕಾಮ ಕರ್ಮದ ಪ್ರತಿಫಲಾಪೇಕ್ಷೆ ಇಲ್ಲದೆ ಕರ್ಮಮಾಡು ಎಂಬ ಮಾತುಗಳನ್ನು ಅವಳಿಗೆ ಆದರ್ಶವಾಗಿರಿಸಿ ಎಲ್ಲಿಯೂ ತನ್ನ ತನವನ್ನು ಉಳಿಸದಂತೆ ಮಾಡಿವೆ ಮರು ಪ್ರಶ್ನೆ ಮಾಡಬಾರದೆಂದು ಉತ್ತರಗಳನ್ನು ಸಿದ್ಧಪಡಿಸಿಕೊಂಡಿದ್ದರೆಂಬುದು ಕಾಣುತ್ತದೆ. ಗೃಹಿಣಿಗೆ ಸಿಗದ ಮಾನ ಮರ್ಯಾದೆಗಳು ಅವಳ ಪಾತಿವ್ರತ್ಯವನ್ನು

ಅವಲಂಬಿಸಿಲ್ಲದೆ, ಯಾವುದಕ್ಕೂ ಎದುರಾಡದೆ, ಗಂಡನಿಗೆ ವಿಧೇಯವಾಗಿ ನಡೆದುಕೊಂಡರೆ ಮಾತ್ರ ಅವಳು ಉತ್ತಮಗೃಹಿಣಿ ಎಂದು ಕರೆಯಲ್ಪಡುತ್ತಿದ್ದಳು. ಹೊರಗಡೆ ದುಡಿಯುವ ಇತ್ತೀಚಿನ ಮಹಿಳೆಯಿಂದಲೂ ಇದನ್ನು ಅಪೇಕ್ಷಿಸುವುದು ಕಂಡು ಬರುತ್ತದೆ. ಹೆಣ್ಣು ತನ್ನ ಕುಟುಂಬದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಲು ಗೌರವವಾದ ಕಾಯಕವನ್ನು ಮಾಡಬೇಕು. ಅದರಿಂದ ಬಂದ ಆದಾಯವನ್ನು ತಾನು ತನಗಾಗಿ ಬಳಸದೆ ಗಂಡನಿಗೆ ನೀಡಬೇಕೆಂಬ ದುರಾಸೆಯನ್ನು ಹೊಂದಿದ್ದವು. ಧರ್ಮಗಳೆಲ್ಲ ತಮ್ಮ ಒಟ್ಟಾರೆ ಬೆಳವಣಿಗೆಯಲ್ಲಿ ಪಿತೃಪ್ರಧಾನ ವ್ಯವಸ್ಥೆಯ ಉತ್ಪಾದನೆಗಳಾಗಿದ್ದಾಗ, ಸ್ತ್ರೀಯರಿಗೆ ವೈವಾಹಿಕ ಬದುಕಿನ ಆಚೆಗೆ ಬೇರೆಯಾವ ವಿಕಾಸದ ಸಾಧ್ಯತೆಗಳೂ ಇರಲಿಲ್ಲ. ಅವರ ಚಿಂತನೆ ಆಧ್ಯಾತ್ಮಿಕ ತುಡಿತಗಳು ಅದೆ ಧರ್ಮದ ಪ್ರಚಲಿತ ಚೌಕಟ್ಟಿನೊಳಗೆ ಮಾತ್ರ ಸಾಧ್ಯವಾಗುವಂಥವುಗಳಾಗಿದ್ದವು.

ಆಧುನಿಕ ಚಿಂತಕರು ಮಾನವಶಾಸ್ತ್ರಜ್ಞರು ಮತ್ತು ಮನಃಶಾಸ್ತ್ರಜ್ಞರು ''ಸಮಾಜದಲ್ಲಿನ ಸ್ತ್ರೀ ಪುರುಷರ ಸ್ಥಾನ-ಮಾನಗಳ ಏರುಪೇರುಗಳಿಗೂ ಪ್ರತಿಯೊಬ್ಬ ವ್ಯಕ್ತಿಯ ಒಳಗಿರುವ ಹೆಣ್ಣು ಗಂಡು ಸ್ವಭಾವಗಳಲ್ಲಿನ ಏರುಪೇರುಗಳಿಗೂ ಸಂಬಂಧವಿದೆ ಎಂಬುದನ್ನು ಇದು ಗುರುತಿಸಲು ಸಾಧ್ಯವಾಗುತ್ತದೆ. ಧಾರ್ಮಿಕ ಆಧ್ಯಾತ್ಮಿಕ ನೆಲೆಯಲ್ಲಿ ವ್ಯಕ್ತಿಯ ವೈಯಕ್ತಿಕ ಸಮತೋಲನವು ಆರೋಗ್ಯದ ಸಾಮಾಜಿಕ ವ್ಯವಸ್ಥೆಗೆ ಅವಶ್ಯಕ'' ಎಂದುಹೇಳುತ್ತಾರೆ. ಒಟ್ಟಾರೆಯಾಗಿ ಚರಿತ್ರೆಯು ಹೆಣ್ಣಿಗೆ ಅನುಕೂಲಕರವಾಗಿದ್ದಾಗ ಕೂಡ ಸಮಗ್ರ ಪುರುಷ ಜಾತಿಯನ್ನು ಆಕೆ ತನ್ನ ಉಳಿಗದ ಜೀವಿಗಳನ್ನಾಗಿ ಮಾಡಿಕೊಂಡಂಥ ಧಾರ್ಮಿಕ ಸ್ಥಿತಿ-ಗತಿಗಳನ್ನು ನಾವು ಕಾಣಲಾರೆವು. ಇದಕ್ಕೆ ವಿರುದ್ಧವಾಗಿ ಆ ಚರಿತ್ರೆಯು ಹೆಣ್ಣಿನ ಪಾಲಿಗೆ ಅತ್ಯಂತ ದಮನಕಾರಿಯಾಗಿ ಪರಿಣಮಿಸಿದ್ದಾಗ ಕೂಡ ಆಕೆ ಸಾಮೂಹಿಕವಾಗಿ ಧರ್ಮಯುದ್ಧ ಹೂಡಿದ ನಿದರ್ಶನಗಳಿಲ್ಲ. ಧಾರ್ಮಿಕ ಚರಿತ್ರೆಯಲ್ಲಿ ಹೆಣ್ಣು ಪಾಲ್ಗೊಂಡಿದ್ದು ಪುರುಷನಿಗಿಂತ ತೀರಾ ಭಿನ್ನವಾದರೀತಿಯಲ್ಲಿ ಆಕೆ ಸಂಗಾತಿಯಾಗಿ, ಸಹಕಾರಿಯಾಗಿ, ಸಹಿಷ್ಣುವಾಗಿ, ಆ ಚರಿತ್ರೆಯ ಬೆಳವಣಿಗೆ ಮತ್ತು ಹೆಣ್ಣಿನ ಸಂಬಂಧ ಜಡ ಸ್ವರೂಪದ್ದಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಹೆಣ್ಣಿನ ಕ್ರಿಯಾಶೀಲ ತೊಡಗುವಿಕೆ (ಧರ್ಮತನ್ನ ವಿರುದ್ಧವಾಗಿದ್ದಾಗಲೂ) ಇದೆ. ಇದನ್ನು ನಮ್ಮ ಪಿತೃಪ್ರಧಾನ ಸಮಾಜಕ್ಕೆ ಅರ್ಥವಾಗುವಂತೆ ತಿಳುವಳಿಕೆ ನೀಡುವ ಕೆಲಸ ಮಹಿಳಾ ಸಂಕುಲದಿಂದ ನಡೆಯಬೇಕಾಗಿರುವುದು ತುರ್ತು ಅಗತ್ಯವಾಗಿದೆ.

ಟಿಪ್ಪಣಿಗಳು

೧. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ-೧, ಪು.೨೭-೨೮

೨. ಅದೇ, ಪು.೨೮

೩. ಅದೇ, ಪು.೨೯

೪. ಅದೇ, ಪು.೨೯

೫. ಅದೇ, ಪು.೨೯-೩೦

೬. ಶಂಕರ್‌ರಾವ್ ಚ.ನ. ಸಮಾಜಶಾಸ್ತ್ರದ ಮೂಲತತ್ವಗಳು, ಪು.೨೦೫-೨೦೬

೭. ಹೇಮಲತ್ತಾ ಎಚ್.ಎಂ. ಮಹಿಳಾ ಅಧ್ಯಯನ -೧, ಪು.೪೦

೮. ಅದೇ, ಪು. ೪೦

೯. ಅದೇ, ಪು.೪೦-೪೧

೧೦. ಶೈಲಜಾಹಿರೇಮಠ, ಮಾತೃಪ್ರಧಾನತೆ, ಪು.೧೨-೧೩

೧೧. ಋಗ್ವೇದ, ಪು. ೯೫-೧೫

೧೨. ಮನು,ಸ್ಮೃತಿ, ೧.೧.೧೧.

೧೩. ಅನಂತಮೂರ್ತಿ.ಯು.ಆರ್. ಸಂಸ್ಕಾರ (ಕಾದಂಬರಿ)

❐

ಅಧ್ಯಾಯ : ಮೂರು

ಲಿಖಿತ ಪರಂಪರೆ ಹಾಗೂ ಅದರ ನಿರ್ವಚನ

ಅಧ್ಯಾಯ : ಮೂರು

ಲಿಖಿತ ಪರಂಪರೆ ಹಾಗೂ ಅದರ ನಿರ್ವಚನ

ಈ ಅಧ್ಯಾಯದಲ್ಲಿ ಲಿಖಿತ ಪರಂಪರೆಯ ನಿರ್ವಚನವನ್ನು ಕೈಗೆತ್ತಿಕೊಳ್ಳಲಾಗಿದೆ. ಲಿಖಿತ ಪರಂಪರೆ ಎಂದರೆ ದಾಖಲೆಗಳಲ್ಲಿ ಸಿಗುವಂತಹ ಬರವಣಿಗೆಯಲ್ಲಿ ಕಾಣಿಸಿಗುವಂತಹ ಆಚರಣೆ, ನೀತಿ ನಿಯಮಗಳು ಸಂಪ್ರದಾಯ ಪ್ರತಿ ಅವಸ್ಥೆಯಲ್ಲೂ ಒಬ್ಬ ಮಹಿಳೆ ಅಥವಾ ಒಬ್ಬ ಪುರುಷ ಇದೇ ರೀತಿಯಾಗಿ ಇರಬೇಕು ಎನ್ನುವಂಥದ್ದಾಗಿದೆ. ಸಂಪ್ರದಾಯ, ಆಚರಣೆಗಳು ಮೌಖಿಕ ಪರಂಪರೆಯಲ್ಲಿ ಸೇರ್ಪಡೆಯಾಗುತ್ತವೆಯಾದರೂ ಕೆಲವೊಂದು ಸಂಪ್ರದಾಯ ಆಚರಣೆಗಳನ್ನು ಇದೇ ರೀತಿಯಲ್ಲಿ ಮಾಡಬೇಕು. ವಿಧಾನಗಳು, ಹಂತಗಳ ಉಲ್ಲೇಖವಿರುವುದು ಕಂಡುಬರುತ್ತವೆ. ಈ ಲಿಖಿತ ಪರಂಪರೆಯಲ್ಲಿ ಹೆಣ್ಣು ಹೀಗಿರಬೇಕು ಎಂಬುದಕ್ಕೆ ಹಲವಾರು ರೀತಿಯ ನಿದರ್ಶನಗಳು ಮಾರ್ಗಸೂತ್ರಗಳನ್ನು ರಚಿಸಲಾಗಿರುತ್ತದೆ.

ಮಹಿಳಾ ಅಧ್ಯಯನದ ವರ್ತಮಾನವನ್ನು ಗ್ರಹಿಸಬೇಕಾದರೇ ಭೂತವನ್ನು ಗ್ರಹಿಸುವುದು ಅನಿವಾರ್ಯ ವಾಗುತ್ತದೆ. ಎಂದು ಹೇಳಬಹುದು. ಅಂದರೆ ಭೂತದ ಚರಿತ್ರೆಯ ಒಳಗಡೆ ಹೋದಾಗಲೇ ನಾವು ಇಂದಿನ ಸ್ಥಿತಿಯನ್ನು ನಿರ್ವಚಿಸಲು ಸಾಧ್ಯ. ಮುಂದಿನ ಭವಿಷ್ಯವನ್ನು ಕಟ್ಟಲು ಸಾಧ್ಯ ವೆಂದು ಹೇಳಬಹುದು. ಮೂಲ ಆಕರಗಳನ್ನು, ಸಾಹಿತ್ಯಿಕ ಕೃತಿಗಳನ್ನು ಪರಿಕರಗಳನ್ನಾಗಿ ತೆಗೆದುಕೊಂಡು ವರ್ತಮಾನವನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

''ಸಿಮೋನ್ ದಬೊವಾ'' ಹೇಳುವಂತೆ ಮಿಥ್‌ಗಳಲ್ಲಿ, ಚರಿತ್ರೆಗಳಲ್ಲಿ ಹೆಣ್ಣನ್ನು ಹುಡುಕಬೇಕೆಂದು ಹೇಳುತ್ತಾಳೆ. ಚರಿತ್ರೆ ಪುಟ ನೋಡಿದರೇ ಮೇಲ್ಜಾತಿ ಅನ್ನುದು ಹಳೇ ಪರಿಕಲ್ಪನೆಯಲಿಲ್ಲದೇ, ಮೇಲ್ವರ್ಗದ ಮಹಿಳೆಯ ಚರ್ಚೆಗಳು ಬರುತ್ತವೆ. ಎಂದು ಹೇಳಬಹುದು.

ಮಹಿಳೆಯ ಜೀವನದ ವಸ್ತು ಸ್ಥಿತಿಯನ್ನು ಶೋಧಿಸುವ ಮಹಿಳಾ ಚರಿತ್ರೆಯು ಸಾಮಾಜಿಕ ಚರಿತ್ರೆಕಾರರು ನಡೆಸುವ ಅಧ್ಯಯನದ ಜೊತೆ ಜೊತೆಗೆ ಸಾಗುತ್ತಿದೆ ಎನ್ನುವುದು ನಿಜವಾದರೂ ಮಹಿಳಾ ಚರಿತ್ರೆಕಾರರ ದೃಷ್ಟಿಕೋನ ಉಳಿದವರಿಗಿಂತ ಭಿನ್ನ. ಮಹಿಳಾ ಚರಿತ್ರೆ ಸಾಂಪ್ರದಾಯಿಕ ಚರಿತ್ರೆ ವಿಧಾನಗಳಿಗೆ ಸವಾಲೆಸೆಯುತ್ತಾ ಕೆಲವು ಪ್ರಶ್ನೆಗಳ ವಾಖ್ಯಾನವನ್ನೇ ಪುನರಚಿಸಬೇಕಾಗುತ್ತದೆ. ಸಮಾಜವನ್ನು ಕುರಿತು, ಖಾಸಗಿ ಮತ್ತು ಸಾರ್ವಜನಿಕ ಎಂಬ

ಸಾಂಪ್ರದಾಯಿಕ ವಿಂಗಡನೆಯನ್ನೆ ಇದು ಪ್ರಶ್ನಿಸುತ್ತಿದೆ. ಮಹಿಳೆಯನ್ನು ಕುಟುಂಬಕ್ಕೆ ಗೃಹಕೃತ್ಯದ ಚಾಕರಿಗೆ ಕಟ್ಟಿಹಾಕಿರುದರಿಂದ ದುಡಿಯುವ ಜಾಗಕ್ಕೆ ಹೊರತೆನಿಸಿಕೊಳ್ಳುವ ಮಾದರಿಯೊಂದಾದರೇ, ದುಡಿಯುವ ಜಗತ್ತಿನಲ್ಲಿ ಹಣಕಾಸು ವ್ಯವಹಾರದ ಜಗತ್ತಿನಲ್ಲಿ, ಸಾಮ್ರಾಜ್ಯಗಳ ಆಕ್ರಮಣದಲ್ಲಿ ಇರುವ ಪುರುಷ ಸ್ಪರ್ಧೆಯ ಮಾದರಿ ಮತ್ತೊಂದಾಗಿದೆ.

ಏನೇ ಆದರೂ ಚರಿತ್ರೆಯನ್ನು ಮರುಸೃಷ್ಟಿಸುವುದು ಅವಶ್ಯಕವಿದೆ. ಅದಕ್ಕಾಗಿ ಹಿಂದಿನ ಚರಿತ್ರೆಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುವುದು ಅವಶ್ಯಕವಾಗಿದೆ. ಯಾವುದೇ ಮಾಹಿತಿಗೆ ಹೋದರೂ ನನಗೆ ಬ್ರಾಹ್ಮಣ ಮಹಿಳೆ ಎಂದು ಉಲ್ಲೇಖಿಸದಿರುವುದರಿಂದ ನನ್ನ ಈ ಅಧ್ಯಯನದಲ್ಲಿ ಆ ಉಲ್ಲೇಖಗಳು ಮೇಲ್ವರ್ಗದ ಮಹಿಳೆಯದೇ ಆಗಿವೆ. ಎಂದು ಭಾವಿಸಿದ್ದೇನೆ. ಈ ಕಲ್ಪನೆಯನ್ನಿಟ್ಟುಕೊಂಡು ಕೆಳಗಿನ ವಿಷಯಗಳನ್ನು ನೋಡೋಣ.

೩.೧. ವೇದಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆ

ಮನುಕುಲಕ್ಕೆ ಇಂಡೋ ಆರ್ಯನ್ನರ ಸಂಸ್ಕೃತಿಯ ಪ್ರಪ್ರಥಮ ಕೊಡುಗೆ ವೇದಗಳು. ವೇದಗಳು ರಚನೆಯಾದ ಯುಗವನ್ನೇ ವೈದಿಕ ಯುಗ ಎಂದು ಇತಿಹಾಸಕಾರರು ಕರೆಯುತ್ತಾರೆ. ವೇದಗಳ ಕಾಲಮಾನದ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಬಾರದಿದ್ದರೂ ಕ್ರಿ.ಪೂ. ೨೫೦೦ರಿಂದ ಕ್ರಿ.ಪೂ. ೧೫೦೦ರ ವರೆಗೆ ಎಂದು ಸಾಮಾನ್ಯವಾಗಿ ಬಹಳಷ್ಟು ವಿಚಾರವಾದಿಗಳು ಒಪ್ಪಿದಂತಾಗಿದೆ. ವೇದ ಎಂಬ ಪದವು ವಿದ್ ಎಂಬ ಧಾತುವಿನಿಂದ ಮೂಡಿದ್ದು, ಜ್ಞಾನ ಎಂಬ ಅರ್ಥವನ್ನು ಹೊಂದಿದೆ. ವೇದ ಎಂದರೇ ಜ್ಞಾನ, ಆದರೆ ಈ ಶಬ್ದವನ್ನು ಬರಹಕ್ಕೆ ಅನ್ವಯಿಸಿದಾಗ ಅದು ಜ್ಞಾನ ಸಾಹಿತ್ಯ ವೆನ್ನಿಸಿಕೊಳ್ಳುವುದು. ವೇದ ಸಾಹಿತ್ಯವು ಹಿಂದೂಗಳಿಗೆ ಪವಿತ್ರವೂ ಪ್ರಮುಖವೂ ಆಗಿದೆ ಉಳಿದೆಲ್ಲಾ ಪವಿತ್ರ ಗ್ರಂಥಗಳು (ಧರ್ಮಶಾಸ್ತ್ರ ಮಹಾಕಾವ್ಯ, ಪುರಾಣ ಆಗಮಗಳು ಹಾಗೂ ದರ್ಶನಗಳು) ವೇದಗಳನ್ನು ಆಶ್ರಯಿಸಿವೆ.

ಇವುಗಳು ಶೃತಿಗಳೆಂದು ಕರೆಯಲಾಗುತ್ತದೆ. ಶೃತಿಗಳು ಎಂದರೇ ಕೇಳಿಸಿಕೊಂಡದ್ದು ಎಂಬ ಅರ್ಥವನ್ನು ಹೊಂದಿವೆ. ಯಾವುದೇ ಅಪೌರುಷೇಯಗಳೆಂದು ಕರೆಯಲಾಗುತ್ತದೆ. ಇವುಗಳು ಆಗಿನ ಕಾಲದ ಸಮಾಜದ ಮೇಲೆ ಮುಖ್ಯವಾಗಿ ಆರ್ಯರ ರೀತಿ ನೀತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಕಾಲದಲ್ಲಿ ಬೇರೆ ಬೇರೆ ದೇಶಗಳಿಗಿಂತ ಭಿನ್ನವಾದ ಸ್ಥಾನಮಾನವನ್ನು ಭಾರತೀಯ ಸ್ತ್ರೀಯರು ಪಡೆದದ್ದೂ ನಮಗೆ ಕಂಡು ಬರುತ್ತದೆ. ವಿವಿಧ ಕಾಲಘಟ್ಟಗಳಲ್ಲಿ ಋಗ್ವೇದ, ಯಜುರ್ವೇದ, ಸಾಮುವೇದ, ಅಥರ್ವಣವೇದ ಇವುಗಳು ಒಂದನ್ನೊಂದು ಮತ್ತೆ ಸಂಹಿತೆ, ಬ್ರಾಹ್ಮಣ, ಅರಣ್ಯಕ, ಉಪನಿಷತ್ತುಗಳೆಂದು ನಾಲ್ಕು ಭಾಗಳನ್ನಾಗಿ ವಿಂಗಡಿಸಲಾಗಿದೆ. ''ಋಗ್ವೇದದ ಕಾಲಘಟ್ಟವು ಆರ್ಯರ ಆಕ್ರಮಣದ ರಾಜ್ಯ ವಿಸ್ತರಣೆಯ ವಸಾಹತುಕಾಲವಾಗಿತ್ತು. ಆಗಿನ ಅವರ ಘೋಷಣೆ ಒಂದೇ ಚರೈವೇತಿ (ಮುನ್ನುಗ್ಗಿ) ಎಂದು. ವರ್ಗಗಳು ಅಥವಾ ಜಾತಿಗಳು ಕಾಣಿಸಿಕೊಳ್ಳುವ ನಿರ್ಬಧ ಅದಾಗಿರಲಿಲ್ಲ. ಸಾಮೂಹಿಕ ಬದುಕು ಮುಖ್ಯವಾಗಿತ್ತು. ಒಟ್ಟಾಗಿ ನಡೆಯಿರಿ ಕಲೆತು ಮಾತನಾಡಿ, ನಿಮ್ಮ ಮನಸ್ಸು ಒಂದಾಗಿರಲಿ, ಪ್ರಾರ್ಥನೆಗಳು ಸಾಮೂಹಿಕವಾಗಿರಲಿ. ನಮ್ಮ ಅಭಿಪ್ಸೆಯು ಎಲ್ಲರನ್ನು ಒಳಗೊಳ್ಳುವಂತಾಗಲಿ. ನಮ್ಮೆಲ್ಲರ ಧ್ಯೇಯವು ಒಂದೇ ಆಗಿರಲಿ ನಮ್ಮ ಚಿಂತನೆ ಒಂದೇ ಆಗಿರಲಿ, ನಮ್ಮಲ್ಲಿ ಪೂರ್ಣತರದ ಏಕತೆ ಬೇಕಾಗಿದೆ. ಎನ್ನುವ ಉದ್ದಿಪಿತ

ಮಾತುಗಳು ಕಂಡುಬರುತ್ತವೆ.''[೧] ಈ ಮಾತುಗಳಿಂದ ಆ ಕಾಲದ ಸಾಮಾಜಿಕ ವ್ಯವಸ್ಥೆ ಅಲ್ಲಿನ ಆಚಾರ-ವಿಚಾರಗಳು ಸರಳವಾಗಿದ್ದವು ಎನ್ನುವುದನ್ನು ತೋರಿಸುತ್ತದೆ.

''ವೇದಗಳ ಯುಗವು ಮಹಿಳೆಯರ ಪಾಲಿಗೆ ಸುವರ್ಣ ಯುಗವಾಗಿ, ಸ್ವಾತಂತ್ರ್ಯ ಯುಗವಾಗಿತ್ತು. ವೇದಕಾಲ್ಲಿ ಮಹಿಳೆಯರನ್ನು ಜಯ, ಜನನಿ ಮತ್ತು ಪತ್ನಿ ಎಂದು ಪರಿಗಣಿಸಲಾಗುತ್ತಿತ್ತು. ಅಂದರೆ ಪತಿಯ ಪ್ರೇಮದ ಪಾಲುಗಾರ್ತಿಜಯ ಅವನಮಕ್ಕಳ ತಾಯಿ ಜನನಿ ಹಾಗೂ ಯಜ್ಞಗಳನ್ನು ಮಾಡುವಲ್ಲಿ ಸಮಭಾಗಿ ಪತ್ನಿ ಎಂಬ ಭಾವವು ಕಾಣಸಿಗುತ್ತದೆ.''[೨] ''ಧಾರ್ಮಿಕವಾಗಿ ಮಹಿಳೆಯ ಪಾತ್ರ ಗಣನೀಯವಾದುದೂ, ಗಮನಾರ್ಹವಾದುದೂ ಆಗಿತ್ತು. ಬದುಕಿನ ಅತಿಮುಖ್ಯ ಧಾರ್ಮಿಕಾಚರಣೆಗಳನ್ನು ನಿರ್ವಹಿಸುವಲ್ಲಿ ಮಹಿಳೆಯರು ಪುರುಷನಿಗೆ ನೆರವಾಗುತ್ತಿದ್ದರು. ಯಜ್ಞ ಕ್ರೀಯೆಯಲ್ಲಿ ಸ್ತ್ರೀ ಸಕ್ರೀಯವಾಗಿ ಭಾಗವಹಿಸುತ್ತಿದ್ದಳು. ಸಾಮಗಳನ್ನು ಹಾಡುವುದು. ಬಲಿಪಶುವನ್ನು ಶುದ್ಧೀಕರಿಸುವುದು, ಯಜ್ಞ ಪೀಠ ನಿರ್ಮಾಣ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಳು. ಪತ್ನಿಯನ್ನು ಜೊತೆಯಲ್ಲಿರಿಸಿಕೊಂಡೇ ಯಜ್ಞಯಾಗಾದಿಗಳಲ್ಲಿ ಗಂಡು ಭಾಗವಹಿಸಬೇಕಾಗಿತ್ತು. ಪತ್ನಿಯ ಸಂಗಡ ಯಜ್ಞ ಯಾಗಾದಿಗಳನ್ನು ಮಾಡಿದರೇ ದೇವತೆಗಳು ಪ್ರನ್ನರಾಗುವರೆಂದು ಋಗ್ವೇದದಲ್ಲಿ ಹೇಳಿದೆ. ಯಜ್ಞ ವೇದಿಕೆಯನ್ನು ಹತ್ತಬೇಕಾದರೇ ಗಂಡ ತನ್ನ ಪತ್ನಿಯ ಅಪ್ಪಣೆ ಕೇಳಬೇಕಿತ್ತು. ದೇವರೇ ಗಂಡ, ಹೆಂಡತಿಯರಿಬ್ಬರೂ ಒಂದೇ ಮನಸ್ಸಿನಿಂದ ಅರ್ಪಿಸಿದ ಈ ಯಜ್ಞದ ಹವಿಸ್ಸು ಅವರಿಗೆ ಒಳ್ಳೆಯದನ್ನು ಮಾಡಲಿ ಎಂಬ ಮಂತ್ರವು ಋಗ್ವೇದದಲ್ಲಿ ಕಂಡು ಬರುತ್ತದೆ.''[೩]

'ವೇದ ಕಾಲದಲ್ಲಿ ಜನರು ಸಾಮಾನ್ಯವಾಗಿ ಮಗಳ ಜನನಕ್ಕಿಂತ, ಮಗನ ಜನನವನ್ನೇ ಹೆಚ್ಚು ಬಯಸುತ್ತಿದ್ದರು. ಜನಿಸುವ ಮಗುವು ಗಂಡಾಗಲೆಂದು ಮಾಡಬಹುದಾದ ಎಷ್ಟೋವಿಧಿಗಳಿವೆ.'[೪]

ಉದಾಹರಣೆ: ಪುಂಸವನ ಸಂಸ್ಕಾರ ಗಂಡು ಮಗುವನ್ನು ಪಡೆಯುದಕ್ಕಾಗಿ ವೇದಗಳು ಒಂದು ವಿಶೇಷ ಆಚರಣೆಗಳನ್ನು ಗೊತ್ತು ಪಡಿಸಿದ್ದು ಇದನ್ನು ಮೂರು ತಿಂಗಳ ಗರ್ಭಿಣಿ ಇದ್ದಾಗ ಮಾಡುವ ಒಂದು ಸಂಸ್ಕಾರವು ಆಚರಣೆಯಲ್ಲಿತ್ತು.

''ಪ್ರಜಾಪತಿಯೇ ನೀನು ಈ ಗರ್ಭವನ್ನು ಸೃಷ್ಟಿಸಿದ್ದಿಯೇ ಈ ಗರ್ಭದಿಂದ ಗಂಡು ಸಂತಾನ ಜನಿಸಲಿ. ಹೆಣ್ಣು ಸಂತಾನ ಇನ್ನೆಲ್ಲಿಯಾದರೂ ಆಗಲಿ.''[೫] ''ಪತಿಯೇ ಹುಟ್ಟುವ ಗಂಡು ಮಗುವನ್ನು ಕಾಪಾಡು. ಅವನನ್ನು ಮಹಿಳೆಯನ್ನಾಗಿ ಮಾಡಬೇಡ.''[೬] ಆದರೂ ಕೂಡ ಹೆಣ್ಣು ಶಿಶುವಿನ ಜನನವನ್ನು ಅವರೆಂದೂ ಅಸಡ್ಡೆಯಿಂದ ಕಾಣಲಿಲ್ಲ. ಅಲ್ಲದೇ ಸುಸಂಸ್ಕೃತ ಪಿತೃಗಳು ಹೆಣ್ಣು ಮಕ್ಕಳ ಜನನವನ್ನು ಗಂಡು ಮಕ್ಕಳ ಜನನದಷ್ಟೆ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದರು.

ವಿನಯಶೀಲ ಹಾಗೂ ವಿಧೇಯಳಾದ ಹೆಣ್ಣು ಮಗಳು ಮನೆತನಕ್ಕೆ ಗೌರವವೆಂದು ತಿಳಿಯಲಾಗುತ್ತಿತ್ತು. ಈ ರೀತಿಯ ಗುಣಗಳನ್ನು ಹೇರುವ ಮೂಲಕ ಅವಳಿಗೊಂದು ಸಿದ್ದ ಮಾದರಿಯನ್ನು ಸೃಷ್ಟಿಸಿ ಬಂಧನಕ್ಕೆ ಒಳಪಡಿಸಲಾಗುತ್ತಿತ್ತು. ಹೆಣ್ಣು ಶಿಶುಹತ್ಯೆಯ ಆಚರಣೆಯ ಬಗ್ಗೆ ಯಾವ ಆಧಾರಗಳೂ ಇರಲಿಲ್ಲವಾದರೂ ಗಂಡು ಮಗುವಿನ ಜನನಕ್ಕಾಗಿ ವೃತಾಚರಣೆಗಳನ್ನು ಮಾಡುವುದು ಇದರ ಅರ್ಥವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ,

ಆ ಸೂಕ್ಷ್ಮದಲ್ಲಿ ಅಡಗಿರುವ ನೈಜಅಭಿವ್ಯಕ್ತಿ, ತಿಳಿದು ಬರುತ್ತದೆ. ಕುಟುಂಬದ ಸರ್ವ ಸದಸ್ಯರೂ ಅವಳನ್ನು ದಯೇ, ಪ್ರೀತಿವಾತ್ಸಲ್ಯಗಳಿಂದ ಪೋಷಿಸುತ್ತಿದ್ದರು. ತಂದೆ ತಾಯಿಗಳು ಹೆಚ್ಚು ಮುದ್ದುಮಾಡಿ ಹಠಮಾರಿಗಳಾದ ಹೆಣ್ಣು ಮಕ್ಕಳ ಕೆಲವೊಂದು ಉದಾಹಣೆಗಳು ಸಂಸ್ಕೃತಸಾಹಿತ್ಯದಲ್ಲಿ ದೊರೆಯುತ್ತವೆ. ಕುಮಾರಿಯರೆಂದರೇ ಶುಭಲಕ್ಷಣ ವೆಂದೂ, ಅವರಲ್ಲಿ ಲಕ್ಷ್ಮಿ ವಾಸಿಸುವಳೆಂದೂ ತಿಳಿದಿದ್ದರು. ಇದು ಅವಳನ್ನು ದೈವತ್ವಕ್ಕೆ ಏರಿಸಿ ಅವಳನ್ನು ನಿಯಂತ್ರಣದಲ್ಲಿಡುವ ವಿಧಾನದ ವೇದಲ ಹೆಜ್ಜೆಯೆಂದರೇ ತಪ್ಪಾಗಲಾರದು. ಮಕ್ಕಳಿಗೆ ಯೋಗ್ಯ ಶಿಕ್ಷಣವನ್ನು ಕೊಡುವುದು. ನಂತರ ಸಂಸಾರವನ್ನು ಸರಿದೂಗಿಸಿಕೊಂಡು ಹೋಗಲು ಅವರನ್ನು ಅಣಿಗೊಳಿಸುವುದು. ತಂದೆ ತಾಯಿಗಳ ಕರ್ತವ್ಯವಾಗಿತ್ತು. ಹೆಣ್ಣು ಗಂಡು ಎಂಬ ಭೇಧವಿಲ್ಲದೇ ತಂದೆ ತಾಯಿಗಳು ಈ ಕರ್ತವ್ಯವನ್ನು ಪಾಲಿಸುತ್ತಿದ್ದರು.''[೭]

''ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಉಪನಯನವನ್ನು ಮಾಡಲಾಗುತ್ತಿತ್ತು. ಉಪನಯನದ ನಂತರ ವಿವಾಹದ ವರೆಗೆ ಮಾತ್ರ ಶಿಕ್ಷಣವು ಲಭ್ಯವಾಗುತ್ತಿತ್ತು. ಶಿಕ್ಷಣದ ಜೊತೆಗೆ ಸಂಯಮ ಜೀವನವೂ ಪ್ರಾರಂಭವಾಗುತ್ತಿತ್ತು. ವಿವಾಹದಲ್ಲಿ ಸರಿಯಾದ ಸಂಗಾತಿಯನ್ನು ದೊರಕಿಸಲು ಇವೆರೆಡೂ ಅವಶ್ಯವಾಗಿದ್ದವು.''[೮] ಸಾಮಾನ್ಯ ಕನ್ಯೆಯರು ತಮ್ಮ ತಮ್ಮ ಕುಟುಂಭದಲ್ಲಿಯೇ ಶಿಕ್ಷಣವನ್ನು ಪಡೆಯುತ್ತಿದ್ದರು. ವಿಶೇಷವಾದ ಜ್ಞಾನವನ್ನು ಪಡೆಯಲಿಚ್ಛಿಸುವವರು ಮಾತ್ರ ಶ್ರೇಷ್ಠ ಗುರುಗಳನ್ನು ಹುಡುಕಿಕೊಂಡು ಹೋಗಿ ಅವರ ಸಾನಿಧ್ಯದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದರು. ಸುಶಿಕ್ಷಿತ, ಪ್ರಬುದ್ಧ ಕನ್ಯೆಯರು ಕುಟುಂಬದಲ್ಲಿ ಎಷ್ಟೋ ಕಾರ್ಯಕಲಾಪಗಳನ್ನು ಕೈಗೊಳ್ಳುತ್ತಿದ್ದರು. ಅತಿಥಿ ಸತ್ಕಾರವು ಅವರ ವಿಶೇಷವಾದ ಕರ್ತವ್ಯವಾಗಿರುತ್ತಿತ್ತು. ಇವರಿಗೆ ಸಂಗೀತ ಮತ್ತು ನೃತ್ಯಗಳು ಮನೋರಂಜನೆಯ ಪ್ರಮುಖ ಸಾಧನಗಳಾಗಿದ್ದವು. ನಾಟ್ಯ ಪ್ರದರ್ಶನಗಳಿಗೂ ಕೂಡ ಅವರು ಹೋಗುತ್ತಿದ್ದರೆಂದು ಕಂಡು ಬರುತ್ತದೆ.

ಪ್ರಗತಿಪರ ಕುಟುಂಬಗಳಲ್ಲಿ ಚಂಡಿನಾಟವು ಕನ್ಯೆಯರಿಗೆ ಹೊರಾಂಗಣ ಕ್ರೀಡೆಯಾಗಿತ್ತು. ಅವರು ಕಣ್ಣು ಮುಚ್ಚಾಲೆ ಆಟವನ್ನು ಆಡುತ್ತಿದ್ದರೆಂದು ತಿಳಿದು ಬರುತ್ತದೆ. ಕೆಲವೇ ಕೆಲವು ಕ್ರೀಡೆಗಳಿಗೆ ಹೆಣ್ಣು ಮಕ್ಕಳು ಸೀಮಿತಗೊಂಡಿದ್ದರು. ಕಲೆಗಳು ಮಹಿಳೆಯರಿಗೆ ಸಾಮಾನ್ಯವಾಗಿ ಕುಟುಂಬ ಅವಶ್ಯಕ ಕಲೆಗಳು ಆಹಾರ ತಯಾರಿಕೆ, ರಂಗೋಲಿ ಬಿಡುವುದು ಮುಂತಾದವುಗಳನ್ನು ಅವರು ಅನಿವಾರ್ಯವಾಗಿ ಕಲಿಯ ಬೇಕಿತ್ತು. ನೃತ್ಯ ಸಂಗೀತಗಳು ನಾಲ್ಕು ಗೋಡೆಯ ಒಳಗಡೆ ಮಾಡಬಹುದುದಂತಹವುಗಳಾಗಿದ್ದರಿಂದ ಅಂತಹ ಕಲೆಗಳಿಗೆ ಹೆಣ್ಣನ್ನು ಸೀಮಿತಗೊಳಿಸಲಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

''ಋಗ್ವೇದ ಕಾಲದಿಂದಲೂ ವಿವಾಹ ಸಂಸ್ಥೆಯು ಭದ್ರವಾದ ತಳಹದಿಯ ಮೇಲೆ ಬೆಳೆದು ನಿಂತದ್ದು ನಮಗೆ ಕಂಡು ಬರುತ್ತದೆ. ವಿವಾಹವು ವ್ಯಕ್ತಿಯ ಜೀವನಕ್ಕೆ ಒಂದು ಹೊಸ ತಿರುವನ್ನು ಕೊಟ್ಟು, ಭಿನ್ನ ತರಹದ ಕರ್ತವ್ಯವನ್ನು, ಹೊಣೆಗಾರಿಕೆಯನ್ನು ವ್ಯಕ್ತಿಯ ಮೇಲೆ ಹೇರುತ್ತಿತ್ತು. ವಿವಾಹಿತರಾದ ಸ್ತ್ರೀ ಪುರುಷರಿಬ್ಬರೂ ಗೃಹಸ್ಥಾಶ್ರಮವನ್ನು ಪ್ರವೇಶಿಸಿ ತಮ್ಮ ವಿವಾಹಕ್ಕೆ ಸಾಕ್ಷಿಯಾಗಿ ನಿಂತಂಥಹ ಪವಿತ್ರವಾದ ಅಗ್ನಿಯ ಸಂರಕ್ಷಣೆಯನ್ನು ಮಾಡುವುದು ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ನರಯಜ್ಞ, ಮತ್ತು ಭೂತಯಜ್ಞಗಳೆಂಬ ಪಂಚಯಜ್ಞಗಳನ್ನು

ಕೈಗೊಳ್ಳುವುದು. ಅರ್ಥ ಮತ್ತು ಕಾಮ ಎಂಬ ಪುರುಷಾರ್ಥಗಳ ಸಂತೃಪ್ತಿಯನ್ನು ಪಡಿಯುದರ ಮುಖಾಂತರ ಕುಟುಂಬದ ಸದಸ್ಯರನ್ನು ಅಷ್ಟೆ ಅಲ್ಲದೇ ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸಾ ಶ್ರಮಗಳಲ್ಲಿರುವ ವ್ಯಕ್ತಿಗಳನ್ನು ಪೋಷಿಸುವುದು. ಅರದ ಜೊತೆಗೆ ಸಮಾಜದಲ್ಲಿ ಅಸಾಹಯಕರಿಗೆ ಎಲ್ಲ ತರಹ ಸಹಾಯವನ್ನು ಒದಗಿಸುವುದು, ಗೃಹಸ್ಥನ ಕರ್ತವ್ಯ ನೇರವೇರಿಸುವಲ್ಲಿ ಸ್ತ್ರೀಯು ಪುರುಷನಿಗೆ ಸಮಭಾಗಿಯಾಗಿ ಸೇವೆಸಲ್ಲಿಸಬೇಕಿತ್ತು. ಇದು ಅವಳ ಅಧೀನತೆಯನ್ನು ಸ್ಪಷ್ಟಪಡಿಸುತ್ತದೆ. ವಿವಾಹವು ಸಾಮಾನ್ಯವಾಗಿ ಕಡ್ಡಾಯವಾಗಿದ್ದರೂ ಕೆಲವೊಂದು ಸ್ತ್ರೀಯರು ಅವಿವಾಹಿತರಾಗಿ ಉಳಿದು ತಮ್ಮ ತಾಯಿ ತಂದೆಗಳ ಮನೆಯಲ್ಲಿಯೇ ಜೀವನ ಕಳೆಯುತ್ತಿದಂತಹ ಉದಾಹರಣೆಗಳು ವೇದಕಾಲದ ಸಾಹಿತ್ಯದಲ್ಲಿ ಕಂಡುಬರುತ್ತವೆ. ಕೆಲವು ಸಲ ಸ್ತ್ರೀಯರಲ್ಲಿಯ ಕುಂದುಕೊರತೆಯೇ ಅವರು ಅವಿವಾಹಿತರಾಗಿ ಉಳಿಯಲು ಕಾರಣವಾಗಿರುತ್ತಿತ್ತು.''[೯] ಒಟ್ಟಿನಲ್ಲಿ ವಿವಾಹವಾದರೂ, ಆಗದೇ ಹೋದರೂ ಗಂಡಸಿಗೆ ಆಧೀನವಾಗಿ ಬದುಕು ಸವೆಸುವುದು ಅನಿವಾರ್ಯವಾಗಿತ್ತು. ಅಷ್ಟೇ ಅಲ್ಲದೆ ಇಡೀ ಪುರುಷ ಕುಲಕ್ಕೆ ಅಧೀನವಾಗಿರಬೇಕಾಗಿರುವುದು ಕಂಡುಬರುತ್ತದೆ. ಸಹಭಾಗಿತ್ವ ಅವನ ಕರ್ಮಗಳಲ್ಲಿ ಮಾತ್ರ ಕಂಡುಬರುತ್ತದೆ. ಅವಳ ಕರ್ಮದಲ್ಲಿ ಅವನ ಸಹಬಾಗಿತ್ವ ಮಾತನ್ನು ಎತ್ತದಿರುವುದು ವಿಷಾದನೀಯ. ''ವಿವಾಹವನ್ನು ಅಗ್ನಿಸಾಕ್ಷಿಯಾಗಿ ಆಚರಿಸುತ್ತಿದ್ದರು. ಮತ್ತು ವಧುವನ್ನು ಅಗ್ನಿಕುಂಡದ ಸುತ್ತ ಕೈಹಿಡಿದು ನಡೆಸಲಾಗುತ್ತಿತ್ತು ಎಂಬುದನ್ನು ಸೂಚಿಸಲು ಯಾವ ಆಧಾರಗಳೂ ಇಲ್ಲ.''[೧೦]

ಮ್ಯಾಕ್ಸ್‌ಮಲ್ಲರ ಪ್ರಕಾರ ವೇದಕಾಲದಲ್ಲಿ ಎರೆಡು ಬಗೆಯ ಮಡದಿಯರು ಇದ್ದಂತೆ ಕಾಣುತ್ತದೆ.

೧. ಗೃಹಕೃತ್ಯಗಳನ್ನು ನಿರ್ವಹಿಸುವ ಮನೆಯೊಡತಿಯೊಬ್ಬಳು

೨. ಸಾರ್ವಜನಿಕ ವ್ಯವಹಾರಗಳಲ್ಲಿ ಸಭಾಕಾರ್ಯಕಲಾಪಗಳಲ್ಲಿ ಭಾಗವಹಿಸುವವಳು

ಸಮಾಜದ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳಲ್ಲೂ ಮಹಿಳೆಯರು ಭಾಗವಹಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಋಗ್ವೇದದ ಕೆಲವು ಮಂತ್ರಗಳನ್ನು ರಚಿಸಿದವರು ಮಹಿಳೆಯರಾಗಿದ್ದಾರೆ.

ಏನೇ ಆದರೂ ಋಗ್ವೇದ ಕಾಲಕ್ಕಾಗಲೇ ಸ್ತ್ರೀಯರ ಸ್ಥಾನಮಾನಗಳು ಸಾಕಷ್ಟು ಅಧೋಗತಿಯನ್ನು ತಲುಪಿದಂತೆ ಕಾಣುತ್ತದೆ. ಅನಂತರದ ಕಾಲದಲ್ಲಿ ಈ ಅಧೋಗತಿ ಇನ್ನಷ್ಟು ಮುಂದುವರೆಯಿತು. ವೇದಪೂರ್ವಕಾಲದಲ್ಲಿ ಮದುವೆಯು ಧಾರ್ಮಿಕ ವಿಧಿಯಲ್ಲದಿದ್ದಾಗ ಮಹಿಳೆಯರಿಗೆ ಲೈಂಗಿಕ ವಿಷಯದಲ್ಲಿ ಪುರುಷರಿಗಿದ್ದಷ್ಟೇ ಸ್ವಾತಂತ್ರ್ಯವಿತ್ತು. ಅದು ಮಹಾಭಾರತದ ಭೀಷ್ಮನ ಒಂದು ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ''ಕೃತಯುಗದಲ್ಲಿ ಸ್ತ್ರೀ ಪುರುಷರ ಸಮಾಗಮವು ಮನಸೋ ಇಚ್ಛೆ ನಡೆಯುತ್ತಿತ್ತು. ತಾಯಿ-ಮಗ, ತಂದೆ-ಮಗಳು, ಅಣ್ಣ-ತಂಗಿ ಸಂಬಂಧಗಳಿಗೆ ನಿಷೇಧವಿರಲಿಲ್ಲ. ತ್ರೇತಾಯುಗದಲ್ಲಿ ಅನ್ಯೋನ್ಯ ಸ್ಪರ್ಶದಿಂದ ಸಮಾಗಮವು ಏರ್ಪಡುತ್ತಿತ್ತು (ಮುಂದೆ ರೂಢಿಗೆ ಬಂದ ಪ್ರಾಣಿಗ್ರಹಣ ಪದ್ಧತಿಗೆ ಇದು ನಾಂದಿಯಾಗಿರಬೇಕು) ದ್ವಾಪರ ಯುಗದಲ್ಲಿ ಮಿಥುನಾವಸ್ಥೆ ಅಂದರೆ ಗಂಡು ಹೆಣ್ಣು ಜೋಡಿ ಕೆಲಕಾಲ ಜೊತೆಗೂಡಿರುವ ಸಂಪ್ರದಾಯ ರೂಢಿಗೆ ಬಂತು. ಕೃತ ಮತ್ತು ತ್ರೇತಾಯುಗದಲ್ಲಿ ಎಲ್ಲ ಮಕ್ಕಳು ಇಡೀ ಸಮಾಜಕ್ಕೆ ಸೇರಿದವರಾಗಿರುತ್ತಿದ್ದರು. ದ್ವಾಪರ ಯುಗದ ನಂತರ ಮಕ್ಕಳ ತಂದೆ ತಾಯಿ ಇಂಥವರೇ ಎಂದು ಖಚಿತವಾಯಿತು. ಕಲಿಯುಗದಲ್ಲಿ ಸ್ತ್ರೀ ಪುರುಷರ ಜೋಡಿ ಸ್ಥಿರಗೊಂಡಿತು.''[೧೧]

ವೈದಿಕ ಧರ್ಮ ಗ್ರಂಥಗಳಲ್ಲಿ ಒಂದೆರೆಡು ಕಡೆಗೆ ಮಾತ್ರ ವಿವಾಹ ವಿಚ್ಛೇದನದ ಉಲ್ಲೇಖವಿದ್ದರೂ ಆಚರಣೆಯಲ್ಲಿ ಇದ್ದುದು ಕಂಡುಬರುವುದಿಲ್ಲ. ಋಗ್ವೇದ ಕಾಲದ ನಂತರದ ವೈದಿಕ ಕಾಲಕ್ಕೆ ಬಂದರೆ ಮಹಿಳೆಯರು ಇನ್ನಷ್ಟ ಅಧೋಗತಿಗೆ ತಳ್ಳಲ್ಪಡುತ್ತಾರೆ. ಅದಕ್ಕೆ ಮುಖ್ಯ ಕಾರಣವೆಂದರೆ ಮರಣಾನಂತರ ಪಿತೃಗಳಿಗೆ ಸದ್ಗತಿಯ ಪ್ರಾಪ್ತಿಯ ಬಗ್ಗೆ ಕಲ್ಪನೆಗಳಲ್ಲಿ ಆದ ಬೆಳವಣಿಗೆ. ಗಂಡು ಸಂತತಿ ಮಾತ್ರ ಪಿತೃಗಳನ್ನು ನರಕದಿಂದ ಮುಕ್ತಗೊಳಿಸಬಲ್ಲದು. ಹೆಣ್ಣು ಮಕ್ಕಳು ಆಧ್ಯಾತ್ಮ ಕರ್ಮವನ್ನು ಮಾಡಲಾರರು ಎಂಬಕಲ್ಪನೆ ಬಲವಾಗಿ ಬೇರೂರಿದ್ದ ಕಾಲ ಅದು. ಈ ಭಾವನೆ ಬಲವಾಗಿ ಬೇರುಬಿಟ್ಟ ನಂತರ ಮಹಿಳೆಯರು ಕೇವಲ ಗಂಡು ಸಂತತಿಯನ್ನು ಉತ್ಪಾದಿಸಬಹುದಾದ ಹೆರಿಗೆಯ ಯಂತ್ರಗಳಾಗಿ ಮಾರ್ಪಟ್ಟರು ಅವರ ಈ ಕಾರ್ಯವನ್ನು ಮಾಡಲಾರದೇ ಹೋದರೇ ಅವರನ್ನು ನಿಷ್ಪ್ರಯೋಜಕರೆಂದು ಪರಗಣಿಸಲಾಗುತ್ತಿತ್ತು. ಈ ವಿಚಾರವನ್ನು ಅಥರ್ವವೇದದಲ್ಲಿ ಒತ್ತಿ ಹೇಳಲಾಗಿದೆ.

ಅನಂತರರದ ವೈದಿಕ ಸಾಹಿತ್ಯದಲ್ಲಿ ಒಂದು ಕುತೂಹಲಕರ ನಂಬಿಕೆ ಬೆಳೆಯಲಾರಂಭಿಸಿತು. ಅದೇನೆಂದರೆ ಭ್ರೂಣಗಳು ಮೂಲತಃ ಗಂಡಾಗಿರುತ್ತವೆ. ಹೆಣ್ಣು ಕೂಸಿನ ಜನನ ಅಂದರೆ ಅದು ಪಾಪಿಷ್ಟ ಭೂತಗಳ ದುಷ್ಕೃತ್ಯ. ಅವು ಗರ್ಭಬೆಳೆಯುವಾಗ ಅದನ್ನು ಹೆಣ್ಣು ಕೂಸಾಗಿ ಮಾರ್ಪಡಿಸಿವೆ. ಅಥರ್ವ ವೇದದ ಒಂದು ಪ್ರಾರ್ಥನೆ ಹೀಗಿದೆ ''ಓ ಪಿಂಗ, ಬೆಳೆಯುತ್ತಿರುವ ಕೂಸನ್ನು ಸಂರಕ್ಷಿಸು, ಆ ಗಂಡು ಭ್ರೂಣವನ್ನು ದುಷ್ಟ ಭೂತಗಳು ಹೆಣ್ಣಾಗಿ ಮಾರ್ಪಡಿಸದಿರಲಿ', ಇದಲ್ಲದೇ ಬ್ರಾಹ್ಮಣದಲ್ಲಿ ಗಂಡು ಕೂಸಿನ ಜನನಕ್ಕಾಗಿ ಸುಧೀರ್ಘವಾದ ಆಚರಣೆಗಳು ಬೆಳೆಯುತ್ತಾಹೋದವು. ತೈತ್ತೇರಿಯ ಬ್ರಾಹ್ಮಣದಲ್ಲಿ ಹುಣ್ಣಿಮೆ ಮತ್ತು ಅಮವಾಸ್ಯೆಯ ದಿನ ನಡೆಯುವ ಯಜ್ಞಗಳಲ್ಲಿ ಹೆಣ್ಣು ಮಗುವಿನ ಜನನವನ್ನು ತಡೆಗಟ್ಟಲು ಒಂದು ವಿಶೇಷ ಆಚರಣೆಯನ್ನು ಅಣಿಗೊಳಿಸಲಾಯಿತು. ಒಂದು 'ಕುಶ' ಗರಿಕೆ ಹುಲ್ಲಿನ ಎಸಳನ್ನು ಮೆಲಕ್ಕೆಸೆದು ಒಂದು ಮಂತ್ರ ಹೇಳುವುದು ಆ ಆಚರಣೆಯ ಮುಖ್ಯಭಾಗವಾಗಿದೆ. ಎಲ್ಲ ಮೇಲ್ಮುಖ ಚಲನೆಗಳು ಪುರುಷ ಸಂಬಂಧಿಯಾದವು ಮತ್ತು ಅದಕ್ಕೆ ವಿರುದ್ದ ಚಲನೆ ಸ್ತ್ರೀ ಸಂಬಂಧಿಯಾದದು ಎಂಬುದು ಅದರ ಸಂಕೇತ. ಬೃಹದಾರಣ್ಯಕದ ಆರನೇ ಅಧ್ಯಾಯದ ನಾಲ್ಕನೇ ಬ್ರಾಹ್ಮಣ ಪೂರ್ತಿಯಾಗಿ ಗಂಡು ಮಗುವಿಗಾಗಿ ನಡೆಸುವ ಆಚರಣೆಯಾಗಿದೆ. ಮಹಿಳೆಯನ್ನು ಯಜ್ಞದ ವೇದಿಯನ್ನಾಗಿಯೂ ಮುಂದಿನ ಜನ್ಮದಲ್ಲಿ ಸದ್ಗತಿಗಾಗಿ ಪಡೆಯುವ ಮಗನನ್ನು ಫಲವನ್ನಾಗಿಯೂ ಇಲ್ಲಿ ಕಲ್ಪಿಸಿಕೊಳ್ಳಲಾಗಿದೆ.''[೧೨]

ಐತೇರಿಯ ಬ್ರಾಹ್ಮಣದಲ್ಲಿ ರಾಜಾ ಹರಿಶ್ಚಂದ್ರನ ಕಥೆ ಬರುತ್ತದೆ. ಅವನಿಗೆ ನೂರು ಹೆಂಡತಿಯರಿದ್ದರೂ ಒಬ್ಬನೂ ಗಂಡು ಮಗನಿರುವುದಿಲ್ಲ ಅವನ ಆಸ್ಥಾನದ ಬ್ರಾಹ್ಮಣ ವಿದ್ವಾಂಸರು ಪುತ್ರನ ಪ್ರಾಮುಖ್ಯತೆಯನ್ನು ಅವನಿಗೆ ಹೀಗೆ ವಿವರಿಸಿ ಹೇಳುತ್ತಾರೆ. ''ತಂದೆಯ ಋಣ ಮಗನ ಮೇಲಿರುತ್ತದೆ. ತಂದೆಯು ಮಗನ ಮುಖನೋಡಿದ ಕೂಡಲೇ ಅಮರತ್ವವನ್ನು ಪಡೆದು ಋಣ ಮುಕ್ತನಾಗುತ್ತಾನೆ. ಮಗನು ಮುಕ್ತಿಯ ನಾವೆ, ಅತ್ಯುನ್ನತ ಸ್ವರ್ಗದ ಬೆಳಕು, ಹೆಂಡತಿಯು ಜೊತೆಗಾತಿ, ಆದರೆ ಮಗಳು ನೋವಿನ ಶೂಲೆ' ಋಗ್ವೇದ ಕಾಲದಿಂದಲೆ ಮಹಿಳೆಯರನ್ನು ಹೀನಾಯವಾಗಿ ಕಾಣುವ ಪ್ರವೃತ್ತಿ ಪ್ರಾರಂಭವಾಯಿತು. 'ಮಹಿಳೆಗೆ ಬುದ್ದಿಕಡಿಮೆ ಎಂದು ಇಂದ್ರನೇ ಹೇಳಿದ್ದಾನೆ. ಅವಳಿಗೆ ಬೋಧನೆ ಮಾಡಲು ಸಾಧ್ಯವಿಲ್ಲ.''[೧೩] ಇನ್ನೊಂದು ಕಡೆ ''ಮಹಿಳೆಯೊಡನೆ ಯಾವ ವಿಧದ ಸ್ನೇಹವೂ ಸಾಧ್ಯವಿಲ್ಲ. ಅವಳ ಹೃದಯ ಕಿರುಬನಿಗಿಂತಲೂ ಕ್ರೂರವಾದುದು' ಎಂದು ಒಬ್ಬ ಮಹಿಳೆಯಿಂದಲೇ (ಇಂದ್ರಾಣಿ)

ಹೇಳಿಸಲಾಗಿದೆ.''[೧೪] ಮತ್ತೊಂದು ಕಡೆ "ಶೂದ್ರರು, ನಾಯಿಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರೂ ಸೇರುತ್ತಾರೆ. ಸುಳ್ಳು ಪಾಪ ಮತ್ತು ಕತ್ತಲು ಅವರಲ್ಲಿ ಮನೆ ಮಾಡಿಕೊಂಡಿರುತ್ತವೆ.''[೧೫] ಮಹಿಳೆಯರು ಪ್ರಾಣಿಗಳೊಡನೆ ಸಂಬೋಗ ಮಾಡಲು ಬಯಸುತ್ತಾರೆ ಎಂದು ವೇದಗಳು ಸಾರುತ್ತವೆ. ಯಜುರ್ವೇದದಲ್ಲಿ ಅಂತಹ ಉಲ್ಲೇಖಗಳು ಅನೇಕ ಕಡೆ ಕಂಡು ಬರುತ್ತವೆ. ಯಜಮಾನನ ಹಿರಿಯ ಹೆಂಡತಿ ಯಜ್ಞಕುದುರೆಯೊಡನೆ ಸಂಬೋಗ ಮಾಡಿದಂತೆ ಒಂದು ಕಡೆ ಚಿತ್ರಿಸಲಾಗಿದೆ.

ಋಗ್ವೇದಕಾಲದಲ್ಲಿ ಬಾಲ್ಯವಿವಾಹರೂಢಿಯಲ್ಲಿರಲಿಲ್ಲ. ಹೆಣ್ಣಿಗೆ ಪ್ರಾಪ್ತವಯಸ್ಸು ಸಂಭವಿಸಿದಾಗಲೇ ವಿವಾಹ ವಿಧಿಗಳು ನಡೆಯುತ್ತಿದ್ದವು. ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳು ಸ್ವಾತಂತ್ರ್ಯವಿತ್ತು. ಇವರಲ್ಲಿ ಏಕಪತ್ನಿತ್ವ ಪದ್ಧತಿ ಇದ್ದು ಈ 'ಒಮ್ಮದುವೆ' ಆಚರಣೆಯು ಹೆಣ್ಣಿಗೆ ಉನ್ನತ ಸ್ಥಾನಮಾನಗಳನ್ನು ತಂದುಕೊಟ್ಟಿತು. ಸತಿಯಾಗಿ, ಕುಟುಂಬದ ಸಮಾಜದ ಆದರಕ್ಕೆ ಪಾತ್ರಳಾಗಿದ್ದಳು. ವಿವಾಹ ಸಂದರ್ಭದಲ್ಲಿ ವಧುವರರು ಹೊತ್ತಿಸಿದ ಅಗ್ನಿಯನ್ನು ಸದಾ ಆರದಂತೆ ನೋಡಿಕೊಳ್ಳುವುದು, ಪೂಜಿಸುವುದು ಇವರ ಕರ್ತವ್ಯವಾಗಿತ್ತು. ಮಧುವನ್ನು ಹರಸುವಾಗ 'ಎಂಟು ಜನ ಪುತ್ರರನ್ನು ಪಡೆ' 'ವೀರಮಾತೆ'ಯಾಗು ಎಂದು ಹರಸುತ್ತಿದ್ದರು ಬಹುಪತ್ನಿತ್ವ ಪದ್ಧತಿ ಅಷ್ಟಾಗಿ ಬೆಳೆದು ಬಂದಿರಲಿಲ್ಲವಾದರೂ ಅಲ್ಲಲ್ಲಿ ಅರಸುಮನೆತಗಳಲ್ಲಿ ಬಳಕೆಯಲ್ಲಿತ್ತು. ತಾಯಿಯಾಗಿ ಮಹಿಳೆಯ ಪಾತ್ರ ಅಸಾದಾರಣವಾದುದಾಗಿತ್ತು. ಋಗ್ವೇದದ ಪೃಧ್ವಿ, ಅದಿತಿ ಇವರುಗಳ ವರ್ಣನೆಯಲ್ಲಿ ತಾಯಿಯ ಸ್ವರೂಪ, ಮಹತ್ವ ಅಭಿವ್ಯಕ್ತಿಪಡೆದಿದೆ. ''ಭೂಮಿಯಲ್ಲಿರುವ ಅಂತರಿಕ್ಷದಲ್ಲಿರುವ ಪರ್ವತಗಳ ಮೇಘಗಳ ಭಾರವನ್ನು ಲೀಲೆಯಿಂದ ಧರಿಸಿದವಳು. ಅವುಗಳ ಘರ್ಣಣೆಯನ್ನು ತಾಳಿದವಳು ಅವಳೆ'' ಈ ಮಂತ್ರ ತಾಯ್ತನದ ಸಹನೆ, ಸಾಮರ್ಥ್ಯ, ಸ್ಥಿರತೆ ಇವುಗಳನ್ನು ಚೆನ್ನಾಗಿ ಬೆಂಬಲಿಸುತ್ತದೆ. ವೈದಿಕ ಋಷಿಗಳಿಗೆ ಅಂದು ತಮ್ಮ ವಿರೋಧಿಗಳಾದ ದಸ್ಯು, ಕಿರಾತ, ವ್ರಾತ್ಯ ಮೊದಲಾದ ಅನಾರ್ಯರನ್ನು ಹಿಮ್ಮೆಟ್ಟಿಸಲು ಜನಬಲದ ಅಗತ್ಯವಿತ್ತು. ಕಾರಣಜನಬಲ ವಂಶಾಭಿವೃದ್ಧಿಯನ್ನು ವಂಶ ಪ್ರತಿಷ್ಠೆಯನ್ನು ಉಳಿಸಲು ಆಕೆಯ ಸೃಷ್ಟಿ ಶಕ್ತಿಯನ್ನು ಸಹನೆ ಸಾಮರ್ಥ್ಯಗಳನ್ನು ಎಷ್ಟು ಹೊಗಳಿದರೂ ಕಡಿಮೆಯೇ ಅವರಿಗೆ.''[೧೬]

ಗಂಡ ಸತ್ತ ವಿಧವೆಯರ ಬದುಕು ಅಸಹನೀಯವಾದುದಾಗಿರಲಿಲ್ಲ. ವಿಧವೆಯ ಮೇಲೆ ನಿರ್ಬಂಧಗಳಿರಲಿಲ್ಲ. ವಿಧವಾ ವಿವಾಹಕ್ಕೆ ಸಾಮಾಜಿಕ ಅಂಗೀಕಾರವಿತ್ತು. ಪತಿಮೃತನಾದ ಮರುಗಳಿಗೆಯಲ್ಲಿ ಅಜಪಂಚಾದನ ವೃತ ಮಾಡುವುದರ ಮೂಲಕ ಸ್ತ್ರೀಗೆ ಮರುವಿವಾಹದ ಅವಕಾಶವಿತ್ತು ಮೃತನ ಸೋದರನನ್ನು ವಿವಾಹವಾಗುವ ಅವಕಾಶವಿತ್ತು. ಋಗ್ವೇದ ವಿಧವಿಗೆ ಎಲೈ ಸ್ತ್ರೀಯೇ ಎದ್ದೇಳು. ನಿರ್ಜಿವ ಪತಿಯಿಂದ ದೂರ, ಜೀವಂತ ಬದುಕಿಗೆ ಬಾ ಎಂದು ಕರೆನೀಡಿತ್ತು. ನಿಯೋಗ ಪದ್ಧತಿಯು ಆರ್ಷೇಯ ಸಂಪ್ರದಾಯವಾಗಿದ್ದು, ಋಷಿಗಳಿಂದಲೂ ಸಾಮಾನ್ಯರಿಂದಲೂ ಏಕ ಪ್ರಕಾರವಾದ ಮನ್ನಣೆ ಪಡೆದಿತ್ತು. ಪಾವನ ಪುರುಷರೊಂದಿಗೆ ಹೊಂದುವ ಸಂಬಂಧ ಬಂಜೆತನವನ್ನು ದೂರಮಾಡುತ್ತದೆಂಬ ನಂಬಿಕೆ ಪ್ರಚಲಿತದಲ್ಲಿತ್ತು. ಆಸ್ತಿ ಸಂಚಯನವು, ಸಹ ಸಮಾನವಾಗಿದ್ದು ಪುರುಷನಿಗಿದ್ದಷ್ಟೆ ಹಕ್ಕು ಮಹಿಳೆಗೂ ಇದ್ದು ಆಸ್ತಿಗೆ ಗಂಡ ಹೆಂಡಿರು ಪಾಲುಗಾರರಾಗಿದ್ದರು. ಸ್ತ್ರೀಯು ಮಕ್ಕಳನ್ನು ದತ್ತು ಪಡೆಯುವ ಅವಕಾಶವನ್ನು ಹೊಂದಿದ್ದಳು. ವದರಿಮತಿ ಹಿರಣಸ್ತನನ್ನು ದತ್ತುತೆಗೆದುಕೊಂಡು ದೃಷ್ಟಾಂತವಿದೆ.

ಸಹಗಮನ ಪದ್ಧತಿ ಋಗ್ವೇದದಲ್ಲಿ ಅಸ್ಪಷ್ಟವಾಗಿ ಕಂಡುಬರುತ್ತದೆ. ಒಂದು ಮಂತ್ರದಲ್ಲಿ ಮೃತನ ಚಿತೆಯ ಮೇಲೆ ಹೆಂಡತಿಯನ್ನು ಮಲಗಿಸಿ ಎಬ್ಬಿಸುತ್ತಿದ್ದರೆಂಬ ಅಂಶ ವ್ಯಕ್ತವಾಗಿದೆ. ಬ್ರಾಹ್ಮಣಗಳ ವರ್ಣಾಶ್ರಮ ಧರ್ಮ ರೂಪಗೊಳ್ಳುತ್ತಿದ್ದ ಈ ಅವಧಿಯಲ್ಲಿ ಉಚ್ಚ ನಿಷ್ಟ ಭಾವನೆಗಳಿಗೆ ಚಾಲನೆ ದೊರಕಿತ್ತು ಅಲ್ಲದೇ ಪವಿತ್ರ, ಅಪವಿತ್ರ, ಮಡಿ ಮೈಲಿಗೆ ವಿಚಾರಗಳನ್ನು ಜಾರಿಗೆ ತಂದರು. ಸ್ತ್ರೀಯರು ನೀಚರೆಂದು, ಋತುಕಾಲದಲ್ಲಿ, ಗರ್ಭಿಣಿ ಸಮಯದಲ್ಲಿ, ಬಾಣಂತಿತನದ ಸಂದರ್ಭದಲ್ಲಿ, ಹೊಕ್ಕಳ ಕೆಳಗೆ ಅವರು ಅಪವಿತ್ರರೆಂದು ಭಾವಿಸಲಾಯಿತು. ಹೆಣ್ಣು ಮೈಲಿಗೆ ವಸ್ತುವಾದ್ದರಿಂದ ಅವಳು ಯಜ್ಞ ಯಾಗಾದಿಗಳಲ್ಲಿ ಭಾಗವಹಿಸಲು ಅನರ್ಹಳು ಎಂಬ ವಿಚಾರ ಬೆಳೆಯಿತು. ಅಂತ್ಯ ಸಂಸ್ಕಾರಗಳ ಕ್ರಿಯೆಗಳ ವಿಸ್ತರಣೆಯಿಂದ ಸತ್ತವರಿಗೆ ತರ್ಪಣ ಅರ್ಪಿಸಲು ಮಗನಿಗೆ ಮಾತ್ರ ಅರ್ಹತೆ ಉಂಟು ಎಂಬ ಭಾವನೆ ಮೊಳಕೆಯೊಡೆದು ಮಗನ ಪ್ರಾಮುಖ್ಯತೆ ತೀವ್ರಗೊಂಡಿತು. ವೇದಗಳಲ್ಲಿ ನಿಯೋಗ ಪದ್ಧತಿಗೆ ಮನ್ನಣೆ ಕೊಡಲಾಗಿದೆ. ಮಕ್ಕಳಿಲ್ಲದಿದ್ದರೇ ಮಹಿಳೆ ಸಂತಾನ ಪ್ರಾಪ್ತಿಗಾಗಿ ಪರಪುರುಷನೊಡನೆ ಸಂಭೋಗಿಸುವ ಕ್ರಿಯೆಗೆ ನಿಯೋಗವನ್ನಲಾಗಿದೆ. ವೇದಗಳು ಅತ್ಯಗ್ರ ಅಭಿಮಾನಿ ಹಾಗೂ ಆಧುನಿಕ ವಾಖ್ಯಾನಕಾರರಾದ ದಯಾನಂದ ಸರಸ್ವತಿಯವರ ಪ್ರಕಾರ ''ಒರ್ವಹೆಣ್ಣು ಸಂತಾನ ಪ್ರಾಪ್ತಿಗಾಗಿ ಒಬ್ಬರಾದ ಮೇಲೆ ಒಬ್ಬರಂತೆ ಹನ್ನೊಂದು ಜನಪರ ಪುರುಷರೊಡನೆ ಸಂಭೋಗನಡೆಸಬಹುದು.''[೧೭] ''ಇದು ಮಹಿಳೆಯರನ್ನು ಕೇವಲ ಸಂತಾನೋತ್ಪತ್ತಿಯ ಯಂತ್ರದಂತೆ ಕಾಣಲಾಗುತ್ತಿತ್ತು. ಎಂದು ನಿಯೋಗ ಪಥದಿಂದ ತಿಳಿದುಬರುತ್ತದೆ. ವೇದಗಳಲ್ಲಿ ಮಗಳೊಡನೆ ಸಂಭೋಗ ನಡೆಸಿದ ತಂದೆಯ, ಸೋದರಿಯೊಡನೆ ಸಂಭೋಗ ನಡೆಸಿದ ಸೋದರನ ದೃಷ್ಟಾಂತಗಳು ದೊರೆಯುತ್ತವೆ. ತನ್ನ ಮಗಳೊಡನೆ ಸಂಭೋಗ ನಡೆಸಿದ ತಂದೆಯ ಸಂಗತಿಯನ್ನು ಋಗ್ವೇದ ದಾಖಲು ಮಾಡಿದೆ.''[೧೮]

ಬ್ರಾಹ್ಮಣಗಳ ಕಾಲಕ್ಕೆ ಹೆಣ್ಣಿಗೆ ಲೈಂಗಿಕ ನಿಷೇಧ ರೂಢಿಗೆ ಬಂತು. ಶ್ವೇತುಕೇತು ಲೈಂಗಿಕ ಬಂಧನದ ಬಗ್ಗೆ 'ಒಬ್ಬ ಸ್ತ್ರೀ ಒಬ್ಬ ಪುರುಷನನ್ನು ವರಿಸಬೇಕು. ಒಂದು ವೇಳೆ ಆಕೆ ತನ್ನ ಗಂಡನಿಗೆ ನಿಷ್ಠೆಯಿಂದ ಇರದಿದ್ದರೆ', ಅರ್ಥಾತ್ ಬೇರೊಬ್ಬನ ಜೊತೆ ಅನೈತಿಕ ಸಂಬಂಧವನ್ನು ಹೊಂದಿದ್ದರೇ ಅದನ್ನು ಪಾತಕವೆಂದು ಗಣಿಸಲಾಗುವುದು. ಎಂದು ಕಟ್ಟಳೆ ವಿಧಿಸಿದ್ದಾನೆ. ವೇದ ಕಾಲದಲ್ಲಿ ಅದುವರೆಗೂ ರೂಢಿಯಲ್ಲಿದ್ದ ಪುರುಷ ಸ್ತ್ರೀಯರ ನಡುವಿದ್ದ ಸಡಿಲ ಸಂಬಂಧಗಳನ್ನು ಬಿಗಿಗೊಳಿಸುವ ಸೂಚನೆ ಇಲ್ಲಿ ವ್ಯಕ್ತವಾಗಿದೆ. ಪಾತಿವ್ರತ್ಯ, ಗಂಡನಿಗೆ ವಿಧೇಯಗಳಾಗಿರುವುದು, ಸತಿಪದ್ಧತಿ, ವರದಕ್ಷಿಣೆ ಮುಂತಾದ ಅಮಾನುಷ ಪದ್ಧತಿಗಳು ಹುಟ್ಟಿಕೊಂಡವು. ಕೇವಲ ಗಂಡು ಮಗುವಿನ ಬಯಕೆಗಳು ಹುಟ್ಟುಕೊಂಡುವು. ಕೇವಲಗಂಡು ಮಗುವಿನ ಬಯಕೆಯಿಂದಾಗಿ ಪುತ್ರಿ ಮೂಲೆಗುಂಪಾದಳು. ಧಾರ್ಮಿಕವಾಗಿ ಸಾಮಾಜಿಕವಾಗಿ ಮಹಿಳೆಯನ್ನು ದೂರವಿರಿಸಲಾಯಿತು. ಹೆಣ್ಣಿನ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಕಸಿದುಕೊಳ್ಳಲಾಯಿತು. ಜ್ಞಾನದಿಂದ ಆಕೆಯನ್ನು ದೂವಿಟ್ಟಷ್ಟು ಕ್ಷೇಮ ಎಂದು ನಂಬಿದ ಕಾಲವದು. ಹೆಣ್ಣು ವಿಧ್ಯಾಭ್ಯಾಸ ಪಡೆದರೆ ಆಕೆ ವಿಧವೆಯಾಗುತ್ತಾಳೆಂಬ ನಂಬಿಕೆ ಬೆಳೆದು ಬಂತು ಮಂತ್ರಪಠಣ ವೇದಾಧ್ಯಯನವನ್ನು ನಿಷೇಧಿಸಲಾಯಿತು. ಮದುವೆ ಬಿಟ್ಟರೇ ಹೆಣ್ಣಿಗೆ ಬೇರೆ ಅಸ್ತಿತ್ವವೇ ಇಲ್ಲ. ಮನೆ ಉಸ್ತುವಾರಿ ಮಕ್ಕಳನ್ನು ಹೊರುವುದು, ಹೇರುವುದು ಇದಕ್ಕಷ್ಟೆ ಮಗಳು ಅಗತ್ಯವಾಗಿ, ಪುತ್ರ ದೇವಲೋಕದ ದೀಪವಾಗಿ ಕಂಗೊಳಿಸಿದನು. ಫಲವಾಗಿ ಹೆಣ್ಣಿನ ಸ್ಥಾನಗಳು ಕಳೆಗುಂದಿದವು. ವೇದೋಪನಿಷತ್ತುಗಳ ಕಾಲದಲ್ಲಿ ಗದ್ದುಗೆಯ ಮೇಲಿದ್ದ ಮಹಿಳೆ ಬ್ರಾಹ್ಮಣಗಳ ಕಾಲದಿಂದೀಚೆಗೆ ಪ್ರಪಾತಕ್ಕಿಳಿಯಲಾರಂಭಿಸಿದಳು.

ಮಹಿಳೆಯ ಧಾರ್ಮಿಕ ಸ್ಥಾನಮಾನಗಳ ಬಗ್ಗೆ ಬ್ರಾಹ್ಮಣಗಳಲ್ಲಿ ವ್ಯಕ್ತವಾಗಿರುವ ವಿಚಾರಗಳನ್ನು ಕುರಿತು ಎ.ಬಿ. ಕೀತ್‌ರವರು ಹೀಗೆ ಹೇಳಿದ್ದಾರೆ. 'ಬ್ರಾಹ್ಮಣಗಳಿಂದ ಬೆಳೆದ ಕರ್ಮಕಾಂಡ ಯಜ್ಞ ಸಂಕೀರ್ಣತೆ, ಅದರ ಆಚರಣೆಗಾಗಿ ಅಂಗೋಪಾಂಗಗಳಿಗೆಲ್ಲಾ ಹುಟ್ಟುಕೊಂಡ ವರ್ಗಗಳು ಇವು. ಒಂದೆಡೆ ಸ್ತ್ರೀಯರನ್ನು ಯಜ್ಞಕಾರ್ಯದಿಂದ ವಿಮುಖಗೊಳಿಸುತ್ತಾ ಬಂದವು. ಮತ್ತೊಂದೆಡೆ ಜನಾಂಗ ಪ್ರತಿಷ್ಠೆ, ಬಾಲ್ಯವಿವಾಹ ರೂಢಿಯಲ್ಲಿಬಂದದು, ಸಂಕರ ವಿವಾಹಗಳು ಇವು ಅವಳ ಧರ್ಮಾಧಿಕಾರಕ್ಕೆ ಚ್ಯುತಿಯನ್ನೊಡ್ಡಲು ಮರೆಯಾದಂದತೆ ಸ್ತ್ರಿಗೂ ದಾರ್ಮಿಕ ಅಧಿಕಾರಗಳು ಮೋಟಕಾಗುತ್ತಾ ಬಂದವು. ''ಉಪನಯನ ವೇದಾಧ್ಯಯನಗಳು ಕುಂಠಿತವಾಗುತ್ತಾ ಅವಳ ಜೀವನ ಮನೆಗೆ ಸೀಮಿತವಾಗುತ್ತಾ ಬಂತು. ಆಕೆಯನ್ನು ಗಹನ ವಿಚಾರಗಳಿಂದ ದೂರವಿರಿಸಿ, ಸ್ತ್ರೀತನಕ್ಕೆ ಪೋಷಕವೆಂದು ಭಾವಿಸಿದ ಸಂಗೀತ, ನರ್ತನ, ಗೃಹಕಲೆ, ಕುಶಲ ಕಲೆ ಇವುಗಳ ಮಿತಿಯೊಡನೆ ನಿಲ್ಲಿಸಲಾಯಿತು ವೇದಾಧ್ಯಯನ ಮುಂದೆ ಕುಟುಂಬದ ವ್ಯಕ್ತಿಗಳಲ್ಲಿ ಸೀಮಿತವಾಯಿತು. ಬ್ರಾಹ್ಮಣಗಳಿಂದ ಮೊದಲಾದ ಸ್ತ್ರಿ ವ್ಯಕ್ತಿತ್ವದ ಹ್ರಾಸ ಕ್ರಮೇಣ ಹೆಚ್ಚುತ್ತಾ ಹೋಯಿತು.''[೧೯]

ಮೇಲಿನವುಗಳನ್ನು ಅವಲೋಕಿಸಿದಾಗ ವೇದಗಳಲ್ಲಿ ಮಹಿಳೆಗೆ ಎಂತಹ ಸ್ಥಾನವಿತ್ತು ಎಂಬುದು ತಿಳಿದು ಬರುತ್ತದೆ. ಒಂದೆರೆಡು ಅಪವಾದಗಳನ್ನು ಬಿಟ್ಟರೇ ಉಳಿದಂತೆ ಮಹಿಳೆಯರು ಮಕ್ಕಳನ್ನು ಹೆರುವ ಯಂತ್ರಗಳು ಹಾಗೂ ಪುರುಷನ ಭೋಗಲಾಲಸೆಯ ವಸ್ತುಗಳು ಮಾತ್ರವಾಗಿದ್ದರು. ಧರ್ಮದ ಹೆಸರಿನಲ್ಲಿ ಹೆಣ್ಣನ್ನು ನಿಶಕ್ತಗೊಳಿಸಿ, ದಾಸ್ಯದ ಶೃಂಕಲೆಯಲ್ಲಿ ಸಿಲುಕಿಸಿದ್ದವು ಎಂಬುದು ಸ್ಪಷ್ಟವಾಗುತ್ತದೆ.

೩.೨. ಸ್ಮೃತಿಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆ

ಧರ್ಮಶಾಸ್ತ್ರಗಳನ್ನು ಸ್ಮೃತಿಗಳು ಅಥವಾ ನೀತಿಸಂಹಿತೆಗಳು ಎಂದು ಕರೆಯಲಾಗುವುದು. ಇವು ಆಚಾರ, ವ್ಯವಹಾರ, ತಗಾದೆ ಮತ್ತು ಪ್ರಾಯಶ್ಚಿತ್ತ ಎಂಬ ಮೂರು ಅಂಶಗಳನ್ನು ಒಳಗೊಂಡಿವೆ. ಹುಟ್ಟಿನಿಂದ ಸಾವಿನ ವರೆಗೆ ವ್ಯಕ್ತಿಯ ಬಾಳನ್ನು ಹೇಗೆ ಸಾಗಿಸಬೇಕು ಮತ್ತು ಹೇಗೆ ನಡೆದುಕೊಳ್ಳಬೇಕು ಎಂಬ ಪೂರ್ಣ ವಿವರಗಳನ್ನು ಇದರಲ್ಲಿ ಕಾಣಬಹುದಾಗಿದೆ. ಮನಸ್ಮೃತಿಯನ್ನು ಗುಪ್ತರ ಕಾಲದಲ್ಲಿ ರಚಿಸಲಾಯಿತೆಂದು ಹೇಳಲಾಗುತ್ತದೆ ಇಲ್ಲಿ ಬ್ರಾಹ್ಮಣ ಹೆಣ್ಣು ವಿವಿಧ ಅವಸ್ಥೆಯಲ್ಲಿ ಹೇಗಿರಬೇಕು ಎಂತಹ ಸಂದರ್ಭ ಬಂದರೆ ಯಾವ ಯಾವ ಬಗೆಯಲ್ಲಿ ವರ್ತಿಸಬೇಕೆಂಬ ಬಗೆಗಿನ ವಿವರಗಳು ದೊರಕುತ್ತವೆ.

ಮಹಿಳೆಯ ಬದುಕನ್ನು ಕತ್ತಲಿಗೆ ನೂಕುವಲ್ಲಿ ಅಮಾನವೀಯವಾಗಿ ಶೋಷಿಸಿರುವಲ್ಲಿ ಸ್ಮೃತಿಗಳ ಪಾತ್ರ ಹಿರಿದಾದು ಇದನ್ನು ಪುರೋಹಿತಶಾಹಿಯ ಕೊಡುಗೆ ಕೂಡ ಎಂದು ಹೇಳಲಾಗುತ್ತದೆ. ವೇದೋಕ್ತವಾದ ಧರ್ಮರಹಸ್ಯಗಳನ್ನು ತಮ್ಮ ಸ್ಮೃತಿಪಟಲಕ್ಕೆ ತಂದುಕೊಂಡು ರಚಿಸಿದ್ದರಿಂದ ಇವುಗಳಿಗೆ ಸ್ಮೃತಿಗಳು ಎಂದು ಹೆಸರಾಯಿತು. ಶ್ರುತಿಸಮ್ಮತವಾದ ಧಾರ್ವಿಕ ವಿಧಿಗಳ ನಿರೂಪಣೆಗಳು ಸ್ಮೃತಿಗಳೆನಿಸಿಕೊಂಡವು ''ಸ್ಮೃತಿಗಳು ಮೂಲದಲ್ಲಿ ವೈದಿಕ ಪಂಡಿತರು ಅಂಗೀಕೃತಗೊಳಿಸಿದ ಮತ್ತು ಶಿಫಾರಸ್ಸು ಮಾಡಿದ ಸಾಮಾಜಿಕ ಸಂಪ್ರದಾಯಗಳು ಮತ್ತು ವಾಡಿಕೆಗಳಿಗೆ ಸಂಬಂಧಿಸಿದ ನಿಯಮಗಳ ಸಂಗ್ರಹಗಳಾಗಿದ್ದವು. ವೇದನಿಷ್ಠವಾಗಿದ್ದ ಹಿಂದೂ ಸಮಾಜ ಬದಲಾದ ಸಂದರ್ಭದಲ್ಲಿ ಸ್ಮೃತಿಗಳು ಅಧಿಕೃತವಾದವು. ಸ್ಮೃತಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು ಪಾಪಕೃತ್ಯವೆಂದು ಪರಿಗಣಿಸಲಾಯಿತು.''

ಸ್ಮೃತಿಕಾರರು ನ್ಯಾಯ ನಿಯಾಮಕರು, ರಾಜ ಸತ್ತೆಗೆ ಮಂತ್ರಿಗಳು ಆಗಿ ಸಮುದಾಯದ ಬದುಕಿನ ಸ್ವರೂಪವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಕ್ರಿ.ಶ. ಆರಂಭದ ಶತಮಾನಗಳಲ್ಲಿ ಧರ್ಮಶಾಸ್ತ್ರಜ್ಞರು ತಮ್ಮ ವಿಚಾರಗಳನ್ನು ಸೇರಿಸುತ್ತಾ ಬಂದರು. ಗೌತಮ, ಪ್ರಜಾಪತಿ, ಯಾಜ್ಞವಲ್ಕ, ಮನು, ಯಮ, ಹಾರಿತ, ಕಾಶ್ಯಪ ಹೀಗೆ ಸುಮಾರು ಹತ್ತೊಂಬತ್ತಕ್ಕೂ (೧೯) ಹೆಚ್ಚು ಸ್ಮೃತಿಕಾರರು ಕಂಡುಬರುತ್ತಾರಾದರೂ ಸ್ಮೃತಿಗಳ ಪಿತಾಮಹ ಮನು ಎಂದೇ ಪರಿಗಣಿಸಲಾಗಿದೆ. ಎಲ್ಲಾ ಸಂಪ್ರದಾಯವಾದಿಗಳು ತಮ್ಮ ವಿಚಾರಗಳ ಸಮರ್ಥನೆಗಾಗಿ ಮನುವನ್ನೆ ಉದಾಹರಿಸುತ್ತಾ ಬಂದಿದ್ದಾರೆ.

ಸ್ಮೃತಿಗಳು ಗುಹ್ಯಸೂತ್ರವನ್ನು ಆಧರಿಸಿವೆ. ಮತ್ತು ಧರ್ಮ ಶಾಸ್ತ್ರಗಳ ವಿಸ್ಮೃತ ರೂಪಗಳಾಗಿವೆ. ಹಿಂದೂ ಧರ್ಮದಲ್ಲಿ ರೂಢಿಯಲ್ಲಿ ಬಂದಿರುವ ಎಲ್ಲಾ ಸ್ಮೃತಿಗಳೂ ವಿರೋಧಾಭಾಸಗಳ ಕಂತೆಗಳೆಂದೇ ಹೇಳಬಹುದು. ಮಹಿಳೆಯ ಸ್ಥಾನಮಾನಗಳು ಹಕ್ಕು ಬಾಧ್ಯತೆಗಳ ಬಗ್ಗೆ ಮಾತನಾಡುವಾಗ ಎರಡು ರೀತಿಯ ಪರಾಕಾಷ್ಠೆಗಳು ಸ್ಮೃತಿಗಳಲ್ಲಿ ಗೋಚರಿಸುತ್ತವೆ. ಮನು, ಯಾಜ್ಞವಲ್ಕ, ಅಂಗೀರಸರು ಬರೆದಿಟ್ಟ ಗ್ರಂಥಗಳು ಈ ವಿರೋಧಾಬಾಸಗಳನ್ನು ಪ್ರಕ್ಷೇಪನಗೊಳಿಸುತ್ತವೆ. ಮನು ಮತ್ತಿತರ ಸ್ಮೃತಿಗಾರರು ಮಹಿಳಾ ಸಂಬಂಧ ವಿಚಾರಗಳ ಬಗ್ಗೆ ಉತ್ಕೃಷ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. "ಹೆಣ್ಣುಮಕ್ಕಳನ್ನು ಮರ್ಯಾದೆಯಿಂದ ಕಾಣಿರಿ. ಅವರನ್ನು ಸಂಪ್ರಿತರನ್ನಾಗಿ ಇಡಿರಿ, ಅವರು ಕಣ್ಣೀರು ಹರಿಸಿದರೇ ಆ ಮನೆತನ ಬೇಗ ನಾಶವಾಗುವುದು. ಅವರು ಇದ್ದ ಮನೆಯಲ್ಲಿ ದೇವತೆಗಳು ನರ್ತಿಸುತ್ತಾರೆ. ಹೆಣ್ಣು ಯಾವಾಗಲೂ ಪಾವನಳು. ಚಂದಿರ ಆಕೆಗೆ ರೂಪಲಾವಣ್ಯಗಳನ್ನು ಕೊಟ್ಟಿದ್ದಾನೆ. ಗಂಧರ್ವರು ಇಂಪಾದ ಧ್ವನಿಯನ್ನು ಕೊಟ್ಟಿದ್ದಾರೆ. ಅಗ್ನಿಯ ಉಚ್ಛತಮವಾದ ಪಾವಿತ್ರ್ಯವನ್ನು ಕೊಟ್ಟಿದ್ದಾನೆ. ಆದುದರಿಂದ ಅವರು ಯಾವಾಗಲೂ ಕಲಂಕರಹಿತರು. ಅಂಗೀರಸರ ಪ್ರಕಾರ ಹೊಳೆಯ ತೆರೆಗಳಿಂದ ಯಾವಾಗಲೂ ಸ್ವಚ್ಛವಾಗಿರುವಂತಹ ಹೆಣ್ಣುಮಕ್ಕಳು ಋತುವಿನ ಕಾಲದಲ್ಲಿ ಎಲ್ಲಾ ಹೊಲಸನ್ನು ಕಳೆದುಕೊಡು ಶುದ್ಧರಾಗುತ್ತಾರೆ. ಒಂದು ವೇಳೆ ಸ್ತ್ರೀಯರು ಬೇರೆ ಪುರುಷರೊಂದಿಗೆ ಸ್ನೇಹ ಬೆಳೆಸಿದ್ದರೂ ಕೂಡ ಋತುಮತಿಯಾದರೆ ಆಕೆ ಮತ್ತೆ ಪವಿತ್ರಳಾಗುತ್ತಾಳೆ. ಅಂಗೀರಸನೇ ಹೇಳುವಂತೆ ವೇದಕ್ಕಿಂತಲೂ ಶ್ರೇಷ್ಠವಾದುದು ಇಲ್ಲ ತಾಯಿಗಿಂತ ಶ್ರೇಷ್ಠರಾದ ಹಿರಿಯರ್‍ಯಾರೂ ಇಲ್ಲ."

ಮನುವಿನ ಪ್ರಕಾರ ಸ್ತ್ರೀಯರನ್ನು ಗೌರವಿಸಬೇಕು. ದಾರಿಯಲ್ಲಿ ನಡೆಯುವಾಗ ಪುರುಷ, ಸ್ತ್ರೀಯರಿಗೆ ಮೊದಲು ದಾರಿ ಬಿಡಬೇಕು. ಎಲ್ಲಿ ಸ್ತ್ರೀಯರು ಸಂತುಷ್ಟರಾಗಿರುವರೋ ಅಲ್ಲಿ ದೇವತೆಗಳು ಪ್ರಸನ್ನರಾಗಿರುತ್ತಾರೆ. ದೇವಕಾರ್ಯ, ಧರ್ಮಕಾರ್ಯ ರತಿ ಹಾಗೂ ಪಿತೃಗಳಿಗೆ ಸ್ವರ್ಗ ಇವು ಹೆಂಡತಿಯಿಂದಲೇ ದೊರೆಯುವುದರಿಂದ, ಸತಿ ಸಂಪ್ರೀತಳಾಗಿದ್ದರೆ, ಕುಲ, ಧರ್ಮ ಶೀಲ, ಚಾರಿತ್ರ್ಯ ಎಲ್ಲವೂ ಸುರಕ್ಷಿತ ಎಂಬುದು ಅವನ ಬಹುಬೆಲೆಯುಳ್ಳ ಮಾತು. ಪರಸ್ತ್ರೀಯರ ಬಗ್ಗೆ ಆಧರಣಿಯ ಭಾವನೆ ತಾಳಿರುವನು ಅವರನ್ನು ಭಗವತಿ, ಸುಭಗೆ, ಭಗಿನಿ ಎಂದು ಗೌರವಿಸಬೇಕು. ಅವಿವಾಹಿತೆಯರನ್ನು ಆಯುಷ್ಮತಿ, ಕುಮಾರಿ ಎಂದು ಕರೆಯಬೇಕು ಎಂದು ತಿಳಿಸುತ್ತಾನೆ. ಕನ್ಯೆಯರ ವಿಚಾರದಲ್ಲಿ ಮನುವಿನ ವಿಚಾರಗಳು ಉದಾರವಾಗಿವೆ. ಯೋಗ್ಯ ಕಾಲದಲ್ಲಿ ಮದುವೆಯಾಗದೇ ಹೋದರೆ ಋತುಮತಿಯಾದ ಕನ್ಯೆ ಮೂರು ವರ್ಷ ಕಾದು ಆ ಮೇಲೆ ಅನುರೂಪನಾದ ಪತಿಯನ್ನು ತಾನೇ ಆರಿಸಿಕೊಳ್ಳಬಹುದು ಎಂದಿದ್ದಾನೆ.

ತಾಯಿಯನ್ನು ಕುರಿತು ಮನುವಿನ ವಿಚಾರಧಾರೆಗಳು ಬಹು ಪೂಜ್ಯನೀಯವಾಗಿವೆ. ''ಉಪಾಧ್ಯಾಯಿನಿಗಿಂತ ಆಚಾರ್ಯ, ಆಚಾರ್ಯನಿಗಿಂತ ತಂದೆ, ತಂದೆಗಿಂತ ತಾಯಿ ಸಾವಿರಪಟ್ಟು ಪೂಜ್ಯಳು. ತಂದೆ ತಾಯಿ ಗುರು ಈ ಮೂವರು ತ್ರೇತಾಗ್ನಿಗೆ, ವೇದತ್ರಯಗಳಿಗೆ ಸಮಾನರು ತಾಯಿ ಅನ್ಯಜಾತಿಯವಳಾದರೂ ಪೂಜ್ಯಳು, ದೋಷಣೆಯಳಲ್ಲ.''[೨೦]

ಮಹಿಳೆಯ ಬಗ್ಗೆ ಇಷ್ಟೆಲ್ಲಾ ಉನ್ನತ ಅಭಿಪ್ರಾಯಗಳನ್ನು ತಿಳಿಸಿಕೊಡುವ ಮನು ಅದೇ ನಾಲಿಗೆಯಲ್ಲಿ ತೀರಾ ಅನುದಾರಿಯಾಗಿ ವರ್ತಿಸಿದ್ದಾನೆಂಬುದೂ ಸಹ ಕಟು ಸತ್ಯ. ಪ್ರಥಮವಾಗಿ ಹೆಣ್ಣಿನ ವ್ಯಕ್ತಿಸ್ವಾತಂತ್ರ್ಯವನ್ನು ಕಸಿದುಕೊಂಡವನು ಮನು. ಹೆಣ್ಣು ಯಾವ ಕಾಲದಲ್ಲಿಯೂ ಸ್ವಾತಂತ್ರ್ಯವನ್ನು ಅನುಭವಿಸಲು ಅನರ್ಹಳು ಎಂದಿರುವ ಮನು, ಹೆಣ್ಣಿಗೆ ಸ್ವತಂತ್ರ ವ್ಯಕ್ತಿತ್ವ ಎಂಬುದಿಲ್ಲ. ಹಕ್ಕು ಬಾಧ್ಯತೆಗಳ ದೃಷ್ಟಿಯಲ್ಲಿ ಅವಳು ಚಿಕ್ಕ ಮಗಳಿಗೆ ಸಮಾನ.

''ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿಯವ್ವನೇ|

ರಕ್ಷಂತಿ ಸ್ಥವಿರೇ ಪುತ್ರಾನ್‌ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ''||[೨೧]

ಚಿಕ್ಕವಯಸ್ಸಿನಲ್ಲಿ ತಂದೆಯ, ಯೌವ್ವನದಲ್ಲಿ ಗಂಡನು ಮುಪ್ಪಿನಲ್ಲಿ ಮಗನು ಹೆಣ್ಣನ್ನು ಸಂರಕ್ಷಿಸಬೇಕು. ಯಾವಾಗಲೂ ಗಂಡಸರ ಬಿಗುವಾದ ಕಾವಲಿನಲ್ಲಿರಬೇಕು. ಇಂದಿಗೂ ಭಾರತದ ಜನಮನದಲ್ಲಿ ಈ ಸೂಕ್ತಿ ಅತ್ಯಂತ ಆಳವಾಗಿ ಉಳಿದುಬಿಟ್ಟಿದೆ. ಹೆಣ್ಣು ತನ್ನ ಬದುಕಿನುದ್ದಕ್ಕೂ ಅಡಿಯಾಳಾಗಿರುವಂತೆ ಕಾನೂನು ಮಾಡಿದ ಮಹಾನುಭಾವ ಮನು ಹೆಣ್ಣು ಗಂಡಸಿನ ಕೈಗೊಂಬೆಯಾಗಿ, ಸದಾ ಅವನ ಅವಲಂಬನೆಯಲ್ಲಿಯೇ ಗಂಡಿನ ಖಾಸಗಿ ವಸ್ತುವಾಗಿ ಬದುಕುವಂತಹ ಸ್ಥಿತಿ ಏರ್ಪಟ್ಟಿತು. ಮನು ಯಾಜ್ಞವಲ್ಕ ಮುಂತಾದವರ ಪ್ರಕಾರ ಸ್ತ್ರೀಗೆ ಆಧ್ಯಾತ್ಮಿಕ ಪ್ರಪಂಚಕ್ಕೆ ಪ್ರವೇಶವಿಲ್ಲ. ಸ್ತ್ರೀಗೆ ಧಾರ್ಮಿಕಾಧಿಕಾರವಾಗಲಿ, ಧರ್ಮಸಾಧನೆಯಾಗಲಿ, ಆಧ್ಯಾತ್ಮಿಕ ಸ್ವತಂತ್ರ್ಯವಾಗಲಿ ಅನಗತ್ಯ ಎಂಬುದು ಸ್ಮೃತಿಸೃಷ್ಮಿಕಾರರ ವಾದ. ಹೆಣ್ಣಿನ ಜನನ ಅಸ್ತಿತ್ವವಿರುವುದು ಕೇವಲ ಸಂತಾನ ಅಭಿವೃದ್ಧಿಗಷ್ಟೇ ಉಳಿದವುಗಳೆಲ್ಲಾ ಅವಳ ಪ್ರಕೃತಿಧರ್ಮಕ್ಕೆ ವಿರುದ್ಧವಾದುದೆಂಬುದು ಮನುವಿನ ವಿಚಾರ. ಪುರುಷರಿಗೆ ಆಗಬೇಕಾದ ಸಂಸ್ಕಾರಗಳೆಲ್ಲವೂ ಸ್ತ್ರೀಯರಿಗಾಗಬೇಕು. ಆದರೆ ಅದು ಮಂತ್ರರಹಿತವಾಗಿ ಎಂದು ಮನು ಪ್ರತಿಪಾದಿಸುತ್ತಾನೆ.

''ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ

ಪತಿಸೇವಾ ಗುರೌವಾಸಃ ಗೃಹಾರ್ಥೋಗ್ನಿ ಪರಿಕ್ರೀಯಾ||

ವಿವಾಹವೇ ಸ್ತ್ರೀಯರಿಗೆ ಉಪನಯನ, ಪತಿ ಸೇವೆಯೇ ಗುರುಗೃಹವಾಸ. ಗೃಹಕಾರ್ಯವೇ ಅಗ್ನಿ ಪರಿಕ್ರಿಯೆ, ಪತಿಸೇವೆಯಿಂದ ಮಹಿಳೆಗೆ ಸಲ್ಲಬೇಕಾದ ಎಲ್ಲ ಸಾಧನಗಳ ಫಲಗಳು ಲಭಿಸುತ್ತವೆ. ಹೆಣ್ಣಿಗೆ ಯಜ್ಞಾಧಿಕಾರವಿಲ್ಲ. ಧಾರ್ಮಿಕ ಆಚರಣೆಗಳ ಹಕ್ಕಿಲ್ಲ. ಅವರು ಮಾಡಿದ ಯಜ್ಞಗಳಿಗೆ ಪುರುಷರು ಹೋಗಕೂಡದು, ನೋಡಲೂಕೂಡದು ಎಂದು ಧರ್ಮಾಧಿಕಾರವನ್ನು ಸಂಪೂರ್ಣವಾಗಿ ನಿಷೇಧಿಸುತ್ತಾರೆ. ಬ್ರಾಹ್ಮಣಗಳ ಕಾಲದಲ್ಲಿ ಮೊಟಕಾಗಿದ್ದ ಧರ್ಮಾಧಿಕಾರವು ಮನುವಿನ ಕಾಲಕ್ಕೆ ಸಂಪೂರ್ಣವಾಗಿ ವ್ಯವಕಲನಗೊಳ್ಳುತ್ತದೆ.''[೨೨] ''ವೇದಗಳ ಕಾಲದಲ್ಲಿ

ಬಾಲ್ಯವಿವಾಹ ರೂಢಿಯಲ್ಲಿರಲಿಲ್ಲ. ಆದರೆ ಸ್ಮೃತಿಕಾರರು ಕನ್ನೆಯನ್ನು ಋತುಮತಿಯಾಗುವ ಪೂರ್ವದಲ್ಲಿಯೇ ಮದುವೆ ಮಾಡಿಕೊಡಬೇಕೆಂದು ಒತ್ತಾಯಿಸುತ್ತಾರೆ. ಮನು ಬಾಲ್ಯವಿವಾಹದ ಬಗ್ಗೆ ಹೇಳಿಲ್ಲವಾದರೂ ಋತುಮತಿಯಾಗುವುದರೊಳಗೆ ಮದುವೆ ಮಾಡಿಕೊಡುವುದಿಲ್ಲವೋ ಆತ ಪಾಪವನ್ನು ಅನುಭವಿಸಬೇಕಾಗುತ್ತದೆಂದು ಹೇಳಿದ್ದಾವೆ. ಮತ್ತೊಬ್ಬ ಸ್ಮೃತಿಕಾರ ಯಮನು 'ತನ್ನ ಮಗಳು ಮದುವೆಯ ಮೊದಲು ಋತುಮತಿಯಾಗುವುದನ್ನು ನೋಡಿದ ತಾಯಿ ತಂದೆ ಮತ್ತು ಹಿರಿಯ ಅಣ್ಣ ಮೂವರು ನರಕಕ್ಕೆ ಹೋಗುವುದು ಖಂಡಿತ' ಎಂದು ಹೇಳಿದ್ದಾನೆ. ಮಾರೀಚಿಯು 'ಎಂಟು ವರ್ಷದ ಕನ್ನೆಯನ್ನು ಮದುವೆಯಾಗಿ ದಾನವಾಗಿ ಕೊಡುವ ತಂದೆ ಸ್ವರ್ಗಕ್ಕೆ ಹೋಗುತ್ತಾನೆ. ಒಂಬತ್ತು ವರ್ಷದವಳನ್ನು ಕೊಡುವವನು ವೈಕುಂಠಕ್ಕೆ, ಹತ್ತು ವರ್ಷದವಳನ್ನು ಕೊಡುವವನು ಬ್ರಹ್ಮಲೋಕಕ್ಕೆ ಮತ್ತು ಋತುಮತಿಯಾದ ಮೇಲೆ ಕೊಡುವವನು. ನರಕಕ್ಕೆ ಹೋಗುತ್ತಾನೆ.' ಎಂದು ಹೇಳಿದ್ದಾನೆ. ಸ್ಮೃತಿಕಾರರು ವಿಧಿಸಿದ ಇಂತಹ ನಿರ್ಬಂಧಗಳಿಂದಾಗಿ ಸ್ಮೃತಿಗಳ ಕಾಲದಲ್ಲಿ ಬಾಲ್ಯವಿವಾಹಗಳು ಹೆಚ್ಚಿದವು. ಸ್ತ್ರೀ ಪಾವಿತ್ರ್ಯ ರಕ್ಷಣೆಯ ನೆಪದಲ್ಲಿ ರೂಢಿಗೆ ಬಂದ ಈ ಅನಿಷ್ಟ ಪದ್ಧತಿಯಿಂದಾಗಿ ಭಾವಿಜನಾಂಗವೊಂದರ ಶಕ್ತಿಯೇ ಸಂಪೂರ್ಣವಾಗಿ ನಶಿಸಿಹೋಯಿತು.''[೨೩] ಇಲ್ಲಿ ಹೆಣ್ಣನ್ನು ಕೇವಲ ಚರಾಸ್ತಿಯೆಂದಾಗಿ ಭಾವಿಸಿ, ತಮಗಾಗಿ ಅವಳನ್ನು ಯಾವಾಗಬೇಕು ಆವಾಗ ಮಾರಾಟಮಾಡುವ ಸರಕನ್ನಾಗಿ ಪರಿಗಣಿಸಿರುವುದಲ್ಲದೇ, ಪತಿ ಸೇವೆಯ ನೆಪದಲ್ಲಿ ಅವಳನ್ನು ನಾಲ್ಕು ಗೋಡೆಗಳ ಮಧ್ಯೆ ಕೂಡಿಹಾಕುವ ಕುಹುಕ ವಿಚಾರವಂತೂ ಸ್ಪಷ್ಟವಾಗುತ್ತದೆ.

''ಬಾಲ್ಯವಿವಾಹ ರೂಢಿಗೆ ಬಂದ ದೆಸೆಯಿಂದಾಗಿ ಮಹಿಳೆ ಶಿಕ್ಷಣದಿಂದ ವಂಚಿತಳಾದಳು. ಮನು ಮೊದಲಿಗೆ ಮಹಿಳೆಯ ಜ್ಞಾನದ ಬಾಗಿಲನ್ನು ಮುಚ್ಚಿದನು. ಸಮಾಜದ ಬಹುಸಂಖ್ಯಾಕ್ಷತರು, ವಿಧ್ಯಾಹೀನರಾದರು. ಶಿಕ್ಷಣ ಪೂರ್ವದಲ್ಲಿ ನಡೆಯುತ್ತಿದ್ದ ಉಪನಯನ ಸಂಸ್ಕಾರವನ್ನು ಮನು ಇಲ್ಲವಾಗಿಸುವುದರ ಮೂಲಕ ಸ್ತ್ರೀ ವಿದ್ಯಾಭ್ಯಾಸಕ್ಕೆ ಕೊಡಲಿಪೆಟ್ಟು ಕೊಟ್ಟನು. ಹೆಣ್ಣು ವೇದ ಮಂತ್ರಗಳನ್ನು ಉಚ್ಛರಿಸುವುದಿರಲಿ, ಕೇಳುವುದು ಮಹಾಪಾಪವಾಯಿತು. ಶಿಕ್ಷಣವನ್ನು ಪಡೆಯುವವರು ವೇಶ್ಯೆಯರೆಂಬ ಪ್ರಚಾರ ಮೊದಲಾಗಿ ಹೆಣ್ಣು ವೇದಾಧ್ಯಯನಕ್ಕೆ ಅನರ್ಹಳೆನಿಸಿಕೊಂಡಳು. ''ಸ್ಮೃತಿಗಳ ಪ್ರಭಾವದಿಂದಾಗಿಯೋ ಏನೋ ಪ್ರಾಚೀನ ಭಾರತದ ವಿಶ್ವವಿದ್ಯಾಲಯಗಳಲ್ಲಿ ಯಾವ ವಿದ್ಯಾರ್ಥಿನಿಯೂ ಅಧ್ಯಯನ ಮಾಡಿದಂತೆ ಕಂಡುಬರುವುದಿಲ್ಲ'' ಎಂದಿದ್ದಾರೆ. ಚಿದಾನಂದ ಮೂರ್ತಿಯವರು.''[೨೪]

''ಎಂಟು ವರ್ಷಕ್ಕೆ ಗೌರಿ ಮಗಳನ್ನು ವಿವಾಹ ಮಾಡಿಕೊಡಬೇಕು. ಇದರಿಂದ ತಂದೆಗೆ ಸ್ವರ್ಗಲೋಕದಲ್ಲಿ ಹೆಚ್ಚಿನ ಸ್ಥಾನ ದೊರೆಯುತ್ತದೆ. ಗುಣವಂತವರ ಸಿಗದೇ ಹೋದರೂ, ಗುಣಹೀನನಿಗೆ ಕೊಟ್ಟರೂ ಸರಿಯೇ ಎಂದು ಪ್ರತಿಪಾದಿಸಿದ ಸ್ಮೃತಿಕಾರರ ಕಪಿಮುಷ್ಠಿಗೆ ಸಿಲುಕಿದ ಹೆಣ್ಣಿಗೆ ಬಾಳ ಸಂಗಾತಿಯನ್ನು ಆಯ್ಕೆಮಾಡಿಕೊಳ್ಳುವ ಅವಕಾಶವೇ ಕೈತಪ್ಪಿಹೋಯಿತು. ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುತ್ತಿದ್ದ ಕಾರಣದಿಂದಾಗಿ ವಿವಾಹ, ಪತಿ, ಪ್ರೇಮ, ಸಂಸ್ಕಾರ, ದಾಂಪತ್ಯ ಪದಗಳ ಅರ್ಥವೇ ತಿಳಿಯದ ಹಸುಗೂಸು ಮೂಕ ಪ್ರಾಣಿಯಂತೆ ಕೊಟ್ಟು ಮನೆಗೆ ಹೋಗಬೇಕಾಗಿತ್ತು. ವಿವಾಹಕ್ಕೆ ಸಂಬಂಧಿಸಿದಂತೆಯಾ ಸ್ಮೃತಿಕಾರರು ಅಮಾನವೀಯವಾದ ಶಾಸನಗಳನ್ನು ರೂಪಿಸಿದ್ದರು.''[೨೫]

ಕೆಂಪು ಕೂದಲಿದ್ದವಳನ್ನು, ರೋಗ ಗ್ರಸ್ಥಳಾದವಳನ್ನು, ತಲೆಯ ಮೇಲೆ ಕೂದಲಿಲ್ಲದವಳನ್ನು ಬಹಳ ಕೂದಲಿದ್ದವಳನ್ನುಸ ವಾಚಾಳಿಯನ್ನು, ಕೆಂಪು ಕಣ್ಣಿನವಳನ್ನು ಮದುವೆಯಾಗುವುದು ಅಯೋಗ್ಯ ಎಂದು ಪರಿಗಣಿಸಲಾಗುತ್ತಿತ್ತು.

ಮೇಲಿನ ವಾಖ್ಯಾನಗಳನ್ನು ಗಮನಿಸಿದಾಗ ಹೆಣ್ಣಿನ ಜ್ಞಾನದ ಬಗೆಗೆ ಗಂಡಿಗೆ ಭಯವಿದ್ದು, ಎಲ್ಲಿ ಅವಳು ತನ್ನನ್ನು ಮಿರಿಸಿ, ಅಧಿಕಾರ ಶಾಹಿ ನೆಲೆಯಲ್ಲಿ ತನಗಿಂತ ಹೆಚ್ಚು ಸ್ಥಾನ ಪಡೆಯುವವಳೆಂಬ ಭಯದ ಕಾರಣದಿಂದ ಅವಳನ್ನು ವಿಧ್ಯೆಯಿಂದ ವಂಚಿತಳನ್ನಾಗಿಸಿದರು. ಅವಳು ಯೋಚನೆ ಮಾಡುವ ಹಂತಕ್ಕೆ ಬಂದರೇ ತನ್ನ (ಪುರುಷನ) ಮಾತುಗಳಿಗೆ ಯೋಚನೆಗಳಿಗೆ ತಲೆಬಾಗುವುದಿಲ್ಲವೆಂಬ ಭಾವ ಕಾಡಿದ್ದರಿಂದಾಗಿ ಅವಳಿಗೆ ಬೇಗನೇ ವಿವಾಹಮಾಡಿಸಿ, ಅವಳಿಗೆ ಅಂತಹ ಯೋಚನೆಗಳು ಬರಬಾರದೆಂದು ಧರ್ಮಶಾಸ್ತ್ರಗಳ ಮೂಲಕ ಅವಳನ್ನು ನಿಯಂತ್ರಣದಲ್ಲಿರಿಸುತ್ತವೆ. ಅವಳು ಮಾಡದಿರುವ, ನೈಸರ್ಗಿಕವಾಗಿ ಅವಳಿಗೆ ಬಂದಂತಹ ಜೈವಿಕತೆಯನ್ನು ಕಾರಣವಾಗಿಟ್ಟು ಅವಳನ್ನು ಅಯೋಗ್ಯಳನ್ನಾಗಿಸಿ ಈ ಅಧೀನ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಮಾಡಿವೆ.

ಹೆಂಡತಿಯು ಗಂಡನಿಗೆ ವಿಧೇಯಳಾಗಿರಬೇಕಾದ ಅಂಶಕ್ಕೆ ಸ್ಮೃತಿಕಾರರು ಅತೀ ಮಹತ್ವ ನೀಡಿರುತ್ತಾರೆ. "ಹೆಣ್ಣು ಮಕ್ಕಳಿಗೆ ಪೂಜಾವ್ರತಗಳ ಅವಶ್ಯಕತೆಯಿಲ್ಲ. ಪತಿಯ ಶುಶ್ರೂಷೆಯಲ್ಲಿಯೇ ಕಾಲಕಳೆಯಬೇಕು. ಅದೇ ಅವರು ಸ್ವರ್ಗಕ್ಕೆ ಹೋಗುವ ದಾರಿ. ಪತಿಂ ಶುಶ್ರೂಷತೇಯೇನತೇನಸ್ವರ್ಗೆ ಮಹಿಯತೋ ಎಂದು ಮನು ಹೇಳುತ್ತಾನೆ. ಪತಿಗುಣ ಹೀನನಾಗಿ ಅಯೋಗ್ಯನಾಗಿದ್ದರೂ ಸಹ ಉಪಚರ್ಯ ಸತತಂ ದೇವತ್ವತಿಃ ಎಂದು ಸಾರುತ್ತಾನೆ. ಗಂಡ ಕುಡುಕನಾದರೂ ಸರಿಯೇ, ತಲೆ ಹೋಕನಾದರೂ ಸರಿ ಜೂಜೂಗಾರನಾದರೂ ಸರಿ ಆತನನ್ನು ದೇವರಂತೆ ಪೂಜಿಸಬೇಕು. ಗಂಡನಿಗೆ ವಿಧೇಯಳಾಗಿದ್ದುಕೊಂಡು ಶುದ್ಧ ಚಾರಿತ್ರ್ಯಕ್ಕೆ ಹೆಸರಾಗಿರಬೇಕು. ಗಂಡ ದಾರಿತಪ್ಪಿದರೂ ಹೆಂಡತಿಯ ಶ್ರದ್ಧೆ ಮಾತ್ರ ಅಚಲವಾಗಿರಬೇಕು. ಸುಮಂಗಲಿ ಸಾವು ಆಕೆಯ ಬದುಕಿನ ಪರಮ ಗಂತ್ಯವಾಗಿರಬೇಕು. ಗಂಡನು ಹೆಂಡತಿಯ ಜೊತೆಗೆ ಊಟಮಾಡುವಾಗ, ಸೀನುವಾಗ, ಆಕಳಿಸುವಾಗ, ಆರಾಮಾಗಿ ಕುಳಿತಾಗ ಗಂಡನು ಆಕೆಯನ್ನು ನೋಡಕೂಡದು. ಎಂಬಿತ್ಯಾದಿ ವಿಚಾರಗಳೆಲ್ಲ ಮನುವಿನದಾಗಿದ್ದವು."[೨೬]

"ಸ್ಮೃತಿಕಾರರು ವಿಧವೆಗೆ ಮರು ವಿವಾಹಕ್ಕೆ ಅವಕಾಶವಿಲ್ಲವೆಂದು ಸಾರಿದ್ದಾರೆ. ಎಲ್ಲಿಯೂ ಸಹ ಯಾವುದೇ ಗೌರವಸ್ಥ ಮಹಿಳೆಗೆ ಎರಡನೆ ಗಂಡನನ್ನು ಪಡೆಯುವ ಅಧಿಕಾರವಿಲ್ಲವೆಂಬುದು, ಮನುವಿನ ಅಭಿಪ್ರಾಯ. ಮನು ಸಂಹಿತೆ ವಿಧವೆಗಿರಬೇಕಾದ ಕಟ್ಟು ಪಾಡುಗಳು, ವಿಧಿಗಳನ್ನು ವಿವರಿಸುತ್ತದೆ. ವಿಧವೆ ವೀಳ್ಯೆಯ ದೆಲೆ ಮತ್ತು ಅಡಿಕೆ ಹಾಕಬಾರದು. ಸಿಂಗರಿಸಿಕೊಳ್ಳಬಾರದು. ಕಠಿಣ ಉಪವಾಸ ಪಾಲಿಸಬೇಕು. ಅವರು ಪವಿತ್ರತರು. ಹಿಂದಿನ ಜನ್ಮದ ಪಾಪದ ಪರಿಣಾಮವೇ ವೈಧವ್ಯ ಇತ್ಯಾದಿ ಸಾಮಾಜಿಕವಾಗಿ ಮತ್ತು ಧಾರ್ಮಿಕ ವಿಧಿ ಸಂಸ್ಕಾರಗಳ ನೆಲೆಯಲ್ಲಿ ವಿಧವೆಯನ್ನು ತುಚ್ಚವಾಗಿ ಕಾಣಲಾಗುತ್ತಿತ್ತು. ಹಿಂದೂ ನ್ಯಾಯ ನಿಯಾಮಕವೆನಿಸಿಕೊಂಡಿರುವ ನಾರದರ ಪ್ರಕಾರ ಒಬ್ಬ ಹುಡುಗಿಯ ಮದುವೆ ಒಂದು ಬಾರಿ ಮಾತ್ರ ಸಾಧ್ಯ, ಹೀಗಾಗಿ ವಿಧವೆಯರ ಬದುಕು ಶೋಚನೀಯವಾದುದು. ಹೃದಯ ವಿದ್ರಾವಕವಾದುದಾಗಿರುತ್ತಿತ್ತು. ಮನುಷ್ಯ ಸಹಜವಾದ ಎಲ್ಲಾ ಸುಖಗಳನ್ನು ತೊರೆದು ಕೇಶ ಮುಂಡನ ಮಾಡಿಸಿಕೊಂಡು ನಿಕೃಷ್ಟ ಬಾಳುವೆ ನಡೆಸಬೇಕಾಗಿತ್ತು. ಸಮಾಜದ ಬೈಗಳು, ತಿರಸ್ಕಾರಗಳಲ್ಲಿ ಬದುಕನ್ನು ಅಪ್ಪಿಕೊಂಡು

ದುಡಿದು ಹಣ್ಣಾಗುವ ಕುರೂಪ ಗೊಳಿಸಿದ ವಿಧವೆಯರು ಇಂತಹ ಬಾಳಿಗಿಂತ ಸಾವೇ ಲೇಸೆಂದು ಸತಿಹೋಗುತ್ತಿದ್ದುದುಂಟು. ವಿಧವೆಗೆ ಇದ್ದುದು ಒಂದೇ ಒಂದು ದಾರಿ ಕಡ್ಡಾಯ ಬ್ರಹ್ಮಚಾರ್ಯ. ಇಲ್ಲವೇ ಗತಿಸಿದ ಗಂಡನೊಂದಿಗೆ ಚಿತೆ ಏರಿ ಬೆಂಕಿಯಲ್ಲಿಟ್ಟು ಸುಟ್ಟು ಹೋಗುವುದು. ವಿಧವೆ ಸತಿ ಹೋಗುವುದೇ ಪರಮಧರ್ಮ ಎಂಬುದು ಅಂಗೀರಸನಮಾತಾದರೇ, ಗಂಡನ ಪಾಪಕ್ಷಾಲನಕ್ಕಾಗಿ ಆತನ ಹೆಂಡತಿ ಸತೀ ಹೋಗಬೇಕು. ಆಮೇಲೆ ಇಬ್ಬರೂ ಸ್ವರ್ಗದಲ್ಲಿರಬಹುದೆಂದು ಹಾರಿತನು ಪ್ರತಿ ಪಾದಿಸುತ್ತಾನೆ. ಪರಾಶರ ಸ್ಮೃತಿಯಲ್ಲಿನ ಶ್ಲೋಕಗಳ ಪ್ರಕಾರ ಹಾವಾಡಿಗನು ತನ್ನ ಮಾಟದಿಂದ ಹಾವನ್ನು ಹುತ್ತದಿಂದ ಹೊರಗೆಳೆಯುವಂತೆ, ಸತಿ ಹೋಗುವ ಹೆಂಡತಿ ತನ್ನ ಗಂಡನನ್ನು ನರಕದಿಂದ ಹೊರಗೆಳೆದು ಸ್ವರ್ಗಕ್ಕೆ ಕರೆತರುವಳು. ಹೀಗೆ ಸ್ಮೃತಿಕಾರರು ಸತೀ (ಸಹಗಮನ ಹೋಗುವ) ಯಾಗುವ ವಿಧವೆಯನ್ನು ತನ್ನ ದಿವಂಗತ ಪತಿಯೊಡನೆ ಮೋಕ್ಷ ಪಡೆಯುತ್ತಾರೆಂಬ ಅಭಿಪ್ರಾಯವನ್ನು ಅನುಕೂಲಕ್ಕೆ ತಕ್ಕಂತೆ ವಾಖ್ಯಾನಿಸಿ ಸತೀ ಪದ್ಧತಿಯನ್ನು ಪ್ರೋತ್ಸಾಹಿಸುತ್ತಿದ್ದರು. ಯಾವುದಕ್ಕೂ ಹೇಸದ ಪುರೋಹಿತ ಶಾಹಿಯಿಂದ ಏನೆಲ್ಲಾ ಸಾಧ್ಯ ಎಂಬುದಕ್ಕೆ ವಿಧವೆಗೆ ಒಡ್ಡಿದ ನಿಷೇಧಗಳು ಧಾರುಣ ನಿದರ್ಶನಗಳಾಗಿವೆ.''[೨೭]

''ಬ್ರಾಹ್ಮಣ ಮಹಿಳೆಗೆ ಆಸ್ತಿಹಕ್ಕು ಇರಕೂಡದು, ಸ್ತ್ರೀಯರು ಸ್ವತಂತ್ರವಾಗಿ ಆಸ್ತಿಯನ್ನು ಹೊಂದಲು ಅನರ್ಹರು. ಹೆಂಡತಿ, ಮಗ ಮತ್ತು ಗುಲಾಮ ಇವರು ಗಳಿಸಿದ ಸಂಪತ್ತು. ಅವರು ಯಜಮಾನನ ಸ್ವತ್ತು. ಪುರುಷರ ಸಲುವಾಗಿ ಇರುವ ಮೋಹ ಚಂಚಲ ಪ್ರವೃತ್ತಿ ಮತ್ತು ಹೃದಯ ವಿಹೀನತೆ ಇವುಗಳಿಂದಾಗಿ ಅವರನ್ನು ಎಷ್ಟುತೆಗಳಿದರೂ ಸಾಲದು. ಅವರು ಬಹಳ ಕೀಳು ತರಗತಿಯವರು. ಇತ್ಯಾದಿ ವಿಚಾರಗಳು ಸ್ಮೃತಿಕಾರರ ಕಾಲದಲ್ಲಿ ಮೇಲಿಂದ ಮೇಲೆ ಕೇಳಿಬರುತ್ತವೆ. ಸ್ಮೃತಿಕಾರರ ಕಾಲದಲ್ಲಿ ಮಹಿಳೆಯ ಬದುಕಿಗೆ ಗ್ರಹಣ ಹಿಡಿದ ಕಾಲ ಮನುವನ್ನೊಳಗೊಂಡಂತೆ ಎಲ್ಲ ಸ್ಮೃತಿಕಾರರು ಮಹಿಳೆಯ ಸ್ಥಾನಮಾನದೊಂದಿಗೆ ಚಲ್ಲಾಟ ನಡೆಸಿದರು. ಒಂದೆಡೆ ದೇವಿ, ಮಾತೆ ಎಂದು ಆದರ್ಶೀಕರಿಸುತ್ತಾ, ಮತ್ತೊಂದೆಡೆ ಸ್ತ್ರೀಯನ್ನು ಅತ್ಯಂತ ಹೀನಾಯವಾಗಿ ಕಂಡರು. ಸಮಾಜದ ಬಹುದೊಡ್ಡ ಭಾಗವನ್ನು ವಿಧ್ಯಾವಿಹಿನರನ್ನಾಗಿಸಿ ಬಾಲ್ಯ ವಿವಾಹದ ಸುಳಿಯಲ್ಲಿ ಸಿಲುಕಿಸಿ ಶಕ್ತಿಹ್ರಾಸರನ್ನಾಗಿ ಮಾಡಿ, ಮಹಿಳೆಯರನ್ನು ಕ್ರಿಮಿಗಳಂತೆ ನಡೆಸಿಕೊಂಡರು. ಪುರುಷನ ವಿಕಾರ ನಮಸ್ಸಿನ ಸ್ವಾರ್ಥ ಮತ್ತು ದೌರ್ಬಲ್ಯಗಳಿಗೆ ಸ್ಮೃತಿಗಳು ಧಾರ್ಮಿಕ ಅಂಗೀಕಾರ ದೊರಕಿಸಿಕೊಟ್ಟವು. ಸ್ಮೃತಿಗಳಲ್ಲಿ ಕ್ರೂಢಿಕರಿಸಿರುವ ವಿಚಾರಗಳೆಲ್ಲವೂ ಅತೀವವಾದ ಸ್ತ್ರೀ ದ್ವೇಷದಂದ ಕೂಡಿದವುಗಳಾಗಿವೆ. ಇವುಗಳ ಹಿನ್ನೆಲೆಯಲ್ಲಿ ಪುರುಷ ಪ್ರವೃತ್ತಿ ಸ್ವಾರ್ಥ ಕೆಲಸ ಮಾಡಿದೆ. ಮಹಳೆಯಾವತ್ತಿಗೂ ಪುರುಷನಿಗಿಂತಲೂ ಎತ್ತರಕ್ಕೆ ಹೋಗಕೂಡದು. ಅವಳು ಸದಾ ಪುರುಷಾವಲಂಬಿಯಾಗಿರಬೇಕು. ಪುರುಷನ ಕಾಲಕೆಳಗೆ ಬಿದ್ದಿರಬೇಕು. ಎಂಬುದು ಧರ್ಮದ ಹೆಸರಿನಲ್ಲಿ ಸುಲಭವಾಗಿ ಮತ್ತು ಸರಳವಾಗಿ ನಡೆಯುತ್ತಾ ಬಂದಿದೆ.''[೨೮]

''ಸ್ಮೃತಿಗಳ ಉಗಮದಿಂದ ಹೆಣ್ಣಿನ ಜನನವೇ ಅನಿಷ್ಟವಾಗಿ ಪರಿಣಮಿಸಿತು. ಮನು ಬರೆದ ಸ್ಮೃತಿ ಹಿಂದೂ ಧರ್ಮದ ಪವಿತ್ರ ಗ್ರಂಥವಾಗುವುದರೊಂದಿಗೆ, ಅದು ಮನುಷ್ಯ, ಮನುಷ್ಯರ ಮಧ್ಯೆ ಅಗಾಧವಾದ ಕಂದರ ತೋಡಿತು. ಮನುಕುಲವನ್ನು ವರ್ಣಾಧಾರಿತವಾಗಿ ವಿಂಗಡಿಸಿದ್ದಷ್ಟೆ ಅಲ್ಲ, ವರ್ಣಾಶ್ರಮ ಮರ್ದ ಬೇಲಿಯನ್ನು ಉಕ್ಕಿನಿಂದ ನಿರ್ಮಿಸಿದನು. ಈ ಬೇಲಿದಾಟುವ ಪ್ರಯತ್ನ ಮಾಡಿದವರಿಗೆ ಶಿಕ್ಷೆಗಳನ್ನು ನಿರ್ಣಯಿಸಿದನು. ಹೀಗೆ ನಿರ್ಣಯಿಸಿದ

ಶಿಕ್ಷೆಗಳನ್ನೆಲ್ಲಾ ರಾಜಸತ್ತೆ ನಿರ್ಧಯವಾಗಿ ಬಳಕೆಯಲ್ಲಿ ತಂದಿತು. ಮನು ಒಟ್ಟು ಮನುಷ್ಯರ ಸಾಮಾಜಿಕ ಬದುಕಿನ ವಿಭಜನೆ ಮಾಡಿದ್ದಷ್ಟೆ ಅಲ್ಲ. ಎಲ್ಲಾ ವರ್ಣದ ಸ್ತ್ರೀಯರಿಗೆ ವಿಶೇಷ ಕಾನೂನುಗಳನ್ನು ಮಾಡಿದನು. ಮೇಲು ನೋಟಕ್ಕೆ ಈ ಕಾನೂನುಗಳು ಮಹಿಳೆಯರನ್ನು ಗೌರವದ ಸ್ಥಾನಕ್ಕೇರಿಸಿದರೂ ವಾಸ್ತವವಾಗಿ ಅದರಲ್ಲಿ ಪುರುಷ ಸ್ವಾರ್ಥ ಮತ್ತು ಹಿತಾ ಸಕ್ತಿಗಳು ಅಡಗಿತ್ತು. ಸ್ತ್ರೀ ಮತ್ತು ಶೂದ್ರರು ಸಮಾನರೆಂದು ಹೇಳುತ್ತಲೇ ದ್ವಂದ್ವತೆಯನ್ನು ಸೃಷ್ಟಿಸಿದನು''.[೮] ಇಂತಹ ಪುರುಷ ಪಕ್ಷಪಾತಿ ಕಾನೂನುಗಳು ಆಳವಾಗಿ ಬೇರು ಬಿಟ್ಟಿರುವ ಪುರುಷರ ಅನ್ಯಾಕ್ರಮಣಶೀಲತೆಗೆ ಸಾಕ್ಷವಾಗಿರುವ ಮನುಸ್ಮೃತಿಯನ್ನು ಹಿಂಧೂ ಧರ್ಮದ ಧಾರ್ಮಿಕ ಗ್ರಂಥವಲ್ಲ ಎಂದು ಹೇಳುವ ಎಂಟೆದೆ ಇದುವರೆಗೂ ಯಾವ ಸನಾತನಿಗೂ ಬಂದಿಲ್ಲ.

''ಮನುವಿನ ಕರಾಳ ಶಾಸನದಿಂದಾಗಿ ಮಹಿಳಯರ ಆಧ್ಯಾತ್ಮ ಸಾಧನೆಯ ಅವಕಾಶಗಳು, ಶಿಕ್ಷಣದ ಹಕ್ಕುಗಳನ್ನು ಕಸಿದುಕೊಂಡಂತಾಗಿ ಮಹಿಳೆ ಸಂಪೂರ್ಣವಾಗಿ ಕತ್ತಲಿನಲ್ಲಿಯೇ ಇರುವಂತಾಯಿತು. ಮೂಢನಂಬಿಕೆಗಳು ಬೆಳೆದು ಪತಿಯೇ ಪರದೈವ ಎಂದು ತಿಳಿದು ಪುರುಷನ ಆಸ್ತಿ ಎಂಬ ಭಾವನೆ ಪ್ರಬಲವಾಯಿತು. ಸ್ತ್ರೀ ಧಾರ್ಮಿಕ ನಂಬಿಕೆಗಳಿಗೆ ಬಲಿಯಾಗಿ, ಪುರುಷನಿಗೆ ಬದುಕಿನುದ್ದಕ್ಕೂ ವಿಧೇಯಳಾಗಿದ್ದುಕೊಂಡು ಮರಣಾ ನಂತರವೂ ಪತಿಯ ಆಧೀನಳೆಂಬ ಪರಿಕಲ್ಪನೆಯಿಂದಾಗಿ ಸತೀ ಸಹಗಮನಕ್ಕೆ ನಾಂದಿಯಾಯಿತು. ಅತೀವ ಸ್ವಾತಂತ್ರ್ಯ, ಅತ್ಯುಚ್ಚ ಗೌರವಗಳನ್ನು ಕಳೆದುಕೊಂಡ ಮಹಿಳೆ ದಾಸಿಯಾದಳು. ದರ್ಮದ ಹೆಸರಿನಲ್ಲಿ ಅಧರ್ಮವನ್ನು, ನೀತಿಯ ಹೆಸರಿನಲ್ಲಿ ಅನೀತಿಯನ್ನು ಬೋಧಿಸಿದ ಮನುಧರ್ಮ ಶಾಸ್ತ್ರವು ವೈದಿಕ ಧರ್ಮದ ಅತ್ಯದ್ಭುತ ದಾಖಲೆಯಾಗಿ ಉಳಿದು ಬಂತು. ಸ್ಮೃತಿಕಾರರು ರೂಢಿಗೆ ತಂದ ಎಲ್ಲಾ ವಿಧಿವಿಧಾನಗಳು, ಕರ್ಮಾಚರಣೆಗಳು ಬೌದ್ಧಿಕ ಧಾಳಿಯೊಂದರ ಸಾಂಕೇತಿಕವಾಗಿ ಉಳಿದು ಬಂದವು. ಇಡೀ ಸಮುದಾಯವನ್ನೇ ಧಾರ್ಮಿಕ ದಾಸ್ಯಕ್ಕೀಡು ಮಾಡಿದ ಪುರೋಹಿತ ಶಾಹಿಯ ವ್ಯವಸ್ಥಿತ ಸಂಚು. ಸ್ಮೃತಿಗಳಲ್ಲಿ ವ್ಯಕ್ತವಾಗುತ್ತದೆ. ಇದನ್ನೇ ಎ.ಎ. ಮ್ಯಾಕ್‌ಡೊನೆಲ್ ತಮ್ಮ ಗ್ರಂಥ History of sanskrit Literature ದಲ್ಲಿ ಹೀಗೆ ಹೇಳುತ್ತಾರೆ.

" Looking back on the vost mass ritual and usage regulated by sutras, weare tempted to conclude that, it was entirely conscious work of an idle priesthood invented to enslave and maintain spritual of winds of Hindu people ".[೩೦]

ಹೆಣ್ಣನ್ನು ಮನು ಎಷ್ಟೊಂದು ಕ್ಷುಲ್ಲಕವಾಗಿ ಕಂಡಿದ್ದಾನೆಂದರೇ ಹೆಂಗಸರು ಚೆಲುವಿಕೆಗಾಗಲಿ, ವಯಸ್ಸಿಗಾಗಲಿ ಹೆಚ್ಚು ಮಹತ್ವ ಕೊಡುವುದಿಲ್ಲ. ಗಂಡಸು (ಆತ) ಸುಂದರನಿರಲಿ, ಕುರೂಪಿಯಾಗಿರಲಿ ಗಂಡನೊಬ್ಬ ಸಿಕ್ಕರೇ ಸಾಕು. ಪುರುಷನಿಗಾಗಿ ಅವರು ಮೋಹಿಸುತ್ತಾರೆ. ಆದ್ದರಿಂದ ಹೆಂಗಸರು ಎಷ್ಟು ಕಟ್ಟು ನಿಟ್ಟಿನಲ್ಲಿಟ್ಟದ್ದರೂ ತಮ್ಮ ಗಂಡಂದಿರಿಗೆ ಮೋಸ ಮಾಡಲು ಹಿಂಜರಿಯುವುದಿಲ್ಲ ವೆಂಬುದನ್ನು ಗಮನಿಸಿದರೇ ಅವಳು ನಂಬಿಕೆಗೆ ಅನರ್ಹಳು ಎಂದೇ ಭಾವಿಸಲಾಗಿದೆ. ಮೇಲಿನ ಹೇಳಿಕೆಯನ್ನು ಗಮನಿಸಿದಾಗ ಇಂದು ಅತ್ಯಾಚಾರಗಳು ಹೆಣ್ಣಿನ ಮೇಲೆ ನಡೆಯುತ್ತಿವೆಯೋ ಅಥವಾ ಗಂಡಿನ ಮೇಲೆ ನಡೆಯುತ್ತಿವೆಯೋ ಎಂಬುದನ್ನು ಪರಿಶೀಲಿಸುವುದು ಅಗತ್ಯವೆನೋ ಎಂಬಂತ ವ್ಯಂಗದ ಮಾತೊಂದು ಕಣ್ಣಮುಂದೆ ಸುಳಿಯುತ್ತದೆ.

ಮನುವಿನಲ್ಲಿ ಹೆಣ್ಣಿನ ಪಾವಿತ್ರ್ಯದ ಕಲ್ಪನೆ ವಿಚಿತ್ರವಾಗಿದೆ. ಆತ ಹೇಳುತ್ತಾನೆ. ಉತ್ತಮ ಜಾತಿಯ ಸ್ತ್ರೀಯರನ್ನು ಶೂದ್ರನು ಅನುಭವಿಸಿದರೇ ಅವನನ್ನು ಕೊಂದು ಹಾಕಬೇಕು. ಅವಳ ತಂದೆ ಒಪ್ಪಿದರೇ ಶುಲ್ಕ ಕೊಟ್ಟು ಅವಳನ್ನು ಕೂಡಿಕೊಳ್ಳಬಹುದು. ಹೆಣ್ಣಿನ ಬದುಕಿನಲ್ಲಿ ಪುರುಷ ಪ್ರಾಧಾನ್ಯತೆ ಎಷ್ಟೊಂದು ನಾಜೂಕಾಗಿ ಮನೆಮಾಡಿರುವುದು ಇದರಿಂದ ಅರಿವಾಗುತ್ತದೆ. ಕೆಳ ಜಾತಿಯ ಹೆಣ್ಣಿನ ಮೇಲೆ ಮೇಲ್ಜಾತಿಯವರ ಅತ್ಯಾಚಾರವನ್ನು ಸಹಿಸಬಹುದು. ಎಂದು ಹೇಳುತ್ತದೆ. ಕೆಳಜಾತಿಯ ಹೆಂಗಸು ಮೇಲು ಜಾತಿಯ ಪುರುಷನ ಸಂಬಂಧದಿಂದ ಏಳು ಸಂತತಿಯನ್ನು ಪಡೆದರೇ ಅವಳು ಉಚ್ಛ ಜಾತಿಯಲ್ಲಿ ಜನಿಸುತ್ತಾಳೆ. ಎಂದು ಹೇಳುವುದರ ಮೂಲಕ ಹೆಣ್ಣು ಜಾತಿ ಶ್ರೇಷ್ಠತೆಯ ವ್ಯಸನದಲ್ಲಿ ಮುಳುಗೇಳುವಂತೆ ಮಾಡಿದ್ದಾನೆ. ಮನುಸ್ಮೃತಿ ಸ್ತ್ರೀಯರ ವಿಷಯದಲ್ಲಿ ಆಕೆಯನ್ನು ಹೇಗೆ ಗುಲಾಮಳನ್ನಾಗಿ ಮಾಡಿಕೊಳ್ಳಬೇಕೆಂಬುದನ್ನು ಪ್ರಾಧಾನವಾಗಿಟ್ಟುಕೊಂಡಿದೆ. ಆತ ಸ್ಥಾಪಿಸುವ ಅಸಮಾನತೆ ಬ್ರಾಹ್ಮಣ ಹೆಣ್ಣನ್ನು ಗುಲಾಮಳನ್ನಾಗಿ ನೋಡುವಂತೆ ನಿರ್ದೇಶಿಸುತ್ತದೆ. ಆದ್ದರಿಂದ ಹೆಣ್ಣು ಎಲ್ಲಾ ಜಾತಿಯಲ್ಲೂ, ಎಲ್ಲಾ ವರ್ಗದಲ್ಲಿಯೂ ಧಾರ್ಮಿಕ ದಬ್ಬಾಳಿಕೆ ಮತ್ತು ಪುರುಷರ ದಬ್ಬಾಳಿಕೆಗೆ ಸಿಕ್ಕು ಬೆಂದು ಹೋಗಿದ್ದಾಳೆ. ಉತ್ತಮ ಜಾತಿಯ ಹೆಣ್ಣಿಗೂ ಉಪನಯನವಿಲ್ಲ. ಯಜ್ಞೋಪವಿತ್ ಇಲ್ಲ. ಮಂತ್ರೋಪದೋಶವಿಲ್ಲ, ವೇದಾಧ್ಯಯನದ ಅಧಿಕಾರವಿಲ್ಲ. ಆಕೆ ಪಾಪಯೋನಿಜೆ, ಅವಳು ದ್ವಿಜಳಲ್ಲ ಹೀಗೆ ತನ್ನನ್ನೆ ಹಡೆದ, ತನ್ನ ಕೈಹಿಡಿದ, ತನ್ನಿಂದಲೇ ಹುಟ್ಟಿದ, ಹೆಣ್ಣನ್ನು ಕೀಳಾಗಿ ಕಂಡ ಧರ್ಮಶಾಸ್ತ್ರ ಮನುಸ್ಮೃತಿಯಾಗಿದೆ.

ಹುಡುಗಿ, ಯುವತಿ, ಮುದುಕಿ ಅಥವಾ ಹೆಂಗಸರು ಮನೆಯಲ್ಲಿ ತನ್ನ ಯಜಮಾನನ್ನು ಕೇಳದೇ ಸ್ವತಂತ್ರ್ಯವಾಗಿ ಯಾವ ಕೆಲಸವನ್ನು ಮಾಡುವಂತಿಲ್ಲ. ಅಂದರೇ ಸ್ತ್ರೀಯ ಜಾಣ್ಮೆ, ಪ್ರತಿಭೆ ಸ್ವತಂತ್ರವಾಗಿ ಹೊರಬರುವಂತಿಲ್ಲ. ಅದು ಪುರುಷನ ಮುಖಾಂತರವೇ ಪ್ರಕಟಗೊಳ್ಳಬೇಕು. ಆತನ ಸಮ್ಮತಿಯಿಲ್ಲದಿದ್ದರೇ ಸ್ತ್ರೀ ಎಂಥ ಪ್ರತಿಭಾ ವಂತಳಾದರೂ ತೆಪ್ಪಗಿರಬೇಕೆಂದು ಮನು ಹೇಳುತ್ತಾನೆ. ಸ್ತ್ರೀ ಕಾಮೋತ್ತೆಜಿತಳಾದ್ದರಿಂದ ತಾತ್ಕಾಲಿಕ ವೈರಾಗ್ಯದಿಂದ ಬ್ರಹ್ಮ ಸಿದ್ದಿಗೆ ಹೊರಟ ಎಷ್ಟೊ ಮಂದಿ, ಲೈಂಗಿಕ ಸಂಬಂಧದಿಂದ ಭ್ರಷ್ಟರಾದುದುಂಟು. ಆದ್ದರಿಂದ ಕಾಮಜನ್ಯ ವ್ಯಸನಗಳಾದ ಪಾನ, ದ್ಯುತ, (ಜೂಜು) ಬೇಟೆ ಮತ್ತು ಸ್ತ್ರೀಯರು ಈ ನಾಲ್ಕು ಹೆಚ್ಚು ಕಠಿಣ ಶೀಲಗಳು ಅತ್ಯಂತ ದುಃಖತರುವಂಥವು ಎಂಬುದಾಗಿ ಪುರುಷನ ದೌರ್ಬಲ್ಯಕ್ಕೆ ಸ್ತ್ರೀಯನ್ನು ನೆಪಮಾಡಿ ಪುರುಷ ನಿಯಂತ್ರಣವನ್ನು ಮನು ವಿಧಿಸುತ್ತಾನೆ.

ಮನುವಿನ ಕಾಲಕ್ಕೆ ಅಂತರ್ ಜಾತಿ ವಿವಾಹಗಳು ಜರುಗುತ್ತಿದ್ದು, ಜಾತಿ ಮತ್ತು ವರ್ಗ ಸಂಕರಗಳು ಆರಂಭವಾಗಿತ್ತೆಂದು ಕಾಣುತ್ತದೆ. ಅದಕ್ಕೆ ಕೆಲವು ಕಟ್ಟಳೆಗಳನ್ನು ವಿಧಿಸುತ್ತಾನೆ. ಶುಭಲಕ್ಷಣಗಳುಳ್ಳ ಸತ್ಕುಲ ಪ್ರಸೂತಳಾದ, ಸೌಂದರ್ಯ ವತಿಯಾದ ಸ್ವಜಾತಿ ಸ್ತ್ರೀಯನ್ನು ವರಿಸಬೇಕು ಎಂದು ಹೇಳುತ್ತಾನೆ. ಪತಿವ್ರತಾ ಸ್ತ್ರೀಯು ಸ್ವವರ್ಣದವಳಾದರೇ ಅವಳು ತನ್ನ ಜೀವಿತ ಕಾಲದಲ್ಲಿ ಮೃತಳಾದಾಗ ಯಜ್ಞ ಪಾತ್ರ ಸಹಿತವಾಗಿ ಔಪಾಸನಾಗ್ನಿಗಳಿಂದ ಸುಡಬೇಕು. ಅಂದರೆ ಹೆಣ್ಣು ಸ್ವಜಾತಿ, ಸ್ವವರ್ಣದವಳಾದರೇ ಮಾತ್ರ ಶಾಸ್ತ್ರೋಕ್ತ ಶವ ಸಂಸ್ಕಾರಕ್ಕೆ ಅರ್ಹಳು ಎಂಬಂತೆ ಮನು ಹೆಣ್ಣು ಬದುಕಿರುವಾಗಲೂ, ಸತ್ತ ಮೇಲೂ ಜಾತಿ ಮೀರದಂತೆ ನಿಷೇಧಿಸುತ್ತಾನೆ. ಸ್ತ್ರೀ ಸೇವೆಯನ್ನು ಮನು ಕ್ಷತ್ರಿಯರಿಗೂ ವಿಸ್ತರಿಸಿದ್ದಾನೆ. ಗೂಢಚಾರರ ಪರೀಕ್ಷೆಗೆ ಗುರಿಯಾದ ಹೆಂಗಸರು ರಾಜನಿಗೆ ಗಾಳಿಬೀಸಬೇಕು.

ನೀರು ಕೊಡಬೇಕು. ಧೂಪಹಾಕಬೇಕು, ಸ್ತ್ರೀಯರನ್ನು ಪರೀಕ್ಷಿಸುವಾಗ ಬಟ್ಟೆ, ಬರೆ ಅಲಂಕಾರಗಳೆಲ್ಲವನ್ನು ತೆಗೆದು ನೋಡಬೇಕು. ರಾಜನಿಗೆ ಸ್ತ್ರೀ ಪರಿಚಾರಕರೇ ಹೆಚ್ಚು ಮಂದಿ ಇರಬೇಕು. ಹೆಂಗಸರು, ಸೇವಕರು, ಇವರಿಗೆ ಕೆಲಸದ ಯೋಗ್ಯತೆಯಂತೆ ಸ್ಥಾನಮಾನ, ವೇತನಗಳನ್ನು ಕಲ್ಪಿಸಬೇಕೆಂಬುದು ಮನುವಿನ ಅಭಿಪ್ರಾಯ. ಸ್ತ್ರೀ ಗುಣವು ಮೃದು ಮನೋಹರ, ಮಂಗಳ ಶ್ರೇಯಸ್ಸು, ರೂಪವಾಗಿಬೇಂಕೆಂದು ಗಂಡನು ಅಪೇಕ್ಷಿಸುವುದರಿಂದ ವರ್ಣದಲ್ಲಿ, ಅರ್ಥದಲ್ಲಿ ಸುಖೋಚ್ಛಾರ, ಮೃದು ವರ್ಣ ಸ್ಪಷಾರ್ಥ, ಸುಂದರ, ಮಂಗಲ, ಧೀರ್ಘವರ್ಣ ಹಾಗೂ ಶುಭಾಶಂಸನ ರೂಪವಾದ ಪದಗಳನ್ನು ಹೆಂಗಸಿಗೆ ನಾಮವಾಗಿಡಬೇಕು. ಅಂದರೆ ಹೆಣ್ಣಿಗೆ ಹೆಸರಿಡುವಾಗಲು ಪುರುಷನ ಆಶೋತ್ತರಗಳನ್ನು ಪ್ರತಿನಿಧಿಸುವ ಹೆಸರನ್ನೇ ಇಡಬೇಕು. ಇವಳ ಹೆಸರೂ ಕೂಡ ಅವನಿಗೆ ಇಷ್ಟವಾಗುವಂತಿರಬೇಕು. ಅವಳ ವ್ಯಕ್ತಿತ್ವ ಇಷ್ಟಾರ್ಥಗಳಿಗೆ ಇಲ್ಲಿ ಚೂರಿ ಹಾಕಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಹೆಂಡತಿಯು ಕಾಮಾಭಿಲಾಷೆಯಿಂದ ಗಂಡನನ್ನು ದ್ವೇಷಿಸುವುದಾದರೆ ಒಂದು ವರ್ಷ ಪರೀಕ್ಷಿಸಿ ಅವಳು ಪ್ರೀತಿ ಪಡೆದಿದ್ದರೇ, ಅವಳಿಗೆ ಅನ್ನ, ವಸ್ತ್ರ ಮಾತ್ರ ಕೊಡುತ್ತಿದ್ದು ತಾನು ಬೇರೆ ಮದುವೆಯಾಗಿ ಸುಖಪಡಬಹುದು. ಗಂಡನು ಇನ್ನೊಬ್ಬಳನ್ನು ಮದುವೆಯಾದಾಗ ಮೊದಲಿನ ಹೆಂಡತಿ ಸಿಟ್ಟುಗೊಂಡು ಒಡಾಡುತ್ತಾಳಾದರೇ ಅವಳನ್ನು ಹಗ್ಗದಿಂದ ಬಿಗಿಯಬೇಕು. ಅಥವಾ ತವರು ಮನೆಯಲ್ಲಿ ಬಿಡಬೇಕು. ಮತ್ತೆ ಆಕೆ ವಿವಾಹವಾಗುವಂತಿಲ್ಲ. ಹುಡುಗಿಯನ್ನು ಮೊದಲು ಒಬ್ಬನಿಗೆಕೊಟ್ಟು, ಬಳಿಕ ಇನ್ನೊಬ್ಬನಿಗೆ ಕೊಟ್ಟರೇ ಸುಳ್ಳಾಡಿದ ದಂಡನೆಗೆ ತಂದೆಯು ಪಾತ್ರನಾಗುವನು. ಕನ್ಯಾದಾನಕ್ಕೆ ಸಮ್ಮತಿಸಿ ಶುಲ್ಕ ತೆಗೆದುಕೊಂಡು ಮತ್ತೊಬ್ಬನಿಗೆ ಕೊಡುವುದನ್ನು ಒಳ್ಳೆಯವರು ಯಾರೂ ಮಾಡುವುದಿಲ್ಲ. ಇಷ್ಟೆಲ್ಲಾ ಹೇಳಿದ ಮನು ದ್ವಿಜರು ತುಂಬಾ ಹೆಂಡಿರುಳ್ಳವರಾದರೇ ಜಾತಿಕ್ರಮದಿಂದ ಹಿರಿಮೆಯನ್ನು ತಿಳಿಯಬೇಕು. ಎನ್ನುತ್ತಾನೆ. ದೇಹೋಪಚಾರ, ಧರ್ಮ ಕಾರ್ಯಗಳಿಗೆ ಸ್ವಜಾತಿಯವಳನ್ನು, ಕಾಮಕ್ಕೆ ಪರಜಾತಿಯವಳನ್ನು ನೇಮಿಸಿಕೊಳ್ಳಬೇಕೆನ್ನುತ್ತಾನೆ. ಎಂಥ ವಿಕೃತ, ವಿಷ ಸ್ವಭಾವ ಮನುವಿನದು ಸ್ತ್ರೀಯರ ವಿಚಾರಕ್ಕೆ ಬಂದಾಗ ಎಂದು ಆತಂಕವಾಗುತ್ತದೆ.

ಮದುವೆಯಾಗದ ಯುವತಿಯನ್ನು ಬ್ರಷ್ಟಗೊಳಿಸಿದ ಹೆಂಗಸಿನ ತಲೆಯನ್ನು ಕೂಡಲೇ ಬೋಳಿಸಬೇಕು. ಎರೆಡು ಬೆರಳುಗಳನ್ನು ಕತ್ತರಿಸಬೇಕೆನ್ನುವ ಮನುವೇ ಪುರುಷನ ಲೈಂಗಿಕ ಅತಿ ಕ್ರಮವನ್ನು ಪುರುಷತ್ವದ ಹಿರಿಮೆಯ ಅರ್ಥದಲ್ಲಿ ಅರ್ಥೈಸುತ್ತಾನೆ. ಹೆಣ್ಣಿಗೊಂದು ಬಗೆಯಲ್ಲಿ, ಗಂಡಿಗೊಂದು ಬಗೆಯಲ್ಲಿ ಒಂದೇ ಕೃತ್ಯವನ್ನು ಅರ್ಥೈಸುವುದನ್ನು ನೋಡಿದರೇ ಮನು ಒಬ್ಬ ಸಾಮಾಜಿಕ ರೋಗಿಯಂತೆ ಕಾಣುತ್ತಾನೆ. ಸ್ತ್ರೀಯು ಮೋಹಕವಾದ, ಅಲಂಕಾರ, ಮಾಘುಘೃತಪಯೋರೂಪ ಆಹಾರಗಳು ಯೌವ್ವನದ ಹೊರತು ಇತರ ವಯಸ್ಸಿನಲ್ಲಿ ಶೋಭಿಸುವುದಿಲ್ಲ. ಗಂಡನನ್ನು ಮೆಚ್ಚಿಸಲು ಎಲ್ಲ ಅಂಗ ಸಾಧನೆಗಳನ್ನು ಮಾಡಬೇಕೆಂದು ಸ್ತ್ರೀಯರಿಗೆ ಹೇಳುತ್ತಾನೆ. ತಾಯಿಯಾಗಲಿ, ಸೋದರಿಯಾಗಲಿ, ಮಗಳಾಗಲಿ, ಇವರೊಡನೆ ಗಂಡಸು ಒಂಟಿಯಾಗಿರಬಾರದು. ಏಕೆಂದರೆ ಇಂದ್ರಿಯಗಳು ಬುದ್ಧಿವಂತನ ಮನಸ್ಸನ್ನು ಕೂಡ ಪ್ರಬಲ ಪರವಶತೆಗೆ ಗುರಿಪಡಿಸುತ್ತವಂತೆ ಗಂಡಸಿನ ದೌರ್ಬಲ್ಯವನ್ನು ರಕ್ಷಿಸಲು ಮನು ಸ್ತ್ರೀಯರಿಗೆ ನಿರ್ಬಂಧಗಳನ್ನು ವಿಧಿಸಿದ್ದಾನೆಂದೇ ಹೇಳಬಹುದಾಗಿದೆ.

ಮೇಲಿನವುಗಳನ್ನು ಗಮನಿಸಿದಾಗ ಹೆಣ್ಣಿಗೆ ದ್ವಿತಿಯ ದರ್ಜೆಯನ್ನು ನೀಡಿರುವುದು ಗೋಚರವಾಗುತ್ತದೆ. ಮನುಸ್ಮೃತಿ ದ್ವಿಮುಖ ನಿಲುವುಗಳಿಂದ ಕೂಡಿದೆ. ಎಂದರೇ ತಪ್ಪಾಗಲಾರದು. ಒಂದೆಡೆ ಅತಿಯಾದ ಗೌರವ, ಮತ್ತೊಂದೆಡೆ ಆಕೆಯನ್ನು ಸ್ವಂತ ವ್ಯಕ್ತಿತ್ವವೇ ಇರದಂಥವಳನ್ನಾಗಿ ಗುರುತಿಸುವುದು. ಈ ಪುರುಷ ಪ್ರಾಧಾನ್ಯ ವ್ಯವಸ್ಥೆ ತನಗೆ ಬೇಕಾದ ಸಲಹೆಗಳನ್ನು ಮಾತ್ರ ಒಪ್ಪಿಕೊಂಡು ಧರ್ಮಶಾಸ್ತ್ರಗಳಲ್ಲಿ ಕಂಡು ಬರುವ ಸ್ತ್ರೀಪರವಾದ ನಿಲುವುಗಳನ್ನು ತಳ್ಳಿಹಾಕಿದೆ ಎನ್ನಬಹುದು. ಪಾತಿವ್ರತ್ಯವನ್ನು ಒಪ್ಪಿಕೊಳ್ಳುವ ಈ ಗ್ರಂಥಗಳು, ಗಂಡಸಿಗೆ ಇಂತಹ ನಿರ್ಬಂಧಗಳನ್ನೇಕೆ ಹಾಕಲಿಲ್ಲ? ಹೆಂಡತಿ ಮರಣ ಹೊಂದಿದರೇ ಮರುವಿವಾಹಮಾನ್ಯ, ಆದರೆ ಕಡಿಮೆ ವಯಸ್ಸಿನಲ್ಲಿಯೆ ವೈದವ್ಯ ಪ್ರಾಪ್ತಿಯಾದರೂ ಸ್ತ್ರೀಗೆ ಮಾತ್ರ ಮರುವಿವಾಹ ನಿಷೀದ್ದವೇಕೆ? ಕಾಮಾಸಕ್ತಿ ಕೇವಲ ಹೆಣ್ಣಿನಲ್ಲಿ ಇದೇ ಎನ್ನುವಂತೆ, ಈ ವಿಷಯದಲ್ಲಿ ಗಂಡಿಗೆ ದೌರ್ಬಲ್ಯಗಳೇ ಹೆಚ್ಚಾಗಿರುವಂತೆ ಅವನ ರಕ್ಷಣೆಗೆ ಅವಳನ್ನು ನೇಮಿಸಲಾಗಿದೆ. ಎಂದರೇ ತಪ್ಪಾಗಲಾರದು.

ಇಂದಿಗೂ ಈ ಪ್ರವೃತ್ತಿಗಳು ಧರ್ಮದ ಆಧಾರದ ಮೂಲಕ ಸಮಾಜದ ಉದ್ದಗಲಕ್ಕೂ ಅವುಗಳ ಪ್ರಭಾವ ವ್ಯಾಪಕವಾಗಿ, ತಮ್ಮ ಭಯಕ್ಕಾಗಿ ಹೆಣ್ಣುಗಳ ಕುಲವನ್ನೆ ಬಲಿಪಶುವವಾಗಿಸಿವೆ.

೩.೩. ಮಹಾಕಾವ್ಯಗಳ ರಚನೆಯ ಕಾಲದಲ್ಲಿ ಬ್ರಾಹ್ಮಣ ಮಹಿಳೆ

ಉಪನಿಷತ್ತುಗಳ ಕಾಲಕ್ಕಾಗಲೇ ಸಾಮಾಜಿಕ ಸಂಘಟನೆಯ ಪರಿಕ್ರಮವು ಪ್ರಾರಂಭವಾಗಿತ್ತೆಂಬುದನ್ನು ಈ ಹಿಂದೆಯೇ ಹೇಳಲಾಗಿದೆ. ಸಂಘಟನೆಯ ಪರಿಶ್ರಮದಿಂದಾಗಿ ಭಾರತದ ರಾಜಕೀಯ ಸಂದರ್ಭದಲ್ಲಷ್ಟೇ ಅಲ್ಲ. ಸಾಮಾಜಿಕ ಸಂದರ್ಭದಲ್ಲಿಯಾ ಸಹ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿದವು. ಆರ್ಯರು ಸ್ಥಳೀಯರೊಂದಿಗೆ ರೂಢಿಸಿಕೊಂಡ ರಕ್ತ ಸಂಬಂಧದ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಧಾರ್ಮಿಕ ವಿಧಿ ವಿಧಾನಗಳಲ್ಲಿ ಸಂಕಲ ವ್ಯವಕಲನಗಳು ಮೊದಲಾಗಿದ್ದವು. ಇಂತಹ ಸಂಕ್ರಮಣಾ ವಸ್ಥೆಯಲ್ಲಿ ಮಹಾಕವ್ಯಗಳಾದ ರಾಮಾಯಣ, ಮಹಾಭಾರತಗಳು ಹುಟ್ಟಿಕೊಂಡವು. ಕ್ರಿ.ಪೂ. ೬೦೦ ರಿಂದ ೭೦೦ ರ ಅವಧಿಯಲ್ಲಿ ಎರೆಡು ಹಂತಗಳಲ್ಲಿ ಮಹಾಭಾರತ ಬೆಳೆದು ಬಂದರೇ ಮಹಾಭಾರತದ ಮೊದಲ ಮತ್ತು ಮೂರನೇ ಘಟ್ಟದ ಮಧ್ಯ ಭಾಗದಲ್ಲಿ ಆದಿಕಾವ್ಯ ಎನಿಸಿದ ರಾಮಾಯಣವು ಜನ್ಮತಾಳಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ರಾಮಾಯಣ, ಮಹಾಭಾರತಗಳು ಭರತಖಂಡದ ಸಮಗ್ರ ಸಂಸ್ಕೃತಿಯ ಸ್ವರೂಪದ ಚರಿತ್ರೆಯನ್ನು ಚಿತ್ರಿಸುತ್ತವೆ ಎಂಬ ಕಾರಣದಿಂದ ಇವುಗಳನ್ನು ಇತಿಹಾಸಗಳೆಂದು ಕರೆಯುತ್ತಾರೆ.

ಈ ಇತಿಹಾಸಗಳ ಕಾಲದಲ್ಲಿ ಮಹಿಳೆಯ ಬಗ್ಗೆ ಪುರುಷ ಮನಸ್ಸು ಉದಾರವಾದುದು, ವಿಶಾಲವಾದುದು ಆಗಿತ್ತಾದರೂ, ಕ್ರಮೇಣ ಈ ಅವಧಿಯ ಎರಡನೆ, ಮೂರನೆ ಕಾಲಘಟ್ಟದಲ್ಲಿ ಮಹಿಳೆಗಿದ್ದ ಗೌರವ, ಸ್ವಾತಂತ್ರ್ಯ ಸಂಕುಚಿತಗೊಳ್ಳುವುದನ್ನು ಗುರುತಿಸಬಹುದಾಗಿದೆ. ಸ್ತ್ರೀಯರುಯಾವಾಗಲೂ ಗೌರವಾರ್ಹರು, ಅವರು ಪೂಜೆಗೊಳ್ಳುವಲ್ಲಿ ದೇವತೆಗಳು ಆನಂದಿಸುತ್ತಾರೆ. ಮೂರು ವಸ್ತುಗಳು ಅಶುದ್ಧವಾಗುವುದಿಲ್ಲ. ಸ್ತ್ರೀಯರು ರತ್ನಗಳು, ಮತ್ತು ನೀರು ಸ್ತ್ರೀಯರನ್ನು ವಧಿಸಲಾಗದು ಎಂಬಿತ್ಯಾದಿ ಉಲ್ಲೇಖಗಳು ಮಹಾಭಾರತದಲ್ಲಿ ಕಾಣಸಿಗುತ್ತವೆ.

ಋಗ್ವೇದದ ಕಾಲದಲ್ಲಿಯಂತೆ ಹೆಣ್ಣಿಗೆ ಇತಿಹಾಸ ಕಾಲದಲ್ಲಿಯಾ ವಿಧ್ಯಾಭ್ಯಾಸದ ಅವಕಾಶವಿತ್ತು. ಉದ್ಯೋಗ ಪರ್ವದ ಉಲ್ಲೇಖವೊಂದರಲ್ಲಿ ಕ್ಷತ್ರಿಯ ಗೃಹಿಣಿಯೊಬ್ಬಳು ತನ್ನ ಪಾಂಡಿತ್ಯಕ್ಕೆ ಹೆಸರಾಗಿದ್ದಳು. ಎಂದು ತಿಳಿದು ಬರುತ್ತದೆ. ದ್ರೌಪದಿಯು ತನ್ನ ತಂದೆಯ ಮನೆಯಲ್ಲಿ ವಿಧ್ಯಾಭ್ಯಾಸ ಹೊಂದಿದ್ದಳೆಂದು ಮಹಾಭಾರತ ತಿಳಿಸುತ್ತದೆ. ಬಾಳ ಸಂಗಾತಿಯನ್ನು ಆಯ್ಕೆ, ಮಾಡಿಕೊಳ್ಳುವಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವಿತ್ತು. ವನಪರ್ವದ ಪ್ರಸಿದ್ಧ ಕತೆಯೊಂದರಲ್ಲಿ ಒಬ್ಬ ದೊರೆ ತನ್ನ ಮಗಳಿಗೆ ಇಚ್ಚಿಸಿದ ವರನನ್ನು ಆಯ್ಕೆ ಮಾಡಿಕೊಳ್ಳಲು ಹೇಳುತ್ತಾರೆ. ಸಾಮಾಜಿಕವಾಗಿ ಹೆಣ್ಣಿಗೆ ಪಾತಿವ್ರತ್ಯದ ಬಗ್ಗೆ ಕಟ್ಟುಗಳಿರಲಿಲ್ಲ. ಲೈಗಿಕ ನಿಷೇಧ ವಿರಲಿಲ್ಲ. ಬಹುಪತ್ನಿತ್ವ, ಬಹುಪತಿತ್ವ ರೂಡಿಯಲ್ಲಿದ್ದುದ ಕ್ಕೆ ದ್ರೌಪದಿ ಅತ್ಯುತ್ತಮ ನಿದರ್ಶನ. ಅಂತರ್ಜನಾಂಗ ವಿವಾಹ ಪದ್ಧತಿಗಳು, ಪ್ರತಿಲೋಮ ವಿವಾಹ ಕ್ರಮಗಳು ಈ ಕಾಲದಲ್ಲಿ ಚಾಲ್ತಿಯಲ್ಲಿತ್ತು. ಆರ್ಯರು ಅನಾರ್ಯಕನ್ಯೆಯನ್ನು ಲಗ್ನವಾಗುತ್ತಿದ್ದರು. ಎಂಬುದಕ್ಕೆ ಶಂತನು, ಮತ್ಸಗಂಧಿ, ಭೀಮ ಹಿಡಿಂಬೆ ಅನಿರುದ್ಧ ಉಷೆಯರ ವಿವಾಹಗಳು ಉದಾಹರಣೆಯಾಗಿವೆ. ವರ್ಣಪದ್ಧತಿ ಅಷ್ಟಾಗಿ ಗಟ್ಟಿಯಾಗಿರಲಿಲ್ಲ. ನಿಯೋಗ ಪದ್ಧತಿ ರೂಢಿಯಲ್ಲಿತ್ತು. ಕುಂತಿಗೆ ಮದುವೆಗೆ ಮೊದಲೇ ಮಗುವಾಗಿದ್ದರೂ, ಸಮಾಜದಲ್ಲಿ ಗೌರವವಿತ್ತು. ನಿಯೋಗದಿಂದ ಅವಳು ಪಡೆದ ಮಕ್ಕಳನ್ನು ಸಮಾಜ ಆಧರಿಸಿತ್ತು. ಮಹಿಳೆಯರು ರಾಜಕಾರಣದಲ್ಲಿ ಪಾತ್ರವಹಿಸಿದ್ದರು. ಅಪಹರಣ ವಿವಾಹ ಪದ್ದತಿ ರೂಢಿಯಲ್ಲಿತ್ತೆಂಬುದಕ್ಕೆ ಕೃಷ್ಣ ರುಕ್ಮಿಣಿ, ಅರ್ಜುನ, ಸುಭದ್ರೆಯರ ವಿವಾಹಗು ನಿದರ್ಶನಗಳಾಗಿದ್ದವು.

''ಮಹಾಭಾರತ ಕಾಲದ ಮಹಿಳೆಯರು ಪರಂಪರಾಗತವಾಗಿ ದತ್ತವಾದ ಪಾತ್ರ ಪಾತಳಿಯನ್ನು ಹೊಂದಿದವರಾಗಿದ್ದರೂ ದೃಢತೆ ಘನತೆಯುಳ್ಳವರಾಗಿದ್ದರು. ಉದಾಹರಣೆಗೆ ದ್ರೌಪದಿಯ ವ್ಯಕ್ತಿತ್ವವನ್ನು ಪರಿಶೀಲಿಸಬಹುದು. ದ್ರೌಪದಿ ವಿದ್ಯಾವಂತೆ ಪಂಡಿತೆ ಎಂದು ಕರೆಯಿಸಿಕೊಂಡವಳು. ಪತ್ನಿಯಾಗಿ ವೈವಾಹಿಕ ಸಂಬಂಧವನ್ನು ಬಹುಜಾಣ್ಮೆಯಿಂದ ನಿರ್ವಹಿಸಿದ ಮಹಾನ್ ಸ್ತ್ರಿ. ಅತ್ಯಂತ ಪ್ರಜ್ವಲ ವ್ಯಕ್ತಿತ್ವದ ಆಕೆಗೆ ಭಯವೇನೆಂದರೇನೆಂದೇ ತಿಳಿದಿರಲಿಲ್ಲ. ದೃಢ ನಿಶ್ಚಯದವಳು. ಮನಸ್ಸಿನಲ್ಲಿರುವುದನ್ನು ಧೈರ್ಯವಾಗಿ ಸ್ಪಷ್ಟವಾಗಿ ನುಡಿಯುವ ಕೆಚ್ಚುಳ್ಳವಳಾಗಿದ್ದಳು. ಮರ್ಯಾದೆ ಹೋಗುವಂತ, ಬೆಪ್ಪು ಗಟ್ಟುವಂತಹ ಸಂದರ್ಭಗಳಲ್ಲಿಯಾ ಕೂಡ, ಚಿಂತೆಯ ಹೊರೆ ತಲೆಮೇಲಿದ್ದರೂ, ಅತ್ಯಂತ ಸಮಚಿತ್ತತೆಯಿಂದ ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಂಡವಳು''.[೧೧] ಮಹಿಳೆಯ ಎಲ್ಲಾ ಬಗೆಯ ಸಾಮಾಜಿಕ ಬಾಂಧವ್ಯಗಳ ಬಗ್ಗೆ ಮಹಾ ಭಾರತದಲ್ಲಿ ಉದಾಹರಣೆಗಳಿರುವಂತೆಯೇ ವಿರೋದಾಭ್ಯಾಸಗಳೂ ಇವೆ. ಕಾರಣ ಭಾರತ ಏಕಾವಧಿಯಲ್ಲಿ ಹುಟ್ಟಿದ್ದಲ್ಲ. ಸುಮಾರು ೧.೦೦೦ ವರ್ಷಗಳ ಹರವಿನಲ್ಲಿ ಹುಟ್ಟಿಬೆಳೆದು, ಪರಿಷ್ಕರಣ ಗೊಳ್ಳುತ್ತಾ ಹೋದದ್ದರಿಂದ ಈ ಸುಧೀರ್ಘ ಕಾಲಾವಧಿಯಲ್ಲಿ ಮಹಿಳೆಯೂ ಸಹ ಸಾಕಷ್ಟು ಏಳು ಬಿಳುಗಳನ್ನು ಅನುಭವಿಸುತ್ತಲೇಬಂದಳು. ಇತಿಹಾಸ ಕಾಲದ ಪ್ರಾರಂಭದಲ್ಲಿದ್ದ ಸ್ತ್ರಿ ಸಂಬಂಧಿ ಮೌಲ್ಯಗಳ ಉತ್ಥಾನವು ಬರಬರುತ್ತಾ ಶಿಥಿಲತೆಯಡೆಗೆ ಧಾವಿಸಿತು. ಹೆಣ್ಣನ್ನು ತನ್ನ ಆಶಯಗಳಿಗೆ ಅನುಗುಣವಾಗಿ ಮಾರ್ಪಡಿಸುತ್ತಾ, ಅವಳು ಆಸ್ತಿಯ ಒಂದು ಭಾಗವೆಂದು ಗಂಡು ಲೆಕ್ಕಹಾಕಲಾರಂಭಿಸಿದ್ದರಿಂದ ಹೆಣ್ಣನ್ನು ಜೂಜಿನ ಪಣವಾಗಿ ಒಡ್ಡುವುದು, ಕೊಂಡುಕೊಳ್ಳುವುದು, ಮಾರುವುದು. ಗಂಡಸಿನ ಅಧಿಕಾರವಾಗಿ ಪರಿಣಮಿಸಿತು. ಸತೀ ಪದ್ಧತಿ ರೂಢಿಗೆ ಬಂದು ಮಾದ್ರಿ ಚಿತೆಗೇರಿದಳು. ವರ್ಣ ಪದ್ಧತಿ ಗಟ್ಟಿಗೊಳ್ಳುತ್ತಿದ್ದು, ಶಂತನುವಿಗೆ ಮತ್ಸಗಂಧಿಯನ್ನು ಕೈಹಿಡಿಯಲು ಅಡ್ಡಬಾರದ ಕುಲ, ಕರ್ಣನನ್ನು ಆಧರಿಸುವಾಗ

ಅಡ್ಡಬಂದಿತು. ವೇದೋಪನಿಷತ್ತುಗಳ ಕಾಲದಲ್ಲಿ ಕೇವಲ ಮೂರು ಬಗೆಯಲ್ಲಿದ್ದ ವಿವಾಹ ಪದ್ದತಿಗಳು ನಾಲ್ಕು ಆಗಿ ಗರಿ ಒಡೆದವು. ಋಗ್ವೇದದಲ್ಲಿ ಕನ್ಯೆವರನಿಗೆ ದೇವರಿಂದ ದತ್ತವಾಗಿ ಬಂದರೇ, ಮಹಾಭಾರತದ ಕಾಲಕ್ಕೆ ಬ್ರಾಹ್ಮಣಗಳ ಪ್ರಭಾವದಿಂದಾಗಿ ಕನ್ಯಾದಾನ ಪುಣ್ಯ ತಂದೆ ತಾಯಿಗಳದ್ದಾಯಿತು. ಈ ಪುಣ್ಯ ಪ್ರಾಪ್ತಿಗಾಗಿ ಹೆಣ್ಣು ಮಕ್ಕಳು ಅನರ್ಹರ ಮಡದಿಯಾಗುವುದು, ಚಾಲ್ತಿಗೆ ಬಂದಿತು. ಹೆಣು ಗಂಡಿನ ಪಾಲಿಗೆ ನಡೆದಾಡುವ ಆಸ್ತಿಯಾಗಿ ಪರಿಣಮಿಸಿದಳು. ಪುತ್ರನ ಹುಟ್ಟಿಗೆ ಅಂಟಿಕೊಂಡ ಪ್ರಾಮುಖ್ಯದ ಫಲವಾಗಿ ನಿಯೋಗ ಪದ್ಧತಿ ಜನ ಪ್ರಿಯವಾಯಿತು. ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಗೃಹಸಾಮ್ರಾಜ್ಞೆ, ಸಹ ಧರ್ಮಿಣಿಯ ಸ್ಥಾನದಿಂದ ಕುಸಿದು ಬಿದ್ದು ಕೇವಲ ಪತಿವ್ರತೆಯ ಮಟ್ಟಕ್ಕೆ ನಿಂತುಕೊಂಡಿತು. ಸಹಧರ್ಮಿಣಿಗಿದ್ದ ವ್ಯಾಪಕ ಅಧಿಕಾರ ಉನ್ನತ ಗೌರವ, ಮನ್ನಣೆಗಳು ಸಂಕುಚಿತಗೊಂಡು ಹೆಣ್ಣು ಕೇವಲ ಪತಿಪಾರಾಯಣೆಯಾಗಿದ್ದುಕೊಂಡು ಅವನ ಇಚ್ಛೆಗಳಿಗೆ ಅನುಗುಣವಾಗಿ ತನ್ನ ಬದುಕನ್ನು ತೆತ್ತುಕೊಳ್ಳಬೇಕಾಗಿ ಬಂತು.

ರಾಮಾಯಣದ ಕಾಲಕ್ಕೆ ಬ್ರಾಹ್ಮಣ್ಯತ್ವದ ಪ್ರಾಬಲ್ಯ ಹೆಚ್ಚಿ, ಪುರುಷರ ಬಿಗಿ ನಿಲುವು ನೀತಿ ನಡೆತೆಗಳ ಕಡ್ಡಾಯ ಅನುಷ್ಠಾನದಿಂದಾಗಿ ಪಾವಿತ್ರ್ಯದ ಕಲ್ಪನೆ ಬಂತು. ಸಕಲ ಸದ್ಗುಣಗಳ ಸಕಾರ ಎನಿಸಿಕೊಂಡ ರಾಮನೂ ಸಹ ಇದರಿಂದಾಗಿ ಸೀತೆಯ ಪಾವಿತ್ರ್ಯವನ್ನು ಪ್ರಶ್ನಿಸುವಂತಾಯಿತು. ಪುಣ್ಯಕ್ಕೆ ವಿಧವೆಯ ಸ್ಥಿತಿ ಅಷ್ಟೇನೂ ಕೆಟ್ಟದಾಗಿರಲಿಲ್ಲ. ಆಕೆಗೆ ಸಮಾಜದಲ್ಲಿ ಗೌರವವಿತ್ತು. ಎಂಬುದಕ್ಕೆ ಸತ್ಯವತಿ ಕುಂತಿಯರು ನಿದರ್ಶನಗಳಾಗಿ ನಿಲ್ಲುತ್ತಾರೆ. ವೇದೋಪನಿಷತ್ತುಗಳ ಕಾಲದಲ್ಲಿ ಹೆಣ್ಣಿಗಿದ್ದ ಅಸಾಧಾರಾಣ ಸ್ವಾತಂತ್ರ್ಯ ಇತಿಹಾಸಗಳ ಕಾಲಕ್ಕೆ ಸೀಮಿತಗೊಳ್ಳುತ್ತಾ ಬರಲು ಮುಖ್ಯ ಕಾರಣ ಬ್ರಾಹ್ಮಣಕಗಳು ಮತ್ತು ಧರ್ಮಶಾಸ್ತ್ರಗಳ ಪ್ರಭಾವ ಹಾಗೂ ಬದಲಾದ ಸಾಮಾಜಿಕ ಸಂದರ್ಭಗಳು. ಕ್ರಿ.ಪೂ. ೨೦೦ ರಿಂದ ಕ್ರಿ.ಶ.೫೦೦ ರವರೆಗಿನ ಸಾಮಾಜಿಕ ಧಾರ್ಮಿಕ ಸ್ಥಿತ್ಯಂತರಗಳಿಂದ ಮಹಿಳೆಯ ಸ್ಥಾನಮಾನಗಳಲ್ಲಿಯಾ ಮಹತ್ತರವಾದ ಬದಲಾವಣೆಗಳು ತಲೆದೋರಿದವು. ಆರ್ಯರು ಸ್ಥಳೀಯ ಸಂಸ್ಕೃತಿಯ ಜನಸಮುದಾಯದೊಂದಿಗೆ ಬೆರೆಯಲಾರಂಭಿಸಿದರು. ಆರ್ಯ ಆಕ್ರಮಿತ ಪ್ರದೇಶಗಳಲ್ಲಿನ ಸ್ಥಳೀಯ ಬದುಕಿನೊಂದಿಗೆ ಸಾಮಾಜಿಕ ಸಂಬಂಧಗಳು ಏರ್ಪಟ್ಟವು. ಪ್ರತಿಲೋಮ ವಿವಾಹಗಳ ಪರಿಣಾಮವಾಗಿ ವೈದಿಕ ಸಮಾಜದಲ್ಲಿ ಆಗುಂತುಕರಾಗಿ ಆಗಮಿಸಿದ ಅನಾರ್ಯ ಮಹಿಳೆಯರಿಗೆ ವೇದಜ್ಞಾನವಿಲ್ಲದ್ದರಿಂದ, ಆರ್ಯ ಮಹಿಳೆಯರು ಭಾಗವಹಿಸುತ್ತಿದ್ದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಅಸಮರ್ಥರಾದರು. ಇದರಿಂದಾಗಿ ಆರ್ಯ ಸ್ತ್ರಿಯರಿಗೂ ಸಹ ಎಲ್ಲಾ ಬಗೆಯ ನಿಷೇಧಗಳನ್ನು ಹೇರಲಾಯಿತು. ಪುರುಷರ ಬಿಗಿ ನಿಲುವು, ಪ್ರಾಧಾನ್ಯತೆಯಿಂದಾಗಿ ಮಹಿಳೆಯರು ತಮ್ಮೆಲ್ಲಾ ಹಕ್ಕು ಬಾಧ್ಯತೆಗಳನ್ನು ಕಳೆದುಕೊಳ್ಳಲಾರಂಭಿಸಿದರು. ಹೆಣ್ಣಿನ ವ್ಯಕ್ತಿತ್ವಕ್ಕೆ ನೂತನ ಆಯಾಮವನ್ನು ತಂದುಕೊಟ್ಟಿದ್ದ ದೃಷ್ಟಾರರ ಚಿಂತನೆಗಳನ್ನು ಗಾಳಿಗೆ ತೂರಲಾಯಿತು. ಪುರೋಹಿತಶಾಹಿ ಪ್ರಾಬಲ್ಯ ಹೆಚ್ಚಾಗಿ ಆಚಾರ್ಯ ನಾಯಕರು ಸಮಾಜದ ನಿಯಂತ್ರಕರಾದರು. ಉಳಿದ ಮೂರುವರ್ಣಾಶ್ರಮದವರನ್ನು ಕಂಡಂತೆ ತಮ್ಮ ಸ್ತ್ರೀಯರನ್ನು ಇವರು ಕಂಡದ್ದು ವಿಪರ್ಯಾಸವೇ ಸರಿ. ಇದರಿಂದಾಗಿ ಮಹಿಳೆಯ ಸ್ವಾತಂತ್ರ್ಯ ಮತ್ತು ಗೌರವಗಳನ್ನುಳ್ಳ ಸ್ಥಿತಿಯಿಂದ ಅಧಃ ಪತನದತ್ತ ತೆರಳಬೇಕಾಗಿಬಂತು. ಕ್ರಿ.ಶ. ೫೦೦ರಿಂದ ಕ್ರಿ.ಶ. ೧೨೦೦ರವರೆಗೆ ನಡೆದ ವಿಧ್ಯಾಮಾನಗಳಿಂದಾಗಿ ಮಹಿಳೆಯ ಸ್ಥಿತಿ ಕಗ್ಗತ್ತಲಿನಲ್ಲಿ ತೊಳಲುವಂತಾಯಿತು.

ನಮ್ಮ ಮಹಾಕಾವ್ಯಗಳು ಪುರಾಣಗಳು ಮತ್ತು ಉಪಾಖ್ಯಾನಗಳಲ್ಲಿ ಚಿತ್ರಿತರಾಗಿರುವ ಪುರುಷಪಾತ್ರಗಳಲ್ಲಿ ಕೆಲವರು ಮುನಿಶ್ರೇಷ್ಠರು, ತಪಸ್ಸಿಗೆಂದೇ ಹುಟ್ಟಿದಂತೆ ಇರುವವರು, ಅಪಾರ ತಪೋಬಲದಿಂದ ದಿವ್ಯ ಶಕ್ತಿಯನ್ನು ಮೈಗೂಡಿಸಿಕೊಂಡಿದ್ದು, ತಮ್ಮ ಇಚ್ಛೆಗೆ ವಿರುದ್ಧವಾದ ಕ್ರಿಯೆಗಳುನಡೆದರೆ ಅದಕ್ಕೆ ಕಾರಣರಾದವರನ್ನು ಶಾಪದಿಂದ ಕೊಂದಾದರೂಸರಿ ಸೇಡು ತೀರಿಸಿಕೊಳ್ಳುವವರು. ಬಹುತೇಕ ಮುನಿಜನರು ತಮ್ಮ ತಪೋಬಲವನ್ನೆಲ್ಲ ಇಂಥ ಸಣ್ಣ, ಸಣ್ಣ ಕೆಲಸಕೆ ಬಳಕೆಮಾಡಿರುವುದೇ ಹೆಚ್ಚು. ಸಾಮಾನ್ಯನಿಗಿರುವಷ್ಟು ಸಂಯಮ ತಾಳ್ಮೆ, ವಿಚಾರ ಬುದ್ಧಿ, ನ್ಯಾಯಾನ್ಯಾಯ ಪರಿಶೀಲನೆ ಅವರಿಗಿಲ್ಲ. ಅಲ್ಲದೇ ಬಹುತೇಕ ಋಷಿವರ್ಯರು ತಮ್ಮ ತಪಃಸಿದ್ದಿಯನ್ನು ಹೆಣ್ಣಿನ ಮೇಲೆ ಪ್ರಯೋಗಿಸಿ, ಪೌರುಷವನ್ನು ಮೆರೆದವರೆ ಅಲ್ಲದೆ ಈ ಎಲ್ಲಾ ತಪಸ್ವಿಗಳು ವೈರಾಗ್ಯ ಹೊಂದಿದವರೆನಲ್ಲ ಎಲ್ಲರೀಗೂ ಪತ್ನಿಯರಿದ್ದಾರೆ. ಅನೇಕರು ಕಾಮುಕರು. ತಮ್ಮ ತಪಸ್ಸಾಚರಣೆಗಿಂತ ಹೆಚ್ಚಾಗಿ ಲೈಂಗಿಕಾಂಕ್ಷೆಗೆ ಒಲಿದವರು. ಅದಕ್ಕಾಗಿ ತಾವುಗಳಿಸಿದ ತಪೋಬಲವನ್ನು ಕಳೆದುಕೊಂಡವರು, ಸಾಮಾನ್ಯ ಜನರಿಗಿಂತ ಹೆಚ್ಚು ದುರ್ಬಲರಾಗಿ ತಪಸ್ವಿಗಳೇ ಕಾಣುತ್ತಾರೆ. ಉದಾಹರಣೆಗೆ ಜಮದಗ್ನಿ, ಗೌತಮ, ಇಂದ್ರ, ಅಗಸ್ತ್ಯ, ವಿಶ್ವಾಮಿತ್ರ ಮುಂತಾದವರು ಇವರೆಲ್ಲಾ ಇತ್ತ ಸರ್ವಸಂಗಪರಿತ್ಯಾಗಿಗಳೂ ಅಲ್ಲ; ಅತ್ತ ತಮ್ಮ ಜೀವಮಾನವೆಲ್ಲಾ ತಪಸ್ಸಾಚರಣೆ ನಡೆಸಿ ಸಿದ್ದಿಸಿದ ದಿವ್ಯ ಜ್ಞಾನದಿಂದ ಲೋಕೋಪಕಾರವಾಗುವಂಥ ಮಹಾತ್ಕಾರ್ಯಮಾಡಿದವರೂ ಅಲ್ಲ. ಒಂದು ರೀತಿಯಲ್ಲಿ 'ಕಪಿಗೆ ಚಪಲತೆ ಸಹಜಂ' ಎಂಬತೆ ಈ ಋಷಿಗಳೆಲ್ಲಾ ಚಪಲ ಚೆನ್ನಿಗರಾಯರು.

ಜಮದಗ್ನಿ ಮಹರ್ಷಿಗೆ ರೇಣುಕಾದೇವಿ ಎಂಬ ಹೆಂಡತಿ ಇರುತ್ತಾಳೆ. ಮಹಾಸಾಧ್ವಿಯಾದ ರೇಣುಕಾ ನದಿಯಿಂದ ತೀರ್ಥವನ್ನು ತರುತ್ತಿದ್ದಾಗ ಎದುರಿಗೆ ಗಂದರ್ವನೊಬ್ಬನು ಬಂದುದನ್ನು ನೋಡಿ ಮನಸ್ಸಿನಲ್ಲಿ ಆತ ಲಕ್ಷಣವಾಗಿದ್ದಾನೆಂದುಕೊಳ್ಳುತ್ತಾಳೆ. ಅಷ್ಟಕ್ಕೆ ಅವಳ ತಪೋಬಲದಿಂದ ನಿಂತಿದ್ದ ಮರಳಿನ ಗಡಿಗೆ ಬಿರಿದು ನೀರು ಸುರಿದುಹೋಗುತ್ತದೆ. ಅದನ್ನು ರೇಣುಕೆ ತನ್ನ ಪತಿಯಾದ ಜಮದಗ್ನಿಗೆ ತಿಳಿಸಿದರೆ ಆತಕೋಪಾವಿಷ್ಟನಾಗಿ ತನ್ನ ಮಕ್ಕಳನ್ನ ಕರೆದು ಆಕೆಯ ತಲೆ ಕಡೆಯುವಂತೆ ಆಜ್ಞೆಮಾಡುವುದೇ? ಕೊನೆಗೆ ಆಕೆಯ ಮಗನಾದ ಭಾರ್ಗವರಾಮ ತಲೆಕಡಿದು, ಪಿತೃವಾಕ್ಯ ಪರಿಪಾಲನೆ ಮಾಡುತ್ತಾನೆ. ಕೊನೆಗೆ ಅವನ ಮಹಾಕಾರ್ಯವನ್ನು ಮೆಚ್ಚಿ ಜಮದಗ್ನಿ ವರನೀಡುತ್ತಾನೆ. ಮತ್ತೆ ತಾಯಿಯನ್ನು ಬದುಕಿಸಿಕೊಡುತ್ತಾನೆಂಬುದೆ ಕಥೆ. ಅದೇನೇ ಇರಲಿ ಯಾವ ತಪ್ಪಿಗೆ, ಯಾವ ಶಿಕ್ಷೆ? ಎಂಬುದು ಇಲ್ಲಿ ಪ್ರಶ್ನಾರ್ಹವಾದದ್ದಾಗಿದೆ. ಒಬ್ಬ ಸುಂದರ ಪುರುಷ ಎದುರಿಗೆ ಬಂದಾಗ ಆತ ಸುಂದರನಾಗಿದ್ದಾನೆ ಎಂದು ಅಂದುಕೊಂಡು ಅವನೊಂದಿಗೆ ವ್ಯಭಿಚಾರವನ್ನು ಮಾಡಿದಳೆಂಬಂತೆ ಈ ಮಹರ್ಷಿ ಭಾವಿಸುವುದೇ ಒಂದು ವೇಳೆ ಹಾಗೆಯೇ ಭಾವಿಸಲಿ ಆಕೆಯನ್ನು ಕೊಲ್ಲಿಸುವ ಅಧಿಕಾರ ಯಾರುಕೊಟ್ಟರು. ಇದು ಪುರುಷನ ಅತಿಕ್ರಮಣವಲ್ಲದೇ ಮತ್ತೇನೂ ಅಲ್ಲ. ಮಗ ತನ್ನ ಪತ್ನಿಯ ತಲೆಕಡಿದರೆ ಜಮದಗ್ನಿಯಂಥ ಮಹರ್ಷಿ ಸಂತೋಷಪಡುತ್ತಾನೆ. ಸಂತೋಷಪಟ್ಟು ನಿನಗೇನು ವರಬೇಕು ಕೇಳು ಎಂದ ಮಗನಿಗೆ ಹೇಳುವುದು ಋಷಿಯ ಅಭಿರುಚಿಯ ಕೀಳುಮಟ್ಟದ್ದು ಎನಿಸುತ್ತದೆ. ಒಟ್ಟಾರೆ ಪುರಾಣ ಕಥೆಗಳಲ್ಲಿಯೂ ಪುರುಷ, ಮಹಿಳೆಯರ ಸಣ್ಣ ತಪ್ಪನ್ನೆ ಬಹುದೊಡ್ಡದನ್ನಾಗಿ ನೋಡಿ ಅಪರಾಧಿ ಸ್ಥಾನದಲ್ಲಿಟ್ಟು ಕೊಲ್ಲುತ್ತಾನೆ. ಆಕೆ ಹೆಂಡತಿಯಾಗಿರಲಿ, ಜನ್ಮಕೊಟ್ಟ ತಾಯಿಯಾಗಿರಲಿ.

ಇಂದ್ರನ ಕತೆ ಇದಕ್ಕಿಂತ ರೋಚಕವಾದುದಾಗಿದೆ. ಇಂದ್ರನು ಸದಾ ವಿಲಾಸ ಜೀವನ ಆತ ಅತಿಕಾಮುಕ, ಗೌತಮನ ವೇಷದಲ್ಲಿ ಹೋಗಿ ಅಹಲ್ಯೆಯನ್ನೆ ಭೋಗಿಸಿದವನು ಇಂದ್ರ ಲೋಕವೇ ಹಾಗೆ. ಅದು ವಿಲಾಸ ಜೀವನದ ಅಂತಃ

ಪುರ, ಸದಾ ರಂಭೆ, ಮೇನಕೆ, ಊರ್ವಶಿ, ತಿಲೋತ್ತಮೆಯರ ನರ್ತನ ವಿಲಾಸವನ್ನು ಸವಿಯುತ್ತಾ ದೇವಾನುದೇತೆಗಳೆಲ್ಲ ಕ್ಲಬ್, ಡಾನ್ಸು ನೋಡುವಂತೆ ನೋಡುತ್ತಾ ಸಂತೋಷ ಪಡುತ್ತಿರುತ್ತಾರೆ. ಒಮ್ಮೆ ಊರ್ವಶಿಯ ನರ್ತನ ನಡೆಯುತಿತ್ತು. ಹಾವಭಾವಗಳಿಂದ ಸಂಗೀತ ನಿನಾದಕ್ಕೆ ಸರಿಯಾಗಿ ಕುಣಿಯುತ್ತಿರಬೇಕಾದರೆ ಆಕೆಯ ಕಾಲಿನ ಗೆಜ್ಜೆಯದಾರ ತುಂಡಾಗಿ ಕಳಚಿಕೊಂಡಿತು. ಆಗ ಉಂಟಾದ ರಸಾಭಾಸಕ್ಕೆ ಇಂದ್ರನಿಗೆ ಕೆಟ್ಟಕೋಪ ಬಂದು ಆಕೆಗೆ ಭೂಲೋಕಕ್ಕೆ ಹೋಗುವಂತೆ ಶಾಪಕೊಡುತ್ತಾನೆ. ನಿಜವಾಗಿನೋಡಿದರೆ ಅಲ್ಲಿ ಊರ್ವಶಿಯ ತಪ್ಪೆ ಇಲ್ಲ. ಗೆಜ್ಜೆ ಒಂದು ಆಭರಣ ಅದು ಕುಣಿಯುವ ರಭಸಕ್ಕೆ ಕಳಚಿಕೊಂಡಿರುವುದು ಸ್ವಾಭಾವಿಕವಾದ ಕ್ರಿಯೆ. ಇಂಥ ಸಹಜ ಕ್ರಿಯೆಯನ್ನು ಅಸಹಜ ಎಂದು ಭಾವಿಸಿದ ದೇವಾನುದೇವತೆಗಳ ಒಡೆಯ ದೇವೇಂದ್ರ ಆಕೆ ಭೂ ಲೋಕದಲ್ಲಿ ಹುಟ್ಟಿ, ಪುರೂರವನ್ನೂ ಎರೆಡು ನಿರ್ಭಂಧಗಳನ್ನು ಮುಂದಿಟ್ಟು ಮದುವೆಯಾಗುತ್ತಾಳೆ. ಆ ನಿರ್ಭಂಧ ಮುರಿದರೇ ಅವನಿಂದ ದೇವಲೋಕಕ್ಕೆ ಹಿಂದರುಗುವುದಾಗಿ ಹೇಳಿರುತ್ತಾಳೆ. ಆ ಕಡೆ ದೇವಲೋಕದಲ್ಲಿ ಊರ್ವಶಿಯಿಲ್ಲದೇ ಎಲ್ಲ ದೇವತೆಗಳು ವ್ಯಥೆಗೀಡಾಗುತ್ತಾರೆ. ಕೊನೆಗೆ ಊರ್ವಶಿಯನ್ನು ಕರೆಸಿಕೊಳ್ಳುವ ತಂತ್ರ ಹೂಡಿ ಪೂರುರವ ನಿರ್ಭಂಧಗಳನ್ನು ಮುರಿಯುವಂತೆ ಮಾಡಿ ಊರ್ವಶಿಯು ಸಾಕಿದ ಪ್ರಾಣಿಗಳನ್ನು ವಿಪರೀತ ಹೊಡೆದು ಅವುಗಳನ್ನು ಕಾಪಾಡಲು ಪೂರೂರವ ನಗ್ನಾವಸ್ಥೆಯಲ್ಲಿ ಓಡುವಂತೆ ಮಾಡಿ ಅದನ್ನು ಊರ್ವಶಿಯ ಕಣ್ಣಿಗೂ ಬೀಳುವಂತೆ ಏರ್ಪಡಿಸಿದ ಗಂದರ್ವರು ಊರ್ವಶಿಯನ್ನು ಇಂದ್ರ ಒಂದು ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಇಲ್ಲಿಯೂ ಕೂಡ ಪುರುಷನ ಭೋಗ ಲಾಲಸೆಗಳಿಗೆ ಸ್ತ್ರೀ ಬಲಿ. ಸ್ತ್ರೀಯಿಂದ ಪುರುಷ ಸಂತೋಷಕ್ಕೆ ಕೊಂಚ ಚ್ಯುತಿ ಬಂದರೂ ಶಾಪ ನೀಡುವುದು. ಆ ತಪ್ಪು ಯಾವ ಕಾರಣದಿಂದಲಾದರೂ ಆಗಿರಲಿ ಕಾರ್ಯ ಕಾರಣ ಸಂಬಂಧವಿರಲೇಬೇಕೆಂಬ ನಿಯಮವಿಲ್ಲ. ಶಿಕ್ಷೆ ಹೆಣ್ಣಿಗೆ ಕಟ್ಟಿಟ್ಟಿದ್ದು. ಪುರುಷ ತನ್ನಿಚ್ಛೆಗನುಗುಣವಾಗಿ, ಇಚ್ಛಿಸಿದಾಗಲೆಲ್ಲಾ ಕುಣಿಸುವ ಗೊಂಬೆಯಂತೆ ಹೆಣ್ಣನ್ನು ಇಲ್ಲಿ ಚಿತ್ರಿಸಲಾಗಿದೆ.

ರಾಮರಾಜ್ಯದ ಕಲ್ಪನೆ ತುಂಬಾ ಹಳೆಯದು ರಾಮನೆಂದರೇ ಸುಖೀ ರಾಜ್ಯದ ಸ್ಥಾಪಕ ಅವನು 'ದೃಷ್ಟ ಸಂಹಾರಕ, ಶಿಷ್ಟರ ಪರಿಪಾಲಕ' ಅವನ ಆಡಳಿತದಲ್ಲಿ ಸುಖಶಾಂತಿ ನೆಮ್ಮದಿ ನೆಲೆಸಿದ್ದು ಪ್ರಜೆಗಳು ಸಂತೋಷದಿಂದಿದ್ದರು ಎಂದು ಜನರ ಕಲ್ಪನೆ. ರಾಮಾಯಣವೆಂಬುದು ರಾಮನ ಆದರ್ಶವನ್ನು ಪಿತೃವಾಕ್ಯ ಪರಿಪಾಲನೆಯನ್ನು ದೃಷ್ಟರ ನಿಗ್ರಹವನ್ನು ಅಯೋಧ್ಯೆಯ ಸಾರ್ಥಕ ಆದರ್ಶರಾಜ್ಯವ್ಯವಸ್ಥೆಯನ್ನು ಹೆಳುವ ಮಹಾಕಾವ್ಯ. ರಾಮನ ವೈಯಕ್ತಿಕ ಬದುಕನ್ನು ಅವಲೋಕಿಸಿದರೆ ನಮಗೆ ತಿಳಿಯುತ್ತದೆ. ರಾಮ ಎಂಥ ಜೀವ ವಿರೋಧಿ ಮನುಷ್ಯ ಎಂಬುದು. ರಾಮ ತನ್ನ ಹೆಂಡತಿಯಾದ ಸೀತೆಯ ಪಾತಿವ್ರತ್ಯವನ್ನೆ ಶಂಕಿಸಿದವನು. ಅದರ ಪರಿಣಾಮದಿಂದ ಅಗ್ನಿ ಪರೀಕ್ಷೆಗೂ ಒಳಪಡಿಸಿದವನು. ಯಾರೋ ಆಡಿದ ಮಾತಿಗೆ ಅಂಜಿ ತುಂಬುಗರ್ಭಿಣಿ ಸೀತೆಯನ್ನು ಕಾಡಿಗೆ ಕಳುಹಿಸಿದವನು. ಸೀತೆ ತನ್ನದಾದ ಯಾವ ತಪ್ಪು ಇಲ್ಲದೇ ವನವಾಸ, ಲೈಂಗಿಕ ಕಿರುಕುಳ ಅಗ್ನಿ ಪರೀಕ್ಷೆ, ಲೋಕಾಪವಾದ ಇತ್ಯಾದಿಗಳೆಲ್ಲವನ್ನು ದಿವ್ಯ ಮೌನದಿಂದ ಅನುಭವಿಸಿದಳು ಅವಳ ನೋವು, ಯಾತನೆ, ಅಸಹನೆ, ದುಃಖಗಳನ್ನು ಕೇಳುವ ಪುರುಷರು ರಾಮಾಯಣದಲ್ಲಿ ಇಲ್ಲವೆಂದೇ ಹೇಳಬಹುದು. ಆದರೆ ವಿಚಿತ್ರವೆಂದರೇ ಸೀತೆ ಆದರ್ಶ ಮಹಿಳೆಯಾಗಿದ್ದಾಳೆ. ಹಾಗೇ ಮಹಿಳೆಯರೂ ಭಾವಿಸುವುದೂ ಸಹ ಪುರುಷ ಮುಖಿ ಚಿಂತನೆಯೇ ಆಗಿದೆ. ಏಕೆಂದರೆ ಇಂದಿಗೂ ಪುರುಷ ಬಯಸುವುದು ಸ್ತ್ರೀಯರಲ್ಲಿ ಸೀತೆಯ ಸಹನೆ, ತಾಳ್ಮೆ, ಪತಿನಿಷ್ಠೆ, ಪತಿಯಾಜ್ಞೆ

ಪರಿಪಾಲಕಳಾಗಿರುವಂಥವಳೆನ್ನಬಹುದು. ಆ ರಾಮಾಯಣದ ಪಾತ್ರ ಚಿತ್ರಣ ಕಟ್ಟು ಕಥೆಯ ಪುರಾಣ ಎಂದು ಅಲ್ಲಗಳೆಯುವಂತಿಲ್ಲವಾದರೂ, ಅದು ಹೆಣ್ಣಿನ ದಾರುಣ ಸ್ಥಿತಿಯನ್ನು ಮತ್ತು ಗಂಡಿನ ದಬ್ಬಾಳಿಕೆಯನ್ನು ಹೇಳುವ ಮಹಾಕಾವ್ಯ.

ಹೆಣ್ಣನ್ನು ಮಹಾಕಾವ್ಯಗಳಲ್ಲಿಯೂ ಚಿತ್ರಿಸಿರುವ ಬಗೆಯು ವಿಚಿತ್ರವಾಗಿದೆ. ಅವಳು ಮಮತಾಮಯಿ ತ್ಯಾಗಮೂರ್ತಿ, ಕಷ್ಟಸಹಿಷ್ಣು, ಪತಿಯ ಅನುಯಾಯಿ ಹೀಗೆ ವೈಭವಿಕರಿಸಲಾಗಿದೆ. ಹಾಗೆ ಇರಬಾರದು ಎಂದಲ್ಲ. ಆ ನೆಪದಲ್ಲಿ ಹೆಣ್ಣನ್ನು ಉತ್ಪ್ರೇಕ್ಷಿಸುತ್ತಲೇ, ಬೌದ್ಧಿಕವಾಗಿ ನಿಷ್ಕ್ರೀಯಗೊಳಿಸಲಾಗುತ್ತದೆ. ಪುರುಷದಮನ ದಬ್ಬಾಳಿಕೆಯನ್ನು ತನ್ನ ಜೀವನದ ಅಂಗವೆಂಬಂತೆ ಸ್ವೀಕರಿಸುವಂತೆ ಈ ಉತ್ಪ್ರೇಕ್ಷೆಗಳು ಪ್ರೇರೆಪಿಸುತ್ತವೆ. ಹೆಣ್ಣಿಗೆ ಹಲವು ವಿಶೇಷಣಗಳನ್ನು ಹಚ್ಚಿ, ಮರುಳುಗೊಳಿಸಿ, ದಯನೀಯ ಸ್ಥಿತಿಗೆ ತರಲಾಗುತ್ತದೆ. ಆದ್ದರಿಂದ ಪೌರಾಣಿಕ ಮತ್ತು ಐತಿಹಾಸಿಕ ಸ್ತ್ರೀ ಪಾತ್ರಗಳನ್ನು ಆಧುನಿಕ ಚಿಂತನೆಯ ಬೆಳಕು ಹರಿಸಿ ನೋಡುವುದು ಅವಶ್ಯಕವಾಗಿದೆ. ರಾಮನನ್ನು ಆರಾಧಿಸುವ ನಾವುಗಳು, ಆತ ನಮ್ಮ ಕಷ್ಟ ಪರಿಹರಿಸುತ್ತಾನೆಂಬ ನಂಬಿಕೆಯಿದೆ. ಅವನು ಲೋಕೋದ್ಧಾರ ಮಾಡುವುದಿರಲಿ ಕೈಹಿಡಿದ ಪತ್ನಿಯನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಂಡಿರುವುದನ್ನು ರಾಮಾಯಣ ಮಹಾಕಾವ್ಯದಲ್ಲಿ ಕಾಣಬಹುದಾಗಿದೆ. ಹೀಗೆ ಹೇಳಿದರೇ ಕೇವಲ ಹಳಿಕೆಯಾಗಿರದೇ ವಸ್ತುಸ್ಥಿತಿಯನ್ನು ಅದರೊಂದಿಗೆ ಬೇರೆಸಿ ನೋಡಿದಾಗ ಅದರ ಅರ್ಥನಮಗಾಗಬಹುದೇನೋ?

ಚಂದ್ರಮತಿ ಸನಾತನ ಭಾರತೀಯ ಸ್ತೀ ಪ್ರತೀಕವಾಗಿದ್ದಾಳೆ. ಆಕೆ ಹರಿಶ್ಚಂದ್ರನ ಹೆಂಡತಿ ಧರ್ಮಸ್ವರೂಪಿಣಿ, ಹರಿಶ್ಚಂದ್ರನಿಗೆ ಸರಿಸಮನಾಗಿ ಸತ್ಯದ ಹಾದಿಯಲ್ಲಿ ನಡೆದವಳು. ಅವನ ಕಷ್ಟವನ್ನು ಸಮಪಾಲು ಅನುಭವಿಸಿದವಳು ಸಾಲಗಾರರಿಗೆ ಹಣ ಕೊಡಲು ತನ್ನನ್ನು, ಮಗನನ್ನೂ ಮಾರಿಕೊಂಡು ಸಾಲಗಾರರಿಗೆ ಹಣ ನೀಡುತ್ತಾಳೆ ಆಕೆಯನ್ನು ಕೊಂಡ ಒಡೆಯ ವಿಪರೀತ ಕಷ್ಟಕೊಡುತ್ತಾನೆ. ಹುಲ್ಲು ತರಲುಹೋದ ಲೋಹಿತಾಶ್ವ ಹಾವುಕಚ್ಚಿ ಸಾಯುತ್ತಾನೆ. ಶವವನ್ನು ಸುಡಲು ಸುಡುಗಾಡಿಗೆ ಹೋದರೆ ತೆರವಿಲ್ಲದೇ ಸುಡುವಂತಿಲ್ಲ. ತೆರವನ್ನು ಹರಿಶ್ಚಂದ್ರನಿಗೆ ನೀಡಬೇಕು. ಅವನೇ ಕಾವಲುಗಾರ, ತೆರವನ್ನು ತರಲು ಒಡೆಯನಲ್ಲಿಗೆಹೋಗಿ ಹಿಂತುರುಗುತ್ತಿದ್ದಾಗ ಕಾಶೀರಾಜನ ಮಗನ ಕೊಲೆಯ ಆಪಾದನೆಗೆ ಒಳಗಾಗುತ್ತಾಳೆ. ಕೊನೆಗೆ ಪತಿಯಿಂದಲೇ ಸಾಯಬೇಕಾಗುತ್ತದೆ. ಸತ್ಯವನ್ನು ಉಳಿಸಲು ಇಡೀ ಕುಟುಂಬ ಪಡಬಾರದ ಕಷ್ಟಕ್ಕೊಳಗಾಗುತ್ತದೆ. ಕೊನೆಗೆ ಎಲ್ಲವೂ ಸುಖಮಯ, ಆದರೆ ಹೆಸರು ಮಾತ್ರ ಸತ್ಯವಾನ್ ಹರಿಶ್ಚಂದ್ರನೆಂದೇ ಗುರುತಿಸಲ್ಪಡುತ್ತಾನೆ. ಒಟ್ಟಾರೆ ಪುರುಷನ ಆಶೋತ್ತರಕ್ಕೆ ಅನುಗುಣವಾಗಿ ಶ್ರಮಿಸುವ ಸ್ತ್ರೀ ಪ್ರತೀಕ ಚಂದ್ರಮತಿ.

ಈ ವರೆಗೆ ಪೌರಾಣಿಕ ಪಾತ್ರಗಳ ಮೂಲಕ ಹೆಣ್ಣಿನ ಸಾಮಾಜಿಕ ಚಿತ್ರಣವನ್ನು ಅರಿಯುವ ಪ್ರಯತ್ನಮಾಡಿದ ಉದ್ದೇಶವೆಂದರೇ ರಾಮಾಯಣ, ಮಹಾಭಾರತ ಮತ್ತು ಪುರಾಣಪಾತ್ರಗಳು ಜನತೆಯ ಮೇಲೆಗಾಢವಾದ ಪ್ರಭಾವವನ್ನು ಬೀರಿವೆ. ವಿಭಿನ್ನ ಬಗೆಯ ಪರಿಣಾಮಗಳನ್ನುಂಟುಮಾಡಿವೆ. ಆದ್ದರಿಂದ ಮಹಾಕಾವ್ಯಗಳೆಂದರೇ ಭಾರತೀಯ ಜೀವನ ಸೂತ್ರಗಳು. ಅವು ರಚಿತವಾದ ಕಾಲದ ಜನಜೀವನ, ಸಂಸ್ಕೃತಿಕ ಸಂಗತಿಗಳು, ಸಾಮಾಜಿಕ ಸಂದರ್ಭಗಳು, ರಾಜಕೀಯ ವ್ಯವಸ್ಥೆಗಳು ಮತ್ತು ಜನರು ನಂಬಿದ ಜೀವನ ಮೌಲ್ಯಗಳನ್ನು ಅರಿಯುವುದಾಗಿದೆ. ಇಂಥ ಮಹತ್ವವೂ,

ಅದ್ವಿತೀಯವೂ ಆದ ಭಾರತೀಯ ಸಂಸ್ಕೃತಿಯ ಸಾರವನ್ನು ಹೇಳುವ ಕೃತಿಗಳಲ್ಲಿಯೂ ಸ್ತ್ರೀ ಸಮಾಜ ಅಪಮೌಲ್ಯಕ್ಕೊಳಗಾಗಿರುವುದನ್ನು ಕೆಲವು ಮುಖ್ಯ ಪಾತ್ರಗಳನ್ನು ವಿಶ್ಲೇಷಿಸುವುದರ ಮೂಲಕ ಚಿಂತಿಸಬಹುದಾಗಿದೆ.

ಪ್ರಸ್ತುತ ನಮ್ಮ ಕಣ್ಣೆದುರಿಗೆ ಮಹಿಳೆಯರ ಮೇಲೆ ನಡೆಯುತ್ತಿರುವ ಎಲ್ಲ ಬಗೆಯ ಶೋಷಣೆ, ರಾಮಾಯಣ ಮಹಾಭಾರತ ಪುರಾಣಗಳು ಮತ್ತು ಧರ್ಮಸುತ್ರಗಳಲ್ಲಿಯೂ ನಡೆದಿರುವುದು ಸ್ಪಷ್ಟವಿದೆ. ಸಾವಿರಾರು ವರ್ಷಗಳಿಂದಲೂ ಹೆಣ್ಣಿನ ಮಾನಾಪಹರಣ, ಹೆಣ್ಣಿನ ಅಪಹರಣ, ಬಹುಪತ್ನಿತ್ವ, ವನವಾಸ, ಬಾಲ್ಯ ವಿವಾಹ, ಗಂಧರ್ವ ವಿವಾಹ, ಸತೀ ಪದ್ಧತಿ, ಅಗ್ನಿ ಪ್ರವೇಶ, ದಾಸಿ ಪದ್ಧತಿ, ಹೆಣ್ಣನ್ನು ಮಾರುವುದು, ಒತ್ತೆ ಇಡುವುದು ಕಿವಿ, ಮೂಗು ಕತ್ತರಿಸುವುದು ಹೀಗೆ ಒಂದಲ್ಲ ಒಂದು ಕಾರಣಕ್ಕೆ ಹೆಣ್ಣು ನರಳಿದ್ದಾಳೆ. ಆ ಸ್ಥಿತಿಗೆ ಪುರುಷರೇ ಕಾರಣರಾದರೂ ಅವರಿಗೆ ಶಿಕ್ಷೆಯಾಗುವುದೇ ಇಲ್ಲ. ಬದಲು ಬಾರತೀಯ ಪರಂಪರೆಯಲ್ಲಿ ಪೂಜ್ಯನೀಯರೆನಿಸಿದ್ದಾರೆ.

ಇಷ್ಟವಾದ ಹೆಣ್ಣನ್ನು ಮನಸಾರೆ ಭೋಗಿಸಿ, ತನ್ನ ದೌರ್ಬಲ್ಯದಿಂದ ಭೋಗಿಸಿದವಳನ್ನೆ ಪುರುಷ ಮರೆಯುತ್ತಾನೆ. ಹೆಂಗಸರ ಶೀಲಹರಣಕ್ಕೆ ಆಸ್ಪದವಾಗದಂತೆ ಕಟ್ಟುಪಾಡು ನಿರ್ಮಿಸುವ ಪುರುಷ ತಾನೇ ಹೆಣ್ಣಿನ ಶೀಲ ಕೆಡಿಸುತ್ತಾನೆ. ಪರಿಣಾಮವಾಗಿ ಹೆಣ್ಣು ತೊಂದರೆಗೊಳಗಾಗುತ್ತಾಳೆ. ಶಾಪಕ್ಕೆ ಬಲಿಯಾಗುತ್ತಾಳೆ. ತಪ್ಪು ಇಬ್ಬರದಾದರೂ ಶಿಕ್ಷೆ ಮಾತ್ರ ಹೆಣ್ಣಿಗೆ ಗಂಡಸಿನ ಹಾದಿಗೆ ಅಡ್ಡಿಗಳೇ ಇಲ್ಲ. ಅವನು ಸ್ವೇಚ್ಛಾಚಾರಿ, ಸಹನೆ, ತಾಳ್ಮೆ, ಹೊಂದಾಣಿಕೆ, ಕ್ಷಮಾಗುಣ ಕೇವಲ ಸ್ತ್ರೀಯರಿಗೆ ಮಾತ್ರ ಇರಬೇಕಾದವು ಎಂಬಂತೆ ನಮ್ಮ ಮಹಾಕಾವ್ಯಗಳಲ್ಲಿ ಚಿತ್ರಿತವಾಗಿವೆ. ಅವು ಪುರುಷನಿಗೂ ಇರಬೇಕಾದ ಗುಣಗಳಲ್ಲವೇ? ವೇದಗಳ ಕಾಲದಿಂದಲೂ ಮಹಿಳೆಯರ ಪರಿಸ್ಥಿತಿ ಅಧೋಗತಿ ಮುಂದುವರಿದುಕೊಂಡೇ ಬರುತ್ತಿದೆ. ತನ್ನ ಗಂಡನಾದ ಧೃತರಾಷ್ಟ್ರ, ಹುಟ್ಟು ಕುರುಡನಾಗಿರುವುದರಿಂದ ಆತ ಜಗತ್ತಿನ ಸೌಂದರ್ಯವನ್ನು ನೋಡಲಾರನು ಅದು ಸರಿ. ಆದರೆ ಕಣ್ಣಿದ್ದು ತನ್ನ ಗಂಡನು ನೋಡಲಾಗದ ಜಗತ್ತನ್ನು ನಾನೂ ನೋಡಬಾರದು ಎಂದು ಕಣ್ಣಿಗೆ ಪಟ್ಟಿಕಟ್ಟಿಕೊಳ್ಳುತ್ತಾಳೆ. ಇದರಿಂದ ಗಾಂಧಾರಿ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿ, ಆಧರಣೀಯಳೆನ್ನಿಸಿಕೊಳ್ಳುತ್ತಾಳೆ. ವಾಸ್ತವದಲ್ಲಿ ಗಾಂಧಾರಿಗೆ ದೃತರಾಷ್ಟನನ್ನು ಮದುವೆಯಾಗುವುದು ಇಷ್ಟವಿರುವದಿಲ್ಲ. ಆಕೆಯ ತಂದೆ ತಾಯಿ, ಸಹೋದರರು ರಾಜ್ಯದ ಆಸೆ ತೋರಿಸಿ ಒತ್ತಾಯಿಸುತ್ತಾರೆ. ಕೊನೆಗೆ ಅವಳು ಬೇಸರಗೊಂಡು, ಅವನ ಮುಖವನ್ನೇ ನಾನು ನೋಡುವುದಿಲ್ಲವೆಂದು ಕಟ್ಟಿಕೊಳ್ಳುವ ಆ ಪಟ್ಟಿ ಅವಳನ್ನು ಆದರ್ಶಿಕರಿಸುವ ಮೇಲಿನ ಹೇಳಿಕೆಯನ್ನು ನೋಡಲೂಬಹುದು. ಹೀಗೆ ನಿಜವಾದ ಅರ್ಥಕ್ಕೆ ತಮ್ಮದೇ ಆದ ಅರ್ಥವನ್ನು ನೀಡಿ ಅವಳ ನೈಜ ಮನಸ್ಸಿನ ಅಭಿವ್ಯಕ್ತಿಗೆ ಅಡ್ಡಿಯನ್ನುಂಟು ಮಾಡಿದೆ ಎಂದು ಹೇಳಬಹುದು.

ಭಾರತೀಯ ಧಾರ್ಮಿಕ ಮನಸ್ಸು ಸೃಷ್ಟಿಗೆ ಬ್ರಹ್ಮನೇ ಅಧಿಪತಿ ಎಂದಿದೆ. ಈ ಸೃಷ್ಟಿಕರ್ತನಿಗೆ ಜೀವಿಗಳ ಮೇಲೆ ಪರಮಾಧಿಕಾರವಿದೆ. ಆತ ತನಗಿಷ್ಟ ಬಂದ ಹಾಗೆ ಹಣೆಯಲ್ಲಿ ಬರೆಯಬಲ್ಲ. ಎಷ್ಟೋ ಬಾರಿ ಸ್ವೇಚ್ಛೆಯಾಗಿಯೂ ಬರೆಯುತ್ತಾನೆ. ಹೀಗೆ ಹಣೆಯಲ್ಲಿ ಬರೆಯುವಾಗಲೂ ಹೆಣ್ಣಿಗೊಂದು ಬಗೆಯಲ್ಲಿ, ಗಂಡಿಗೊಂದು ಬಗೆಯಲ್ಲಿ ಬರೆಯುತ್ತಾನೆ. ಅವನೂ ಪುರುಷ ಪಕ್ಷಪಾತಿಯೇ! ಹೆಣ್ಣಿನ ಕರ್ಮಕ್ಕೆ ತಕ್ಕಂತೆ ಫಲಾಫಲಗಳನ್ನು ತೂಗಿ ನೋಡಿ ಸರಿಯಾಗಿ ಬರೆಯುತ್ತಾನೆಂಬ ನಂಬಿಕೆ. ಈ ಜನ್ಮದಲ್ಲಿ ಅನುಭವಿಸುವ ಸುಖ ದುಃಖಾದಿಗಳಿಗೆ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕರ್ಮಗಳೇ ಕಾರಣವಂತೆ. ಆದ್ದರಿಂದ ಪೂರ್ವ ಸಿದ್ಧಾಂತದಂತೆ ಮಾಡಿದ ಕರ್ಮಕ್ಕೆ ಫಲವನ್ನು

ಅನುಭವಿಸಬೇಕು. ಒಟ್ಟಿನಲ್ಲಿ ವಿಧಿಯಾಟದ ಕೈಗೊಂಬೆ ಹೆಣ್ಣು, ವಿಧಿಗೂ ಮಹಿಳೆಗೂ ಅಂಟಿದ ನಂಟು ಆದ್ದರಿಂದ ಕಾವ್ಯಗಳಲ್ಲಿಯೂ ಪರಂಪರೆಯಿಂದಲೂ ಸ್ತ್ರೀಯರ ದುಸ್ಥಿತಿ ಧ್ವನಿತವಾಗಿರುವುದು.

ಈ ಕಾವ್ಯಗಳಲ್ಲಿನ ಮಾನವ ಸ್ವಭಾವ ವೈವಿಧ್ಯಮಯವಾಗಿದೆ. ಒಬ್ಬೊಬ್ಬ ವ್ಯಕ್ತಿಯ ಸ್ವಭಾವವೂ ಒಂದೊಂದು ಬಗೆಯಾಗಿದೆ. ಒಬ್ಬೊಬ್ಬರದು ಒಂದೊಂದು ಸಮಸ್ಯೆಯೇ ಆಗಿದೆ. ಇಲ್ಲಿ ನೋವಿನ ಅನುಭವಗಳು ಸ್ತ್ರೀಲೋಕದಲ್ಲಿ ಅಭಿವ್ಯಕ್ತಗೊಳ್ಳದೆ ಸಂವಾದದಂತೆ ದಿಗ್ಭ್ರಮೆಗೊಳಿಸುತ್ತವೆ. ಭಾರತೀಯ ಸಾಮಾಜಿಕ ಜನಜೀವನ ಎಂಥ ಅಸಂಭದ್ದ ನಡಿಗೆಯದು ಎಂಬುದು ಮನದಟ್ಟಾಗುತ್ತದೆ. ಹಾಗೆ ನೋಡಿದರೇ ಈ ಕಾವ್ಯ ಮತ್ತು ಪುರಾಣಗಳಲ್ಲಿ ಬರುವ ಪಾತ್ರಗಳನ್ನೆಲ್ಲ ವಿಶ್ಲೇಷಣೆಗೊಳಪಡಿಸುವುದೆಂದರೇ ಸವಾಲಿನ ಕೆಲಸವಾಗಿದೆ. ಆದರೆ ಕೆಲವೇ ಪಾತ್ರಗಳನ್ನು ನೋಡಿದರೂ ಸಹ ಹೆಣ್ಣು ಅವಹೇಳನಕ್ಕೆ ಒಳಗಾಗಿರುವುದು ಸ್ಪಷ್ಟಗೊಳ್ಳುತ್ತದೆ. ಸ್ತ್ರೀ-ಪುರುಷರ ಪರಸ್ಪರ ವಿಶ್ವಾಸದಿಂದ ನಿರುಪದ್ರವಿಗಳಾಗಿ ನಿಷ್ಕಳಂಕರಾಗಿ, ಪರಸ್ಪರ ನಿಷ್ಠೆಯಿಂದ ಸರಿಸಮಾನರಾಗಿ ಬದುಕಬೇಕಾದ್ದು, ಸಾಂಸಾರಿಕ ಮೌಲ್ಯ. ಸಾಂಪ್ರದಾಯಿಕ ನಿಷೇಧಗಳು ಮತ್ತು ಮನುಷ್ಯವಿರೋಧಿ ಆಚರಣೆಗಳು ಸ್ತ್ರೀ ಪುರುಷರ ವ್ಯಕ್ತಿ ಸ್ವಾತಂತ್ರಕ್ಕೆ ಧಕ್ಕೆಯಾಗುವಂತೆ ಪುರಾತನ ಭಾರತೀಯ ಸಂಸ್ಕೃತಿ ಬೆಳೆದು ಬಂದಿದ್ದರಿಂದಲೇ, ನಮ್ಮ ಭಾರತೀಯ ಭವ್ಯ ಇತಿಹಾಸ ಮತ್ತು ಪುರಾಣಗಳು ಸಾಂಸ್ಕತಿಕ ಶಿಥಿಲಕ್ಕೆ ಒಳಗಾಗಿವೆ. ರಾಜಕುಮಾರಿಯರಾಗಿಯೂ ವಿಧಿವಶದಿಂದ ಪಡಬಾರದ ಕಷ್ಟಗಳನ್ನು ಪಟ್ಟಳು ಎಂಬ ಮಾದರಿಗಳನ್ನು ನೀಡುವ ಮೂಲಕ ನಮ್ಮ ಮಹಾಕಾವ್ಯಗಳೂ ಸಹಸ್ತ್ರೀಯರ ವಿರುದ್ಧವಾದಂತಹ, ಅವರ ವಿಷಯದಲ್ಲಿ ಸ್ಥಗೀತವಾದ ಗೃಹಿತಮೌಲ್ಯವನ್ನೇ ಸಾರುತ್ತವೆ.

೩.೪. ಚರಿತ್ರೆಯಲ್ಲಿ ಬ್ರಾಹ್ಮಣ ಮಹಿಳೆ

ಇತಿಹಾಸವೆಂದರೇ ಪುರುಷರ ಅಪರಾಧ, ತಪ್ಪು ಒಪ್ಪು ಮತ್ತು ದುರಾದೃಷ್ಟಗಳ ದಾಖಲೆಗಿಂತ ಸ್ವಲ್ಪ ಹೆಚ್ಚು ಅಷ್ಟೆ ಎಂದು ಇತಿಹಾಸಕಾರ ಗಿಬ್ಬನ್ ಹೇಳಿದ್ದಾನೆ. ಈ ದಾಖಲೆಗಳಲ್ಲಿ ಕಾಣೆಯಾಗಿರುವ ಹೆಣ್ಣಿನ ಚರಿತ್ರೆಯನ್ನು ಬರೆಯಲು ಈಗ ಹೊಸ ಪ್ರಯತ್ನನಡೆದಿದೆ. ಅದೂ ಹೆಣ್ಣಿನ ಲೇಖನಿಯಿಂದಲೇ. ಆದರೆ ಇದಕ್ಕೆ ಇತಿಹಾಸದ ಲಭ್ಯವಿರುವ ದಾಖಲೆಗಳಿಂದ ಬೆಂಬಲಸಿಗಲಾರದು. ಒಕ್ಕಣ್ಣಿನ ದೃಷ್ಟಿಯಿಂದ ರಚಿತವಾದ ಈ ಚರಿತ್ರೆಯನ್ನು ಕುರಿತ ಜೇನ ಆಸ್ಟಿನ್ ಹೇಳಿದ್ದು ಸರಿಯೇ ಆಗಿದೆ. ''ಇತಿಹಾಸ ಇಷ್ಟೊಂದು ಮಂಕಾಗಿದೆಯೇ ಎಂದು ಬಹಳಷ್ಟು ಬಾರಿ ಯೋಚಿಸಿರುವೆ. ಏಕೆಂದರೆ ಅದರ ಬಹುಪಾಲು ಹೊಸ ನಿರ್ಮಾಣ ಎಂದೆ ನನ್ನ ಭಾವನೆ.'' ಇದಕ್ಕೆ ಪ್ರತಿಯಾಗಿ ಮಹಿಳೆಯರ ಇತಿಹಾಸವು ಈಗಷ್ಟೆ ನಿರ್ಮಾಣವನ್ನಾರಂಭಿಸಿದೆ ಪುರುಷರು ಘಟನೆಗಳ ದಾಖಲೆ ನಿರೂಪಣೆ ಮತ್ತು ವಿಶ್ಲೇಷಣೆಯ ಕಾರ್ಯವನ್ನು ಕ್ರಿ.ಶ. ಮೂರನೇ ಶತಮಾನದಲ್ಲಿ ಆರಂಭಿಸಿದರು ಮಹಿಳೆಯರಲ್ಲಿ ೧೯ನೇ ಶತಮಾನದವರೆಗೂ ಈ ವಿಧಾನ ಶುರುವಾಗಲೇ ಇಲ್ಲ.

ಪುರುಷ ದೃಷ್ಟಿಕೋನದಿಂದ, ಪುರುಷರ ಅನುಭವಗಳನ್ನು ಕುರಿತು ಪುರುಷರಿಂದ ದಾಖಲಿಸಲ್ಪಟ್ಟಿದ್ದೆ ಚರಿತ್ರೆಯಾಗಿದೆ. ಆದ್ದರಿಂದ ಮಹಿಳಾ ಚರಿತ್ರೆಕಾರರು ತಮ್ಮ ಅನುಭವದ ಆಧಾರದಿಂದ ಚರಿತ್ರೆಯನ್ನು ಪುನಃ ಕಟ್ಟಬೇಕಾಗಿದೆ.ಅಲಕ್ಷಿಸಲ್ಪಟ್ಟ ಮತ್ತು ಭೂತದಲ್ಲಿ ಹೂತು ಹೋಗಿರುವ ಚರಿತ್ರೆಯನ್ನು ಹೊರತೆಗೆದು ಹೊಸದಾಗಿ ಬರೆಯ ಬೇಕಿದೆ. ಆದುದರಿಂದ ಯಾವುದೇ ಮಹಿಳಾ ಇತಿಹಾಸವು ಖಾಲಿಬಿಟ್ಟಿರುವ ವಿಷಯ, ತಪ್ಪು ಒಪ್ಪು ಅರ್ಧಸತ್ಯಗಳ ಬಗ್ಗೆ ಹೆಚ್ಚು ಎಚ್ಚರದಿಂದಿರಬೇಕು. ಮೌನವನ್ನು ಕೀಳಬೇಕು ಅವು ಕೂಗುವಂತೆ ಮಾಡಬೇಕು.

ಚರಿತ್ರೆಯಲ್ಲಿ ಹುಡುಕ ಹೊರಟರೇ ಮಹಿಳೆಯ ಸುಳಿವು ಸಿಗುವುದಿಲ್ಲವೆಂದೇ ಹೇಳಬಹುದು. ಆಕೆ ಅಲ್ಲಿ ಗುಪ್ತವಾಗಿದ್ದಾಳೆ. ಚರಿತ್ರೆಯನ್ನು ಅವಲೋಕಿಸಿದಾಗ ಅಲ್ಲಿ ಮಹಿಳೆಯೇ ಇರಲಿಲ್ಲವೇ ಎಂಬ ಸಂದೇಹ ಮೂಡುವಷ್ಟು ಮಟ್ಟಿಗೆ ಅವಳನ್ನು ತಳಕ್ಕೆ ತಳ್ಳಲಾಗಿದೆ.

ತೀರ ಸೂಕ್ಷ್ಮ ಅವಲೋಕನ ಮಾಡಹೊರಟರೆ ಅಲ್ಲಿ ಇಲ್ಲಿ ಕೆಲವೊಂದು ಉದಾಹರಣೆಗಳು ಸಿಗುತ್ತಿವೆ. ಅಸಿರಿಯನ್ ಸಮರರಾಣಿಯರು ಮಾತೃದೇವತೆ, ವಿಶ್ವದ ಆಡಳಿತದ ಚುಕ್ಕಾಣಿ ಹಿಡಿದವರ, ವಿಜ್ಞಾನಿಗಳ ಸಾಧು ಸಂತರ, ಪಾಪಿಗಳ, ಮದರ್ ಥೆರೇಸಾ, ಕಿತ್ತೂರು ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಬಾಯಿಯವರ ಅಸಂಖ್ಯ ಕತೆಗಳೆನೂ ಇವೆ. ಇವರ ಕೊಡುಗೆ ಮಾನವ ಕುಲ ವಿಕಾಸದಲ್ಲಿ ಸಮೃದ್ಧವಾಗಿದೆ. ಆದರೆ ಅವರು ಮರೆತ ಮಹಿಳಾ ಮಣಿಗಳಲ್ಲೂ ಅದ್ಭುತ ಕಥೆಗಳು ಅಡಗಿವೆ. ಅದನ್ನು ಯಾರೂ ಕೇಳಿಲ್ಲ ಅಷ್ಟೆ. ಇತಿಹಾಸ ಕುರಿತ ನಮ್ಮ ಗಮವನ್ನು ಪುರುಷರತ್ತ ಮಾತ್ರ ಕೇಂದ್ರಿಕರಿಸಿರುವುದರಿಂದ ಆ ಕತೆಗಳೆಲ್ಲ ಮರೆಯಾಗಿ ಬಿಡುತ್ತವೆ. ಇದು ಮಾನವ ಕುಲದ ಅರ್ಧಭಾಗಕ್ಕೆ ಎಸಗುವ ಅನ್ಯಾಯವಾಗಿದೆ. ಎನ್ನಬಹುದು.

ಮಹಿಳೆಯರನ್ನು ಚರಿತ್ರೆಯಲ್ಲಿ ಜೋಡಿಸುವ ಪ್ರಯತ್ನ ಮಾಡಹೊರಟರೇ ಪುರುಷ ಮೊದಲು ಅತ್ಯಂತ ಅಸಮಾನ್ಯ ಮಹಿಳೆಯರತ್ತ ದೃಷ್ಟಿಹರಿಸಿದರು. ಈ ಆರಂಭಿಕ ಹಂತದ ಪ್ರಯತ್ನವನ್ನು 'ನಷ್ಟತುಂಬುವ ಚರಿತ್ರೆ' ಮತ್ತು 'ನೆರವಾಗುವ ಚರಿತ್ರೆ' ಎಂದು ಕರೆಯುತ್ತಾರೆ. ಚರಿತ್ರೆಯಲ್ಲಿ ಬಿಟ್ಟು ಹೋಗಿರುವ ದಾಖಲೆಗಳನ್ನು ಸೇರಿಸುವ ಮತ್ತು ಮಹಿಳೆಯರ ಸಾಧನೆಯನ್ನು ಗುರುತಿಸುವ ಪ್ರಯತ್ನವಾಗಿ ಇದನ್ನು ಕಾಣಬಹುದು. ಆದರೆ ಈ ಎರಡೂ ಹಂತಗಳು ಪುರುಷರ ಮಾನದಂಡಗಳಿಂದ ನಿರ್ಧರಿಸಲಾಗಿವೆ. ಹೆಂಗಸರನ್ನು ಚರಿತ್ರೆಯ ಪರಿಶಿಷ್ಟಗಳನ್ನಾಗಿ ಉಳಿಸಿದೆ ಮತ್ತು ಚಾಲ್ತಿಯಲ್ಲಿರುವ ಕ್ರೀಯಾ ಮಾದರಿಯನ್ನು ಸವಾಲೆಸೆಯುವಂತೆ ಮಾಡಿವೆ.

ಬೆಳೆಸುತ್ತಾ ಹೋದರೆ ಇದು ಧೀರ್ಘವಾದ ಚರ್ಚೆಗೆ ತೊಡಗುವಂತೆ ಮಾಡುತ್ತಿದೆ. ಆದರೆ ಇಲ್ಲಿ ನನ್ನ ಮುಖ್ಯ ಉದ್ದೇಶ ಚರಿತ್ರೆಯ ಕಾಲಘಟ್ಟಗಳಲ್ಲಿ ಬ್ರಾಹ್ಮಣ ಮಹಿಳೆಯ ಅವಶೇಷಗಳನ್ನು, ಕುರುಹುಗಳನ್ನು ಹುಡುಕುವುದು, ಹೆಕ್ಕುವುದು ಅಥವಾ ಅವಲೋಕಿಸುವುದಾಗಿದೆ. ಈ ಮೂಲಕ ಲಿಖಿತ ಪರಂಪರೆಯಲ್ಲಿ ಹೆಣ್ಣಿನ ನಾಮಾವಶೇಷಗಳನ್ನು ಪತ್ತೆ ಹಚ್ಚುವಕಾರ್ಯವನ್ನು ನಡೆಸುವುದಾಗಿದೆ ಎಂದು ಹೇಳಬಹುದು. ಇಲ್ಲಿ ನಾನು ಚರಿತ್ರೆಯ ಕಾಲಘಟ್ಟದ ವಿವಿಧ ಹಂತಗಳನ್ನು ಸಿಕ್ಕ ಲಿಖಿತದಾಖಲೆಗಳ ಮೂಲಕ ಚರ್ಚೆಗೆ ಒಳಪಡಿಸಬಯಸುತ್ತೇನೆ ಈ ಮೂಲಕ ಆ ಕಾಲಘಟ್ಟದ ಅವಳ ಸ್ಥಾನಮಾನವನ್ನು ಅರಿಯುವುದು ನನ್ನ ಪ್ರಮುಖಧ್ಯೇಯಗಳಲ್ಲಿ ಒಂದಾಗಿದೆ.

೩.೪.೧. ಶಾಸನಗಳಲ್ಲಿ ಬ್ರಾಹ್ಮಣ ಮಹಿಳೆ

''ಗುಪ್ತರ ಕಾಲಕ್ಕಿಂತಲೂ ಬಹಳಷ್ಟು ಮುಂಚಿತವಾಗಿಯೇ ವೈದಿಕ ಕಟ್ಟುಪಾಡುಗಳು ಬ್ರಾಹ್ಮಣ ಮಹಿಳೆಯರಿಗೆ ವೇದಾಧ್ಯಯನದ ಅಧಿಕಾರವನ್ನು ಅಷ್ಟೆ ಅಲ್ಲ ಯಜ್ಞ ಯಾಗಾದಿಗಳಂತಹ ಪವಿತ್ರ ಕರ್ಮಗಳ ಸಂದರ್ಭದಲ್ಲಿ ವೇದ ಮಂತ್ರಗಳನ್ನು ಉಚ್ಚರಿಸುವ ಅಧಿಕಾರವನ್ನು ಕೂಡ ನಿರಾಕಸಿದ್ದವು.''[೨] ಇಷ್ಟಾಗೀಯೂ ಕುಲಿನವಂಶಗಳಿಗೆ ಸೇರಿದ ಕನ್ಯೆಯರಿಗೆ ಸಾಮಾನ್ಯ ಶಿಕ್ಷಣ ಕ್ಷೇತ್ರದಲ್ಲಿ ಪಾಂಡಿತ್ಯವನ್ನು ಗಳಿಸಿಕೊಳ್ಳುವ ಸಾಕಷ್ಟು ಅವಕಾಶಗಳು ಲಭ್ಯವಾಗಿರುತ್ತಿದ್ದುವೆಂದು ನಂಬಲು ವಿಶ್ವಸನೀಯವಾದ ಆಧಾರಗಳು ದೊರೆಯುತ್ತವೆ. ''ವಾತ್ಸಾಯನನು ಕೊಡುವ

ಒಳ್ಳೆಯ ಗೃಹಿಣಿಯ ಚಿತ್ರ ಹೇಗೆ ವಾರ್ಷಿಕ ವ್ಯಯ ಪತ್ರವನ್ನು ಸಿದ್ಧಪಡಿಸಿಕೊಂಡು, ಅದಕ್ಕನುಗುಣವಾಗಿ ಖರ್ಚುವೆಚ್ಚಗಳನ್ನು ನಿಯಂತ್ರಿಸುವುದಕ್ಕೆ ಅಗತ್ಯವಾಗಿರುವಷ್ಟು ಶಿಕ್ಷಣಪಡೆದ ಹೆಣ್ಣಾಗಿರಬೇಕಾಗಿತ್ತು. ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗುಪ್ತರ ಕೃತಿಗಳಲ್ಲೊಂದಾದ 'ಅಮರ ಕೋಶ''[೩೩] ಮಹಿಳಾ ಶಿಕ್ಷಕರನ್ನು ಸೂಚಿಸುವ 'ಉಪಾಧ್ಯಾಯ' 'ಉಪಾಧ್ಯಾಯಿ' ಎಂಬ ಶಬ್ದಗಳನ್ನು ಮಾತ್ರವಲ್ಲದೇ ವೈಕ ಮಂತ್ರಗಳನ್ನು ಹೇಳಿಕೊಡುವಂಥ ಮಹಿಳಾ ಅಧ್ಯಾಪಕರನ್ನು ಸೂಚಿಸುವ 'ಆಚಾರ್ಯ' ಎಂಬ ಶಬ್ದವನ್ನು ಒಳಗೊಂಡಿದೆ ಎಂಬುದನ್ನು ಉಲ್ಲೇಖಿಸಬಹುದಾಗಿದೆ. ಇವುಗಳಿಂದ ತಿಳಿದು ಬರುವ ಅಂಶವೇನೆಂದರೆ ಧರ್ಮಾಧಿಕಾರ ಆಕೆಗೆ ನಿಷೇಧಿಸಲ್ಪಟ್ಟಿತು. ಶಿಕ್ಷಣವನ್ನು ನಿರಾಕರಿಸುವ ಮೂಲಕ ಜ್ಞಾನದ ಹರಿವಿಗೆ ತಡೆಗೋಡೆ ನಿರ್ಮಿಸಿದ್ದರು. ಹೆಣ್ಣು ಕೇವಲ ಗೃಹಿಣಿ ಪಾತ್ರದಲ್ಲಿ ಮಾತ್ರ ಅವಳಿಗೆ ಅಸ್ತಿತ್ವವಿತ್ತು. ಮತ್ತು ಅಂತಹ ಶಿಕ್ಷಣವನ್ನು ಅಪೇಕ್ಷಿಸುತ್ತಿದ್ದುದು ಕಂಡುಬರುತ್ತದೆ. ಅಂದರೆ ಅವಳು ಮೂಲಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಮಾತ್ರ ಕಾರ್ಯನಿರ್ವಹಿಸಬೇಕಿತ್ತು. ತಾಯ್ತನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುವುದು ಇಲ್ಲಿ ವ್ಯಕ್ತವಾಗುತ್ತದೆ.

''ಆ ಸ್ತ್ರೀಯ ಬಗೆಗಿನ ಮಹಿಳೆಯರ ಹಕ್ಕನ್ನು ಕಾತ್ಯಾಯನ ಮಾನ್ಯ ಮಾಡುತ್ತಾ ಬಂದಿರುವುದು, ಹಾಗೂ ದರೋಡೆಕಾರರು ಮತ್ತಿತರರಿಂದ ಅತ್ಯಾಚಾರಕ್ಕೆ ಒಳಗಾದಂತಹ ಮಹಿಳೆಯರಿಗೆ ತಮ್ಮ ಹಿಂದಿನ ಸ್ಥಾನಮಾನಗಳು ಮತ್ತೆ ಲಭ್ಯವಾಗುವಂತಹ ಅವಕಾಶವನ್ನು ಅತ್ರಿ ಮತ್ತು ದೇವಲರು ಕಲ್ಪಿಸಿರುವುದು.''[೩೪] ''ಗುಪ್ತಯುಗದಲ್ಲಿನ ಮಹಿಳೆಯರು ಸಾರ್ವಜನಿಕ ಅಧಿಕಾರಗಳ ಚಲಾವಣೆಯ ಅವಕಾಶಗಳಿಂದ ವಂಚಿತರಾಗಿರಲಿಲ್ಲ. ಇದಕ್ಕೆ ಸಾಕ್ಷಿ ಎಂದರೇ ಚಕ್ರವರ್ತಿ ಎರಡನೆ ಚಂದ್ರಗುಪ್ತನ ಮಗಳಾಗಿದ್ದ ಪ್ರಭಾವತಿ ಗುಪ್ತಾ''[೩೫] ಮತ್ತು ''ರಾಜಕುಮಾರಿ ವಿಜಯಬಟ್ಟಾರಿಕೆ''[೩೬] ಅವರ ಪ್ರಸಂಗಗಳು ಪ್ರಭಾವತಿ ನಾಲ್ಕನೆಯ ಶತಮಾನದಲ್ಲಿ ತನ್ನ ಅಲ್ಪ ಆಯುಷ್ಯನಾಗಿದ್ದ ಮಗನ ಪರವಾಗಿ ರಾಜ ಪ್ರತಿನಿಧಿಯಾಗಿ ವಾಕಾಟರಾಜ್ಯವನ್ನು ಆಳಿದ್ದರೇ, ವಿಜಯ ಬಟ್ಟಾರಿಕೆ ವಾತಾಪಿಯ ಚಾಲುಕ್ಯವಂಶದ ಒಂದನೆಯ ವಿಕ್ರಮಾದಿತ್ಯನ ಆಳ್ವಿಕೆಯ ಅವಧಿಯಲ್ಲಿ ಏಳನೇಯ ಶತಮಾನದಲ್ಲಿ ಪ್ರಾಂತೀಯ ಮಂಡಲಾಧಿಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಳು. ''ಮಹಿಳೆಯರು ಸಾಮಾನ್ಯವಾಗಿ 'ಪರದಾ' ಪದ್ಧತಿಯನ್ನು ಅನುಸರಿಸುತ್ತಿರಲಿಲ್ಲ. ಹಾಗೂ ಪ್ರತ್ಯೇಕವಾಗಿ ಉಳಿಯುತ್ತಿರಲಿಲ್ಲ. ಎಂಬುದಕ್ಕೆ ಹುಯೆನ್‌ತ್ಸಾಂಗ್ ಮತ್ತು ಇತ್ಸಿಂಗ್ ಅವರು ಈ ವಿಷಯದಲ್ಲಿ ಮೌನವಾಗಿರುವುದೇ ಸಾಕ್ಷಿಯಾಗಿದೆ. ಏಕೆಂದರೇ ತಮಗೆ ಅಪರಿಚಿತವಾಗಿದ್ದಂಥ ಇಂಥ ವಿಚಿತ್ರ ಪದ್ಧತಿಯನ್ನು ಅವರು ಖಂಡಿತವಾಗಿಯೂ ಗಮನಿಸಿಯೇ ಇರುತ್ತಿದ್ದರು ಮೇಲಾಗಿ ಮೇಲೆ ಸೂಚಿಸಲಾಗಿರುವಂತೆ''[೩೭] ಮಹಿಳೆಯರ ಆಕೃತಿಗಳ ಬಗೆಗಿನ ಶಿಲ್ಪದ ಕೆತ್ತನೆಗಳು ಪರ್ದಾ ಪದ್ಧತಿ ಪ್ರಚುರವಾಗಿರಲಿಲ್ಲ ಎಂಬುದನ್ನು ಅಸಂಧಿಗ್ದವಾಗಿ ಸಾರಿ ಹೇಳುತ್ತವೆ.

ಮೇಲಿನಗಳವುಗಳಿಂದ ಮಹಿಳೆಯರ ಸ್ಥಾನಮಾನ ಅಷ್ಟೊಂದು ಬಿಗಿಯಾಗಿರಲಿಲ್ಲ ಎಂಬುದು ಕಂಡುಬರುತ್ತದೆ. ಅವರು ಆಡಳಿತದಲ್ಲಿ ಭಾಗಿಯಾಗಿದ್ದರೆಂಬುದು ತಿಳಿದುಬರುತ್ತದೆ. ಆದರೆ ಕೆಲವೇ ಕೆಲವು ಸಾಹಸಿ ಮಹಿಳೆಯರಿಗೆ ಇದು ಸಾಧ್ಯವಾಗಿತ್ತು. ಅಂದರೆ ಕ್ಷತ್ರಿಯ ವಂಶ ಮೂಲದಿಂದ ಬಂದ ಮಹಿಳೆಯರಿಗೆ ಇದು ಸಾಧ್ಯವಾಗಿತ್ತು ಉಳಿದ ಮಹಿಳೆಯರಿಗೆ ಇದು ಅನ್ವಯಿಸುವುದಿಲ್ಲ. ಇದನ್ನು ಪುಷ್ಠಿಕರಿಸಲು ಈ ಶಾಸನಗಳಲ್ಲೇನೆ ಅಡಗಿರುವ ಮಾಹಿತಿಯನ್ನು

ಕೂಲಂಕುಷವಾಗಿ ಅರಿಯುವ ಮೂಲಕ ಸಾಧ್ಯವಾಗಿಸಬಹುದು. ಅಲ್ಲದೇ ಇದು ಅಂದಿನ ಸಾಮಾಜಿಕ ಸ್ಥಿತಿಯನ್ನು ಬಯಲಿಗೆಳೆಯುತ್ತದೆ. ಅಂದರೆ ಸಮಾಜದಲ್ಲಿ ಅವಳಿಗೆ ಪರದಾ ಪದ್ದತಿಯು ಇರಲಿಲ್ಲವೆಂಬುದು ಖಚಿತವಾಗುತ್ತದೆ.

ಇತಿಹಾಸಗಳಲ್ಲಿಯೂ ಸ್ತ್ರೀಯರು ವೇದಾಧ್ಯಾಯಿಗಳಾಗಿದ್ದರೆಂದು ತಿಳಿದು ಬರುತ್ತದೆ. ರಾಮಾಯಣದ ಕೌಸಲ್ಯೆ ಮತ್ತು ತಾರೆಯರಿಗೆ 'ಮಂತ್ರವಿತ್' ಎಂಬ ವಿಶೇಷಣವಿರುವುದು ಗಮನಾರ್ಹ. ಧರ್ಮಶಾಸ್ತ್ರಗಳ ಕಾಲಕ್ಕೆ ಬಂದರೆ ಇಡೀ ಚಿತ್ರ ಬದಲಾಯಿಸುತ್ತದೆ. ಸ್ತ್ರೀಯರು ಅಧ್ಯಯನ ನಡೆಸಿದ ಯಾವ ಗುರುಕುಲದ ಹೆಸರೂ ಧರ್ಮಶಾಸ್ತ್ರಗಳಲ್ಲಿ. ಹುಡುಗಿಯ ಎಂಟು ಅಥವಾ ಹನ್ನೆರಡನೆ ವಯಸ್ಸಿನಲ್ಲಿ ಅವಳನ್ನು ಮದುವೆ ಮಾಡಿಕೊಡಬೇಕೆಂದು ಸ್ಮೃತಿಗಳು ವಿಧಿಸಿರುವಾಗ ಅವಳ ವಿದ್ಯಾಭ್ಯಾಸಕ್ಕೆ ಸಮಯವೆಲ್ಲಿದೆ ಮತ್ತು ಇತಿಹಾಸಗಳ ಕಾಲದ ನಂತರ ಸ್ತ್ರೀಯರ ವಿದ್ಯಾಭ್ಯಾಸನ್ನು ಜನರು ಸಂಪೂರ್ಣವಾಗಿ ಉಪೇಕ್ಷಿಸಿದ್ದರೆಂದು ಸ್ಪಷ್ಟವಾಗುತ್ತದೆ. ಪ್ರಾಚೀನ ಭಾರತದ ಯಾವ ವಿಶ್ವವಿದ್ಯಾಲಯಗಳಲ್ಲಿ ಯಾವ ವಿದ್ಯಾರ್ಥಿನಿಯು ಅಧ್ಯಯನ ಮಾಡಿದಂತೆ ಕಂಡುಬರುವುದಿಲ್ಲ. ಸುಮಾರು ೯೦೦ರ ಶಾಸನವೊಂದರಲ್ಲಿ ನಾಗಾರ್ಜುನಯ್ಯ ಮತ್ತು ನಂದಿಗೆಯಬ್ಬೆಯಮಗಳು 'ಸಾವಿನಿರ್ಮಡಿ' ಎಂಬಾಕೆ ಸರ್ವಶಾಸ್ತ್ರಗಳಲ್ಲಿ ಪರಿಣಿತಿಯನ್ನು ಹೊಂದಿರುವಷ್ಟು ಪಾಂಡಿತ್ಯವನ್ನು ಪಡೆದವರಿದ್ದರು ಎಂಬುದಕ್ಕೆ ಈ ಶಾಸನವೇ ಆಧಾರವೆನ್ನಬಹುದಾಗಿದೆ.

ಕವಿಚರಿತ್ರೆಯ ಪ್ರಕಾರ ೧೨ನೇ ಶತಮಾನದ ಪೂರ್ವಾರ್ಧದಲ್ಲಿದ್ದ ನಾಗಚಂದ್ರನ ಸಮಕಾಲೀನಳಾದ ಕುಂತಿಯೇ ಕನ್ನಡ ಮೊದಲ ಕವಿತ್ರಿ ಎಂದು ತಿಳಿದುಬರುತ್ತದೆ. ಕರ್ನಾಟಕದ ರಾಣಿಯರು ಪಾಣಿನಿ ಹೇಳುವ 'ಅ ಸೂರ್‍ಯಂ' ಪಶ್ಯೆಯರಾಗಿರಲಿಲ್ಲ ರಾಜ್ಯದ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಮಾತ್ರವಲ್ಲ ರಾಜಕೀಯ ಜೀವದಲ್ಲೂ ಪ್ರಧಾನಪಾತ್ರವನ್ನು ಅವರು ವಹಿಸಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ರಾಜರು ತನ್ನ ರಾಣಿಯರನ್ನು ರಾಜ್ಯದ ಬೇರೆ ಬೇರೆ ಭಾಗಗಳನ್ನಾಳಲು ನೇಮಿಸುತ್ತಿದ್ದರು. ಸುಮಾರು ೯೨೦ರಲ್ಲಿ ಭೂತುಗನ ಅರಸಿ ಸರಮಬ್ಬೆಯು ಕುರ್ಗಲ್ಲನ್ನು ಆಳುತ್ತಿದ್ದಂತೆ ಒಂದು ಶಾಸನವು ತಿಳಿಸುತ್ತದೆ. ಕ್ರಿ.ಶ. ೯೯೭ರಲ್ಲಿ ಶ್ರೀಮಚ್ಚಾಳುಕ್ಯ ಪೆರ್ಮಾನಡಿ ದೇವರ ಮಗಳು ಪಂಪಾದೇವಿಯ ರಾಜ್ಯಭಾರ ಮಾಡುತ್ತಿದ್ದಂತೆ ಇನ್ನೊಂದು ಶಾಸನವುತಿಳಿಸುತ್ತದೆ. ಇಂತಹ ರಾಣಿಯರಲ್ಲಿ ಅತ್ಯಂತ ಪ್ರಸಿದ್ಧಳಾದವಳು ಅಕ್ಕಾದೇವಿ ಇವಳು ಕ್ರಿ.ಶ. ೧೦೫೦ರಲ್ಲಿ ಕಿಸುಕಾಡು ೭೦, ತೊರುಗರೆ ೪೦ಗಳನ್ನು 'ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನ'ದಿಂದ ಆಳುತ್ತಿದ್ದಂತೆ ಒಂದು ಶಾಸನವು ತಿಳಿಸುತ್ತದೆ. ಕೆಲವೊಮ್ಮೆ ರಾಣಿಯರು ರಾಜ್ಯದ ರಾಜಧಾನಿಯಲ್ಲೇ ಇದ್ದುಕೊಂಡು ಬೆರೆ ಬೇರೆ ಭಾಗಗಳನ್ನು ಆಳುತ್ತಿದ್ದರೆಂಬುದಕ್ಕೆ ಒಂದು ಶಾಸನಾಧಾರವಿದೆ. ತ್ರಿಭುವನ ಮಲ್ಲನ ರಾಣಿ ಜಕ್ಕಳದೇವಿಯ ಕಲ್ಯಾಣದಲ್ಲಿರುವಾಗ ಒಬ್ಬ ವ್ಯಾಪಾರಿಯು ತಂದ ಸುಂದರ ಜಿನ ವಿಗ್ರಹವನ್ನು ಅವಳು ಕೊಂಡುಕೊಂಡಳೆಂದೂ, ಚಕ್ರವರ್ತಿಯು ನಿನ್ನ ಆಳ್ಕೆಯ ಊರಲ್ಲಿ ಅದನ್ನು ಪ್ರತಿಷ್ಠಿಸು ಎಂದಾಗ ಅವಳು ಅದನ್ನು ಇಂಗಳೆಕೆಯಲ್ಲಿ ಪ್ರತಿಷ್ಠಿಸಿದಳೆಂದು ಆ ಶಾಸನವು ಹೇಳುತ್ತದೆ. ಇಷ್ಟು ಪ್ರಭಾವಶಾಲಿಯಾಗಿದ್ದ ರಾಣಿಯರಿಂದ ರಾಜನೀತಿಯ ವಿಷಯವಾಗಿ ಸಲಹೆಗಳನ್ನು ಪಡೆಯುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ.

ಇವುಗಳನ್ನೆಲ್ಲಾ ಗಮನಿಸಿದಾಗ ಒಂದು ಒಟ್ಟಾಭಿಪ್ರಾಯಕ್ಕೆ ಬರಬಹುದಾಗಿದೆ. ಅದೇನೆಂದರೇ ಬ್ರಾಹ್ಮಣರಲ್ಲೇ ಕೆಲವು ಮಹಿಳೆಯರು ಶಿಕ್ಷಿತರಾಗಿದ್ದರು. ಅದು ಇತಿಹಾಸಗಳ ಅಂದರೆ ಮಹಾಕಾವ್ಯಗಳ ಕಾಲದಲ್ಲಿ ನಂತರದ

ಧರ್ಮ ಸೂತ್ರಗಳ ಕಾಲದಲ್ಲಿ ಅವರು ಎಲ್ಲ ವಿಧದಿಂದಲೂ ಹತ್ತಿಕ್ಕಲ್ಪಟ್ಟರು ಎಂದು ಹೇಳಬಹುದು. ಕೆಲವೊಂದು ಅವಕಾಶಗಳು ಕೆಲವರಿಗೇ ಅಂದರೆ ದಿಟ್ಟ ಮಹಿಳೆಯರಿಗೆ ಸಲ್ಲುತ್ತಿದ್ದವು. ಇಂದರಿಂದ ಅವರು ಮುಂದೆ ಬಂದಿರಲೂ ಬಹುದಾಗಿದೆ. ಅವರು ಶಿಕ್ಷಣ ಪಡೆದ ಉಲ್ಲೇಖಗಳಿಲ್ಲದಿರುವಾಗ, ರಾಜ್ಯ ಭಾರ ನಡೆಸುವುದು. ಕಾವ್ಯಗಳ ರಚನೆ, ಯುದ್ಧಗಳಲ್ಲಿ ಹೋರಾಡುವುದು ಕಂಡಬರುತ್ತದೆ. ಅಂದರೆ ಅವರು ನಾಲ್ಕುಗೋಡೆಗಳ ಮಧ್ಯೆ ಇದ್ದುಕೊಂಡು ಇವನ್ನು ಹೇಗೆ ಕಲಿಯಲು ಸಾಧ್ಯ ಎಂಬುದು ಸಂದೇಹಾಸ್ಪದವಾಗಿದೆ. ಅವರು ಧರ್ಮವನ್ನು ಬೆಳೆಸುವಲ್ಲಿ ಮಹತ್ತರವಾದ ಕಾರ್ಯ ವಹಿಸಿದ್ದಾರೆ. ಭಾರತೀಯ ಶಿಲ್ಪಶಾಸ್ತ್ರಕ್ಕೆ ಕೊಡುಗೆಗಳನ್ನು ನೀಡುವ ಮೂಲಕ ಧರ್ಮರಕ್ಷಣೆ ಮಾಡಿದ್ದಾರೇ ಹೊರತು. ಧರ್ಮ ಯಾವ ರೀತಿಯಲ್ಲಿ ಅವರನ್ನು ನಡೆಯಿಸಿಕೊಂಡಿತೆಂಬ ಉಲ್ಲೇಖಗಳೇ ಸಿಗುವುದಿಲ್ಲ. ಅಂದರೆ ಆ ಜೀವನ ಶೈಲಿಗೆ ಅವರು ವಿರೋಧವನ್ನೆತ್ತಿರಲಿಲ್ಲ ಅದನ್ನು ಒಪ್ಪಿಕೊಂಡಿದ್ದರೆಂಬುದು ತಿಳಿದುಬರುತ್ತದೆ.

ಏನೇ ಆದರೂ ಇವುಗಳನ್ನೆಲ್ಲಾ ಪುನರ್ ಅಧ್ಯಯನಕ್ಕೆ ಒಳಪಡಿಸಿ, ನಿಜವಾದ ಅವಳ ಸ್ಥಾನಮಾನ ಕಂಡುಕೊಳ್ಳುವುದು ಅವಶ್ಯವಾಗಿದೆ. ಈ ಶಾಸನಗಳಲ್ಲಿ ಕೇವಲ ಕೆಲವೊಬ್ಬ ಬ್ರಾಹ್ಮಣ ಮಹಿಳೆಯರ ಅಂದರೆ ಪ್ರಖ್ಯಾತ ಮಹಿಳೆಯರ ಬಗ್ಗೆ ಇದೆ ಹೊರತು ಉಳಿದ ಮಹಿಳೆಯರ ಮಾತೇ ಎತ್ತುವದಿಲ್ಲ. ಇಷ್ಟೆಲ್ಲಾ ಇದ್ದರೂ ಇತಿಹಾಸದಲ್ಲಿ ಮಹಿಳೆ ಇಲ್ಲವೆನ್ನುವ ಮಾತು ಇದೆ, ಬಲಗೊಳ್ಳುತ್ತದೆ. ಮಹಿಳೆ ಇಲ್ಲವೆನ್ನುವ ಕಾರಣಕ್ಕಾಗಿ ಸೃಷ್ಟಿಸಿದ ಪುರುಷನ ಪ್ರಾಧ್ಯಾನ್ಯ ಇತಿಹಾಸವೇ ಎಂಬ ಸಂದೇಹ ಮೂಡುತ್ತದೆ.

೩.೪.೨. ಮಧ್ಯಕಾಲೀನ ಯುಗದಲ್ಲಿ ಬ್ರಾಹ್ಮಣ ಮಹಿಳೆ

ಮಧ್ಯಯುಗವೆಂದರೇ ಕ್ರಿ.ಶ. ಸುಮಾರು ೬ನೇ ಶತಮಾನದಿಂದ ೧೭ನೇ ಶತಮಾನದ ವರೆಗೆ ವಿಸ್ತರಿಸಿಕೊಳ್ಳುತ್ತದೆ. ಇದು ರಾಜರ ಆಳ್ವಿಕೆಯ ಕಾಲ. ಪ್ರಭು ಸಂಹಿತೆಯನ್ನು ಜನರು ಒಪ್ಪಿ ನಡೆಯುತ್ತಿದ್ದು, ಪ್ರಭುವೇ ಪರಮಾಧಿಕಾರ ಹೊಂದಿದ್ದು ಜನರು ಆಜ್ಞಾಪಾಲಕರಾಗಿದ್ದರು. ಭಾರತದ ಸಂದರ್ಭದಲ್ಲಿ ಈ ಅವಧಿ ಸುಮಾರು ಗುಪ್ತರ ಕಾಲದಿಂದ ಹಿಡಿದು ವಿಜಯನಗರ ಅರಸರ ಕಾಲದವರೆಗೂ ಎಂದು ಹೇಳಬಹುದು. ಈ ವೇಳೆಗೆ ಸ್ಮೃತಿಕಾರರ ಸಾಮಾಜಿಕ ಕಾನೂನುಗಳು ರಚನೆಯಾಗಿದ್ದವು. ಅವು ಧಾರ್ಮಿಕ ಶಾಸನಗಳಾಗಿ ಎಲ್ಲರೂ ಚಾಚೂತಪ್ಪದೇ ಅನುಸರಿಸುತ್ತಿದ್ದರು. ಅಲ್ಲಿಯವರೆಗೆ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯ ಅನುಭವಿಸುತ್ತಿದ್ದ ಬ್ರಾಹ್ಮಣ ಹೆಣ್ಣು ಮಧ್ಯಯುಗದಲ್ಲಿ ಹೀನಾಯ ಸ್ಥಿತಿಗೆ ಬಂದಳು.

ಬ್ರಾಹ್ಮಣ ಹೆಂಗಸಿನ ಜೊತೆ ಸಂಬೋಗ ಮಾಡಲು ಸಾಮಾಜಿಕ ಅಶ್ಲಿಲತೆಯ ಯಾವ ತೊಡಕೂ ಇಲ್ಲದಂತಹ ಸಾರ್ವತ್ರಿಕ ಹಕ್ಕುಂಟು ಎಂದು ಪ್ರತಿಪಾದಿಸಲಾಯಿತು. ಸತ್ತಗಂಡನೊಂದಿಗೆ ಚಿತೆಯೇರುವ ಆತ್ಮ ಬಲಿದಾನ ಶಿಫಾರಸ್ಸಿಗೆ ಬಂತು. ಬಾಲ್ಯವಿವಾಹ ಏರ್ಪಟ್ಟು, ವಿಧವಾ ಮರು ವಿವಾಹ ನಿಷೇಧಿಸಲಾಯಿತು. ಶಾಸ್ತ್ರಗಳ ಕಟ್ಟಳೆಗಳು ಬಲಗೊಂಡವು. ಹೆಣ್ಣಿಗೆ ವ್ಯಕ್ತಿಸ್ವಾತಂತ್ರ್ಯವನ್ನೆ ದಮನ ಮಾಡಲಾಯಿತು. ಅವಳ ಬದುಕಿನ ಎಲ್ಲ ಬಗೆಯ ಆಯ್ಕೆಯಿಂದ ವಂಚಿತಳಾದಳು. ಹೆಣ್ಣನ್ನು ಹೆಗೆಲ್ಲಾ ನಡೆಸಿಕೊಳ್ಳಲಾಯಿತು ಎಂಬುದಕ್ಕೆ ರಾಹುಲ ಸಾಂಕೃತ್ಯಾಯನರು ನೀಡುವ ಹರ್ಷವರ್ಧನನ ಕಾಲದ ಚಿತ್ರಣದ ಮೂಲಕ ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಬಹುದು. ಆ ಕಾಲದ ದೇಶದ ತರುಣಿಯರೆಲ್ಲ ಅವರು ಕ್ಷತ್ರಿಯ ತರುಣಿಯರಿರಲಿ, ಬ್ರಾಹ್ಮಣ ತರುಣಿಯರಿರಲಿ, ಯಾರೇ ಆಗಲಿ ರಾಜರ ಹಾಗೂ

ಸಾಮಂತರ ಸಂಪತ್ತಾಗಿ ಗಣಿಸಲ್ಪಡುತ್ತಿದ್ದರು ಹೀಗೆ ರಾಜಾಶ್ರಯದಲ್ಲಿದ್ದ ಯಾವ ಹೆಣ್ಣು ಸಂತೋಷವಾಗಿದ್ದಾಳೆಂದು ಹೇಳಲು ಸಾಧ್ಯವಿಲ್ಲ.

ಪಾಶ್ಚಾತ್ಯರಿಗೆ ಮಧ್ಯಯುಗವೆಂದರೇ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ದೃಷ್ಟಿಗಳಿಂದ ಅತ್ಯಂತ ಸಂಕ್ರಮಣ ಕಾಲ. ರೋಮನ್ ಸಾಮ್ರಾಜ್ಯದ ನಂತರದಲ್ಲಿ ಮತ್ತೆ ಬಲಿಷ್ಟವಾದ ಮತ್ತು ವ್ಯಾಪಕವಾದ ಸಾಮ್ರಾಜ್ಯ ಉದಯವಾಗಲೇ ಇಲ್ಲ. ಆದರೆ ಈ ಯುಗದಲ್ಲಿ ಹೆಚ್ಚಾಗಿ ಜನರು ಮೂಢನಂಬಿಕೆಗಳಿಗೆ ಬಲಿಯಾಗಿದ್ದರು. ಮಧ್ಯಯುಗದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆಧ್ಯತೆ ಇರಲಿಲ್ಲ.

ಯುರೋಪಿನ ದೇಶಗಳಲ್ಲಿ ಮಧ್ಯಯುಗದ ಕಾಲದಲ್ಲಿ ಕೆಲವು ಆದರ್ಶ ಸ್ತ್ರೀ ಮಾದರಿಗಳನ್ನು ಪ್ರತಿಬಿಂಬಿಸುತ್ತಾ ಗಂಡನ ಮನೋಭಾವವನ್ನು ಅರಿತು ನಡೆಯುವ ಸ್ತ್ರೀ ಪ್ರತೀಕಗಳನ್ನು ನೀಡುವ ಕಾರ್ಯನಡೆದಿದೆ. ಹೆಣ್ಣನ್ನು ಕೀಲಿಕೊಟ್ಟ ಬೊಂಬೆಯಂತೆ ಮಾಡಿಕೊಂಡು ಗಂಡು ನಿರಂತರವಾಗಿ ಶೋಷಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಯುತ್ತಿದ್ದುದು, ಅದನ್ನು ಬ್ರಾಹ್ಮಣ ಹೆಣ್ಣು ಮತ್ತು ಸಮಾಜದ ಜನರೂ ಒಪ್ಪಿನಡೆಯುವುದು ಕಂಡುಬರುತ್ತದೆ.

ಅಕ್ಬರನಂತಹ ಪ್ರಗತಿಶೀಲದೊರೆಯು "ತರುಣ ವಯಸ್ಸಿನಲ್ಲಿ ಸ್ತ್ರೀಯೊಬ್ಬಳು ನಗರದ ಬೀದಿಗಳಲ್ಲಿಯೂ ವ್ಯಾಪಾರ ಕೇಂದ್ರಗಳಲ್ಲಿಯೂ, ಬಿಡುಬೀಸಾಗಿ ಸುತ್ತಾಡುವುದನ್ನು ಕಂಡಾಗ ಮತ್ತು ಅವಳು ಹಾಗೆ ಸುತ್ತಾಡುತ್ತಿರುವಾಗ ತನ್ನ ಮುಖವನ್ನು ಮುಸುಕು ಹಾಕಿಕೊಂಡು ಮುಚ್ಚಿಕೊಳ್ಳದಿದ್ದಲ್ಲಿ ಅಥವಾ ಹಾಗೆ ಮುಸುಕನ್ನು ಹಾಕಿಕೊಳ್ಳಲು ಒಪ್ಪದಿದ್ದಲ್ಲಿ ಅವಳು ಸೂಳೆಯರ ಕೇರಿಗೆ ಹೋಗತಕ್ಕದ್ದು, ಹಾಗೂ ಆ ವೃತ್ತಿಯನ್ನು ಸ್ವೀಕರಿಸತಕ್ಕದ್ದು" ಎಂದು ಆಜ್ಞೆಹೊರಡಿಸಲಾಯಿತು. ಹಿಂದೂಗಳು ಸಹ ತಮ್ಮ ಸ್ತ್ರೀಯರ ಸ್ಥಾನಮಾನವನ್ನು ರಕ್ಷಿಸಿಕೊಳ್ಳುವ ಭಾವನೆಯಿಂದ ಮತ್ತು ಅಪಾಯಗಳಿಂದ ರಕ್ಷಣೆಗಾಗಿ ಮತ್ತು ತಮ್ಮ ತಮ್ಮ ಸಾಮಾಜಿಕ ಧರ್ಮವನ್ನು ಉಳಿಸಿಕೊಳ್ಳಲು ತಾವೂ ಪರ್ದಾ ಪದ್ಧತಿಯನ್ನು ಅನುಸರಿಸಲಾರಂಭಿಸಿದರು. "ಯಥಾ ರಾಜಾ ತಥಾ ಪ್ರಜಾ" ಎಂಬ ಗಾದೆಯಂತೆ ಆಳುವ ವರ್ಗವನ್ನು ಅನುಕರಿಸುವ ಪ್ರವೃತ್ತಿ ಹಿಂದುಗಳಲ್ಲಿ ಪರ್ದಾ ಪದ್ಧತಿಯನ್ನು ಪ್ರಾರಂಭಿಸಲು ಒಂದು ಪ್ರಮುಖ ಅಂಶವಾಗಿ ಒತ್ತಾಯಮಾಡಿರಬೇಕು.

ಮಧ್ಯಯುಗದಲ್ಲಿ ರಾಜನಿಂದ ಹಿಡಿದು ಸಾಮಾನ್ಯ ಪುರುಷನವರೆಗೂ ಹೆಣ್ಣಿನೊಡನೆ ಬೆರೆಯುವ ಸುಖವನ್ನು ಬಿಟ್ಟರೇ ಬೇರೊಂದು ಸುಖ ಸಂತೋಷಗೊತ್ತಿಲ್ಲದಂತೆ ವರ್ತಿಸುತ್ತಿದ್ದರು. ಲೈಂಗಿಕ ವಿಷಯಗಳ ಬಗ್ಗೆ ಅತ್ಯಂತ ಕುತೂಹಲಿಗಳಾಗಿದ್ದ ಅವರು ಹೆಣ್ಣುಗಳನ್ನು ನಾಲ್ಕು ಜಾತಿಗಳಾಗಿ ವಿಂಗಡಿಸುತ್ತಿದ್ದರು. ಪದ್ಮಿನಿ, ಚಿತ್ತಿನಿ, ಹಸ್ತಿನಿ ಮತ್ತು ಶಂಕಿನಿ ಎಂದು ಹೆಣ್ಣಿನ ಅಂಗಾಂಗಗಳ ಪರೀಕ್ಷೆಯಿಂದ ಯಾವ ಹೆಣ್ಣು ಯಾವ ಜಾತಿಗೆ ಸೇರಿದವಳೆಂದೂ ಆಕೆಯ ಗುಣಾವಗುಣಗಳೆನೆಂಬುದನ್ನು ನಿರ್ಣಯಿಸಲಾಗುತ್ತಿತ್ತು. ಇದಕ್ಕೆಂದೇ ದಪ್ಪದಪ್ಪ ಪುಸ್ತಕಗಳು ಆ ಕಾಲಕ್ಕೆ ರಚಿತವಾದವು. ಒಬ್ಬಳಲ್ಲಿ ಒಂದು ಗುಣ ವಿಲ್ಲದಿದ್ದರೇ, ಒಂದೊಂದು ಗುಣ ಉಳ್ಳ ಒಬ್ಬೊಬ್ಬಳನ್ನು ಮದುವೆ ಮಾಡಿಕೊಳ್ಳುತ್ತಿದ್ದರು.

ವಿಧವೆಯರ ಸತಿ ಪದ್ಧತಿಯನ್ನು ವಿರೋಧಿಸುವವರು ಆ ಕಾಲದಲ್ಲಿ ಇರಲಿಲ್ಲವೆಂದಲ್ಲ, ಇದ್ದರು ಆದರೆ ಅವರಿಗೆ ಉಳಿಗಾಲವಿರಲಿಲ್ಲ. ಆ ಕಾಲದ ಋಷಿಮುನಿಗಳು ಮಹಾತಪಸ್ವಿಗಳೆನಿಸಿದ್ದವರೂ ಸಹ ವಿಧವೆಯರು ದ್ವಿತೀಯ

ವರನಾದ ದೇವರನ್ನು ಸ್ವೀಕರಿಸುವುದು ಉಚಿತ ಎಂದು ಬೋಧಿಸುತ್ತಿದ್ದರು. ಆದರೆ ಅವರು ದೇವರ ಕೈ ಹಿಡಿಯಲು ನರಜನ್ಮದಲ್ಲಿ ಸಾಧ್ಯವಿಲ್ಲವಾದ್ದರಿಂದ ಸತ್ತೆ ದೇವರನ್ನು ಕೈಹಿಡಿಯಬೇಕಾಗಿತ್ತು. ಗಂಡ ಸತ್ತ ತರುಣಿಯರನ್ನು ವಿಧವೆಯರಾಗಿ ಇರಿಸುವುದೆಂದರೇ ರಹಸ್ಯ ಗರ್ಭಪಾತಕ್ಕೆ ಅವಕಾಶಮಾಡಿದಂತೆ, ಅವರು ಮಕ್ಕಳನ್ನು ಹೆತ್ತು ಬಾಳುವುದು ಎಂದರೆ ವಿಧವಾ ವಿವಾಹ ಒಪ್ಪಿಕೊಂಡಂತೆ. ಅದಕ್ಕಾಗಿ ರಹಸ್ಯವಾಗಿ ಗರ್ಭಪಾತದ ಭಯವನ್ನು ತಪ್ಪಿಸಲು ಹೊಸ ಪದ್ಧತಿಯನ್ನು ಕಂಡುಕೊಂಡರು. ಅದೇನೆಂದರೇ ವಿಧವೆಯರನ್ನು ಜೀವಂತವಾಗಿ ಸುಡುವುದು ಪ್ರತಿವರ್ಷ ಬೆಂಕಿಗೆ ದೂಡಲ್ಪಟ್ಟು ಲಕ್ಷಾಂತರ ತರುಣಿಯರ ಕುರಾಣಾಂಕ್ರಂದನ ಕೇಳಿಯೂ ಮನಕರಗದ ಆ ದೇವತೆಗಳು ಕಲ್ಲಾಗಿದ್ದವು. ಧರ್ಮದ ಹೆಸರಿನಲ್ಲಿ ಬೆಂಕಿಗೆ ತಳ್ಳಿಬೂದಿ ಮಾಡಿದ ಸಾವಿರಾರು ಮಂದಿ ತರುಣಿಯರನ್ನು ಹತ್ಯೆಮಾಡುತ್ತಿದ್ದರು. ಸ್ತ್ರೀಹತ್ಯೆ! ಸ್ತ್ರೀಯರ ಆತ್ಮಹತ್ಯೆಗಳೇ ಧರ್ಮಗಳೆನಿಸಿದ್ದವು.

ಅವಿವಾಹಿತೆಯಾದವಳು ತೀರಿಕೊಂಡರೇ ಆಕೆಯ ಶವವನ್ನು ಸುಡುವ ಮೊದಲು ಆ ಶವಕ್ಕೆ ವಿವಾಹ ಸಂಸ್ಕಾರ ಮಾಡಬೇಕೆಂಬ ಸ್ಮೃತಿಕಾರರ ಶಾಸನದಿಂದಾಗಿ ಹೆಣ್ಣು ಋತುಮತಿಯಾಗುವ ಮೊದಲು ವಿವಾಹಮಾಡಬೇಕೆಂಬ ನಂಬಿಕೆ ಬೆಳೆಯಿತು. ಇದರಿಂದಾಗಿ ಬ್ರಾಹ್ಮಣ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಕ್ರಿ.ಪೂದ ಕಾಲದಿಂದಲೂ ೧೬ ಇದ್ದದ್ದು, ಮಧ್ಯಯುಗದಲ್ಲಿ ತೊಟ್ಟಿಲ ಮದುವೆಗೆ ಇಳಿಯಿತು. ಪರದಾ ಪದ್ಧತಿಯಿಂದ ಸ್ತ್ರೀಯ ಅಂತಃ ಶಕ್ತಿಯನ್ನು ಕೊಂದಿತು. ಮಾತ್ರವಲ್ಲ ಅವರ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶ ನೀಡಲಿಲ್ಲ. ಸಾಮಾಜಿಕ ಸಂಪರ್ಕ ಮತ್ತು ಶಿಕ್ಷಣದಿಂದ ಸ್ತ್ರೀಯರು ವಂಚಿತರಾದರು. ಬಾಲ್ಯ ವಿವಾಹ ಸತಿಪದ್ಧತಿಗಳು ಇನ್ನಷ್ಟು ಗಟ್ಟಿಯಾದವು. ಸ್ತ್ರೀ ಧಾರ್ಮಿಕವಾಗಿ ಪುರುಷನ ಜೀವಮಾನವಿಡೀ ಮಾತ್ರವಲ್ಲದೇ ಮರಣಾನಂತರವೂ ಆತನ ಅಧೀನಳು ಎಂಬ ಭಾವನೆ ಬೆಳೆಯಿತು. ಈ ಯುಗದಲ್ಲಿ ಸ್ತ್ರೀಯರು ಅಲಂಕಾರ ಮತ್ತು ಸೌಂದರ್ಯಕ್ಕೆ ಸೀಮಿತರಾದವರು ಎಂಬ ಅಭಿಪ್ರಾಯವಿತ್ತು.

ಸ್ತ್ರೀಯರನ್ನು ಪ್ರತ್ಯೇಕವಾಗಿ ಇರಿಸುವುದು ಒಂದು ಗೌರವದ ಕೆಲಸ ಎಂಬುದಾಗಿ ಭಾವಿಸಿದ ರಾಜರು ಶ್ರೀಮಂತರು, ಹೆಂಗಸರನ್ನು ಪ್ರತ್ಯೇಕ ಅರಮನೆಗಳನ್ನು ಕಟ್ಟಿ ಅದರಲ್ಲಿ ಎಲ್ಲಾ ಬಗೆಯ ರಕ್ಷಣೋಪಾಯದೊಂದಿಗೆ ಹೆಣ್ಣನ್ನು ಇಟ್ಟರು. ಸ್ತ್ರೀಯರೊಂದಿಗೆ ವ್ಯವಹರಿಸಲು ನಪುಂಸಕರನ್ನು ನೇಮಿಸಿಕೊಳ್ಳಲಾಯಿತು. ಹೆಂಗಸರೇ ಹೊರಗಡೆ ಓಡಾಡುವುದು ಅಪರೂಪವಾಯಿತು. ಯಾವುದೇ ಕಾರಣಕ್ಕಾಗಿ ಸ್ವಲ್ಪಕಾಲವೂ ತನ್ನ ಪರ್ದಾವನ್ನು ತೆಗೆದು ಹಾಕಿದ ಪರಿಣಾದಲ್ಲಿ ಅದು ಅವಳ ಭವಿಷ್ಯಕ್ಕೆ ದುರಂತವೇ ಆಗಿತ್ತು ಎಂದು ಹೇಳಬಹುದು.

ಹೀಗೆ ಮಧ್ಯಯುಗದಲ್ಲಿ ಪಾಶ್ಚಾತ್ಯರಲ್ಲಿಯೂ ಬ್ರಾಹ್ಮಣ ಸ್ತ್ರೀಯರ ಸ್ಥಿತಿಗತಿಗಳು ಆತಂಕಕಾರಿಯಾಗಿದ್ದವು. ಸಾಮಾಜಿಕ ಕಟ್ಟಳೆಗಳು ಬಲವಾಗಿದ್ದವು. ಸ್ತ್ರೀ ಸಹಜ ವಿಕಾಸಕ್ಕೆ ಸಾಧ್ಯತೆಗಳ ಕೊರತೆ ಇತ್ತು, ಇಡೀ ಸಮಾಜವೇ ಪುರುಷ ಮುಖಿ ಚಲನೆಯನ್ನು ಹೊಂದಿತ್ತು. ಚಕ್ರವರ್ತಿಯಿಂದ ಹಿಡಿದು ಸಾಮಾನ್ಯನವರೆಗೂ ಪುರುಷ ಪ್ರಾಬಲ್ಯವೇ ಪ್ರಧಾನವಾಗಿತ್ತು. ಸ್ತ್ರೀ ಸ್ವಾತಂತ್ರ್ಯದ ಅಗತ್ಯವನ್ನರಿತು ಅವರ ಜೀವನ ಕ್ರಮದ ಸುಧಾರಣೆಗೆ ಪ್ರಯತ್ನಿಸಿದವರು ತುಂಬ ಕಡಿಮೆ. ಧಾರ್ಮಿಕವಾಗಿ, ಸಾಮಾಜಿಕವಾಗಿ ಶೈಕ್ಷಣಿಕವಾಗಿ, ರಾಜಕೀಯವಾಗಿ ಸ್ತ್ರೀಯರನ್ನು ಕಡೆಗಣಿಸಿದ್ದು ಮಧ್ಯಯುಗದ ಸಾಧನೆ!

೩.೪.೩. ಬ್ರಿಟಿಷ್ ಯುಗದಲ್ಲಿ ಬ್ರಾಹ್ಮಣ ಮಹಿಳೆ

ಮೊಗಲರ ಕಾಲಾವಧಿಯಲ್ಲಿ ವ್ಯಾಪಾರ ನಿಮಿತ್ತ ಭಾರತಕ್ಕೆ ಬಂದ ಬ್ರಿಟಿಷರು ಪ್ಲಾಸಿ ಕದನದಲ್ಲಿ ಜಯಗಳಿಸಿದ ನಂತರ ಇಲ್ಲಿನ ಆಳರಸರಾಗಿ ತಮ್ಮ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ಆರಂಭಿಸಿದರು. ಅವರ ಆಳ್ವಿಕೆಯ ಆರಂಭದಲ್ಲಿ ಬ್ರಾಹ್ಮಣ ಸ್ತ್ರೀಯರ ಸ್ಥಾನಮಾನಗಳು ಬಹಳ ಶೋಚನೀಯವಾಗಿಯೇ ಇದ್ದವು. ಪರದಾ ಪದ್ಧತಿ, ಬಾಲ್ಯ ವಿವಾಹ, ವಿಧವಾ ಪುನರ್ ವಿವಾಹ, ಸತೀ ಆಚರಣೆ, ಸ್ತ್ರೀ ಶಿಕ್ಷಣದ ನಿಷೇದ, ಪುರುಷರ ಸ್ವಾರ್ಥದ ಬಹುಪತ್ನಿತ್ವ ಆಚರಣೆ ದೇವದಾಸಿ ಪದ್ದತಿ, ಅಂತರ್ ಜಾತಿ ವಿವಾಹ ನಿಷೇಧ, ಸ್ತ್ರೀಯರ ಆಸ್ತಿಯ ಹಕ್ಕಿನ ನಿರಾಕರಣೆ, ದತ್ತು ಸ್ವೀಕಾರದ ನಿರಾಕರಣೆ ಸ್ತ್ರೀಯರ ರಾಜಕೀಯ ಹಾಗೂ ಸಾರ್ವಜನಿಕ ಜೀವನ ಪ್ರತಿಕೂಲವಾಗಿದ್ದಂತಹ ಪರಿಸ್ಥಿತಿ. ಈ ಮುಂತಾದ ಸಮಸ್ಯೆಗಳ ಸವಾಲುಗಳ ಸುಳಿಯಲ್ಲಿ ಸ್ತ್ರೀಯರ ಸ್ಥಾನಮಾನ ಸಿಲುಕಿಕೊಂಡ ಸಂದರ್ಭದಲ್ಲಿ ಬ್ರಿಟಿಷರು ಭಾರತದ ಚುಕ್ಕಾಣಿ ಹಿಡಿದಿದ್ದರು.

ಸುಮಾರು ೨೦೦ ವರ್ಷಗಳ ಬ್ರಿಟಿಷ್ ಆಳ್ವಿಕೆಯಲ್ಲಿ ಸಮಾಜದ ಆರ್ಥಿಕ ಸಾಮಾಜಿಕ ರಚನೆಗಳಲ್ಲಿ ಬಹಳಷ್ಟು ಬದಲಾವಣೆಗಳಾದವು, ಇವು ಎದ್ದು ಕಾಣುವಂತಿದ್ದವು. ಈ ಅವಧಿಯಲ್ಲಿ ಸ್ತ್ರೀಯರ ಜೀವನದ ಗುಣಮಟ್ಟವು ಎದ್ದುಕಾಣುವ ರೀತಿಯಲ್ಲಿ ಪ್ರಗತಿಯನ್ನು ಕಾಣದಿದ್ದರೂ ಸ್ತ್ರೀ ಪುರುಷರ ನಡುವಿನ ಹಲವಾರು ತಾರತಮ್ಯಗಳು ಕೊನೆಗೊಂಡವು. ಅಂದರೆ ಇದ್ದುದರಲ್ಲಿ ಸ್ವಲ್ಪಮಟ್ಟಿನ ಸಡಿಲತೆಗಳು ಕಾಣಿಸಿಕೊಂಡವು. ಶಿಕ್ಷಣ, ಉದ್ಯೋಗ ವಿವಾಹ, ರಾಜಕೀಯ, ಸಾರ್ವಜನಿಕ ಜೀವನ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸಮಾನ ಹಕ್ಕುಗಳನ್ನು ನೀಡಲಾಯಿತೆಂದು ಕೇವಲ ಹೇಳಲಾಗುತ್ತದೆ. ಶತಮಾನಗಳುದ್ದಕ್ಕೂ ಸ್ತ್ರೀಯರು ಮೌನವಾಗಿ ಅನುಭವಿಸುತ್ತಾ ಬಂದಿದ್ದ ಯಾತನಮಯ ಮೂಗುಬ್ಬುಸ ಇದೀಗ ಎದ್ದುಕಾಣುವಂತಾಗಿ ಅದರ ನಿವಾರಣೆಗೆ ಪ್ರಯತ್ನಗಳಾದವು. ಕೆಲವು ಬ್ರಿಟಿಷ್ ಅಧಿಕಾರಿಗಳು ಹಾಗೂ ಅನೇಕ ರಾಷ್ಟ್ರ ಪ್ರೇಮಿ ಜನನಾಯಕರುಗಳ ಪರಿಶ್ರಮದ ಫಲವಾಗಿ ಸ್ತ್ರೀಯರಲ್ಲಿ ಜಾಗೃತಿ ಮೂಡಿ ಅವರ ಅಂತಸ್ತಿನಲ್ಲಿ ಸಾಕಷ್ಟು ಸುಧಾರಣೆಗಳಾದವು. ಅಂತಹ ವಿಧಾಯಕ ಸ್ವರೂಪದ ಬದಲಾವಣೆಗಳನ್ನು ತರಲು ಹಲವು ಅಂಶಗಳು ಕಾರಣವಾದವೆಂದು ಹೇಳಬಹುದು.

ಬ್ರಿಟಿಷರ ಜೀವನ ಕ್ರಮ, ಅವರ ಸಂಸ್ಕೃತಿಯಿಂದಾಗಿ, ಪಾಶ್ಚಾತ್ಯ ಜೀವನ ಮೌಲ್ಯಗಳು ಭಾರತೀಯ ಜೀವನ ಕ್ರಮದ ಮೇಲೆ ತಮ್ಮ ವರ್ಚಸ್ಸನ್ನು ಬೀರಿದವು. ವ್ಯಕ್ತಿಯ ಕರ್ತವ್ಯದೊಂದಿಗೆ ಆತನ ಹಕ್ಕುಗಳಿಗೂ ಮಾನ್ಯತೆ ನೀಡುವ ನಿಲುವು ಇವೆಲ್ಲವೂಗಳೂ ಸ್ತ್ರೀಯರ ಬಗೆಗಿದ್ದ ಭಾವನೆ ಬದಲಿಸಿಕೊಳ್ಳಲು, ಜೀವನದಲ್ಲಾದ ದೃಷ್ಟಿಕೋನದ ಬದಲಾವಣೆಯಿಂದ ಸಾಧ್ಯವಾಯಿತೆಂದು ಹೇಳಬಹುದು. ಇದರೊಂದಿಗೆ ಸಮಾಜ ಸುಧಾರಕರ ಗಮನಾರ್ಹ ಪರಿಶ್ರಮದಿಂದಾಗಿ ಅವಳು ಬಂಧನಗಳಿಂದ ಕಳಚಿಕೊಳ್ಳಲು ಸಹಾಯಕವಾಯಿತು. ಮಹಿಳಾ ಶಿಕ್ಷಣಕ್ಕೆ ಆಧ್ಯತೆ ದೊರೆತು ಇದರಿಂದ ಮಹಿಳೆಯರು ತಮ್ಮತನವನ್ನು ತೋರಿಸಲು ಸಹಕಾರಿಯಾಯಿತೆನ್ನಬಹುದು.

ಬ್ರಿಟಿಷರ ಕಾಲದಲ್ಲಿ ಆದ ಮತ್ತೊಂದು ಮಹತ್ವದ ಕಾರ್ಯವೆಂದರೇ ಅನೇಕ ಮಹಿಳೆಯರು ತಮ್ಮ ತಮ್ಮ ರಾಜ್ಯ ಉಳಿಸಿಕೊಳ್ಳಲು ಅನಿವಾರ್ಯವಾಗಿಯಾದರೂ ಹೋರಾಡುವಂತೆ ಮಾಡಿತು. ಇದು ಹೆಣ್ಣು ಯಾವುದಕ್ಕೂ ಕಡಿಮೆ ಇಲ್ಲವೆಂಬುದನ್ನು ತೋರಿಸಿಕೊಟ್ಟಿತು. ಸ್ತ್ರೀಯರ ಸ್ಥಾನಮಾನವನ್ನು ಉದಾರ, ಅಂತಃಕರಣದಿಂದ

ನೋಡುವಂತೆ ವಾತಾವರಣ ಕಲ್ಪಿಸಿದರು. ಸ್ತ್ರೀ ಶಿಕ್ಷಣಕ್ಕೆ ಅವಕಾಶ ಒಂದೆಡೆಯಾದರೆ, ಮತ್ತೊಂದೆಡೆ ವಿದ್ಯಾವಂತ ಮಹಿಳೆಯರಿಗೆ ಉದ್ಯೋಗ ನೀಡಿಕೆಯೂ ಅತ್ಯಂತ ಅವಶ್ಯವೆಂದು ಭಾವಿಸಲಾಯಿತು. ಆದರೆ ಯಾವ ಬಗೆಯ ವೃತ್ತಿಗಳನ್ನು ನೀಡಬೇಕು ಎಂಬುದರ ಚರ್ಚೆ ಆರಂಭವಾಯಿತು. ಕೊನೆಗೆ ಶಿಕ್ಷಕಿಯೋ, ಶುಶ್ರೂಷಕಿಯೋ, ಗುಮಾಸ್ತಳೋ, ಸೇವಕಿಯೋ ಆಗಿ ಮಾತ್ರ ಕೆಲಸ ಮಾಡಬಲ್ಲಳು. ವೈದ್ಯ ಕಾನೂನು ತಜ್ಞೆ, ತತ್ವಶಾಸ್ತ್ರಜ್ಞೆ, ವಿಜ್ಞಾನಿ, ತಂತ್ರಜ್ಞಾನಿಯಾಗಲು ಹೆಣ್ಣು ಅನರ್ಹಳೆಂದು ಭಾವಿಸಲಾಯಿತು. ಆ ಯುಗಧರ್ಮದ ಆಲೋಚನೆ ಕೂಡ ಅದೇ ಆಗಿತ್ತು. ಇದಕ್ಕಾಗಿ ಅನೇಕ ಸಮಾಜ ಸುಧಾರಕರು ಶ್ರಮಿಸಿದರು.

ಬೇರೆ-ಬೇರೆ ಕ್ಷೇತ್ರಗಳಲ್ಲಿ ಹೆಣ್ಣನ್ನು ಮುನ್ನಡೆಸುವ ಪ್ರಯತ್ನಗಳು ಕೈಗಾರಿಕಾ ಕ್ರಾಂತಿಯ ನಂತರ ನಡೆದವು. ಪರಿಣಾಮವಾಗಿ ಸರ್ಕಾರದ ಆಡಳಿತ ನಿರ್ವಹಣೆಯಲ್ಲಿ, ರಾಜಕೀಯದಲ್ಲಿ, ಸುಧಾರಣಾ ಆಂದೋಲನಗಳಲ್ಲಿ, ಸಾರ್ವಜನಿಕ ರಂಗದಲ್ಲಿ ಹೆಣ್ಣು ಕಾಣಿಸಿಕೊಳ್ಳತೊಡಗಿದಳು ಇದರೊಂದಿಗೆ ಅನೇಕ ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೆಣ್ಣು ಧ್ವನಿಎತ್ತೊಡಗಿದಳು.

ಇಷ್ಟೆ ಅಲ್ಲದೆ ಬ್ರಿಟೀಷರ ಕಾಲಾವಧಿಯಲ್ಲಿ ಎಲ್ಲ ಬ್ರಾಹ್ಮಣ ಹೆಣ್ಣು ಮಕ್ಕಳು ಸಂಘಟಿತಗೊಂಡರು. ಸ್ವದೇಶಾಭಿಮಾನ ಬೆಳೆಯಲಾರಂಭಿಸಿತು. ಇದರಿಂದ ಅನೇಕ ಮಹಿಳೆಯ ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸತೊಡಗಿದರು. ಇದರಿಂದ ಮುಂದೆ ಇವರು ಅನೇಕ ಮಹಿಳಾ ಚಳುವಳಿಗಳಲ್ಲಿ ಭಾಗವಹಿಸುವುದಕ್ಕೆ ಪ್ರೇರಣೆಯಾಯಿತು.

ಎಷ್ಟೆ ಕಾಲಮಾನಗಳು ಬದಲಾದರೂ ಕೆಲವೊಂದು ವಿಷಯಗಳಲ್ಲಿ ಮಹಿಳೆಯರ ಸ್ಥಾನ ಮಾನಗಳು ಇಂದು ಹೀನಾಯವಾಗಿರುವುದು ಗೋಚರವಾಗುತ್ತಿದೆ.

೩.೪.೪. ಸಧ್ಯದ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಮಹಿಳೆ

ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯ ಪರಿಸ್ಥಿತಿ ಭೂತಕಾಲದಂತೆ ಅಸಹನೀಯವಾಗಿಲ್ಲದಿದ್ದರೂ ಅನೇಕ ಕೊಳಕು ಇನ್ನೂ ಇವೆ. ಈಗ ಮಹಿಳೆಗೆ ಸಂವಿಧಾನ ಸರ್ವ ಸ್ವತಂತ್ರ್ಯತೆಯನ್ನು ಏಕತೆಯನ್ನು ಸಮಾನತೆಯನ್ನು ಘೋಷಿಸಿದೆ. ಆದರೆ ವಾಸ್ತವದಲ್ಲಿ ಸಮಾನತೆ ಹೋಗಲೀ ಮಾನವೀಯ ನೆಲೆಯಲ್ಲಿ ಕೂಡ ಹೆಣ್ಣನ್ನು ನೋಡುತ್ತಿಲ್ಲ.

ದಿನೇ ದಿನೇ ಅತ್ಯಾಚಾರದಂತಹ ಪ್ರಕರಣಗಳು ಹೆಚ್ಚಾಗಿದ್ದು, ಅವಳು ಹೇಗಿದ್ದರೂ ಎಲ್ಲಿದ್ದರೂ ಅದರಲ್ಲಿ ತನ್ನ ತಪ್ಪೆ ಇರದೇ ಭಾಗವಹಿಸುತ್ತಿದ್ದಾಳೆ. ಜಾಗತೀಕರಣದ ಪ್ರಭಾವದಿಂದಾಗಿ ಮಹಿಳೆ ಕೇವಲ ಬಂಡವಾಳ ಶಾಹಿಗಳ ಕೈಗೊಂಬೆಯಾಗಿದ್ದಾಳೆ. ಅವಳನ್ನು ದುಡ್ಡಿಗಾಗಿ ಹೇಗೆ ಬೇಕೋ ಹಾಗೆ ನಡೆಸಿಕೊಳ್ಳುವ ಕ್ರೌರ್ಯ ಇನ್ನೂಹೋಗಿಲ್ಲ. ಆಧುನಿಕರಣದಿಂದ ಅವಳ ಶ್ರಮಕ್ಕೆ ನೆರವು ಎಂಬ ಹೆಸರಿನಲ್ಲಿ ಅನೇಕ ಯಂತ್ರಗಳಿದ್ದರೂ, ಅವಳ ಕೆಲಸವನ್ನು ಕಡಿಮೆ ಮಾಡಿಲ್ಲ, ದಿನೇ ದಿನೇ ಹೆಚ್ಚುತ್ತಿರುವ ಕೆಲಸದ ಹೊರೆಯಿಂದಾಗಿ ತನ್ನ ಶಾಂತಿ, ನೆಮ್ಮದಿಗಳನ್ನು ಕಳೆದುಕೊಳ್ಳುತ್ತಿದ್ದಾಳೆ. ತ್ರಿಗುಣ ಕೆಲದ ಹೊರೆಯಿಂದಾಗಿ ಅವಳು ಬೆಂಡಾಗುತ್ತಿದ್ದಾಳೆ.

ಈ ಸಂದರ್ಭದಲ್ಲಿ ಪುರುಷ ಪೂರ್ತಿ ಸಾಂಪ್ರದಾಯಿಕ ಹೆಣ್ಣು ಬೇಡ, ಪೂರ್ತಿ ಆಧುನಿಕ ಹೆಣ್ಣೂ ಬೇಡ ಎಂದು ಅವಳ ವ್ಯಕ್ತಿತ್ವಕ್ಕೆ ದ್ವಂದ್ವತೆಯನ್ನು ತಂದೊಡ್ಡಿದ್ದಾನೆ. ಅವಳಿಗೆ ಶಿಕ್ಷಣದ ಅವಕಾಶಗಳು ದೊರಕುತ್ತಿದ್ದರು, ಅವು

ಕೇವಲ ಕಲೆಗೆ ಸಂಬಂಧಿಸಿದ್ದಾಗಿದ್ದು, ತಾಂತ್ರಿಕ ಕೋರ್ಸುಗಳಿಗೆ ಹೆಚ್ಚಾಗಿ ಕಳಿಸುತ್ತಿಲ್ಲ. ಕಳಿಸಿದರೂ ಅದು ಡೊನೇಷನ್ ಕೊಡದಿದ್ದರೇ ಮಾತ್ರ ಹೋಗಬಹುದು ಎಂಬಂತಹ ಸ್ಥಿತಿಗೆ ತಂದು ನಿಲ್ಲಿಸಿವೆ. ಹೆಣ್ಣಿಗೆ ಯಾವ ಯಾವ ವಿಷಯಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯ ಅವಶ್ಯವೋ ಆ ವಿಷಯದಲ್ಲಿ ತಂದೆ-ತಾಯಿ, ಕುಟುಂಬದ ಹಿರಿಯರೇ ನಿರ್ಧಾರ ತೆಗೆದುಕೊಳ್ಳುತ್ತಾರೆ. ವಿವಾಹದ ಆಯ್ಕೆ ನೀಡಲಾಗಿದ್ದರೂ, ಅವರನ್ನು ಒಪ್ಪಿಕೊಳ್ಳುತ್ತಿಲ್ಲ. ಮಗಳು ಅಂತರ್ ಜಾತಿ ವಿವಾಹವಾದರೇ ಮನೆಬಿಟ್ಟು ಓಡಿಸುತ್ತಾರೆ. ಮಗ ಮಾಡಿದರೇ ತಮ್ಮ ಧರ್ಮಕ್ಕೆ ಸೇರಿಸಿಕೊಂಡು ಮನೆಯೊಳಗೆ ಕರೆದುಕೊಳ್ಳುತ್ತಿದ್ದಾರೆ.

ಮಕ್ಕಳ ವಿಷಯದಲ್ಲಿ ಅಂದರೆ ಹೆಣ್ಣು ನಾನು ಒಂದೇ ಮಗುವಿಗೆ ಜನ್ಮ ಕೊಡುತ್ತೇನೆಂದು ಹೇಳಿದರೇ ಒಪ್ಪುತ್ತಾರೆ. ಆದರೆ ಅಮ್ನಿಯೊ ಸೆಂಟಸಿಸ್‌ನಂತಹ ಪ್ರಯೋಗಮಾಡಿ ಗಂಡು ಮಕ್ಕಳನ್ನು ಬಯಸುತ್ತಾರೆ. ಬಲವಂತವಾಗಿ ಕುಟುಂಬ ನಿಯಂತ್ರಣಕ್ಕೆ ಒಳಪಡಿಸಲಾಗುತ್ತದೆ. ವಿಪರ್ಯಾಸವೆಂದರೇ ಇಂದಿಗೂ ಭ್ರೂಣಹತ್ಯೆ, ಹೆಣ್ಣು ಶಿಶು ಹತ್ಯೆಗಳು ನಡೆಯುತ್ತಿವೆ. ವರದಕ್ಷಿಣೆಯ ರಾಕ್ಷಸ ಪ್ರವೃತ್ತಿ ಹೆಣ್ಣನ್ನು ಬೆಂಕಿಯಲ್ಲಿ ಆಹುತಿತೆಗೆದುಕೊಳ್ಳುತ್ತಿದೆ.

'ಆಧುನಿಕ ಹೆಣ್ಣಿನ' ನಿರೂಪಣೆಯು ಸ್ವತಃ ಹೆಣ್ಣೇ ಮಾಡಿಕೊಂಡ ನಿರೂಪಣೆಯಲ್ಲ. ಇಂಗ್ಲಿಷ ಶಿಕ್ಷಣದ ಪ್ರಭಾವದಿಂದಾಗಿ 'ಆಧುನಿಕ ಪುರುಷರು' ರೂಪಿಸಿದ ಹೆಣ್ಣೆ ಆಧುನಿಕ ಹೆಣ್ಣು. ಅತ್ಯಂತ ಆಧುನಿಕಳೆನ್ನಿಸಿಕೊಳ್ಳುವ ಹೆಣ್ಣು ಮಗಳು ಸಹ ಕಡೆಯ ಪಕ್ಷ ತನ್ನೊಬ್ಬಳ ಸಂತೋಷಕ್ಕಾಗಿಯಾದರೂ ಕೈಹಿಡಿದ ಪತಿಯನ್ನು, ತಂದೆ ತಾಯಿ ಅತ್ತೆ ಮಾವಂದಿರನ್ನು ಸಂತೋಷಪಡಿಸಲೇ ಹೋಗಬೇಕು. ಅವರೆಲ್ಲರೂ ಸಂತೋಷವಿಲ್ಲದೇ ದುಗುಡದುಮ್ಮಾನಗಳಿಂದ ಬಾಳಿದರೇ ಈಕೆಯ ಜೀವನ ಯಾವ ಸಂತೋಷಕ್ಕಾಗಿ? ಎನ್ನುವ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಹೆಣ್ಣು ತನ್ನ ಸ್ವಂತ ಸಂತೋಷದ ಬಗ್ಗೆ ಪ್ರಶ್ನೆಯೇ ಎತ್ತದಂತೆ ಅವಳ ಸಂತೋಷವನ್ನು ನಿರ್ದೇಶಿಸಲಾಗಿದೆ. ಇದೆಲ್ಲಾ ಏಕೆಂದರೆ ''ಕಛೇರಿ ಕಾರ್ಖಾನೆಗಳಲ್ಲಿ ಸಹ ಬ್ರಾಹ್ಮಣ ಹೆಣ್ಣು ಮಕ್ಕಳು ಕೆಲಸಮಾಡುತ್ತಿರುವ ಈಗೀನ ಪರಿಸ್ಥಿತಿಯಲ್ಲಂತೂ ಹೆಣ್ಣುಮಕ್ಕಳ ಮನಸ್ಸನ್ನು ಒಂದು ಬಗೆಯ ಯಾಂತ್ರಿಕವಾಗಿ ಕೊನೆಗೆ ನಾನು ಉಂಟು ನನ್ನ ದುಡಿಮೆ ಉಂಟು ಯಾರಗೊಡವೆ ನನಗೇಕೆ? ಎನ್ನುವಷ್ಟು ದೂರದ ಕೆಟ್ಟಹಾದಿ ಹಿಡಿಯುವುದೇನೂ ಆಶ್ಚರ್ಯವಲ್ಲ'' ಎಂಬುದು ಆತಂಕವಾಗಿದೆ. ಹೀಗಾಗಿ ''ಮಹಿಳಾ ಸ್ವಾತಂತ್ರ್ಯ ಎಂಬ ಮಾತು ಇಂದು ಕಲಿತವರಿಗೆಲ್ಲ ಒಂದು ಚಟವಾಗಿ ಬಿಟ್ಟಿದೆ ಈ ಚಟವನ್ನು ನೀನು ಹತ್ತಿಸಿಕೊಳ್ಳಬೇಡ ಸ್ವಾತಂತ್ರ್ಯ ಎಂಬುದು ಸ್ವಚ್ಛಂದದ ಜೀವನವಲ್ಲ.''

''ನೀನು ಸಮಾಜ ಸೇವಕಿಯಾದರೂ ನಿನ್ನ ಅತ್ತೆ ಮಾವ ಪತಿ ಮಕ್ಕಳು ಇವರೆಲ್ಲರ ಯೋಗಕ್ಷೇಮದ ಹೊಣೆಗಾರಿಕೆಯನ್ನು ಮಾತ್ರ ಮರೆಯಬೇಡ'' ಎಂಬ ಮನವಿಯನ್ನು, ಎಚ್ಚರಿಕೆಯನ್ನು ಕೊಟ್ಟು ಮನೆಯಲ್ಲಿ ''ಒಟ್ಟಿನಲ್ಲಿ ನೀನು ಹೊಕ್ಕ ಮನೆಯ ಹಾನಿ, ವೃದ್ಧಿ, ಸುಖ, ದುಃಖಗಳು ನಿನ್ನ ನಡೆ ನುಡಿಗಳನ್ನೆ ಅವಲಂಬಿಸಿರುತ್ತವೆ. ಎಂಬುದನ್ನು ಮರೆಯಬೇಡ'' ಎನ್ನುತ್ತಾ ಬೆಲಿಯ ತಂತಿಯನ್ನು ಬಿಗಿಗೊಳಿಸುತ್ತಾರೆ.

ಬ್ರಾಹ್ಮಣ ಹೆಣ್ಣಿನ ನಡೆ-ನುಡಿಯ ಬಗೆಗೆ ಉದ್ದಕ್ಕೂ ಸಲಹೆ ಸೂಚನೆ ಕೊಡುವ ಕೃತಿ ಎಲ್ಲಿಯೂ ಗಂಡನ ನಡೆ-ನುಡಿಯ ಬಗೆಗೆ ಚಕಾರವೆತ್ತುವದಿಲ್ಲ. ಬದಲಿಗೆ ಗಂಡಿನ ನಡೆಯಲ್ಲಿ ಏನಾದರೂ ದೋಷ ಉಂಟಾದರೆ ಅದಕ್ಕೆ ಹೆಣ್ಣೆ ಕಾರಣಳಾಗುತ್ತಾಳೆ ಎಂಬ ಚಿಂತನೆಯನ್ನು ಅಂತರಂಗದಲ್ಲಿ ಘನಿಕರಿಸಿಕೊಂಡಿದೆ. ಗಂಡಿನ

ನಿಯಂತ್ರಣದೊಳಗಿರುವುದು ಹೆಣ್ಣಿಗೆ ಕ್ಷೇಮ ಎಂಬ ಗಾಢವಾದ ನಂಬಿಕೆಗೆ ತಿರುಮಲಾಂಬ ಒಳಪಟ್ಟಿದ್ದಾರೆ. ಅಂದರೆ ತಮ್ಮನ್ನು ನಿಯಂತ್ರಿಸಲು ಹೆಂಗಸರೇ ಒಪ್ಪಿಗೆ ನೀಡಿದ್ದಾರೆ. ಹಾಗೆ ಅವರನ್ನು ನಂಬಿಸಲಾಗಿದೆ. ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆದರೇ ಭಾರತೀಯ ಸಂಸ್ಕೃತಿಯನ್ನು ಕಾಪಾಡಬೇಕಾದ ಅವರು ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿ ಮನೆಯೊಳಗೂ ಪಾಶ್ಚಾತ್ಯ ಸಂಸ್ಕೃತಿ ಪ್ರವೇಶಿಸಿ ನಮ್ಮ ಸಂಸ್ಕೃತಿ ಹಾಳಾಗುತ್ತದೆ. ಎಂಬುದು ಆಧುನಿಕ ಹೆಣ್ಣಿನ ಬಗೆಗೆ ಇದ್ದ ಸಾಮಾನ್ಯವಾದ ಒಂದು ಆತಂಕವಾಗಿತ್ತು ಅಂದರೆ ಹಿಂದೆ ಹೇಳಿದಂತೆ ಹೆಣ್ಣನ್ನು ಸಂಸ್ಕೃತಿಕೆ ಸಮಾನ ಎಂದು ಪರಿಭಾವಿಸುವ ಚಿಂತನೆ ಇಲ್ಲಿ ಕೆಲಸಮಾಡಿದೆ.

ಬದಲಾದ ಪರಿಸ್ಥಿತಿಗೆ ತಕ್ಕಂತೆ ಬ್ರಾಹ್ಮಣ ಮಹಿಳೆ ಹೊಂದಿಕೊಳ್ಳಬೇಕು. ತಮ್ಮ ಆಶೋತ್ತರಗಳಿಗೆ ಎದುರಾಡದೇ ನಡೆದುಕೊಳ್ಳಬೇಕೆಂದು ಆಧುನಿಕ ಪುರುಷರು ಬಯಸುತ್ತಾರೆ. ಅವಳಿಗೆ ತಮ್ಮ ಬಯಕೆಯಂತೆ ಇರಲು ವರ್ತಿಸಲು ಹೆಳಿ ಕೊನೆಗೆ, ಅಂದರೆ ಸಮುಯದಲ್ಲಿ ಸಿಕ್ಕು ಹಾಕಿಕೊಂಡರೇ ತಾವು ಅಲ್ಲಿಂದ ಜಾರಿ ಹೆಣ್ಣನ್ನೆ ಕಾರಣವನ್ನಾಗಿಸಲಾಗುತ್ತದೆ. ಬಹಳಷ್ಟು ಬದಲಾವಣೆಗಳು ಇಂದೂ ಹೆಣ್ಣಿನ ವಿಷಯದಲ್ಲಿ ಆಗಿವೆ ಎಂದರೂ, ಆಗಿನ ಸಮಸ್ಯೆಗಳು ಹೊಸ ಹೊಸ ರೂಪ ಪಡೆದು ಮತ್ತೆ ಮತ್ತೆ ಉದ್ಭವವಾಗುತ್ತಿವೆ.

ಅಡಿಟಿಪ್ಪಣಿ

೧. ಗಂಗಾಧರ ಮೂರ್ತಿ (ಅನು) ವಿ.ಆರ್.ನಾರ್ಲಾ (ಮೂಲ), ಭಾರತದ ಭೌದ್ಧಿಕ ದಾರಿದ್ರ್ಯ ಪು. ೨೧

೨. ಶಶಿಕಲಾ ಶಿವಶಂಕರ, ದೀಪಕ್ಕೆ ದೀಪ್ತಿ, ಪು.೮

೩. ಅದೇ, ಪು.೯

೪. ಮುಳಗುಂದ ಚ.ವಿ. (ಪ್ರ.ಸಂ) ಮಾತೋಶ್ರೀ, ಪು.೨೫೭

೫. ಅಥರ್ವವೇದ VI ಪು.೧೧.೩

೬. ಅಥರ್ವವೇದ II ಪು.೩.೨೩

೭. ಮುಳುಗುಂದ ಚ.ವಿ. (ಪ್ರ.ಸಂ) ಮಾತೋಶ್ರೀ, ಪು.೨೫೭-೨೫೮

೮. ಅದೇ, ಪು.೨೫೮

೯. ಅದೇ, ಪು.೨೫೯

೧೦. Shakunatala shastri; Women in Vedic age

೧೧. ಮಹಾಭಾರತ ಶಾಂತಿಪರ್ವ ಅಧ್ಯಾಯ, ೨೦೭

೧೨. Shakuntala; Women in Vedic age.

೧೩. ಋಗ್ವೇದ VIII. ಪು.೩.೩.೧೭

೧೪. ಋಗ್ವೇದ, ಪು.೯೫.೧೫

೧೫. ಯಜುರ್ವೇದ XIV ೧.೧.೩೧

೧೬. ಶೈಲಜಾ ಉಡಚಣ, ವಚನಕಾರರ ದೃಷ್ಟಿಯಲ್ಲಿ ಸ್ತ್ರೀ ಪು.೧೩

೧೭. ಋಗ್ವೇದ, ದಯಾನಂದರ ಭಾಷ್ಯ X. ೮೫.೪೫

೧೮. ಋಗ್ವೇದ x ಪು.೬೧.೭

೧೯. ಶೈಲಜಾ ಉಡಚಣ, ವಚನಾಕಾರರ ದೃಷ್ಟಿಯಲ್ಲಿ ಸ್ತ್ರೀ ಪು.೧೩

೨೦. ಅದೇ ಪು.೩೬

೨೧. ಶೇಷನವರತ್ನ (ಅನು) ಮನುಸ್ಮೃತಿ, ಪು.೩

೨೨. ಶಶಿಕಲಾ ಶಿವಶಂಕರ್, ದೀಪಕ್ಕೆ ದೀಪ್ತಿ, ಪು.೨೨.

೨೩. ಅದೇ, ಪು.೨೨.೨೩

೨೪. ಅದೇ, ಪು.೨೩

೨೫. ಅದೇ, ಪು.೨೩

೨೬. ಅದೇ, ಪು.೨೩

೨೭. ಅದೇ, ಪು.೨೪

೨೮. ಅದೇ, ಪು.೨೩..೨೫

೨೯. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು. ೨೪೭

೩೦. ಶಶಿಕಲಾ ಶಿವಶಂಕರ್, ದೀಪಕ್ಕೆ ದೀಪ್ತಿ, ಪು.೨೫.೨೬

೩೧. ವೈದೇಹಿ (ಅನು) ಕಮಲಾದೇವಿ ಚಟ್ಟೋಪಾಧ್ಯಾಯ (ಮೂಲ) ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ, ಪು.೧೯

೩೨. ಸಾಮ್ರಾಜ್ಯ ಏಕತಾಯುಗ, ಭಾಗ-೨, ಪು.೨೪೫

೩೩. II. ಪು.೬.೧೪೧

೩೪. ಕಾತ್ಯಾಯಿನಿ VV.೯೨೧-೨೭, ಅತ್ರಿ ೧೯೭.೧೯೮ ದೇವಲ ೪೮-೪೯

೩೫. ಅಭಿಜಾತಯುಗ, ಭಾಗ-೧, ಅಧ್ಯಾಯ-೧೧. (ವಾಕಾಟಕು)

೩೬. ಅಭಿಜಾತಯುಗ, ಅಧ್ಯಾಯ-೧೨ (ವಿಕ್ರಮಾದಿತ್ಯ)

೩೭. ಸಾಮ್ರಾಜ್ಯ ಏಕತಾಯುಗ, ಭಾಗ-೨, ಪು.೨೬೮

❐

ಅಧ್ಯಾಯ : ನಾಲ್ಕು

ಲಿಖಿತ ಪರಂಪರೆ ಹಾಗೂ ಅದರ ನಿರ್ವಚನ

ಅಧ್ಯಾಯ : ನಾಲ್ಕು

ಆಚರಣಾತ್ಮಕ ಪರಂಪರೆ ಹಾಗೂ ಅದರ ನಿರ್ವಚನ

೪.೧. ಬ್ರಾಹ್ಮಣ ಮಹಿಳೆ ಮತ್ತು ಸಾಮಾಜಿಕ ಸಂಸ್ಥೆಗಳು

ಆಚರಣಾತ್ಮಕ ಪರಂಪರೆಯನ್ನು ನಿರ್ವಚಿಸಬೇಕಾದರೇ ಅದಕ್ಕೆ ಮೂಲವಾದ ಕೆಲವು ವ್ಯವಸ್ಥೆಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಕುಟುಂಬ, ವಿವಾಹ, ಶಿಕ್ಷಣ, ಧರ್ಮ, ಆರ್ಥಿಕ, ರಾಜಕೀಯ ಸಂಸ್ಥೆಗಳಲ್ಲಿ ಹೆಣ್ಣು ಯಾವ ರೀತಿಯಾಗಿ ಕಂಡುಬರುತ್ತಾಳೆ. ಪ್ರತಿಯೊಂದು ಸಂಸ್ಥೆಯು ಹೆಣ್ಣನ್ನು ಹೆಗೆ ಪರಿಭಾವಿಸುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಈ ಸಂಸ್ಥೆಗಳ ಅಧ್ಯಯನ ಅವಶ್ಯವೆನಿಸುತ್ತದೆ. ಈ ಪ್ರತಿಯೊಂದು ಸಂಸ್ಥೆಗಳು ಹೆಣ್ಣನ್ನು ಅಧೀನ, ಪೂರಕ, ಅವಲಂಬಿತ ನೆಲೆಯಲ್ಲೆ ಹೆಣ್ಣನ್ನು ಕಾಣುತ್ತಿವೆ. ಆದರೆ ಅವಳಿಗೆ ಅಸಮಾನತೆ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತಿಲ್ಲ. ಇದು ಪಿತೃಪ್ರಧಾನತೆಯ ಲಕ್ಷಣಗಳಲ್ಲಿ ಒಂದಾಗಿದೆ.

ಆಚರಣೆಗಳು ಸಂಸ್ಕೃತಿಯ ಮುಂದಿನ ಪಿಳಿಗೆಗೆ ಸಾಗಿಸುವ ಸರಕಾಗಿವೆ. ಇವು ಅವಳನ್ನು ಅಧಿನ ನೆಲೆಗೆ ತಳ್ಳುತ್ತಿವೆ. ಇವನ್ನು ತೊಡೆದುಹಾಕದೇ, ಈ ಆಚರಣೆಗಳಿಂದಲೇ ತಮ್ಮ ಸಂಸ್ಕೃತಿಯ ವೈಭವಿಕರಣ ನಡೆಸಿವೆ. ಧರ್ಮ ಗ್ರಂಥಗಳಲ್ಲಿ ಉಲ್ಲೇಖವಿರದೇ ಇರುವುದೂ ಕೂಡ, ಈ ಆಚರಣೆಗಳ ಮೂಲಕ ಮುಂದುವರೆದುಕೊಂಡು ಹೊರಟಿವೆ. ಈ ಸಂಸ್ಕೃತಿ ಎನ್ನುವುದೆ ಪಿತೃಪ್ರಧಾನತೆಯನ್ನು ಎತ್ತಿಹಿಡಿಯುವ ಪದವಾಗಿದೆ. ಹಾಗಾಗಿಯೇ ಸಂಸ್ಕೃತಿಯು ಬಹುಮಹತ್ವವನ್ನು ಪಡೆದುಕೊಳ್ಳುತ್ತದೆ. ಸುಸಂಸ್ಕೃತ ನಾಗರೀಕತೆಯ ಬೆಳವಣಿಗೆಗೆ ಹೆಣ್ಣು ಪ್ರಮುಖ ಕಾರಣ, ರೂವಾರಿ ಕೂಡ. ಆದರೆ ಅದು ತನಗೆ ವಿರುದ್ಧವಾದುದು, ಅದರಲ್ಲಿ ದೋಷಗಳಿವೆ, ಅವು ತಪ್ಪು ಎಂದು ಮಾತನಾಡದಂತೆ ಬಾಯಿ ಮುಚ್ಚಿಸುವಲ್ಲಿ ಸಫಲವಾಗಿವೆ.

ಸಾಮಾಜಿಕ ಸಂಸ್ಥೆಗಳಲ್ಲಿ ಆಚರಣೆಗಳ ವಿಷಯದಲ್ಲಿ ಹೆಣ್ಣು ಯಾವ ಪಾಲು ಪಡೆದಿದ್ದಾಳೆಂಬ ಬಗ್ಗೆ ಅಧ್ಯಯನಮಾಡಲು ಈ ವಿಷಯಕ್ಕೆ ಕೈಹಾಕಲಾಗಿದೆ. ಇದಕ್ಕೆ ಸಂದರ್ಶನ ಮತ್ತು ಪ್ರಶ್ನಾವಳಿ ವಿಧಾನವನ್ನು

ಬಳಸಿಕೊಳ್ಳಲಾಗುವುದು. ಆಚರಣೆಗಳಲ್ಲಿ ಅವಳ ಪಾಲು ಎಷ್ಟಿದೆ. ಅವಳ ಚಹರೆಯ ಅಸ್ಮಿತತೆಯನ್ನು ಕಂಡುಕೊಳ್ಳಲು ಕ್ಷೇತ್ರಕಾರ್ಯದ ಮಾಹಿತಿಯನ್ನು ಅನ್ವಯಿಸಿ ಸಂಶೋಧನೆಗೆ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ.

೪.೧.೧. ವಿವಾಹ ಸಂಸ್ಥೆ ಮತ್ತು ಬ್ರಾಹ್ಮಣ ಮಹಿಳೆ

ವಿವಾಹ ಎನ್ನುವ ಸಂಸ್ಥೆಯು ಭಾರತೀಯ ಸನ್ನಿವೇಶದಲ್ಲಿ ಬಹುಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಹೇಳಬಹುದು. ವಿವಾಹದ ಮೂಲಕ ಧರ್ಮ ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳ ಇಡೇರಿಸಲಾಗುತ್ತಿದೆ. ಅಂದರೆ ಅರ್ಥ ಸಂಪಾದನೆ ಕಾಮತೃಷೆಯ ಇಡೇರಿಕೆಯನ್ನು ಧರ್ಮ ಮಾರ್ಗದ ಮೂಲಕ ಪೂರೈಸಿಕೊಂಡು ಮೋಕ್ಷ ಸಾಧನೆಮಾಡುವುದು ವಿವಾಹವಾದ ಗೃಹಸ್ಥರ ಆಧ್ಯಕರ್ತವ್ಯವಾಗಿದೆ. ವಿವಾಹವು ಗಂಡು ಹೆಣ್ಣುಗಳ ಮಿಲನಕ್ಕೆ ಒಂದು ಚೌಕಟ್ಟಾಗಿದೆ ಎಂದು ಹೇಳಬಹುದು. ''ಸಂಸ್ಕೃತದ 'ವಹ್ ಪ್ರಾಪಣೇ' ಎಂಬ ಧಾತುವಿನಿಂದ ವಿವಾಹ ಶಬ್ದ ಬಂದಿದೆ. ಹೊಂದುವುದು, ಪಡೆಯುವುದು ಎಂಬುದು ಇದರ ಅರ್ಥ ಕಾಲಾನುಕ್ರಮಣಿಕೆಯಲ್ಲಿ ವಿವಾಹ ಮತ್ತು ಕುಟುಂಬದ ಪರಿಕಲ್ಪನೆಯು ಹಲವು ಮೂಲಗಳಿಂದ (ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ) ಅರ್ಥ ವ್ಯಾಪ್ತಿಯನ್ನು ಪಡೆದುಕೊಂಡಿದೆ. ವಿವಾಹವು ಬಹಿರಂಗವಾಗಿ ಘೋಷಿತವಾದ, ಕ್ರಮಬದ್ಧವಾದ ಹಾಗೂ ಸುವ್ಯವಸ್ಥಿತವಾದ ರೀತಿಯಲ್ಲಿ ಗಂಡು ಹೆಣ್ಣಿನ ಒಡಗೂಡಿ ಬದುಕುವ ಜೀವನ ಕ್ರಮದ ಕಟ್ಟುಪಾಡು ವಿವಾಹದ ಈ ಒಪ್ಪಂದದಲ್ಲಿ ಆ ದಂಪತಿಗಳಿಗೆ ಹುಟ್ಟುವ ಮಕ್ಕಳ ಹಕ್ಕುಗಳು ಮತ್ತು ಹೊಣೆಗಳು ಸ್ಪಷ್ಟವಾಗಿ ನಿರೂಪಿತವಾಗಿರುತ್ತವೆ. ಪ್ರತಿಯೊಂದು ಸಮಾಜವೂ ಗಂಡ ಹೆಂಡತಿ ಮತ್ತು ಮಕ್ಕಳ ವಿಷಯದಲ್ಲಿ ಗೊತ್ತಾದ ಹಲವು ನಿಯಮಗಳನ್ನು ನಿರೂಪಿಸಿರುತ್ತವೆ. ಇದನ್ನು ಆಯಾಯ ಸಂಸ್ಕೃತಿಗಳು ಅದರ ವಿಕಾಸಮುಖಿ, ನೆಲೆಗಳಲ್ಲಿ ಮಾನ್ಯಮಾಡಿರುತ್ತವೆ. ಇದರಿಂದ ವಿವಾಹ ಇಬ್ಬರು ವಿರುದ್ಧ ಲಿಂಗಿಗಳಾದ ಹೆಣ್ಣು ಮತ್ತು ಗಂಡಿನ ಒಕ್ಕೂಟ ಎಂಬುದು ಸ್ಪಷ್ಟವಾಗುತ್ತದೆ.''[೧]

''ಸಾಮಾನ್ಯ ಅರ್ಥದಲ್ಲಿ ವಿವಾಹವು ಸ್ತ್ರೀ ಪುರುಷರಿಬ್ಬರಿಗೂ ಅನಿವಾರ್ಯವೆನ್ನಲಾದರೂ, ಈ ಅನಿವಾರ್ಯತೆಯು ಸ್ತ್ರೀಗೆ ಅಧೀನತೆಯನ್ನು ಪುರುಷನಿಗೆ ಅಧಿಕಾರವನ್ನು ಹೊರಕಿಸಿಕೊಡುವುದಾಗಿದೆ. ಭಾರತೀಯ ಸಮಾಜದಲ್ಲಿ ಪುರುಷನಿಗೆ ವಿವಾಹ ಆಯ್ಕೆಯ ವಿಚಾರವಾಗಿದೆ. ಸ್ತ್ರೀಗೆ ಮಾತ್ರ ಆಯ್ಕೆಯ ಮಾದರಿಗಳೇ ಇಲ್ಲ. ಪುರುಷ ಒಮ್ಮೆ ವಿವಾಹ ಸಂಸ್ಥೆ ಪ್ರವೇಶಿಸಿದರೂ ಆತನ ಸಂಪೂರ್ಣ ನಿಷ್ಠೆ ಅದಕ್ಕೆ ಇರಬೇಕೆಂದಿಲ್ಲ. ಆತ ವಿವಾಹ ಸಂಸ್ಥೆಯಲ್ಲಿದ್ದುಕೊಂಡೇ ಉಳಿದ ಎಲ್ಲಾ ಸಂಸ್ಥೆಗಳಲ್ಲಿ ಕೂಡ ತನ್ನನ್ನು ತೊಡಗಿಸಿಕೊಳ್ಳಬಹುದು. ಸ್ತ್ರೀಗೆ ಮಾತ್ರ ಈ ಯಾವ ಬಗೆಯ ಸಮನಾಂತರ ಆಸಕ್ತಿಗಳು ಆಯ್ಕೆಗಳು ಸಮಾಜದಲ್ಲಿಲ್ಲ. ವಿವಾಹವು ಆಕೆಗೆ ಕಡ್ಡಾಯವಾದ ಹಾಗೂ ಲೌಕಿಕ ಪಾರಮಾರ್ಥಿಕ ಸಾರ್ಥ್ಯಕ್ಯಗಳೆರಡನ್ನೂ ತಂದುಕೊಡುವ ಸಂಸ್ಥೆಯಾಗಿದೆ. ಮೇಲುನೋಟಕ್ಕೆ ಭಾರತೀಯ ಸ್ತ್ರೀಯರಿಗೆ ಅಪಾರ ಭದ್ರತೆಯನ್ನು, ಸಾಮಾಜಿಕ ಸ್ಥಾನಮಾನವನ್ನು ಒದಗಿಸಿಕೊಡುವಂತೆ ಕಾಣುವ ಈ ಸಂಸ್ಥೆ ತನ್ನಲ್ಲಿ ಅಳವಡಿಸಿಕೊಂಡಿರುವ ಲಿಂಗ ತಾರತಮ್ಯವು ಸ್ತ್ರೀ ಪುರುಷ ಪಾತ್ರ ವಿಭಜನೆಯಿಂದಾಗಿ ಸ್ತ್ರೀಗೆ ಹಲವಾರು ಸಮಸ್ಯೆಗಳನ್ನು ತಂದೊಡ್ಡಿದೆ. ಅವುಗಳಲ್ಲಿ ಮುಖ್ಯವಾದುದು ಸ್ತ್ರೀಗೆ ವಿವಾಹವೇ ಅತ್ಯಂತಿಕವೆಂದು ಕಡ್ಡಾಯಗೊಳಿಸುವುದು, ವಿವಾಹ ಸಂಸ್ಥೆಯನ್ನು ಪ್ರವೇಶಿಸಿದ ನಂತರ ಆಕೆಯ ಸಮಾನಾಂತರ ಆಸಕ್ತಿಗಳನ್ನು ನಿರಾಕರಿಸುವುದು ಆ ಸಂಸ್ಥೆಯಿಂದ ತನ್ನನ್ನು ತಾನು ಹಿಂತೆಗೆದುಕೊಳ್ಳುವ ಅಥವಾ ಬದಲಿಸಿಕೊಳ್ಳುವ ಯಾವ ಪರ್ಯಾಯಗಳನ್ನು ನೀಡದಿರುವುದು ಇದರ ಪರಿಣಾಮವಾಗಿ ಹೆಣ್ಣಿನ ಜೀವನದಲ್ಲಿ ವಿವಾಹ ಜರುಗುವುದು/

ಜರುಗದಿರುವುದು, ವಿವಾಹದ ವಯಸ್ಸು, ಮಾದರಿ ವಿವಾಹಿತ ಸ್ತ್ರೀಯ ಸ್ಥಾನಮಾನ, ವಿವಾಹದ ಮುರಿಯುವಿಕೆ, ಸಂಗಾತಿಯನ್ನು ಕಳೆದುಕೊಳ್ಳುವುದು ಇತ್ಯಾದಿಗಳೆಲ್ಲವೂ ಸಮಸ್ಯೆಗಳನ್ನು ಸೃಷ್ಟಿಸುವುದೇ ಆಗುವಂತಾಗಿದೆ.''[೧೪]

''ವಿವಾಹ ಎನ್ನುವ ಸಂಬಂಧದ ಒಳಗೆ ಪ್ರವೇಶಿಸಿದ ಮಹಿಳೆಯಿಂದ ಹೊಸ ಹೊಸ ಪಾತ್ರಗಳನ್ನು ನಿರೀಕ್ಷಿಸುವುದು ವಿಶೇಷವಾಗಿ ಭಾರತೀಯ ಸಮಾಜದಲ್ಲಿ ಕಂಡು ಬರುವಂಥ ಒಂದು ಪ್ರವೃತ್ತಿ. ಹೆಣ್ಣಿಗೆ ವಿವಾಹವೇ ಜೀವನದ ಪರಮಗುರಿ ಎನ್ನುವ ತತ್ವಕ್ಕೆ ಇಂದಿಗೂ ಬದ್ಧವಾಗಿರುವ ಬಹುತೇಕ ಕುಟುಂಬಗಳು ವಿವಾಹದ ಮೂಲಕ ಸಂಭವಿಸುವ ಹೆಣ್ಣಿನ ವ್ಯಕ್ತಿತ್ವ ನಾಶದ ಬಗ್ಗೆ ಕಾಳಜಿಗಳನ್ನು ಸಾಮಾನ್ಯವಾಗಿ ವ್ಯಕ್ತಪಡಿಸುವುದಿಲ್ಲ. ಹೆಣ್ಣಾಗಿ ಹುಟ್ಟಿದ ಮೇಲೆ ಅವಮಾನ, ಅವಹೇಳನಗಳನ್ನು ಅನುಭವಿಸುವುದು ಇವರಿಗೆ ಸಹಜವೆನಿಸುತ್ತದೆ. ಬಹುತೇಕ ಸ್ತ್ರೀಯರು ತಮ್ಮ ಅಭಿರುಚಿಗಳು, ಆಕಾಂಕ್ಷೆಗಳು, ಆಸಕ್ತಿಗಳು ಎಲ್ಲಕ್ಕಿಂತ ಹೆಚ್ಚಾಗಿ ಆಯ್ಕೆಯ ಸ್ವಾತಂತ್ರ್ಯವನ್ನೇ ವಿವಾಹ ನಂತರ ಕೈಬಿಡಬೇಕಾದಂಥ ಪರಿಸ್ಥಿತಿ ಏರ್ಪಾಡುಗತ್ತದೆ. ಇಂದಿಗೂ ಕೆಲವು ಕುಟುಂಬಗಳಲ್ಲಿ ವಿವಾಹವಾದ ಸ್ತ್ರೀಯ ಮೂಲ ಹೆಸರನ್ನೆ ಪತಿಯ ಮನೆಯಲ್ಲಿ ಬದಲಾಯಿಸಿಬಿಡುವಂಥ ಪದ್ಧತಿ ಆಚರಣೆಯಲ್ಲಿದೆ. ಸಾರ್ವಜನಿಕ ಮತ್ತು ಖಾಸಗಿ ಬದುಕುಗಳೆರೆಡರಲ್ಲೂ ಸ್ತ್ರೀಯರನ್ನು ಗುರುತಿಸುವುದು ಇಂಥವನ ಹೆಂಡತಿ ಎಂದೇ ಹೊರತು ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿರುವಂಥ ಓರ್ವವ್ಯಕ್ತಿಯಾಗಿ ಅಲ್ಲ.''[೧೫]

ವಿವಾಹವು ಹೆಣ್ಣಿನ ಬಾಳಿನಲ್ಲಿ ಬಹುಮಹತ್ವದ ಪಾತ್ರವಹಿಸುತ್ತದೆ. ಈ ಸಂಸ್ಥೆಯ ಆಧಾರದ ಮೇಲೆ ಅವಳ ಇಡೀ ಭವಿಷ್ಯವೇ ನಿಂತಿರುತ್ತದೆ. ಗಂಡಿಗೂ ಕೂಡ ಅಷ್ಟೇ ಮಹತ್ವದ್ದೆನಿಸಿದರೂ ಅವನು ಆ ಜೀವನ ಬೇಡವೆಂದರೆ ಸಲೀಸಾಗಿ ಹೊರಬಂದು ಬಿಡಬಹುದು. ಹೆಣ್ಣು ಅದರಿಂದ ಹೊರಬರುವುದು ತೀರಾ ಕಷ್ಟದ ವಿಷಯವಾಗಿದೆ. ಹುಟ್ಟಿನಿಂದ ಹೆಣ್ಣಿನ ಬೆಳವಣಿಗೆಯ ಅತೀ ಮಹತ್ವದ ಉದ್ದೇಶಗಳಲ್ಲಿ ಶೋಡಷ ಸಂಸ್ಕಾರಗಳಲ್ಲೊಂದಾದ ವಿವಾಹವು ಪವಿತ್ರ ಸಂಸ್ಕಾರ, ಮುರಿಯದ ಬಂಧನ ಎಂತೆಲ್ಲಾ ಹಿಂದೂ ಧರ್ಮಿಯಲ್ಲಿ ಭಾವನೆಗಳಿವೆ. ತಂದೆ ತಾಯಿಗೆ ದೊಡ್ಡ ಜವಾಬ್ದಾರಿಯನ್ನು ನಿಭಾಯಿಸಿದಂತೆ ಎನ್ನುವ ಭಾವವಿದೆ. ಹೀಂದೂ ಧರ್ಮಶಾಸ್ತ್ರಗಳ ಪ್ರಕಾರ ವಿವಾಹವು ಹೆಣ್ಣಿನ ಅತೀ ಮಹತ್ವದ ಅಂದರೆ ಗಂಡಿಗೆ ೧೬ ಸಂಸ್ಕಾರಗಳಿದ್ದರೇ ಹೆಣ್ಣಿಗೆ ನಾಲ್ಕು ಸಂಸ್ಕಾರಗಳಿವೆ ಅದರಲ್ಲಿ ಅತೀ ಪ್ರಮುಖವಾದುದಾದ ಸಂಸ್ಕಾರ ವೆಂದರೇ ವಿವಾಹವಾಗಿದೆ ಎಂದು ಹೇಳಬಹುದು.

''ವಿವಾಹ ಪೂರ್ವತಯಾರಿಯು ಹುಟ್ಟಿನಿಂದ ಆರಭಗೊಳ್ಳುತ್ತದೆ ಎಂದು ಹೇಳಬಹುದು. ಹುಟ್ಟಿನಿಂದಲೇ ಅವಳಿಗೆ ಈ ಸಂಸ್ಥೆಗೆ ಬೇಕಾದ ರೀತಿಯಲ್ಲಿ ಬೆಳೆಸಲು ಆರಂಭಿಸಲಾಗುತ್ತದೆ. ವಿವಾಹವನ್ನು ಯಾವಾಗ ಮಾಡಬೇಕು ಎನ್ನುವುದಕ್ಕೆ ಕೆಳಗಿನ ವ್ಯಾಖ್ಯಾನವನ್ನು ಪರಿಶೀಲಿಸಬಹುದಾಗಿದೆ. 'ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿಗೆ ವಿವಾಹಮಾಡದಿದ್ದಲ್ಲಿ ನರಕ ಪ್ರಾಪ್ತಿಯಾಗುವುದೆಂಬ ಭಾವನೆ ಬೆಳೆಯುತ್ತಾ ಬಂದಿತು. ಬಹುಶಃ ಬಾಲ್ಯವಿವಾಹದ ಪದ್ಧತಿ ರೂಢಿಗೆ ಬಂದುದರ ಉದ್ದೇಶ ಸ್ತ್ರೀಯು ಪಾವಿತ್ರ್ಯವನ್ನು ಕಾಪಾಡುದಕ್ಕಿರಬಹುದು. ಅದರಲ್ಲಿಯೂ ಬ್ರಾಹ್ಮಣ ಕನ್ಯೆಯರು ಋತುಮತಿಯಾಗುವುದಕ್ಕೆ ಮುಂಚೆಯೇ ವಿವಾಹವಾಗಬೇಕೆಂಬ ನಿರ್ಭಂಧ ಸ್ಮೃತಿಗಳಲ್ಲಿ ಕಂಡುಬರುತ್ತದೆ.''[೧೬]

ವಿವಾಹದ ಹಲವು ವಿಧಿಗಳು ಹೆಣ್ಣಿನ ಅಧಿನತೆಯನ್ನು ತೋರಿಸಿಕೊಡುವಂಥವುಗಳಾಗಿವೆ. ವಾಗ್ದಾನಃ ವಿವಾಹ ಸಮಾರಂಭಕ್ಕೆ ನೆರೆದ ಜನರ ಸಮ್ಮುಖದಲ್ಲಿ ವರ ಮತ್ತು ವಧು ಇವರುಗಳ ಗೋತ್ರ, ನಾಮ ಪ್ರವರಗಳನ್ನು

ಸಾದರಪಡಿಸಿ ಅವರ ವಿವಾಹಕ್ಕೆ ಸಿದ್ಧರಾಗಿದ್ದಾರೆ ಎಂದು ಘೋಷಿಸಲಾಗುತ್ತದೆ. ಇದು ಆಯ್ಕೆಗೆ ಸಂಬಂಧಿಸಿದ್ದಾಗಿದೆ. ಆದರೆ ಇಲ್ಲಿ ಹೆಣ್ಣಿನ ಆಯ್ಕೆ ತೀರ ವಿರಳ. ಲಾಜಾ ಹೋಮದಲ್ಲಿ ಪರಸ್ಪರ ಒಂದೇ ಮನಸ್ಸಿನವರಾಗಿರಲು ಅನುಗ್ರಹ ಬೆಡುವುದಕ್ಕೆ ಪ್ರಾರ್ಥಿಸುವುದಾಗಿದೆ. ಆದರೆ ಇಲ್ಲಿ ಒಂದೇ ಮನಸ್ಕರಾಗುವ ಬದಲು, ಗಂಡನ ಮನಸ್ಸಿಗೆ ಹೊಂದಿಕೊಳ್ಳಲು ಹೆಣ್ಣಿಗೆ ತನ್ನ ಅಭಿಲಾಷಿಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಕನ್ಯಾದಾನದಲ್ಲಿ ಮಗಳನ್ನು ಒಂದು ವಸ್ತುವಿನಂತೆ ಒಬ್ಬ ಗಂಡಸು ಇನ್ನೊಬ್ಬ ಗಂಡಸಿಗೆ ದಾನ ಮಾಡುತ್ತಾನೆ. ದಾನವಾಗಿ ಬಂದವಸ್ತುವಿಗೆ ಯಾವುದೇ ಹಕ್ಕುಗಳಿಲ್ಲ. ಪಾಣಿಗ್ರಹಣ ಇದು ಅವಲಂಬನೆ ಅಂದರೆ ವಧುವಿನ ಹೊಣೆಯನ್ನು ವರನು ಹೊರುವ ಹೊರೆಯಂತಾಗಿದೆ. ಅವನು ಅವಳ ಹೊಣೆ ಹೋದರೂ ಇಂಥ ಆಚರಣೆಗಳು ಜಾರಿಯಲ್ಲಿವೆ. ಮಾಂಗಲ್ಯಧಾರಣ. ಇದು ವಿವಾಹವಾದ ಹೆಣ್ಣನ್ನು ಗುರುತಿಸಲು ಸಹಕಾರಿಯಾಗಿದೆ. ಆದರೆ ಗಂಡಿಗೆ ವಿವಾಹಿತ ಎಂದು ಗುರುತಿಸಲು ಯಾವುದೇ ಆಧಾರವಿಲ್ಲ. ಅಲ್ಲದೆ ತಾಳಿಕಟ್ಟುವುದರ ಉದ್ದೇಶ ಸಹನೆ, ತಾಳ್ಮೆಗಾಗಿ ಎಂದೂ ಕೂಡ ಹೆಳಲಾಗುತ್ತದೆ. ಸಪ್ತಪದಿ ವೈವಾಹಿಕ ಸಂಬಂಧ ಸ್ಥಿರವಾಗಿರಲೆಂದು ೭ ಹೆಜ್ಜೆಗಳನ್ನು ಹಾಕಿಸಲಾಗುತ್ತದೆ. ಈ ಏಳು ಹೆಜ್ಜೆಗಳ ಒಟ್ಟಾಭಿಪ್ರಾಯ ಅವನಿಗಾಗಿ ಅವಳು ಕೊಡುವುದು ಮಾತ್ರವಾಗಿದೆ. ಅವಳಿಗಾಗಿ ಅವನು ಕೊಡುವುದರ ಬಗ್ಗೆ ಉಲ್ಲೇಖವಿಲ್ಲ ಎಂದು ಹೇಳಬಹುದು. ಈ ರೀತಿಯಾಗಿ ಅವಳ ಅಧೀನತೆಗೆ ಈ ವಿಧಿಗಳು ಪ್ರೇರಣೆಯನ್ನೆ ನೀಡುತ್ತವೆ. ಎನ್ನಬಹುದು.

ಇಷ್ಟೆ ಅಲ್ಲದೇ ವಿವಾಹದಲ್ಲಿ ಗಂಡು ದೇವರಿಗೆ ಸಮಾನ. ಶ್ರೀಮನ್ನಾರಾಯಣ ಲಕ್ಷ್ಮಿಯರ ಸನ್ನಿಧಾನವಾದ್ದರಿಂದ ವಿವಾಹ ನಂತರದಲ್ಲಿ ಹಾಕುವ ಅಕ್ಕಿ (ಅಕ್ಷತೆ)ಯನ್ನು ಹೆಣ್ಣು ಎದ್ದು ನಿಂತು ಹಾಕಬೇಕು. ಗಂಡು ಕುಳಿತಲ್ಲೆ ಹಾಕಬೇಕು. ಅದು ಗಂಡನಾದ ದೇವರಿಗೆ ತೋರಿಸುವ ಮರ್ಯಾದೆಯಾದರೆ, ಹೆಣ್ಣಿಗೆ ಯಾವ ಮರ್ಯಾದೆಯೂ ಇಲ್ಲವೇ? ಸಗೋತ್ರ, ಸಂಪಿಂಡ ವಿವಾಹ ನಿಷಿದ್ಧ. ಅಂತರ್ ಜಾತಿಯ ವಿವಾಹಿಗಳಿಗೆ ನಿರಾಕರಣೆ ನಡೆಯುತ್ತಿದೆ. ಕೆಲ ಸಂದರ್ಭದಲ್ಲಿ ಗಂಡಿನ ಅಂತರ್ ಜಾತಿಯ ವಿವಾಹ ಮಾನ್ಯ ಆದರೆ ಹೆಣ್ಣಿಗೆ ಅಂತರ್ ಜಾತಿ ವಿವಾಹ ನಿಷಿದ್ದ. ಇಂಥ ಆಚರಣೆಗಳು ಇನ್ನೂ ಮುಂದುವರೆದಿರುವುದು ವಿಷಾದನೀಯವೆನ್ನಬಹುದು.

ವಿವಾಹದ ಮೂಲಕ ಎಲ್ಲರೀತಿಗಳಿಂದಲೂ ನಿರ್ಭಂಧಗಳನ್ನು ಹೇರಲಾಗುತ್ತದೆ. ಲೈಂಗಿಕ ನಿಯಂತ್ರಣದಿಂದ ಹಿಡಿದು, ಚಿಕ್ಕ ಚಿಕ್ಕ ವಿಷಯಗಳಿಗೂ ನಿರ್ಭಂಧಗಳನ್ನು ಹೇರಲಾಗುತ್ತದೆ. ಹೆಣ್ಣು ವಿವಾಹವಾದಾಕ್ಷಣ ತನ್ನ ಬಗೆಗೆ ಯೋಚಿಸಿದೇ ತನ್ನ ಆಸೆ ಅಭಿಲಾಷೆಗಳಿಗಾಗಿ ಚಿಂತಿಸದೇ ಗಂಡನ ಮನೆಯಲ್ಲಿ ಹೊಂದಿಕೊಳ್ಳಬೇಕು. ಅತ್ತೆ, ನಾದಿನಿ, ಮಾವ, ಮೈದುನ, ಗಂಡ ಎಲ್ಲರ ಸೇವೆಯನ್ನು ಮಾಡಬೇಕು. ಅವರೆಲ್ಲರಿಗೂ ಎದುರಾಡದೇ ವಿಧೆಯರಾಗಿರಬೇಕು. ಪ್ರತಿ ವಿಷಯದಲ್ಲೂ Comprimise ಆಗಬೇಕು. ಮನೆಬಿಟ್ಟು ಬೇರೆ ಮನೆಗೆ ಬಂದ ಹೆಣ್ಣಿಗೆ ಹೊಂದಾಣಿಕೆ ಕಷ್ಟ. ಅಲ್ಲಿ ತನ್ನ ತಾಯಿಯ ಮನೆಯ ಮರ್ಯಾದೆ ಉಳಿಸುವುದಕ್ಕಾಗಿ ಹೊಂದಾಣಿಕೆ ಮಾಡುತ್ತಾ ಸಾಗಬೇಕು. ಮುಂದೆ ಗಂಡನ ಮನೆಯಲ್ಲಿ ತನ್ನ ಅಸ್ತಿತ್ವ ಸ್ಥಾಪಿಸಲು ಹೆಣಗಾಡಬೇಕು. ಅವರಿಷ್ಟಪಡುವಂತೆ ವರ್ತಿಸಬೇಕು. ಅವರಿಗೆಬೇಕಾದ ಗಂಡು ಸಂತಾನಕ್ಕಾಗಿ, ಕೆಲವೊಮ್ಮೆ ಭ್ರೂಣಹತ್ಯೆ, ಹೆಣ್ಣು ಶಿಶುಹತ್ತೆಗೂ ಕೈಹಾಕಿ ಅಲ್ಲಿ ತನ್ನತನ ಉಳಿಸಿಕೊಳ್ಳಲು ಹೆಣಗಾಡಬೇಕು. ಅಷ್ಟೆಲ್ಲಾ ಮಾಡಿದರು ಅವಳದು ಅಂತ ಯಾವುದೂ ಗುರ್ತಿಸಲ್ಪಡುವದಿಲ್ಲ ತಾಯಿಯ ಮನೆ.

ಗಂಡನ ಮನೆ, ತನ್ನದೇ ಗರ್ಭಾಶಯದ ಕೂಸು ಇವ್ಯಾವೂ ಆಕೆಯಿಂದ ಗುರುತಿಸಲಾಗುವುದಿಲ್ಲ. ಇವು ಬ್ರಾಹ್ಮಣ ಮಹಿಳೆಯ ಜೀವನದ ವಿಪರ್ಯಾಸವೇ ಸರಿ.

ನಮ್ಮ ಪಿತೃ ಪ್ರಧಾನ ವ್ಯವಸ್ಥೆ ವಿವಾಹ ಸಂಸ್ಥೆಯ ಮೂಲಕ ಹೆಣ್ಣಿಗೆ ಅಧೀನ, ದ್ವೀತಿಯ ದರ್ಜೆಯನ್ನು ನೀಡಿ, ಅವಳು ಪುರುಷ ಅಧೀನದಿಂದ ತಪ್ಪಿಸಿಕೊಳ್ಳದಂತೆ ಮಾಡಿವೆ. ಬದಲಾಗುತ್ತಿರುವ ಸಂದರ್ಭಗಳಲ್ಲೂ ಕೂಡ ಹೆಣ್ಣಿಗೆ ಅನೇಕ ರೀತಿಯ ಒತ್ತಡಗಳನ್ನು ತರುವ ಮೂಲಕ ವೈವಾಹಿಕ ಬದುಕೇ ಜೀವನಕ್ಕೆ ಮುಖ್ಯ. ಆದಕ್ಕಾಗಿ ಹೊಂದಿಕೊಳ್ಳಲೇಬೇಕು. ಇಷ್ಟಾಗಿಯೂ ಏನಾದರೂ ತೊಂದರೆ ತೊಡರುಗಳು ಬಂದರೇ 'ನಮ್ಮ ಹಣೆ ಬರಹ' ಎಂದು ಸುಮ್ಮನಿರಬೇಕು. ಅದಕ್ಕಾಗಿಯೇ ಶಿಕ್ಷಣ ನೀಡಲಾಗುತ್ತದೆ. ಅದರ ಉಪಯೋಗವನ್ನು ಈ ಸಂದರ್ಭದಲ್ಲಿತೆಗೆದುಕೊಳ್ಳಬೇಕು. ಸಾಮಾನ್ಯವಾಗಿ ಬ್ರಾಹ್ಮಣರಲ್ಲಿ ಬಾಲ್ಯವಿವಾಹ ಕಡಿಮೆ ವಿಧವಾ ಪುನರ್ ವಿವಾಹಕ್ಕೆ ಅವಕಾಶವನ್ನು ಯಾವಾಗಕೊಡುತ್ತಾರೆ ಎಂದರೇ ಆಕೆಗೆ ಬೇಗನೇ ಪತಿ ಮರಣಹೊಂದಿದರೂ ಸಣ್ಣವಯಸ್ಸಿದ್ದರೇ ಮಕ್ಕಳಿರದೇ ಹೋದರೇ ಅನಿವಾರ್ಯವಾಗಿ ವಿವಾಹಕ್ಕೆ ಒಪ್ಪಿಗೆ ಸೂಚಿಸುತ್ತಾರೆ.

ಬ್ರಾಹ್ಮಣರಲ್ಲಿ ಧರ್ಮಶಾಸ್ತ್ರಗಳು ವಿಧವಾ ಮರು ವಿವಾಹಕ್ಕೆ ಅವಕಾಶವಿಲ್ಲ. ಆದರೆ ಪತ್ನಿಮರಣ ಹೊಂದಿದರೇ ಪತಿಗೆ ವಿವಾಹಮಾಡಿಕೊಳ್ಳಬಹುದು. ಧರ್ಮಶಾಸ್ತ್ರಗಳೂ ಕೂಡ ಪಿತೃ ಪ್ರಧಾನತೆಗೆ ಹೊರತಾಗಿಲ್ಲವೆಂಬುದು ಮೇಲಿನ ವಾಖ್ಯೆಯಿಂದ ತಿಳಿದು ಬರುತ್ತದೆ. ವಿಧವಾ ಧರ್ಮವನ್ನು ಪಾಲಿಸಿಕೊಂಡು ಹೋಗಬೇಕು. ಸೌಂಧರ್ಯ ವರ್ಧಕಗಳನ್ನು ಬಳಸಬಾರದು, ಸಪ್ಪೆ ಆಹಾರ ಸೇವಿಸಬೇಕು, ಗಂಡಿಗೆ ಕಣ್ಣಿಗೆ ರಾಚುವಂತೆ ಅಲಂಕಾರ ಮಾಡಿಕೊಂಡು ತಿರುಗಾಡಬಾರದು ಇಂಥ ನಿರ್ಭಂಧಗಳ ಮೂಲಕ ಅವಳ ಜೀವನವನ್ನು ನರಕವನ್ನಾಗಿಸುವ ನಮ್ಮ ಸಮಾಜಿಕ ವ್ಯವಸ್ಥೆಗೆ, ಸರಣಿ ಹೆಣ್ಣುಗಳ ಬಲಿ ನಡೆಯುತ್ತಿದೆ. ಎಂದರೆ ತಪ್ಪಾಗಲಾರದು. ಕೇವಲ ವಿವಾಹದ ಮೂಲಕವೇ ಇಂಥ ಅನೇಕ ತೆರನಾದ ವರದಕ್ಷಿಣೆ ಹಿಂಸೆಯಾಗಿರಬಹುದು. ಕೌಟುಂಬಿಕ ದೌರ್ಜನ್ಯವಾಗಿರಬಹುದು, ಹೊಂದಾಣಿಕೆಯ ಸಮಸ್ಯೆಯಾಗಿರಬಹುದು. ಇಂಥ ಹತ್ತು ಹಲವಾರು ಸಮಸ್ಯೆಗಳನ್ನು ಮಹಿಳೆಈ ಸಂಸ್ಥೆಯ ಮೂಲಕವೇ ಎದುರಿಸಬೆಕಾಗುತ್ತದೆ. ಅದಕ್ಕಾಗಿ ಇತ್ತಿಚೀನ ಯುವತಿಯರು ವಿವಾಹ ಎಂದರೆ ಭಯಭೀತರಾಗುತ್ತಿದ್ದಾರೆ. ಆ ವ್ಯವಸ್ಥೆಯ ಭಯದಿಂದ ಪ್ರೇಮವಿವಾಹಕ್ಕೆ ಮೊರೆ ಹೋದರೆ ಅದರಲ್ಲಿಯೂ ತೊಂದರೆಗಳಿಗೆನೂ ಕೊರತೆ ಇಲ್ಲ ಅದಕ್ಕಾಗಿ, ವಿವಾಹವೇ ಬೇಡವೆಂಬ ನಿರ್ಧಾರಕ್ಕೆ ಬರುತ್ತಿದ್ದಾರೆ. ತಮ್ಮ ಈ ನಿರ್ಧಾರಕ್ಕೆ ಆರ್ಥಿಕ ಬೆಂಬಲವಿಲ್ಲದೇ ಅನಿವಾರ್ಯತೆಯಲ್ಲಿ, ಧರ್ಮದ ಕುಹಕು ವಿಚಾರಗಳನ್ನೆ ನಂಬಿ ಬದುಕುತ್ತಿದ್ದಾರೆ. ಕಣ್ಣಿಗೆ ಪರಿಸ್ಥಿತಿ ಅಷ್ಟೇನೂ ಹದಗೆಟ್ಟಿಲ್ಲ ಎಂದು ಅನ್ನಿಸಿದರೂ ಇಂಥ ಪರಿಸ್ಥಿತಿಗಳನ್ನೆದುರಿಸುವವರು ಸಾಕಷ್ಟಿದ್ದಾರೆ.

೪.೧.೨. ಕುಟುಂಬ ಸಂಸ್ಥೆ ಮತ್ತು ಬ್ರಾಹ್ಮಣ ಮಹಿಳೆ

ಯಾವುದೇ ಒಂದು ಮಹಿಳಾ ವಿಷಯವನ್ನು ಅಭ್ಯಸಿಸಬೇಕೆಂದರೆ ಅದು ಕುಟುಂಬದಿಂದ ಆರಂಭವಾಗುತ್ತದೆ. ಆದ್ದರಿಂದ ಮಹಿಳೆ ಎಂದಾಕ್ಷಣ ಕುಟುಂಬವು ಬಹುಮಹತ್ವವನ್ನು ಪಡೆದುಕೊಳ್ಳುತ್ತದೆ.

''ಕುಟುಂಬ ಸಾಮಾಜಿಕ ವ್ಯವಸ್ಥೆಯ ಒಂದು ಮೂಲ ಘಟಕ. ಇದರಲ್ಲಿ ಪುರುಷರು, ಮಹಿಳೆಯರು, ಮಕ್ಕಳು, ಮುದುಕರು ಪರಸ್ಪರ ಬಾಂಧವ್ಯ, ಪ್ರೀತಿ, ವಿಶ್ವಾಸ, ನಂಬಿಕೆ ಹಾಗೂ ಕರ್ತವ್ಯಗಳ ಬಂಧನದಲ್ಲಿ ಬದುಕುತ್ತಾರೆ.

ಕುಟುಂಬ ಸದಸ್ಯರಿಗೆ ಆಹಾರ, ಆಶ್ರಯ, ಲೈಂಗಿಕ ಜೀವನಗಳಂಥ ಮೂಲಭೂತ ಅಗತ್ಯತೆಗಳ ಜೊತೆಗೆ ಪರಸ್ಪರ ಸಂಬಂಧ ಹಾಗೂ ಏಕತೆಯ (ಒಗ್ಗಟ್ಟಿನ) ಭಾವನೆಗಳನ್ನು ಒದಗಿಸುತ್ತದೆ. ನೋವು, ಕಷ್ಟ, ತೊಂದರೆ, ಅನಾರೋಗ್ಯದಲ್ಲಿ ರಕ್ಷಣೆ ನೀಡುತ್ತದೆ. ಕುಟುಂಬದ ಸದಸ್ಯರು ಅಥವಾ ವ್ಯಕ್ತಿಗಳು ಸಂತೋಷ ದುಃಖ, ಪ್ರೀತಿ, ದ್ವೇಷಗಳನ್ನು ಅನುಭವಿಸುತ್ತಾರೆ. ಕುಟುಂಬವೇ ವ್ಯಕ್ತಿಯ ಬಾಳಿನ ಮೊದಲ ಕಲಿಕಾಕೇಂದ್ರ ಅಥವಾ ಪಾಠಶಾಲೆ, ಸಮಾಜದಲ್ಲಿ ವ್ಯಕ್ತಿ ಹೇಗೆ ಬದುಕಬೇಕು ಎಂಬ ಬಗ್ಗೆ ತಿಳುವಳಿಕೆ, ತರಬೇತಿಯನ್ನು ಪಡೆಯುತ್ತಾಳೆ. ಆಯಾ ಸಮಾಜದ ಸಾಂಸ್ಕೃತಿಕ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ಎನ್ನು ಬಾಲ್‌ಕಾಟ್ ಪಾರ್ಸನ್ಸ ಮತ್ತು ರಾಬರ್ಟ ಎಫ್ ಬೇಲ್ಸ್ ೧೯೫೫ ಕುಟುಂಬವು, ಅದರ ಸದಸ್ಯರ ಸಂಪನ್ಮೂಲಗಳು ಶ್ರಮವಿಭಜನೆ, ವೈವಾಹಿಕ ನೀತಿ, ನಿಯಮಗಳು, ಹಕ್ಕುಗಳು, ಕರ್ತವ್ಯಗಳು ಹಾಗೂ ಸವಲತ್ತುಗಳನ್ನು ಕುರಿತ ನಿಯಂತ್ರಣ ವ್ಯವಸ್ಥೆಗೆ ಆಧಾರಸ್ತಂಭ ಎನ್ನಬಹುದು.''[೧]

'ಮೊದಲಿಗೆ ಸಂಘ ಜೀವನಕ್ಕೆ ಆಧ್ಯತೆಯನ್ನು ನೀಡುವ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿದ್ದು. ಈ ಬಗೆಯ ಕುಟುಂಬ ತನ್ನ ಸದಸ್ಯರ ಎಲ್ಲ ಅವಶ್ಯಕತೆಗಳನ್ನು ಹೆಚ್ಚು ಕಡಿಮೆ ಪೂರೈಸುತ್ತಿತ್ತು. ಆದರೆ ಆಧುನಿಕರಣದ ಪ್ರಕ್ರೀಯೆ ಸಮಾಜವನ್ನು ಆವರಿಸುತ್ತಾ ಹೋದಹಾಗೆಲ್ಲ ಗಾತ್ರದಲ್ಲಿ ಸಣ್ಣದಾದ ಹಾಗೂ ತನ್ನ ಸದಸ್ಯರಿಗೆ ಹೆಚ್ಚುಹೆಚ್ಚು ಸ್ವಾತಂತ್ರ್ಯ ನೀಡುವಂಥ ಅಣುಕುಟುಂಬಗಳು ಜನಪ್ರಿಯವಾಗತೊಡಗಿದವು. ಕುಟುಂಬ ನೀಡುತ್ತಿದ್ದಂಥ ಎಲ್ಲ ಸೌಕರ್ಯ ಹಾಗೂ ಸಲಕರಣೆಗಳನ್ನು ಇಂದು ಇತರ ಸಂಸ್ಥೆಗಳೇ ನೀಡುತ್ತಿರುವುದರಿಂದ ಅನೇಕ ಸಂದರ್ಭಗಳಲ್ಲಿ ಕುಟುಂಬದ ಹಿಡಿತ ಕಡಿಮೆಯಾಗುತ್ತಿದೆ.'[೨] ''ಡಾ ಇರಾವತಿ ಕರ್ವೆಯವರು ರಕ್ತ ಸಂಬಂಧಿಗಳ ಸಮೂಹವೊಂದು ಒಂದೇ ಮನೆಯಲ್ಲಿ ವಾಸಿಸುತ್ತಾ ಒಂದೇ ಒಲೆಯಲ್ಲಿ ತಯಾರಿಸಿದ ಅಡುಗೆಯನ್ನು ಸೇವಿಸುತ್ತಾ, ಆಸ್ತಿಯ ಮೇಲೆ ಸಮಾನವಾದ ಒಡೆತನವನ್ನು ಹೊಂದಿರುತ್ತಾ ಮತ್ತು ಕುಟುಂಬದ ಪೂಜಾಕಾರ್ಯಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾ ಬರುವಂತಿದ್ದರೇ ಅದನ್ನು ಅವಿಭಕ್ತ ಕುಟುಂಬಗಳೆಂದು ಕರೆಯಬಹುದು.''[೩]

'ಅಧಿಕಾರ ಕೇಂದ್ರವನ್ನು ಆಧಾರವಾಗಿಟ್ಟುಕೊಂಡು ಕುಟುಂಬಗಳನ್ನು ಪಿತೃಪ್ರಧಾನ ಅಥವಾ ಮಾತೃ ಪ್ರಧಾನ ಎಂಬ ಎರೆಡು ಭಾಗಗಳನ್ನಾಗಿ ವಿಂಗಡಿಸಬಹುದು. ಪುರುಷ ಪ್ರಧಾನ ಕುಟುಂಬಗಳಲ್ಲಿ ಕುಟುಂಬದ ಒಡೆತನ ಪುರುಷನ ಕೈಯಲ್ಲಿದ್ದು, ವಂಶಾವಳಿಯನ್ನು ಪುರುಷರ ಮೂಲಕ ಗುರುತಿಸಲಾಗುತ್ತದೆ. ಪಿತೃಪ್ರಧಾನ ಕುಟುಂಬದಲ್ಲಿ ವಿವಾಹ ನಂತರ ಹೆಣ್ಣು ತನ್ನ ವಾಸಸ್ಥಾನವನ್ನು ಗಂಡನ ಮನೆಗೆ ಬದಲಿಸುತ್ತಾಳೆ ಪಿತೃಪ್ರಧಾನ ಕುಟುಂಬಗಳಲ್ಲಿ ಆಸ್ತಿಯೂ ಕೂಡ ಸಾಮಾನ್ಯವಾಗಿ ಪುರುಷರಿಂದ ಪುರುಷರಿಗೆ ವರ್ಗಾಯಿಸಲ್ಪಡುತ್ತದೆ. ಪುರುಷ ಪ್ರಧಾನ ಕುಟಂಬವನ್ನು ಸ್ತ್ರೀ ಶೋಷಣೆಯ ಮೂಲ ಎಂದು ಅನೇಕ ಸ್ತ್ರೀವಾದಿಗಳು ಒಪ್ಪುತ್ತಾರೆ.''[೪]

'ಮಾತೃಪ್ರಧಾನ ಕುಟುಂಬದ ಅಧಿಕಾರವನ್ನು ಸ್ತ್ರೀಯು ಹೊಂದಿರುತ್ತಾಳೆ. ಮಾತೃಸ್ಥಾನೀಯ ಅಥವಾ ಮಾತೃವಂಶೀಯ ಕುಟುಂಬಗಳು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪ್ರಮುಖ ಲಕ್ಷಣಗಳಾಗಿವೆ. ವಿವಾಹಾನಂತರ ಸ್ತ್ರೀ ತನ್ನ ತಾಯಿಯ ಮನೆಯಲ್ಲಿಯೇ ವಾಸ್ತವ್ಯವನ್ನು ಮುಂದುವರೆಸುವುದು ಹಾಗೂ ವಂಶಾವಳಿಯನ್ನು ಮಾತೃ ಮೂಲದಿಂದ ಗುರುತಿಸುವುದು ಮಾತೃಪ್ರಧಾನ ಕುಟುಂಬಗಳ ಲಕ್ಷಣ. ಮಾತೃ ಪ್ರಧಾನ ಕುಟುಂಬಗಳಲ್ಲಿ ಸ್ತ್ರೀ

ಶೋಷಣೆಯ ತೀವ್ರತೆ ಹಾಗೂ ಪ್ರಮಾಣ ಬಹುಕಡಿಮೆ. ಅನೇಕ ಮಾತೃಪ್ರಧಾನ ಕುಟುಂಬಗಳಲ್ಲಿಯೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಪುರುಷನಲ್ಲಿಯೇ ಇರುತ್ತದೆ. ಎನ್ನುವುದು ನಿಜವಾದರೂ ಸ್ತ್ರೀಯಾದವಳಿಗೆ ಪರಕೀಯವಾದ ವಾತಾವರಣದಲ್ಲಿ ಅನುಸರಣೆ ಮಾಡಿಕೊಳ್ಳಬೇಕಾದ ಅಥವಾ ಪತಿಯ ಸಂಬಂಧಿಗಳಿಂದ ದೌರ್ಜನ್ಯಕ್ಕೆ ಒಳಗಾಗ ಬೇಕಾದ ಪರಿಸ್ಥಿಯಿರುವದಿಲ್ಲ. ಇತ್ತಿಚೀನ ದಿನಗಳಲ್ಲಿ ಮಾತೃಪ್ರಧಾನ ಕುಟುಂಬಗಳೂ ಪಿತೃಪ್ರಧಾನತೆಯ ಕಡೆ ವಾಲುತ್ತಿರುವುದು ಸ್ತ್ರೀಯ ಅಧಿಕಾರವನ್ನು ಒಪ್ಪಿಕೊಂಡವರೆಂದು ಒಂದು ರೀತಿಯ ಕೀಳರಿಮೆಯನ್ನು ಅನುಭವಿಸುತ್ತಾ, ಪುರುಷ ಕೇಂದ್ರಿತ ಕುಟುಂಬ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತಿರುವುದು ನಮ್ಮ ಸಮಾಜ ಕಾಣುತ್ತಿರುವ ನಕಾರಾತ್ಮಕ ಬದಲಾವಣೆಗಳಲ್ಲಿ ಒಂದು. ಹಿಂದೆಂದಿಗಿಂತಲೂ ಇಂದು ಕುಟುಂಬ ಕಠಿಣವಾದ ಸವಾಲುಗಳನ್ನು ಎದುರಿಸುತ್ತಿದೆ. ಸಮಾಜವನ್ನು ವ್ಯಾಪಿಸುತ್ತಿರುವ ಬದಲಾವಣೆ ಕುಟುಂಬ ಎನ್ನುವ ಸಂಸ್ಥೆಯನ್ನು ಬಿಟ್ಟಿಲ್ಲ. ತನ್ನ ಅನೇಕ ಮೂಲಭೂತ ಕಾರ್ಯಗಳನ್ನು ಇತರರಿಗೆ ವಹಿಸಿಕೊಟ್ಟಿದ್ದರೂ, ವ್ಯಕ್ತಿಯ ಸಾಮಾಜಿಕರಣದಲ್ಲಿ ಕುಟುಂಬದ ಪಾತ್ರವನ್ನು ತೆಗೆದುಹಾಕುವಂತಿಲ್ಲ. ಪ್ರತಿಯೊಂದು ಸಮಾಜದಲ್ಲೂ ಅತೀ ಹೆಚ್ಚಿನ ಸಂಖ್ಯೆಯ ಜನರು ಕುಟುಂಬದಲ್ಲಿಯೇ ವಾಸಿಸುವುದರಿಂದ ಒಂದು ಸಾಮಾಜಿಕ ಸಂಸ್ಥೆಯಾಗಿ ಕುಟುಂಬಕ್ಕೆ ಇನ್ನು ಮಹತ್ವ ಸಂಪೂರ್ಣವಾಗಿ ಕಳೆದು ಹೋಗಿಲ್ಲ ಆದರೆ ಜಗತ್ತಿಬಹುಪಾಲು ಕುಟುಂಬಗಳು ಪಿತೃಪ್ರಧಾನ ಸ್ವರೂಪದ್ದೆ ಆಗಿವೆ.''[೫]

ಕುಟುಂಬ ಎಂಬ ಶಬ್ದ ಪ್ರಯೋಗದ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳುವ ಇನ್ನೊಂದು ಪದವೆಂದರೇ ಅದು ಗೃಹಿಣಿ. ಇದು ವಿವಾಹಾನಂತರ ಏರ್ಪಡುವ ಪಾತ್ರ ಪಲ್ಲಟವಾದರೆ ಈ ಪಾತ್ರವು ಅವಳ ಸ್ಥಾನಮಾನವನ್ನು ನಿರ್ಧರಿಸುವಂತಹುದಾಗಿದೆ. 'ಗೃಹಿಣಿ' ಎಂದರೆ ಗೃಹಕೃತ್ಯಗಳೊಂದಿಗೆ, ಪಾಲನೆ, ಪೋಷಣೆಯ ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸುವವಳು ಎಂದು ಅರ್ಥ ಇದಕ್ಕಾಗಿಯೇ '' 'ಗೃಹಿಣಿ ಗೃಹ ಮುಚ್ಛತೆ' ಎಂದು ಗೃಹಸ್ಥನ ಮನೆಯ ಕರ್ತವ್ಯ ಜವಾಬ್ದಾರಿಗಳನ್ನು ಗೃಹಿಣಿಯೇ ನೋಡಿಕೊಳ್ಳುವಳು. ಆದ್ದರಿಂದ ಗೃಹಿಣಿಗೂ ಗೃಹಕ್ಕೂ ವ್ಯತ್ಯಾಸವೇ ಇಲ್ಲ. ಇಂಥ ಗೃಹವುಳ್ಳವನೇ ನಿಜವಾದ ಗೃಹಸ್ಥ''[೬] ಕುಟುಂಬದಲ್ಲಿ ಹೆಣ್ಣು ಹಲವು ಜವಾಬ್ದಾರಿಗಳನ್ನು ಹೊರಬೇಕಾಗುತ್ತದೆ. ತನ್ನ ಜವಾಬ್ದಾರಿಗಳು ಒಂದೆಡೆಯಾದರೇ, ಗಂಡನ ಜವಾಬ್ದಾರಿಗಳು ಹೀಗೆ ಅವಳು ತ್ರಿಗುಣ ಕೆಲಸದ ಹೊರೆಯೊಂದಿಗೆ ಅಂದರೆ ಮನೆಗೆಲಸ, ಹೊರಗಿನ ಕೆಲಸ, ತಾಯ್ತನದ ಕೆಲಸ ಇದರೊಂದಿಗೆ ಗಂಡನ ಹಲವು ಕೆಲಸಗಳನ್ನು ನಿಭಾಯಿಸುತ್ತಾ ನಿಭಾಯಿಸುತ್ತಾ ಹಣ್ಣಾಗುತ್ತಾಳೆನ್ನಬಹುದು.

ಕುಟುಂಬವು ಹೆಣ್ಣನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಎಂದು ಹೇಳಬಹುದು. ಅದರ ಪ್ರಥಮ ನಿಯಂತ್ರಣವೆಂದರೇ ಅದು ಲೈಂಗಿಕ ನಿಯಂತ್ರಣ ಈ ಮೂಲಕ ಅವಳನ್ನು ತನ್ನ ಕಬಂದ ಬಾಹುವಿನಲ್ಲಿ ಸದಾ ಅವಳು ಉಳಿಯುವಂತೆಮಾಡುತ್ತವೆ. ಇದು ಮುಂದುವರೆದು ಹಲವು ರೀತಿಗಳಲ್ಲಿ ಅವಳು ಪಿತೃಪ್ರಧಾನ ವ್ಯವಸ್ಥೆಯ ಲಕ್ಷ್ಮಣ ರೇಖೆಯನ್ನು ದಾಟದ ಹಾಗೆ ನೋಡಿಕೊಳ್ಳುತ್ತದೆ. ಬೇರೆ ಯಾವುದೇ ವಿಷಯಕ್ಕೆ ಹೋದರೂ ಅದು ತಿರುಗಿ ತಿರುಗಿ ಇದೆ ವಿಷಯದ ಸುತ್ತಗಿರಕಿ ಹೊಡೆಯುತ್ತದೆ. ಯಾವ ಯಾವ ಬಗೆಗಳಲ್ಲಿ ಅವಳನ್ನು ನಿಯಂತ್ರಿಸಬಹುದೆಂಬ ಬಗೆಯಲ್ಲಿ ಹಲವು ಚಿಂತನೆಗಳನ್ನು ಯಾವಾಗಲೂ ನಡೆಸಿರುತ್ತದೆ. ಕುಟುಂಬದಲ್ಲಿ ಹೆಣ್ಣು ಸೇವಕಿಯ ಸ್ಥಾನಪಡೆದಿರುತ್ತಾಳೆ. ಆದರೆ ಹೇಳುವುದು ಮಾತ್ರ ಸಮಾನತೆಯೆಂದು ಪುರುಷರು ನಿರ್ವಚಿಸುವ ಸಮಾನತೆ

ಎಂದರೆ ತನ್ನ ಸ್ಥಾನಮಾನಗಳಲ್ಲಿ ತನ್ನಂತೆ ಅವಳದೂ ಪಾಲಿದೆ ಎಂಬುದನ್ನಲ್ಲ. ತನ್ನ ಕರ್ತವ್ಯ ನಿರ್ವಹಣೆಯೊಂದಿಗೆ, ಅಧಿಕ ಜವಾಬ್ದಾರಿ ಹೊತ್ತು, ಬಸವಳಿದರೂ ತಾವು ಅವಳಿಗೆ ಆ ಕೆಲಸನಿರ್ವಹಿಸಲು ಅನುಮತಿಸಿದ್ದೇವೆ ಎಂಬುದೇ ಆಗಿದೆ ಹೊರತು ಬೇರೆಯದ್ದಲ್ಲ.'

ಕುಟುಂಬದಲ್ಲಿ ಹೆಣ್ಣಿಗೆ ದ್ವಿತೀಯ ದರ್ಜೆಯನ್ನು ನೀಡಲಾಗಿದೆ. ಯಾವುದೇ ವಿಷಯವನ್ನು ಅವಳು ಸ್ವತಂತ್ರವಾಗಿ ನಿರ್ಧರಿಸಲಾರಳು. ಅವಳು ಶಿಕ್ಷಣಪಡೆದು ಎಷ್ಟೆ ಜಾಣೆಯಾಗಿದ್ದರೂ ಕೂಡ ತನ್ನ ಸ್ವಂತ ನಿರ್ಧಾರದಂತೆ ಅವಳು ನಡೆಯುವಂತಿಲ್ಲ. ಹೊರಗಡೆ ಕೆಲಸಮಾಡುತ್ತಾ ಸಂಸಾರವನ್ನು ಅವಳು ನಿಭಾಯಿಸುತ್ತಿದ್ದರೂ ಅವಳಿಗಾಗಿ ತನ್ನ ಸಂಪಾದನೆಯನ್ನು ವ್ಯಯ ಮಾಡುವ ಅಧಿಕಾರ ಕೂಡ ಅವಳಿಗಿಲ್ಲ. ಕುಟುಂಬವು ಹೆಣ್ಣಿಗೆ ಮುಂದೆ ತಾನು ಬಾಳಬೇಕಾಗಿರುವ ಮನೆಯ ವಾತಾವರಣದ ಸಾಮಾಜಿಕರಣವನ್ನು ನೀಡುತ್ತದೆ. ಸಹನೆ, ತಾಳ್ಮೆ, ಪತಿ ವಿಧೇಯತೆ ಕ್ಷಮಾ ಗುಣಗಳನ್ನು ಬೆಳೆಸುತ್ತಾ ಹೋಗುತ್ತದೆ. ಕುಟುಂಬ ಅವಳಿಗೆ ಸೇವಕಿಯ ಸ್ಥಾನವನ್ನು ನೀಡಿದ್ದರೂ ಕೂಡ ರಕ್ಷಣೆಯ ಹೆಸರಿನಲ್ಲಿ ಅವಳನ್ನು ಬಂಧಿಸುತ್ತದೆ. ಕುಟುಂಬವು ಹೆಣ್ಣಿನ ಮುಂದಿನ ಸಾಮಾಜಿಕರಣಕ್ಕೆ ಮೂಲ ತಳಹದಿಯಾಗಿದೆ. ಕುಟುಂಬವು ಹಲವು ಸಾಮಾಜಿಕ ಸಂಸ್ಥೆಗಳ ಹುಟ್ಟಿಗೆ ಕಾರಣವಾಗಿದೆ. ಈ ಮೂಲಕ ಎಲ್ಲ ಸಂಸ್ಥೆಗಳಲ್ಲೂ ತನ್ನ ಯಜಮಾನ್ಯದ ಛಾಪನ್ನು ನಿರಂತರವಾಗಿ ಒತ್ತುತ್ತಿರುತ್ತದೆ.

ಕುಟುಂಬವು ಹೆಣ್ಣಿಗೆ ಒಂದು ಪರೀಧಿ ಇದ್ದ ಹಾಗೆ. ಅದರಾಚೆ ಇಚೇಗೆ ಹೆಣ್ಣು ಚಲಿಸದಂತೆ ನೋಡಿಕೊಳ್ಳುತ್ತದೆ. ಕುಟುಂಬದ ಮೂಲಕ ಅವಳ ವರ್ತನೆಯ ಮೇಲೆ ನಿಯಂತ್ರಣವನ್ನು ಹೇರುತ್ತದೆ. ''ಸಿಮೋನ್‌ದ ಬೋವಾ ಹೇಳುವಂತೆ ಸ್ತ್ರೀಯು ಮೂಲತಃ ರೂಪಿಸಲ್ಪಟ್ಟವಳು. ಹೆಣ್ಣು ನಿರ್ಧಿಷ್ಟ ಸಾಮಾಜಿಕ ಪ್ರಕ್ರಿಯೆಗಳಿಂದ ಆಗುತ್ತಾಳೆಯೇ ವಿನಾ ಯಾರೂ ಹೆಣ್ಣಾಗಿ ಹುಟ್ಟುವುದಿಲ್ಲ.''[೭] ''ವ್ಯಕ್ತಿಯು ಹುಟ್ಟಿನಿಂದ ಸಾವಿನವರೆಗೆ ಆತನ/ಆಕೆಯ ಜೊತೆಯಲ್ಲಿಯೇ ಇರುವ ಕುಟುಂಬದ ಕಾರ್ಯ ಕೇವಲ ಸಂತಾನೋತ್ಪತ್ತಿಗಾಗಲಿ, ಆರ್ಥಿಕ ಭಾವನಾತ್ಮಕ ಭದ್ರತೆಯನ್ನು ಒದಗಿಸಲಾಗಲಿ ಸೀಮಿತವಾಗಿಲ್ಲ. ಕುಟುಂಬ ಸಮಾಜದ ಆಧಾರ ಸ್ತಂಭದಂತಿದ್ದು, ಆಯಾಕಾಲದಲ್ಲಿ ಆಯಾ ಸಮಾಜದ ಮೌಲ್ಯಗಳನ್ನು, ನಂಬಿಕೆಗಳನ್ನೂ, ಆಚರಣೆಗಳನ್ನೂ ಒಟ್ಟಿಲ್ಲಿ ಆ ಸಮಾಜದ ಸಂಸ್ಕೃತಿಯನ್ನು ತನ್ನ ಸದಸ್ಯರಿಗೆ ಪರಿಚಯಿಸುವಂಥ ಒಂದು ಸಾಮಾಜಿಕ ಸಂಸ್ಥೆ ಈ ಸಾಮಾಜಿಕ ಸಂಸ್ಥೆಯಲ್ಲಿಯೇ ಗಂಡು ಹೆಣ್ಣುಗಳು ತಮ್ಮ ಪಾತ್ರಗಳು ಜವಾಬ್ದಾರಿಗಳು ಹಾಗೂ ಭವಿಷ್ಯದ ಅವಕಾಶವನ್ನು ಕುರಿತಂತೆ ಅರಿವನ್ನು ಮೂಡಿಸಿಕೊಳ್ಳುವುದು.''[೮]

ಕುಟುಂಬ ಹೆಣ್ಣನ್ನು ಗಂಡಿಗೆ ಎದುರಾಡದಂತೆ ಸಾಮಾಜಿಕರಣ ನೀಡಿದರೆ ಗಂಡಿಗೆ, ಆಜ್ಞಾಪಿಸುವ ಪ್ರಶ್ನೆ ಮಾಡುವ ಅಧಿಕಾರವನ್ನು ನೀಡುತ್ತದೆ. ಹಾಗಾಗಿ ಹೆಣ್ಣು ಎಷ್ಟೆ ಆಧುನಿಕರಣದ ಯುಗದಲ್ಲಿ ಬದುಕುತ್ತಿದ್ದಾಳೆಂದರೂ ಅವಳಿಗೆ ಶಾಂತಿನೆಮ್ಮದಿ ಇಲ್ಲ. ಅಧಿಕ ಕೆಲಸದ ಹೊರೆ ಪರಾವಲಂಬನೆಯ ಬದುಕು ಸಾಗಿಸುತ್ತಿದ್ದಾಳೆ. ಕುಟುಂಬ ಅವಳಿಗೆ ರಕ್ಷಣೆ ನೀಡಬಹುದು ಭವಿಷ್ಯಕ್ಕೆ ಭದ್ರತೆಯನ್ನು ಒದಗಿಸಬಹುದು. ಆದರೆ ತನ್ನ ತನವನ್ನು ಉಳಿಸಿಕೊಳ್ಳಲಾರದಷ್ಟು ಹೊರೆಯನ್ನು ನೀಡುತ್ತಿದೆ. ಅತಿಯಾದ ಕೆಲಸದ ಹೊರೆ, ಯಾಂತ್ರಿಕ ಜೀವನ ಶೈಲಿಯಿಂದಾಗಿ ಅವಳು ಅತಿಯಾದ ಒತ್ತಡಗಳಿಗೆ ಸಿಲುಕುತ್ತಿದ್ದಾಳೆ. ಒಟ್ಟಿನಲ್ಲಿ ಕುಟುಂಬ ಅವಳನ್ನು ಅನೇಕ ಕೆಲಸಗಳಲ್ಲಿ ತೊಡಗಿಸಿ, ಬಿಜಿಯಾಗಿರಿಸಿ, ತನ್ನೆಡೆಗೆ ಅವಳು ಯೋಚಿಸದಂತೆ ಮಾಡುತ್ತಿವೆ.

೪.೧.೩. ಶಿಕ್ಷಣ ಸಂಸ್ಥೆ ಮತ್ತು ಬ್ರಾಹ್ಮಣ ಮಹಿಳೆ

ಇದು ಸಾಮಾಜಿಕ ಸಂಸ್ಥೆಗಳಲ್ಲಿ ಒಂದಾಗಿದೆ. ಸಾಮಾಜಿಕ ಜೀವನದಲ್ಲೂ ವ್ಯಕ್ತಿಗತ ಜೀವನದಲ್ಲೂ ಅಷ್ಟೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಒಂದು ನಾಗರೀಕತೆಯ ವಿಕಾಸದಲ್ಲಿ ಶಿಕ್ಷಣವು ಪ್ರಾಮುಖ್ಯವನ್ನು ಪಡೆದಿರುವಂತಹ ಅಂಶವಾಗಿದೆ. ''ಮಾನವ ಶಿಶು ಜೈವಿಕ ಜೀವಿಯ ಹಂತದಿಂದ ಸಾಮಾಜಿಕ ಜೀವಿಯ ಪರಿಸ್ಥಿತಿಯನ್ನು ತಲುಪುವುದು ಶಿಕ್ಷಣದ ಮೂಲಕವೇ. ಶಿಕ್ಷಣ ಎಂದರೆ ಮೂಲಭೂತವಾಗಿ ಕಲಿಕೆ, ಅರಿವು ಅನುಭವ ಎಂದು ಅರ್ಥೈಸಬಹುದು, ಶಿಕ್ಷಣ ಎನ್ನುವುದು ಇಂಗ್ಲಿಷ ಭಾಷೆಯ 'ಎಜುಕೇಷನ್' ಎಂಬ ಪದದ ಕನ್ನಡ ಭಾಷಾಂತರ 'ಎಜ್ಯುಕೇಷನ್' ಎಂಬ ಪದದ ಮೂಲ ಲ್ಯಾಟಿನ್ ಭಾಷೆಯ 'ಎಜ್ಯುಕೇರ್' ಎಂಬುದು ಈ ಪದದ ಅರ್ಥ ಬೆಳೆಸುವುದು ಹೊರತೆಗೆಯುವುದು ಎಂದಾಗುತ್ತದೆ. ಒಟ್ಟಿನಲ್ಲಿ ಮಾನವರಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಹೊರತೆಗೆಯುವುದು ಶಿಕ್ಷಣದ ಮೂಲ ಉದ್ದೇಶವಾಗಿದೆ. ವ್ಯಕ್ತಿಯನ್ನು ಸಮಾಜದ ರೀತಿ ನೀತಿಗಳಿಗೆ ಪರಿಚಯಿಸುವುದರಿಂದ ಶಿಕ್ಷಣ ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿಯೂ ಕಾರ್ಯನಿರ್ವಹಿಸುತ್ತದೆ.''[೯]

''ಭಾರತೀಯ ಸಮಾಜದಲ್ಲಿ ಶತಮಾನಗಳಿಂದಲೂ ಮಹಿಳೆಯರಿಗೆ ಲಭ್ಯವಿರುವ ಶಿಕ್ಷಣಾವಕಾಶಗಳು ಪುರುಷನಿಗೆ ಹೋಲಿಸಿದಾಗ ಕಡಿಮೆ. ಹಿಂದೆಂದಿಗಿಂತಲೂ ಇಂದು, ಸಂಖ್ಯಾತ್ಮಕ ದೃಷ್ಟಿಯಿಂದ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳಲ್ಲಿ ಹೆಚ್ಚಳ ಉಂಟಾಗಿರುವುದು ನಿಜವಾದರೂ, ಈ ಹೆಚ್ಚಿರುವ ಅವಕಾಶಗಳ ಹಂಚಿಕೆಯಲ್ಲಿ ಸಮಾನತೆ ಕಂಡುಬರುತ್ತಿಲ್ಲ. ಇಂದಿಗೂ ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ೩೯.೪೭% ರಷ್ಟು ಮಾತ್ರ ಸಾಕ್ಷರರಾಗಿದ್ದು, ಇನ್ನುಳಿದ ಮಹಿಳೆಯರ ಪಾಲಿಗೆ ಶಿಕ್ಷಣವನ್ನು ಪಡೆಯುವ ಅವಕಾಶ ದೊರೆಯದಿರುವುದು. ಆಹಾರದಷ್ಟೇ ಮೂಲಭೂತ ಅವಶ್ಯಕತೆಯಾದ ಶಿಕ್ಷಣವನ್ನು ಪಡೆಯುವುದರಲ್ಲಿ ಎಷ್ಟರ ಮಟ್ಟಿನ ಲಿಂಗತಾರತಮ್ಯ ಅಡಕವಾಗಿದೆ ಎಂಬುದು ತಿಳಿದುಬರುತ್ತದೆ.''[೧೦]

''ಸಿಂಧೂ ಕಣಿವೆ ನಾಗರೀಕತೆಯ ಕಾಲದಿಂದ ಇಂದಿನವರೆಗೂ ಹೆಣ್ಣನ್ನು ಶಕ್ತಿಮೂಲ ದುಷ್ಟ ಶಿಕ್ಷಣದ ಸಾಕಾರವೆಂದು ಹಾಡಿಹೊಗಳಲಾಗುತ್ತದೆ. ಋಗ್ವೇದದ ಅಥವಾ ಪ್ರಾರಂಭಿಕ ಆರ್ಯಯುಗದಲ್ಲಿ ಸ್ತ್ರೀಯರು ಉಪನಯನ ಸಂಸ್ಕಾರ ಹೊಂದಿ ಅತ್ಯುನ್ನತ ವೈದಿಕ ಜ್ಞಾನಪಡೆಯುತ್ತಿದ್ದರು ಅಷ್ಟೇಅಲ್ಲ ವಿಶ್ವಾಖರೆ, ಉಪ್ಪಲಾ, ಘೋಷ, ಗಾರ್ಗಿ, ಮೈತ್ರೇಯಿ ಮುಂತಾದ ಜ್ಞಾನಿಗಳು ಋಗ್ವೇದ ಮಂತ್ರಗನ್ನೂ ರಚಿಸಿದ್ದರೆನ್ನಲು ಸಾಕ್ಷಾಧಾರಗಳಿವೆ. ತರುವಾಯ ಆರ್ಯಯುಗದಲ್ಲಿ ಮಹಿಳೆಯರ ಸ್ಥಾನಮಾನಗಳಲ್ಲಿ ಇಳಿತ ಕಂಡುಬಂದರೂ ಅವರ ಶಿಕ್ಷಣದ ಬಗೆಗೆ ನಿರ್ಲಕ್ಷ, ಉಪೇಕ್ಷೆ, ತಾತ್ಸಾರ ಕಂಡುಬಂದಿರಲಿಲ್ಲ. ಕ್ರಮೇಣ ಜಾತಿ ವ್ಯವಸ್ಥೆ ಪ್ರಬಲವಾಗುತ್ತಾ, ಉನ್ನತ ವರ್ಗದ ಕುಟುಂಬದ ಹೆಣ್ಣು ಮಕ್ಕಳಿಗೆ ಮಾತ್ರವೇ ವಿದ್ಯಾಭ್ಯಾಸ ದೊರೆಯುತ್ತಿತ್ತು. ಕೊನೆಗೆ ಹುಡುಗಿಯರು ಹೆಚ್ಚು ಕಲಿತರೇ, ಓದಲು ಬರೆಯಲು ಬಂದರೇ ವಿವಾಹಾನಂತರ ಆ ಹುಡುಗಿ ವಿಧವೆಯಾಗುವಳೆಂಬ ಮೂಢನಂಬಿಕೆ ಪ್ರಬಲವಾಗಿ ಅಲ್ಲಿಯೂ ಕ್ಷಣ ಪ್ರಪಂಚದಿಂದ ಹುಡುಗಿಯರನ್ನು ದೂರವಿಟ್ಟು ಬಾಲ್ಯವಿವಾಹ ಮಾಡಲಾಗುತ್ತಿತ್ತು. ಇನ್ನು ಮಧ್ಯಮ ಹಾಗೂ ಬಡಕುಟುಂಬಗಳಲ್ಲಿ ಹುಡುಗಿಗೆ ಶಿಕ್ಷಣ ನೀಡಿದ್ದನ್ನು ಅವಮರ್ಯಾದೆಯೆಂದು ಭಾವಿಸಲಾಗುತ್ತಿತ್ತು ಇದೇ ಪದ್ಧತಿ, ಆಲೋಚನೆ ಬೇರೂರಿ ಹುಡುಗಿಯರಿಗೆ ವಿವಾಹವೊಂದೇ ಜೀವಿತದ ಗುರಿಯಾಯಿತು. ಶಿಕ್ಷಣವಂಚಿತೆಯರಾದ ಮಹಿಳೆಯರು ಪುರುಷ ಕೇಂದ್ರಿತ ಸಮಾಜದ ಕುಟುಂಬ ಸಂಸ್ಥೆಯಲ್ಲಿ ಅತ್ಯಂತ ಅನಾಧರಣೀಯ ವ್ಯಕ್ತಿಗಳಾದರು.''[೧೧]

ಶಿಕ್ಷಣ ಸಂಸ್ಥೆಯಂತ ಜ್ಞಾನದ ಬಾಗಿಲು ಮುಚ್ಚಿದ ಮೇಲೆ ನಾಲ್ಕು ಗೋಡೆಗಳ ಒಳಗೆ ಬಂಧಿತರಾಗಿ ತಮ್ಮೆಲ್ಲ ಸಾಧನೆಗಳನ್ನು ಪುರುಷ ಪಾತ್ರಗಳಲ್ಲಿ ಕಾಣಲು ಅವರನ್ನು ಅವಲಂಬಿಸಿದರು. ಇದರಲ್ಲಿ ಮಹಿಳೆಯರನ್ನು ಹತ್ತಿಕ್ಕುವ ಪುರುಷರ ಜೊತೆಗೆ ಮಹಿಳೆ ಮತ್ತೊಬ್ಬ ಮಹಿಳೆಯರನ್ನು ಶೋಷಿಸುವ ಕ್ರೌರ್ಯದಿಂದ ಹತ್ಯೆಮಾಡುವ, ಮಾಡಿಸುವ ಪರಿಸ್ಥಿತಿಯುಂಟಾಯಿತು. ಹೆಣ್ಣು, ಹೆಣ್ಣಿಗೇ ಶತ್ರುವಾದಂಥ ಸೇಡು ತೀರಿಸಿಕೊಳ್ಳುವ, ದೌರ್ಜನ್ಯಕ್ಕೀಡು ಮಾಡುವ ಮಟ್ಟಿಗೆ ಆಕೆಯ ಶಿಕ್ಷಣದ ಅರಿವು ಕಳೆದುಕೊಂಡು ಮೂರ್ಖಳಾಗಿ, ಮೂಢನಂಬಿಕೆಗೆ ಬಲಿಯಾಗಿದ್ದಳು. ಶತಮಾನಗಳುದ್ದಕ್ಕೂ ಹೀಗೆ ಮುಂದುವರೆದು ಮುಂದೆ ರಾಜಾರಾಮ್ ಮೋಹನ್‌ರಾಯ್ ಈಶ್ವರ ಚಂದ್ರವಿದ್ಯಾಸಾಗರ್ ಮಹಾತ್ಮಾಗಾಂಧಿ ಮುಂತಾದ ಸಮಾಜ ಚಿಂತಕರು ಸ್ತ್ರೀಯರಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿದರು. ಆದರೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಇಂದಿಗೂ ದೇಶದ ಮಹಿಳೆಯರಿಗೆಲ್ಲರಿಗೂ ಕನಿಷ್ಠ ಅಕ್ಷರ ಜ್ಞಾನಕೂಡ ಒದಗುತ್ತಿಲ್ಲವೆಂಬುದು ದುರಂತ ಸಂಗತಿಯೇ ಆಗಿದೆ.''[೨]

ಆಧುನಿಕತೆಯ ತುತ್ತತುದಿಯಲ್ಲಿ ಇದ್ದೇವೆ. ಇಂದು ಮಹಿಳೆಗೆ ಶಿಕ್ಷಣಾವಕಾಶಗಳಿಂದ ವಂಚಿತರಾಗುವ ಪ್ರಮೇಯವೇ ಇಲ್ಲ ಎಂಬ ಅಭಿಪ್ರಾಯವನ್ನು ಹೊಂದಿದವರಿಗೆ ನಿರಾಶೆಯ ಛಾಯೆ ಇನ್ನು ಬಿಟ್ಟಿಲ್ಲ. ಯಾಕೆಂದರೆ ಇಂದು ಮಹಿಳೆಗೆ ಶಿಕ್ಷಣಾವಕಾಶಗಳು ದೊರಕುತ್ತಿವೆ. ಸರ್ಕಾರ ಮಹಿಳಾ ಶಿಕ್ಷಣಕ್ಕೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಇದರಿಂದಾಗಿ ಮಹಿಳೆ ಕೇವಲ ಸಾಂಪ್ರದಾಯಿಕ ಕೋರ್ಸಗಳಿಗಷ್ಟೆ ಮೀಸಲಾಗದೇ ತಾಂತ್ರಿಕ, ವೈಜ್ಞಾನಿಕ, ಬಾಹ್ಯಾಕಾಶ ಮುಂತಾದ ತರಬೇತಿಯನ್ನು ಪಡೆಯುತ್ತಿದ್ದಾಳೆ. ಆದರೆ ಮಹಿಳೆ ಮತ್ತೊಬ್ಬರ ಮನೆಯ ಸೊತ್ತು. ಅವಳ ಸಂಪಾದನೆಯಿಂದ ನಮಗೇನೂ ಲಾಭವಿಲ್ಲ ಅದು ಗಂಡನ ಮನೆಯವರಿಗೆ ಸೇರುತ್ತದೆ. ಎಂಬ ಭಾವನೆಗಳೂ ಇನ್ನೂ ತಳ ಊರಿವೆ. ಹಾಗಾಗಿ ಇಂದು ಹೆಣ್ಣು ಮಕ್ಕಳಿಗೆ ತಂದೆಯ ಪ್ರತಿಷ್ಠೆಯ ದ್ಯೂತಕವಾಗಿ ಶಿಕ್ಷಣ ದೊರಕುತ್ತಿದೆ. ಇಷ್ಟಾದರೂ ಸ್ವಾಭಾವಿಕವಾಗಿ ಹೆಣ್ಣು ಹೊಂದಬೇಕಾದ ಗಂಡನ ಮನೆ ನೋಡಿಕೊಳ್ಳಲು ಬೇಕಾದ ಶಿಕ್ಷಣ ಹೊಂದಲೇ ಬೇಕು. ಇದರಿಂದ ಅವಳಿಗೆ ಬಿಡುಗಡೆಯಿಲ್ಲ.

ತಂದೆಯ ಪ್ರತಿಷ್ಠೆಯ ದ್ಯೂತಕವಾಗಿಯಾದರೂ ಮಹಿಳೆಗೆ ಶಿಕ್ಷಣ ದೊರಕುತ್ತಿದೆಯಲ್ಲ ಸಾಕು ಎಂದುಕೊಳ್ಳುವಾಗಲೇ, ಇದರ ಹಿಂದಿನ ಮರ್ಮದ ಅರಿವಾದರೇ ಭಯ ತುಂಬಿಕೊಳ್ಳುತ್ತದೆ. ಹೆಣ್ಣು ಶಿಕ್ಷಣಪಡೆದು ಉದ್ಯೋಗಾವಕಾಶವನ್ನು ಹೊಂದುವಂತಿಲ್ಲ. ತಂದೆಗೆ ಒಂದು ತರಹದ ಪ್ರತಿಷ್ಟೆಯಾದರೇ, ಗಂಡನ ಮನೆಯವರಿಗೆ ತಮ್ಮ ಸೊಸೆ ಇಷ್ಟು ಓದಿದವಳೆಂಬ ಪ್ರತಿಷ್ಠೆ ಅವಳ ಶಿಕ್ಷಣದ ಬಳಕೆಗೆ ಅವಕಾಶವೇ ಇಲ್ಲದಂತೆ ಮಾಡಿ ತಮ್ಮ ಪ್ರತಿಷ್ಠೆಯ ಬಲಿಪಶುವಾಗಿಸುತ್ತಿದ್ದಾರೆ. ತಮ್ಮ ಮಗನೇ ಸಾಕಷ್ಟು ದುಡಿದು ಗಳಿಸುವಾಗ, ಅವಳೇಕೆ ವೃಥಾ ಶ್ರಮಪಡಬೇಕು. ಆರಾಮ ಆಗಿ ಮನೆಯಲ್ಲಿದ್ದರೇ ಆಗದೇ, ತಮ್ಮ ಮನೆಯ ಮಹಾಲಕ್ಷ್ಮಿ ತಿಂದು ಉಂಡು ಮನೆಯಲ್ಲಿದ್ದುಕೊಂಡು, ಮನೆನೋಡಿಕೊಂಡು ಹೋದರೇ ಸಾಕು ಎಂಬ ಒಳ್ಳೊಳ್ಳೆಯ ಸಬೂಬುಗಳನ್ನು ಸೃಷ್ಟಿಸಿ, ತಮ್ಮ ಪರಿಕಲ್ಪನೆಯನ್ನು ಅಳಿಸದಂತೆ ನೋಡಿಕೊಳ್ಳುತ್ತಿದ್ದಾರೆ.

ಹಿಂದೆ ಹೆಣ್ಣು ಮಕ್ಕಳು ಓದು ಬರಹ ಕಲಿತರೆ ವಿಧವೆಯರಾಗುತ್ತಾರೆಂದು ಹೇಳಲಾಗುತ್ತಿತ್ತು. ಇಂದು ಶಿಕ್ಷಣದ ಉದ್ದೇಶದಲ್ಲಿ ಬದಲಾವಣೆಗಳಾಗಿವೆ. ವಿಧಿಯ ಆಟದಿಂದ ತಾನು ವಿಧವೆಯಾದರೇ ಅಥವಾ ಗಂಡನ ಮನೆಯ

ಆರ್ಥಿಕತೆಗಾಗಿ ತಾನು ದುಡಿಯಬೇಕಾದ ಪ್ರಸಂಗಬಂದರೇ ಹಾಗೂ ತನ್ನ ಮುಂದಿನ ಜೀವನದಲ್ಲಿ ತೊಂದರೆ ತೊಡಕುಗಳು ಬಂದರೆ ಮದುವೆಯಾದ ಮಗಳು ಮನೆಯಲ್ಲಿ ಬಂದುಕೊಡದಿರಲಿ, ಇಗಾಗಲೇ ಅವಳ ಬೆಳವಣಿಗೆಗೆ ಖರ್ಚುಮಾಡಿ, ವರದಕ್ಷಿಣೆ ಕೊಟ್ಟು ವಿವಾಹ ಮಾಡಿಕೊಟ್ಟ ಮೇಲೂ ಅವಳು ಬಂದು ಕುಳಿತರೇ, ಅವಳನ್ನು ನೋಡಿಕೊಳ್ಳುವವರು ಯಾರು? ಎಂಬ ಉದ್ದೇಶಕ್ಕಾಗಿ ಶಿಕ್ಷಣವನ್ನು ನೀಡಲಾಗುತ್ತದೆ. ಇನ್ನೊಂದು ಪ್ರಮುಖ ಉದ್ದೇಶವೆಂದರೇ ಗಂಡು ಹಾಗೂ ಗಂಡಿನ ಮನೆಯವರು ಹುಡುಗಿ ಕನಿಷ್ಠ ಎಂದರೂ ಒಂದು ಡಿಗ್ರಿಯನ್ನು ಪಡೆದಿರಬೇಕೆಂಬ ಉದ್ದೇಶದಿಂದ ಕನ್ಯೆಯ ಹುಡುಕಾಟ ಆರಂಭಿಸುತ್ತಾರೆ. ಹೀಗಾಗಿ ತಂದೆ-ತಾಯಿಗಳು ಡಿಗ್ರಿ ಇರದಿದ್ದರೇ ತಮ್ಮ ಮಗಳ ಮದುವೆಗಾಗಿ ತುಂಬಾ ಕಷ್ಟಪಡಬೇಕಾಗುವುದು. ತಮ್ಮ ನಿರೀಕ್ಷೆಯ ವರ ದೊರೆಯಲಾರನೆಂಬ ಕಾರಣಕ್ಕಾಗಿ ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಾರೆ. ಇಲ್ಲಿ ಶಿಕ್ಷಣದ ಅವಳ ಆಯ್ಕೆ ಅವಕಾಶಗಳಿಗೆ ಜಾಗವೇ ಇಲ್ಲ. ಯಾವುದೋ ಒಂದು ಡಿಗ್ರಿ ಮಾಡಿಸಬೇಕು. ಅದಕ್ಕಾಗಿ ತಮ್ಮ ಮೂಗಿನ ನೇರಕ್ಕೆ ಯೋಚಿಸಿ, ತಮ್ಮ ನಿರ್ಧಾರದ ಡಿಗ್ರಿಯನ್ನು ಮಗಳಿಗೆ ಕೊಡಿಸುತ್ತಾರೆ. ಇಷ್ಟೆಲ್ಲಾ ಆದರೂ ಅವಳು ದುಡಿಮೆಗೆ ಅವಕಾಶಗಳು ಕಡಿಮೆ. ಗಂಡನ ಮನೆಯವರು ದುಡಿ ಎಂದರೇ ದುಡಿಯಬೇಕು ಇಂಥ ಪರಿಸ್ಥಿತಿಗಳು ಇಂದು ಬಂದೊದಗುತ್ತಿವೆ.

ಇಷ್ಟೆಲ್ಲಾ ಆಗಿ ಹೆಣ್ಣು ಶಿಕ್ಷಣಪಡೆದು ಗಂಡನ ಆಸೆಯಂತೆ ಉದ್ಯೋಗಕ್ಕೆ ಹೋಗದೇ ಮನೆ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರೂ, ತನ್ನ ಮನೆಯ ಒಂದು ಸಣ್ಣ ವಿಚಾರದಲ್ಲೂ ನಿರ್ಧಾರ ಕೈಗೊಳ್ಳುವ ಹಾಗಿಲ್ಲ. ತನ್ನ ಅಭಿಪ್ರಾಯ, ಸಲಹೆ ಸೂಚನೆಗಳಿಗೆ ಅಲ್ಲಿ ಜಾಗವಿಲ್ಲವೆಂದಾಗಲೂ ಅವಳು ತನ್ನ ಕರ್ತವ್ಯಗಳನ್ನು ಚಾಚೂ ತಪ್ಪದೇ ನಿರ್ವಹಿಸಬೇಕು. ಆದರೆ ಹಕ್ಕುಗಳಿಗಾಗಿ ಮಾತ್ರ ಬೇಡಿಕೆ ಇಡುವಂತಿಲ್ಲ. ಅವಳ ಜನ್ಮ ಕೇವಲ ಬಾಧ್ಯತೆಗಳನ್ನು ನಿರ್ವಹಿಸುವುದಕ್ಕಾಗಿಯೆ ಮೀಸಲು ಎಂಬ ಭಾವನೆಗಳು ಭದ್ರವಾಗಿ ನೆಲೆ ನಿಂತಿವೆ. ಹಾಗಾಗಿ ಇದಕ್ಕೆ ಹೊರತಾಗಿ ಯಾವ ಹೆಣ್ಣು ನಡೆದುಕೊಂಡರೂ ಅವಳಿಗೆ ಅಪವಾದಗಳು ಕಟ್ಟಿಟ್ಟಿದ್ದು ಎಂದರೆ ಅತಿಶಯೋಕ್ತಿ ಆಗಲಾರದು. ಅವಳು ಶಿಕ್ಷಣಹೊಂದಿ ಯಾವುದೋ ವಿಷಯದ ಬಗ್ಗೆ ತಿಳುವಳಿಕೆ ಹೇಳಹೊರಟರೇ ಕಲ್ತಿದಿಯಾ ಅದನ್ನೆಲ್ಲಾ ನಮ್ಮ ಮುಂದೆ ಹೇಳಬೇಡ ಆ ಬೋಗಳೆ ಪುರಾಣ ಅಲ್ಲೆ ನಿಮ್ಮ ಶಾಲೆಯಲ್ಲೆ ಇಟ್ಟುಕೋ ಎನ್ನುತ್ತಾರೆ. ಹೆಣ್ಣು ಮಗಳು ಉದ್ಯೋಗಸ್ಥೆಯಾಗಿದ್ದು, ದಿಟ್ಟವಾಗಿ ಮಾತನಾಡಿದರೇ ಓದಿದ್ದಾಳೆ, ಉದ್ಯೋಗ ಇದೆ ಎಂಬ ಅಹಂ ಆಕೆಗೆ ಎಂಬ ಮಾತುಗಳು ಕೇಳಿಬರುತ್ತವೆ.

ಗಂಡು ತನಗಿಂತ ಹೆಚ್ಚಿಗೆ ಓದಿದ ಹುಡುಗಿಯನ್ನು ಮದುವೆಯಾಗುವುದಿಲ್ಲ. ಆದರೆ ಹೆಣ್ಣು ಕೆಲಸಂದರ್ಭಗಳಲ್ಲಿ ತನಗಿಂತ ಕಡಿಮೆ ಓದಿದವನನ್ನು ವಿವಾಹವಾಗಬೇಕಾಗುತ್ತದೆ. ಗಂಡನ ಮನೆಯ ಆರ್ಥಿಕ ಸ್ಥಿತಿ ಚೆನ್ನಾಗಿರದಿದ್ದರೇ ಮಾತ್ರ ಅವಳು ದುಡಿಯಬೇಕು, ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳುವುದು. ಆರ್ಥಿಕ ಸ್ಥಿತಿಯ ಸಮತೋಲನೆಗಾಗಿ ಕೈಗೊಳ್ಳುವ ಉದ್ಯೋಗ ಈ ಮೂರು ಜವಾಬ್ದಾರಿಗಳನ್ನು ಅವಳು ಯಾವುದೇ ಕೊರತೆಯಾಗದಂತೆ ನಿರ್ವಹಿಸಬೇಕು ಇಷ್ಟಾದರೂ ಅವಳು ತನ್ನ ಸಂಪಾದನೆಯನ್ನು ತನಗಾಗಿ ಬಳುಸುವಂತಿಲ್ಲ. ತನ್ನ ನಿರ್ಧಾರದಂತೆ ನಡೆಯುವಂತಿಲ್ಲ.

ಪರಿಸ್ಥಿತಿಗಳಲ್ಲಿ ಎಷ್ಟೆ ಬದಲಾದರೂ ಶಿಕ್ಷಣದ ಸಮಸ್ಯೆಗಳು ತಮ್ಮ ಮೂಲ ಸ್ವರೂಪವನ್ನು ಬದಲಾಯಿಸಿಕೊಂಡು, ಬೇರೊಂದು ಸ್ವರೂಪದ್ದವುಗಳಾಗಿ ಕಾಣಿಸಿಕೊಳ್ಳುತ್ತಿವೆ. ಬ್ರಾಹ್ಮಣರಲ್ಲಿ ಹೆಣ್ಣಿಗೆ ಶಿಕ್ಷಣದ

ನಿರಾಕರಣೆ ಮಾಡುತ್ತಿಲ್ಲ. ಆದರೆ ಅದರ ಆಯ್ಕೆ ಗಂಡಿನದಾಗಿದೆ. ಅದರ ಬಳಕೆಕೂಡ ಗಂಡಿನದೆ ಎಂದು ಅವಳನ್ನು ನಿಯಂತ್ರಿಸುತ್ತದೆ. ಎಲ್ಲಿ ತನನ್ನು ಮೀರಿಸಿಬಿಡುವಳೆಂಬ ಭಯ ಗಂಡಿನಲ್ಲಿದ್ದ ಕಾರಣ. ಅವಳಿಗೆ ಜ್ಞಾನದ ನಿರಾಕರಣೆ ನಡೆಯುತ್ತಿದೆ.

೪.೧.೪. ಧಾರ್ಮಿಕ ಸಂಸ್ಥೆ ಮತ್ತು ಬ್ರಾಹ್ಮಣ ಮಹಿಳೆ

ಧರ್ಮವೂ ಪ್ರಮುಖ ಸಾಮಾಜಿಕ ಸಂಸ್ಥೆಗಳಲ್ಲಿ ಒಂದಾಗಿದೆ. ಒಂದು ಸಮಾಜದ ಅಧ್ಯಯನ ಕೈಗೊಳ್ಳಬೇಕಾದರೇ ಅಲ್ಲಿ ಧರ್ಮವು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಧರ್ಮ ಎಂಬುದು 'ರಿಲಿಜನ್' ಎಂಬ ಲ್ಯಾಟಿನ್ ಶಬ್ದಮೂಲದಿಂದ ಉತ್ಪನ್ನಗೊಂಡಿದೆ. ಇದರ ಅರ್ಥ ಬಂಧಿಸು, ಒಟ್ಟಾಗಿ ಆಚರಿಸು ಎಂಬುದಾಗಿದೆ. ಪ್ರತಿಯೊಂದು ಪಾತ್ರದ ಹಿಂದೆ ಅದರದೇ ಆದ ಒಂದು ಧರ್ಮವಿದೆ ಎಂದು ಹೇಳಲಾಗುತ್ತದೆ. ಮನುಷ್ಯ ಧರ್ಮ, ಸ್ತ್ರೀಧರ್ಮ, ಪುರುಷ ಧರ್ಮ, ವಿಧವಾಧರ್ಮ, ವಿಧುರ ಧರ್ಮ, ಹೀಗೆ ಒಂದೇ ಧರ್ಮವೂ ಕೂಡ ಹಲವು ಪಾತ್ರಮಾಧರಿಗಳಿಗೆ ಅನುಗುಣವಾಗಿ ವಿಭಜನೆಗೊಂಡಿದೆ. ಇದು ಸಮಾಜ ಜೀವನದಲ್ಲಿ ಮಾನವ ಸಂಕುಲ ನೈತಿಕವಾಗಿ ಜೀವಿಸಲು ಇರುವಂಥಹ ಒಂದು ಸಂಸ್ಥೆ, ಇದು ಯಾವುದು ಸರಿ ಯಾವುದು ಒಳ್ಳೆಯದು, ಯಾವುದು ಕೆಡಕು, ಕೆಟ್ಟದ್ದು ಎಂದು ತಿಳಿಸುತ್ತದೆ ಈ ಮೂಲಕ ನಡೆದರೇ ಯಾರಿಗೂ ಹೆದರುವಂತಿಲ್ಲ. ಅದಕ್ಕಾಗಿಯೇ "ಧರ್ಮೊ ರಕ್ಷತಿ ರಕ್ಷಿತಃ" ಅಂದರೆ ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ ಎಂದು ಹೇಳಲಾಗುತ್ತದೆ.

ಧರ್ಮ ಎಂಬ ಸಂಸ್ಥೆಯ ಮೂಲ ಎಂದರೇ ನಂಬಿಕೆ ಎಂದು ಹೆಳಬಹುದು. ಇದರಲ್ಲಿ ಆಚರಣೆಗಳೂ ಕೂಡ ಪ್ರಮುಖವಾದ ಪಾತ್ರವಹಿಸುತ್ತವೆ. ಅಂದರೆ ನಂಬಿಕೆಗಳು ಮುಂದುವರಿಯಬೇಕಾದರೇ ಅಥವಾ ನಿರಂತರವಾಗಿರಬೇಕಾದರೇ ಆಚರಣೆಗಳು ಅವಶ್ಯಕವಾಗಿವೆ. ಅಂದರೆ ನಂಬಿಕೆ ಮತ್ತು ಆಚರಣೆಗಳು ಒಂದೆ ನಾಣ್ಯದ ಎರೆಡು ಮುಖಗಳಂತೆ ಕೆಲಸಮಾಡುತ್ತವೆ. ಮನುಷ್ಯರಿಗೆ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಧರ್ಮವು ನೆರವಾಗುತ್ತದೆ ಮತ್ತು ಪ್ರೇರಣೆಯೂ ಆಗಿದೆ ಎಂದು ಹೇಳಬಹುದಾಗಿದೆ.

"ಧರ್ಮವು ಸಾಮಾಜೀಕರಣದ ಅತ್ಯಂತ ಪ್ರಮುಖವಾದ ನಿಯೋಗಿಗಳಲ್ಲಿ ಒಂದಾಗಿದೆ. ಜೀವನವನ್ನು ಕುರಿತ ವ್ಯಕ್ತಿಗಳ ದೃಷ್ಟಿಕೋನಗಳನ್ನು ಧರ್ಮ ಪ್ರಭಾವಿಸುತ್ತಾದ್ದರಿಂದ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಧರ್ಮದ ಪಾತ್ರ ಮಹತ್ವವಾದುದು. ನ್ಯಾಯ-ಅನ್ಯಾಯ ಹಾಗೂ ಸರಿ ತಪ್ಪುಗಳನ್ನು ಕುರಿತ ಕಲ್ಪನೆಗಳು ಸೇವೆ, ಶಿಸ್ತು, ಸಾಮಾಜಿಕ ಕಾಳಜಿ, ಪ್ರಗತಿಪರ ನಿಲುವುಗಳು ಅಥವಾ ಪ್ರಗತಿವಿರೋಧಿ ಧೋರಣೆಗಳು ಇಂತಹ ಮೌಲ್ಯಗಳನ್ನು ಬೆಳೆಸುವುದರಲ್ಲಿ ಧರ್ಮದ ಕೊಡುಗೆ ಅಪಾರ. ಸಮಾಜ ಮನ್ನಿತ ನಿಯಮಗಳನ್ನು ಪಾಲನೆ ಮಾಡುವಂತೆ ಜನರನ್ನು ಧರ್ಮ ಪ್ರೇರೆಪಿಸುವುದಲ್ಲದೇ, ನಿಯಮಗಳ ಎಲ್ಲ ಘಟನೆಗೆ ಶಿಕ್ಷೆಯನ್ನು ವಿಧಿಸುತ್ತದೆ. ಧರ್ಮಗಳು ಹಲವಾರು ಇದ್ದರೂ, ಎಲ್ಲ ಧರ್ಮಗಳೂ ದಯೆ, ಸತ್ಯಸಂಧತೆ ಪ್ರಾಮಾಣಿಕತೆ, ಗುರುಹಿರಿಯರಿಗೆ ಗೌರವ ಮುಂತಾದ ಮೌಲ್ಯಗಳನ್ನು ಎತ್ತಿಹಿಡಿದಿವೆ. ಇಂತಹ ಮೌಲ್ಯಗಳು ಕಾಲಾತೀತವಾಗಿದ್ದು ಜಗತ್ತಿನಾದ್ಯಂತ ಬಹುತೇಕ ಸಾಮಾಜಗಳಲ್ಲಿ ಇಂದಿಗೂ ಮನ್ನಣೆಯನ್ನು ಪಡೆದಿವೆ. ಪ್ರತಿಯೊಂದು ಧರ್ಮಕ್ಕೂ ಆ ಧರ್ಮದ ಮೂಲ ತತ್ವವನ್ನೊಳಗೊಂಡ ಗ್ರಂಥಗಳು ಇದ್ದು, ಜನ ಜೀವನವನ್ನು ಈ ಧರ್ಮಗ್ರಂಥಗಳಲ್ಲಿ ಅಡಕವಾಗಿರುವ ತತ್ವಗಳು ನಿರ್ದೇಶಿಸುತ್ತವೆ."[೨೫]

'ಧರ್ಮವು ಶಾಂತಿಬೋಧನೆಯ, ಅಹಿಂಸಾ ಮಾರ್ಗತೋರುವ ಸಹಬಾಳ್ವೆಯ ಸಾಧನವೆನ್ನಲಾಗಿದೆ.ಆದರೆ ವಾಸ್ತವವಾಗಿ ಹಾಗೆ ಆಗುತ್ತಿಲ್ಲ. ಕೋಮುಗಲಭೆಗಳಾಗಲಿ, ಯುದ್ಧ ಪ್ರಕೃತಿ ವಿಕೋಪಗಳಂತಹ ವಿಪತ್ತುಗಳುಂಟಾಗಲಿ, ಲೈಂಗಿಕ ದೌರ್ಜನ್ಯ ಮೂಲಭೂತವಾದ ಒಂದು ಪ್ರಬಲ ಅಸ್ತ್ರವಾಗಿ ಮಹಿಳೆಯರನ್ನು ಘಾಸಿಗೊಳಿಸುತ್ತದೆ. ಇದಕ್ಕೆ ಗುರಿಯಾಗುವ ಮಹಿಳೆಗೆ ಧರ್ಮದ ಆಸರೆ, ನೆರವು ಒದಗುತ್ತಿಲ್ಲ. ಧರ್ಮ ಮಹಿಳಾ ಪ್ರಗತಿಗೆ ಅಡ್ಡವಾಗುತ್ತದೆ. ಇಡೀ ಸ್ತ್ರೀ ಕುಲವೇ ಶೋಷಣೆಗೆ ಗುರಿಯಾಗುತ್ತಿದೆ. ಧಾರ್ಮಿಕ ಕರಾಳ ಮುಖವಾಡದಲ್ಲಿ ಅನೇಕ ಕಟ್ಟಲೆಗಳನ್ನು (ದೇವದಾಸಿ, ಜೋಗತಿ ಮುಂತಾದವು) ಇಂದಿಗೂ ನಡೆಸಲಾಗುತ್ತಿದೆ. ಮಹಿಳೆಯರ ವಿಷಯದಲ್ಲಿ ಧರ್ಮ ದಾರಿ ತಪ್ಪಿದೆಯೆಂದೇ ಹೇಳಬಹುದು. ಮಹಿಳೆಯರು ಶಿಕ್ಷಣ ಸ್ವಾವಲಂಬನೆಯ ಮೂಲಕ ಎರಡನೆಯ ಸ್ಥಾನದಿಂದ ಮೇಲೆರಿ ಸಮಾಜ ವ್ಯವಸ್ಥೆಯಲ್ಲಿ ಸಮಾನ ಸ್ಥಾನಮಾನಗಳಿಸಬೇಕಾಗಿದೆ. ಮೂಢನಂಬಿಕೆ, ಮಿಥ್ಯೆಗಳನ್ನು ತಪ್ಪು ಗ್ರಹಿಕೆಗಳನ್ನು ಬದಿಗೊತ್ತಿ ಭ್ರಮೆ, ನಿಗೂಢ ಅಥವಾ ಸುಪ್ತ ಭೀತಿಗಳಿಂದ ಪಾರಾಗಬೇಕು. ಬೌದ್ಧಿಕತೆಯನ್ನು ಕಳೆದುಕೊಳ್ಳದೆ ಸ್ತ್ರೀ ಧರ್ಮ, ಪುರುಷ ಧರ್ಮವೆಂಬ ಇಬ್ಬಗೆಯ ನೀತಿಯನ್ನು ಬಿಟ್ಟು ಸಮಾಜದ ಏಳಿಗೆಗಾಗಿ ಶ್ರಮಿಸಬೇಕು. ಆಗ ಮಾತ್ರ ಧರ್ಮವನ್ನು ಹೊಸದಾಗಿ ನಿರ್ವಚಿಸಲು ಸಾಧ್ಯವಾದೀತು ಅಷ್ಟೆ ಅಲ್ಲ, ಧರ್ಮ ನಿರಪೇಕ್ಷತೆಯ ನೆಲೆಗಟ್ಟಿನಲ್ಲಿ ಇಂದಿನ ಮಹಿಳೆ ತನ್ನನ್ನು ತಾನು ನಿರ್ವಚಿಸಿಕೊಳ್ಳಬೇಕು. ಧರ್ಮದ ಕ್ರೂರ ಮುಖವಾಡದ ಹಿಂದೆ ಇನ್ನೂ ಜೀವಂತವಾಗಿರುವ ಅನೇಕ ಕೆಟ್ಟಪದ್ಧತಿಗಳನ್ನು ಮೂಢನಂಬಿಕೆಯಿಂದ ಅನುಸರಿಸಿಕೊಂಡು ಬರುತ್ತಿರುವುದಕ್ಕೆ ಶಿಕ್ಷಣದ ಕೊರತೆಯೇ ಮುಖ್ಯಕಾರಣ. ಧರ್ಮದ ಹೆಸರಿನಲ್ಲಿ, ಧರ್ಮದ ಚಿನ್ನದ ಚೌಕಟ್ಟಿನಲ್ಲಿ ನಾನಾ ರೀತಿಗಳಿಂದ ಹೆಣ್ಣನ್ನು ಲೈಂಗಿಕ ದೌರ್ಜನ್ಯಕ್ಕೊಳಪಡಿಸಲಾಗುತ್ತಿದೆ. ಇದಕ್ಕಾಗಿ ಪುರುಷರು ವಿವಿಧ ಸಾಮಾಜಿಕ ವೇಷಗಳನ್ನು ಕಟ್ಟುತ್ತಾರೆ. ಇಂಥ ವ್ಯಕ್ತಿ ಹಾಗೂ ಘಟನೆಗಳನ್ನು ಹೆಣ್ಣು ತಾನೇ ಬಯಲಿಗೆಳೆಯಬೇಕು. ಇದು ವಿಪರ್ಯಾಸವಾಗಿ ಕಾಣಬಹುದು. ಆದರೆ ಇಂದಿನ ಬದುಕಿನಲ್ಲಿ ಅನಿವಾರ್ಯವಾಗುತ್ತದೆ. ಇದರಿಂದ ಇಡೀ ಸ್ತ್ರೀ ಕುಲವೇ ಶೋಷಣೆಗೆ ಒಳಗಾದ ವಿಷಸತ್ಯ ಹೊರಬರುತ್ತದೆ.'[೨೬]

ಧರ್ಮ ಎಂಬ ಸಂಸ್ಥೆ ಸಾಮಾಜಿಕ ನೀತಿ ನಿಯಮಗಳನ್ನು ರೂಪಿಸುವಲ್ಲಿ ಹಾಗೂ ಆಚರಣೆಗಳನ್ನು ನಿರ್ದೇಶಿಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರುವುದರಿಂದ, ಮಹಿಳೆಯರನ್ನು ಕುರಿತ ಸಮಾಜದ ಧೋರಣೆಗಳು ಯಾವ ಸ್ವರೂಪವನ್ನು ಪಡೆಯುತ್ತವೆ ಎಂಬುದನ್ನು ಪ್ರಭಾವಿಸುತ್ತದೆ. ಧರ್ಮವು ಪುರುಷ ಪ್ರಾಧಾನ್ಯವಾಗಿದೆ. ಪುರುಷನಿಂದಲೇ ಹುಟ್ಟಿ ಬೆಳೆದುದರಿಂದ ಹೆಣ್ಣಿಗೆ ಒಂದು ವ್ಯಕ್ತಿತ್ವವಿದೆ, ಚಹರೆಯಿದೆ. ಜ್ಞಾನವನ್ನು ಪಡೆಯುವ ಹಕ್ಕಿದೆ. ಎಂಬುದಕ್ಕೆ ಪ್ರಾಮುಖ್ಯತೆಯನ್ನೆ ನೀಡಿಲ್ಲ. ಧರ್ಮವು ಮಾನವೀಯತೆಯನ್ನು ಸಾರಿ ಹೇಳುತ್ತದೆ. ಆದರೆ ಅನೇಕ ಮಹಿಳೆಯರ ಹಿಂಸೆಗೆ, ಶೋಷಣೆಗೆ ಇಡುಮಾಡುತ್ತದೆ. ಹೆಣ್ಣಿಗೆ ಧರ್ಮವು ಗಂಡಿಗಿಂತ ಹೆಚ್ಚು ನಿರ್ಭಂಧಗಳನ್ನು ಹಾಕಿದೆ. ಅಲ್ಲದೆ ಇದು ಹೆಣ್ಣಿನ ಬಗೆಗೆ ದ್ವಿಮುಖ ಭಾವನೆಗಳನ್ನು ಪ್ರತಿಪಾದಿಸುತ್ತದೆ. ಹೆಣ್ಣು ಗಂಡಿನ ಸಹಭಾಗಿಯಾಗಿ ಧಾರ್ಮಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸಬೇಕು. ಆದರೆ ಒಬ್ಬಳೇ ಧರ್ಮವನ್ನು ಆಚರಿಸಬಾರದೆಂದು ಹೇಳುತ್ತದೆ. ಈ ಮೂಲಕ ಅವಳನ್ನು ಪರಾಧಿನತೆಗೆ ತಳ್ಳುತ್ತವೆ ಮತ್ತು ಅದರಿಂದ ಹೊರಬರದಂತೆ ನೋಡಿಕೊಳ್ಳುತ್ತಿವೆ.

ಧರ್ಮ ಹೆಣ್ಣನ್ನು ಇಕ್ಕಟ್ಟಿನಲ್ಲಿ ಸಿಲುಕಿಸುತ್ತದೆ. ಅಂದರೆ ಈ ಧರ್ಮವನ್ನೆ ಸ್ತ್ರೀ ಧರ್ಮ, ವಿಧವಾ ಧರ್ಮ, ಗೃಹಿಣಿ ಧರ್ಮ ಎಂದು ವಿಭಾಗಮಾಡುತ್ತದೆ. ಆಯಾ ಪಾತ್ರಗಳಿಗೆ ತಕ್ಕಂತೆ ಆದರ್ಶರಾಗಿ ನಡೆದುಕೊಳ್ಳುವಂತೆ ಸೂಚಿಸುತ್ತದೆ. ಇದಕ್ಕೆ ಸಹಕಾರವನ್ನು ಮಾತ್ರ ಗಂಡಿನಿಂದ ನಿರೀಕ್ಷಿಸುವಂತಿಲ್ಲ. ಆಚರಿಸುವಂತೆ ಮಾಡುವುದೂಕೂಡ ಅದೇ. ಆದರೆ ಅದಕ್ಕೆ ಸೂಕ್ತ ಸಹಕಾರವನ್ನು ನೀಡದಿರುವ ಗಂಡಸನ್ನು ದೋಷಾರೋಪಣೆಮಾಡದೇ, ಅಂತಹ ಸನ್ನಿವೇಶದಲ್ಲಿಯೂ ಧರ್ಮಬಾಹಿರವಾಗಿ ನಡೆದುಕೊಳ್ಳದಂತೆ ಅವಳಿಗೆ ಕಟ್ಟುಪಾಡನ್ನು ವಿಧಿಸುತ್ತದೆ. ಧರ್ಮದ ಮೂಲ ಸ್ವರೂಪವನ್ನು ತಿಳಿದುಕೊಳ್ಳಲು ಅವಕಾಶ ನೀಡದೇ, ವೇದಜ್ಞಾನ ನಿರಾಕರಿಸುತ್ತದೆ. ಹೆಣ್ಣಿಗೆ ಗಂಡನ ಮನೆಯಲ್ಲಿ ಬಾಳುವಂತಹ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತದೆ. ಅವಳಿಗೆ ಹೊಂದಾಣಿಕೆ, ಸಹಕಾರ ಮನೋಭಾವ, ಸೋಲೊಪ್ಪಿಕೊಳ್ಳುವ ಗುಣವನ್ನು ಬೆಳೆಸಿಕೊಳ್ಳುವಂತೆ ಆದೇಶಿಸುತ್ತದೆ. ಆ ರೀತಿ ನಡೆದುಕೊಳ್ಳದಿದ್ದರೇ ಅಪವಾದಗಳನ್ನು ನೀಡುತ್ತದೆ.

ಧರ್ಮವು ಸ್ತ್ರೀ ಪುರುಷ ಇಬ್ಬರಿಗೂ ಸಮಾನ ಅವಕಾಶ ನೀಡದೇ ಬೇಧಭಾವ ಮಾಡುತ್ತದೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ ವಾಸ್ತವದಲ್ಲಿ ಈ ಸಂಸ್ಥೆಗೆ ಜನ್ಮನೀಡಿ, ಬೆಳೆಸಿ ತಮ್ಮ ಪರವಾಗಿ ಪುರುಷರೇ ವ್ಯಾಖ್ಯಾನ ಮಾಡಿಕೊಂಡಿದ್ದಾರೆ. ಹೆಣ್ಣಿನಲ್ಲಿ ಇದನ್ನು ತಮ್ಮ ಸೃಷ್ಟಿ ಅಲ್ಲ ಋಷಿಗಳು ದೇವರುಗಳ ಸೃಷ್ಟಿ ಎಂದು ಹೇಳಿ ನಂಬಿಸಲಾಗುತ್ತದೆ. ಧರ್ಮವು ಕಷ್ಟಕಾಲದಲ್ಲಿ ರಕ್ಷಣೆಯನ್ನು ನೀಡುತ್ತದೆ. ಅವಳಿಗೆ ಇಂಥಹ ಸ್ಥಿತಿಗಳು ಹಲವಾರು ಹೀಗಾಗಿ ಉಪವಾಸ ಆಚರಣೆಗಳನ್ನು ಮಾಡಬೇಕೆಂದು ಹೇಳುತ್ತದೆ. ಧರ್ಮವು ಹೆಣ್ಣಿಗೆ ದ್ವಿತಿಯ ದರ್ಜೆಯನ್ನು ನೀಡಿ ಇನ್ನೊಬ್ಬರ ಅಡಿಯಾಳಾಗಿಸುತ್ತದೆ. ಮೋಕ್ಷದ ಕಲ್ಪನೆಯನ್ನು ಸಾರುತ್ತಾ ಜೀವನ ಪರ್ಯಂತ ಗಂಡು ಕುಲಕ್ಕೇನೆ ಜೀತವಾಗಿರುವಂತೆ ಪ್ರೇರೆಪಿಸುತ್ತದೆ. ಸಮಾಜದ ಸಂದರ್ಭಕ್ಕೆ ಅನುಗುಣವಾಗಿ ಈ ಸಂಸ್ಥೆಯ ಬದಲಾಗಬೇಕು. ಬದಲಾಗುತ್ತಿದೆ. ಆದರೆ ಮತ್ತದೆ ದ್ವಿತೀಯ ದರ್ಜೆಯೊಂದಿಗೆ ಮುಂದುವರಿದು ಅವಲಂಬನೆಯನ್ನು ತೀವ್ರಗೊಳಿಸಿದೆ. ಸಮಾಜದಲ್ಲಿ ಗಂಡಸು ಇಲ್ಲದೇ ಸುಖವಾಗಿರಲು ಸಾಧ್ಯವಿಲ್ಲವೆನ್ನುವಂತೆ ಅನೇಕ ದುಶ್ಕೃತ್ಯಕ್ಕೆ ಪ್ರೇರಣೆನೀಡಿದೆ. ಇದು ಅನೇಕ ಸಮಾಜಿಕ ಸಮಸ್ಯೆಗಳಿಗೆ ಮಣೆ ಹಾಕುತ್ತಾ ಮುನ್ನಡೆದಿದೆ.

ಮೇಲಿನ ಎಲ್ಲಾ ಸಂಸ್ಥೆಗಳನ್ನು ಗಮನಿಸಿದಾಗ ಕಂಡುಬರುವದೆನೆಂದರೇ ವಿವಿಧ ಸಾಮಾಜಿಕ ಸಂಸ್ಥೆಗಳಲ್ಲಿ ಹೆಣ್ಣಿಗೆ ಎರಡನೇಯ, ಪೂರಕಸ್ಥಾನವನ್ನು ಕಲ್ಪಿಸಲಾಗಿದೆ. ಈ ಸಂಸ್ಥೆಗಳಲ್ಲಿ ಹೆಣ್ಣಿನ ಪ್ರಾಮುಖ್ಯತೆ ಅಷ್ಟಾಗಿ ಕಂಡುಬರುವದಿಲ್ಲ. ಅಲ್ಲಿ ಪುರುಷನೇ ಮಹತ್ವವನ್ನು ಪಡೆದುಕೊಳ್ಳುತ್ತಾನೆ. ಪ್ರತಿಯೊಂದು ಸಂಸ್ಥೆಯು ತನ್ನದೇ ಆದಂತಹ ಧರ್ಮವನ್ನು ಪ್ರತಿಪಾದಿಸುತ್ತದೆ. ಇವೆಲ್ಲವೂ ಪುರುಷ ಪ್ರಧಾನತೆಯನ್ನೆ ಮತ್ತೆ ಮತ್ತೆ ಒತ್ತಿಹೇಳುತ್ತವೆ. ಇದು ಹೆಣ್ಣು ವಿವಿಧ ಸಂಸ್ಥೆಗಳಲ್ಲಿ ಹೆಣ್ಣು ಪ್ರಬಲಳಾಗಲು ಬೇರೆ ಬೇರೆ ರೀತಿಗಳಲ್ಲಿ ಅವಳನ್ನು ಹಿಡಿದು ಹಾಕುವ ಮೂಲಕ ತನ್ನ ಒಳಗಿನ ನಿಯಂತ್ರಣ ತಪ್ಪುವ ಭಯವನ್ನು ಒಪ್ಪಿಕೊಳ್ಳಲು ನಿರಾಕರಿಸಿದೆ. ಅದಕ್ಕಾಗಿಯೇ ಆಧುನಿಕರಣದ ಈ ಸಂದರ್ಭದಲ್ಲೂ ಅವಳನ್ನು ಹತ್ತಿಕ್ಕಲು ಇಲ್ಲ ಸಲ್ಲದ ಕಾರಣಗಳನ್ನು ಹುಟ್ಟುಹಾಕುತ್ತಿದೆ.

ಧರ್ಮವು ಐಕ್ಯತೆಯ ಕೊಂಡಿ ಎಂದುಹೇಳಿದ್ದಾರೆ. ಆದರೆ ಇದು ಹಲವು ಬಿರುಕುಗಳನ್ನು ತರುವ ಕೋಮು ಭಾವನೆಯನ್ನು ಪ್ರಚೋದಿಸುವ ಇಲ್ಲಿ ಮತ್ತೆ ಹೆಣ್ಣು ಬಲಿಪಶುವಾಗುವಂತೆ ಮಾಡುತ್ತದೆ. ಕುಟುಂಬ ರಕ್ಷಣೆ,

ಭದ್ರತೆ ನೀಡುತ್ತದೆ. ಇದು ಅವಳ ಭವ್ಯಭವಿಷ್ಯಕ್ಕೆ ಕಡಿವಾಣ ಹಾಕುತ್ತದೆ. ವಿವಾಹ ಮೋಕ್ಷಕ್ಕೆ ದಾರಿ ಮಾಡಿಕೊಡುತ್ತದೆ. ಇದರಿಂದ ಹೆಣ್ಣು ಸಮಸ್ಯೆಗಳ ಜಾಲಕ್ಕೆನೇ ತುತ್ತಾಗುವಂತೆ ಮಾಡುತ್ತದೆ. ಇದು ಅವಳ ಜೀವನ ವಿಧಾನವನ್ನು ಬದಲಿಸಿ, ತನಗೆ ವಿರುದ್ಧವಾಗಿದ್ದರೂ ಹೊಂದಿಕೊಂಡು ಬಾಳಲು ಹೇಳುತ್ತದೆ. ಶಿಕ್ಷಣ ಅದು ಅವಳನ್ನು ಸಬಲಳನ್ನಾಗಿಸದೇ 'ಕೂಪಮಂಡೂಕ'ದಂತೆ ಕುಟುಂಬ, ವಿವಾಹದಿಂದ ಬೇರೆ ಜೀವನವಿಲ್ಲವೆಂದು ಹೆಳುತ್ತದೆ. ಆರ್ಥಿಕತೆಯಲ್ಲಿ ಅವಳ ಪಾಲನ್ನು ನಿರಾಕರಿಸುತ್ತದೆ. ತನ್ನ ಕುಟುಂಬಕ್ಕಾಗಿ ತನಗಾಗಿ ದುಡಿಯುತ್ತಿದ್ದಾಳೆಂದು ಹೆಳುತ್ತದೆ. ಆದರೆ ಆದಾಯವನ್ನು ಮಾತ್ರ ಅವಳ ಬಳಕೆಗೆ ನೀಡಿಲ್ಲ. ಅಷ್ಟೆ ಅಲ್ಲ ಅವಳ ಆದಾಯ ಅನುತ್ಪಾದಕ ರೀತಿಯಲ್ಲಿ ವರ್ತಿಸುತ್ತದೆ. ರಾಜಕೀಯ ಅವಳಿಗೆ ಸ್ಥಾನಮಾನ ನೀಡಿದೆ ಆದರೆ Main Streem ಗೆ ಬರಲು ಅವಕಾಶ ನೀಡಿಲ್ಲ. ಸ್ವಂತ ನಿರ್ಧಾರತೆಗೆದುಕೊಳ್ಳಲು ಅವಕಾಶ ನೀಡಿಲ್ಲ. ಅವಳ ಅಸ್ಮಿತತೆಯನ್ನು ಒಪ್ಪಿಕೊಂಡರೂ ಸ್ತ್ರೀಯ ಸಮಾನ ಚಹರೆಯನ್ನು ನಿರಾಕರಿಸುತ್ತದೆ ಎಂದು ಹೇಳಬಹುದು.

೪.೧.೫. ಆರ್ಥಿಕ ಸಂಸ್ಥೆ ಮತ್ತು ಬ್ರಾಹ್ಮಣ ಮಹಿಳೆ

ಮಹಿಳೆಯ ಸ್ಥಾನಮಾನವನ್ನು ಅವಲೋಕಿಸಬೇಕಾದರೇ, ಅವಳ ಆರ್ಥಿಕ ಪರಿಸ್ಥಿಯನ್ನು ಗಮನಿಸುವುದು ಅವಶ್ಯವೆನಿಸುತ್ತದೆ. ಈ ಆರ್ಥಿಕ ಪರಿಸ್ಥಿತಿಯು ಸಮಾಜದಲ್ಲಿ ಅವಳು ಭದ್ರತೆಯನ್ನು ತೋರಿಸುತ್ತದೆ ಎಂದು ಹೇಳಬಹುದು. ''ಆರ್ಥಿಕ ಸಂಸ್ಥೆಯ ಜವಾಬ್ದಾರಿ ಎಲ್ಲ ಸಮಾಜಗಳಲ್ಲೂ ಆ ಸಮಾಜದ ಸದಸ್ಯರಿಗೆ ಜೀವನಕ್ಕೆ ಅವಶ್ಯವಾದ ಹಾಗೂ ಅಭಿವೃದ್ಧಿಗೆ ಪೂರಕವಾದ ವಸ್ತುಗಳು ಹಾಗೂ ಸೇವೆಗಳನ್ನು ಒದಗಿಸುವುದೇ ಆಗಿದೆ. ಜೀವನಾವಕಾಶಗಳು ಎಂದರೇ ಪ್ರಮುಖವಾಗಿ ಆಹಾರ, ಬಟ್ಟೆ, ವಸತಿ, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ ರಕ್ಷಣೆ ಸಾರ್ವಜನಿಕ ಸೇವೆಗಳು ಮುಂತಾದವು. ಅಭಿವೃದ್ಧಿ ಎಂದರೇ ಜೀವನದ ಗುಣಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ಇರುವಂಥ ಅವಕಾಶಗಳು. ಜೀವನ ನಿರ್ವಹಣೆ ಮತ್ತು ಅಭಿವೃದ್ಧಿಯ ಸಾಧನೆ ಇವೆರೆಡಕ್ಕೂ ಅವಶ್ಯವಾದ ನೆರವನ್ನು ಒದಗಿಸುವುದು ಆರ್ಥಿಕ ಸಂಸ್ಥೆಯೇ ಆಗಿರುವುದರಿಂದ ಯಾವುದೇ ಸಮಾಜದಲ್ಲಿ ಆರ್ಥಿಕ ವ್ಯವಸ್ಥೆಯ ಪಾತ್ರ ಬಹುಮುಖ್ಯವಾದುದು.''[೨೨]

''ಕೃಷಿ ಪ್ರಧಾನ ಸಮಾಜಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನವಾಗಿ ಭಾಗವಹಿಸುತ್ತಿದ್ದರು. ಆಗ ಹೆಣ್ಣು ಗಂಡುಗಳಲ್ಲಿ ಮೇಲುಕೀಳು ಎಂಬ ಭಾವನೆಗೆ ಆಸ್ಪದವಿರಲಿಲ್ಲ. ಹೆಣ್ಣು ಮನೆಯಲ್ಲಿ ನಿಂತು ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡ ತರುವಾಯ ಮಹಿಳೆಯ ಸ್ಥಾನವೂ ಮನೆಯೊಳಗೆ ಮಾತ್ರ ಸೀಮಿತಗೊಂಡಿತು. ಜೊತೆಗೆ ಮಡಿ ಮೈಲಿಗೆಗಳ ಮೂಢನಂಬಿಕೆಯ ಜಾಲವೂ ಸೇರಿ ಮಹಿಳೆಯರು ಕೃಷಿ ಉಪಕರಣಗಳನ್ನು ಮುಟ್ಟದಂತೆ, ಭೂಮಿಯಲ್ಲಿ ಉಳುಮೆ ಮಾಡವುದಕ್ಕೆ ನಿರ್ಭಂಧಿಸಲಾಯಿತು. ಕೃಷಿ ಆಧಾರಿತ ಗೃಹ ಕೈಗಾರಿಕೆಗಳಲ್ಲಿ ಸ್ತ್ರೀಯರು ಭಾಗವಹಿಸುತ್ತಿದ್ದಾಗ್ಯೂ, ಕೈಗಾರೀಕಿಕರಣವಾದ ಮೇಲೆ ಮಹಿಳೆಯರು ಹಿಂದೆ ಬಿದ್ದರು. ಎಂದರೆ ತರಬೇತಿ, ಕೌಶಲ್ಯ ಶಿಣದ ಅಗತ್ಯವಿದ್ದುದರಿಂದ ಪುರುಷರು ಅವೆಲ್ಲವನ್ನು ತಾವೇ ಪಡೆಯಲು ಮುಂದಾದರು. ಅಷ್ಟೇ ಅಲ್ಲ. ಆರ್ಥಿಕ ಉತ್ಪಾದನೆಯಲ್ಲಿ ತೊಡಗುವುದೊಂದೆ ಅಲ್ಲ. ಗಳಿಕೆಯ ನಿರ್ವಹಣೆಯಲ್ಲಿ ಕೂಡ ಅಷ್ಟೇ ಜವಾಬ್ದಾರಿ ಹೊಂದಿರಬೇಕು. ಆಗ ಮಾತ್ರ ಸ್ವಾತಂತ್ರ್ಯದ ಯುಕ್ತ ಉಪಯೋಗವಾಗುತ್ತದೆ. ಮನೆಯ ಹೊರಗಿನ ಕೆಲಸಸ ಹಾಗೂ ಮನೆಯ

ಒಳಗಿನ ಕೆಲಸವೆಂಬ ವಿಭಾಗ ಉಂಟಾಗಿ ಸಹಜವಾಗಿಯೇ ಮೊದಲ ವಿಭಾಗದಲ್ಲಿರುವ ಪುರುಷರಿಗೆ ಆದಾಯ ಹಾಗೂ ಸಾಮಾಜಿಕ ಮಾನ್ಯತೆ, ಯಜಮಾನಿಕೆ ಎಲ್ಲ ದೊರೆತವು. ಮನೆಯೊಳಗಿದ್ದ ಮಹಿಳೆಯ ದುಡಿಮೆಗೆ ಆದಾಯವೂ ಮಾನ್ಯತೆಯೂ ಇಲ್ಲದಂತಾಗಿ ಕೇವಲ ಗೃಹಿಣಿ, ಮನೆಯೊಡತಿ ಮುಂತಾಗಿ ಹೆಸರಿಸಲಾಯಿತು. ಆಹಾರ ತಯಾರಿಕೆ, ಶುಚಿತ್ವ ಪಾತ್ರೆ ಬಟ್ಟೆಗಳನ್ನು ಚೊಕ್ಕಟಗೊಳಿಸಿ, ಮಕ್ಕಳ ಇತರರ ಯೋಗಕ್ಷೇಮವನ್ನು ನೋಡಿಕೊಳ್ಳುವ ಕರ್ತವ್ಯಪಾಲನೆ ಅವಳಿಗೆ ಹಗಲಿರುಳು ದುಡಿವ ಗಳಿಕೆಯಿರದ ಕೆಲಸವಾಯಿತು. ಜೊತೆಗೆ ಪುರುಷನನ್ನು ಉತ್ಪಾದಕ ಗಳಿಕೆದಾರ ಅವನ ಗಳಿಕೆಯನ್ನು ಬೆಳಸುವ ಮಹಿಳೆಯನ್ನು ಬಳಕೆದಾರಳೆಂದು ಗುರುತಿಸಲಾಯಿತು.''[೨೬]

ಇದು ಆಕೆಯನ್ನು ಅಂದರೆ ಹೆಣ್ಣನ್ನು ಮನೆಯಲ್ಲಿಯೇ ನಾಲ್ಕು ಗೋಡೆಗಳ ಒಳಗೆ ತಟಸ್ಥಳಾಗುವಂತೆ ಮಾಡಿತು ಎಂದು ಹೇಳಬಹುದು ಮನೆಯಲ್ಲಿದ್ದವಳಿಗೆ ಗೃಹಿಣಿ ಎಂಬ ಪದದಿಂದ ಗುರುತಿಸಿ ಮನೆಯ ಜವಾಬ್ದಾರಿಗಳಿಂದ ಹೊರಬರದಂತೆ ಮಾಡಲಾಯಿತು. ಗಂಡಸಿನ, ಸಮಾಜದ ಮುಂದುವರಿಕೆಗೆ ಮಹಿಳೆ ಮಾಡುವ ಎಲ್ಲ ಕಾರ್ಯಗಳೂ ಮಹತ್ವದವುಗಳೆನಿಸಿಕೊಂಡರೂ, ಗಂಡಸಿನ ದುಡಿಮೆಗಿಂತ ಕಡಿಮೆ ಎಂದು ಭಾವಿಸಿ, ಆರ್ಥಿಕತೆಯಲ್ಲಿ ಅವಳ ಸ್ಥಾನವನ್ನು ಮೌಲ್ಯ ರಹಿತವಾಗಿಸಿದೆ. ಆರ್ಥಿಕವಾಗಿ ಅವಳ ಪಾಲು ಕೇವಲ ಫಲಾನುಭವಿಯಾಗಿದೆ, ಭಾಗಿದಾರಳಾಗಿ ಅಲ್ಲ. ತನ್ನ ಕುಟುಂಬಕ್ಕಾಗಿ ದುಡಿದು, ದುಡಿದು ತನ್ನ ದೈಹಿಕ ಮಾನಸಿಕ ಶಕ್ತಿಯನ್ನೆ ಕುಂದಿಸಿಕೊಳ್ಳುವ ಹೆಣ್ಣಿನ ದುಡಿಮೆ ಅಗೋಚರವಾಗಿದ್ದು, ಅವಳ ಬೆಲೆಯನ್ನೆ ಕಸಿದುಕೊಳ್ಳುವಂತಾಗಿಸಿದೆ.

''ಭಾರತದಂಥ ಅಭಿವೃದ್ಧಿ ಶೀಲ ಸಮಾಜಗಳಲ್ಲಿ ಇಂದಿಗೂ ಮಹಿಳಾ ಸಾಕ್ಷರತೆಯ ಪ್ರಮಾಣ ೪೦% ಕ್ಕಿಂತ ಕಡಿಮೆಯಾಗಿದ್ದು. ಅವರಿಗೆ ಔಪಚಾರಿಕ ಉದ್ಯೋಗಗಳನ್ನು ಪಡೆಯುವ ಅವಕಾಶ ಬಹು ಕಡಿಮೆಯಿದೆ ಆರ್ಥಿಕ ಕ್ಷೇತ್ರವನ್ನು ಸಂಘಟಿತ ಮತ್ತು ಅಸಂಘಟಿತ ಎಂಬ ಎರೆಡು ಭಾಗಗಳನ್ನಾಗಿ ವಿಂಗಡಿಸಲಾಗಿದ್ದು, ಕಾನೂನಿನ ರಕ್ಷಣೆಯನ್ನೀಯುವ, ನಿಗದಿತ ವೇತನ ಶ್ರೇಣಿಯನ್ನು ಪಡೆಯುವ ಹಾಗೂ ಉದ್ಯೋಗ ತರುವ ಎಲ್ಲ ಸೌಲಭ್ಯಗಳನ್ನು ಬಳಸುವ ಮಹಿಳೆಯರ ಸಂಖ್ಯೆ ಕೇವಲ ೧೦% ರಷ್ಟು ಇನ್ನುಳಿದ ೯೦% ರಷ್ಟು ಮಹಿಳೆಯರು ಕೃಷಿ ಕಾರ್ಮಿಕರಾಗಿ ಮನೆಗೆಲಸಗಾರರಾಗಿ, ಸಣ್ಣ ಸಣ್ಣ ಕೈಗಾರಿಕಾ ವ್ಯವಸ್ಥೆಯಲ್ಲಿ ಅರಕ್ಷಿತ, ಅನೇಕ ಬಾರಿ ಅಪಾಯಕಾರಿಯಾದ ಉದ್ಯೋಗಗಳಲ್ಲಿ ಕೆಲಸಮಾಡುತ್ತಿದ್ದಾರೆ. ಸಮಾಜದ ಸಂಪನ್ಮೂಲಗಳ ಹಂಚಿಕೆಯಲ್ಲೆ ಕಂಡುಬರುವ ಲಿಂಗತಾರತಮ್ಯ, ಮಹಿಳೆಯರು ಸಾಮಾಜಿಕ ಅಭಿವೃದ್ಧಿಯ ಪ್ರಯೋಜನವನ್ನು ಪಡೆಯುವಲ್ಲಿ ಪುರುಷರಿಗಿಂತ ಬಹು ಹಿಂದೆ ಬಿದ್ದಿರುವುದಕ್ಕೆ ಕಾರಣವಾಗಿದೆ. ಸಮಾಜದ ಇತರ ಸಂಸ್ಥೆಗಳಲ್ಲಿ ಕಾರ್ಯಪ್ರವೃತ್ತವಾಗಿರುವ ಲಿಂಗ ಸಂಬಂಧಿ ಪೂರ್ವಗ್ರಹಗಳು ಆರ್ಥಿಕ ಸಂಸ್ಥೆಯಲ್ಲೂ ಅಷ್ಟೇ ಪ್ರಖರತೆಯಿಂದ ಕೆಲಸವನ್ನು ನಿರ್ವಹಿಸುತ್ತಿವೆ.''[೨೪]

ನಮ್ಮ ಸಂವಿಧಾನ ಲಿಂಗ ಸಮಾನತೆಯನ್ನು ಹೋಗಲಾಡಿಸಲು ಅನೇಕ ಶಾಸನಗಳನ್ನೆ ಜಾರಿಗೆ ತಂದಿದೆ ಆದರೆ ಇದು ಫಲಕಾರಿಯಾಗಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಆರ್ಥಿಕ ನೀತಿಗಳು ಮಹಿಳೆಯರನ್ನು ಪ್ರತಿಬಂಧಿಸುತ್ತವೆ. ಇದರಿಂದಾಗಿ ಮಹಿಳೆ ಪರಾವಲಂಬಿಯಾಗಿ, ಸ್ವಂತ ವ್ಯಕ್ತಿತ್ವ ಅಥವಾ ಚಹರೆಯನ್ನೆ ಕಳೆದುಕೊಳ್ಳಬೇಕಾಗುತ್ತದೆ. ಇದರಿಂದ ವಿವಾಹಿತ ಮಹಿಳೆಯರ ಸಮಸ್ಯೆಗಳು ಒಂದು ರೀತಿಯಾದರೇ ಅವಿವಾಹಿತ ಮಹಿಳೆಯರ ಸಮಸ್ಯೆ ಒಂದು ರೀತಿಯದಾಗಿರುತ್ತದೆ. ತ್ರಿಗುಣ ಕೆಲಸದ ಹೊರೆಯಿಂದಾಗಿ ಮಹಿಳೆ ಶಕ್ತಿ ಗುಂದಿ ತಾನೇ ಅಳಿವಿನಂಚಿಗೆ

ಗುರಿಯಾಗುತ್ತಿದ್ದಾಳೆ. ದುಡಿದು ಬಂದ ಮಹಿಳೆಯೊಂದಿಗೆ ಹೊಂದಿಕೊಳ್ಳದ ಪುರುಷ ಆಫಿಸ್ ವಿಷಯಗಳಲ್ಲಿ ಮಾತ್ರ ಕೆಲಸದ ಹಂಚಿಕೆಮಾಡಿಕೊಳ್ಳುತ್ತಾನೆ. ಮನೆಯಲ್ಲಿ ಆ ಮಹಿಳೆಯ ಕೆಲಸ ಹಂಚಿಕೊಳ್ಳಲಾರ ಇದರಿಂದ ಅವಳ ಒಳ ಮತ್ತು ಹೊರಗಿನ ಕೆಲಸಗಳು ಬೇರೆ ಬೆರೆಯೆಂದು ಗುರುತಿಸಲಾಗುತ್ತದೆ. ಇವು ಅವಳ ವರ್ತನೆ, ಗಳಿಕೆ, ಅವಳ ಯೋಚನಾಶಕ್ತಿಯನ್ನು ನಿಯಂತ್ರಿಸುತ್ತದೆ. ಇದಕ್ಕೆ ಆರ್ಥಿಕ ಸಂಸ್ಥೆಯನ್ನು ಇನ್ನು ಆಳವಾಗಿ ಅಭ್ಯಸಿಸಿ ಇದರಿಂದ ಹೊರಬರುವುದು ಹೇಗೆಂದು ಕಂಡುಕೊಳ್ಳುವ ಅವಶ್ಯಕತೆಯಿದೆ. ಅವಳಿಗೆ ಆರ್ಥಿಕತೆಯಲ್ಲೂ ಆಯ್ಕೆಗೆ ಅವಕಾಶ ಇರಬೇಕು ಇದರಿಂದ ಅವಳು ತನ್ನ ಯೋಗ್ಯತೆಗೆ ತಕ್ಕಂತಹ ರೀತಿಯಲ್ಲಿ ಬಾಳಲು ಅವಕಾಶವಾಗುತ್ತದೆ ತನಗೆ ನಿಜವಾದ ಒಳಿತು ಯಾವುದೆಂಬುದನ್ನು ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಇದರಲ್ಲಿ ಏನಾದರೂ ಆದರೆ ಅವಳು ಬೇರೆಯವರನ್ನು ದೂಷಿಸುವುದು ತಪ್ಪುತ್ತದೆ. ಒಂದು ಸಾರಿ ಆದ ತಪ್ಪಿನ ಆತ್ಮಾವಲೋಕನ ಮಾಡಿಕೊಂಡು ಯಾವುದು ಒಳ್ಳೆಯದು ಎಂಬುದನ್ನು ಯೋಚಿಸಲು ಸಹಾಯವಾಗುತ್ತದೆ. ಇಲ್ಲದಿದ್ದರೇ ಇರುವ ಕಡಿಮೆ ಅವಕಾಶಗಳಲ್ಲೂ ಆಯ್ಕೆಯನ್ನು ಒಟ್ಟು ಗಂಡಸಿನ ಆಯ್ಕೆಗನುಗುಣವಾಗಿ ಬದುಕಬೇಕಾಗುತ್ತದೆ.

ಹೆಚ್ಚಿನ ಸಂಖ್ಯೆಯ ಹೆಣ್ಣುಮಕ್ಕಳು ತಾವು ಮನೆಯ ಒಳಗೆ ಹೊರಗೆ ದುಡಿಯುತ್ತಿದ್ದರೂ ಪುರುಷನ ದುಡಿಮೆಗೆ ಸಮಾನವಾಗಿ ಅದನ್ನು ತಾವೇ ಪರಿಗಣಿಸುತ್ತಿಲ್ಲ. ಇದಕ್ಕೆ ಕಾರಣ ಪುರುಷ ಪ್ರಧಾನತೆ ಆದರೆ ಈ ವ್ಯವಸ್ಥೆ ತಾನು ಲಿಂಗ ನಿರಪೇಕ್ಷವಾಗಿ ಕೆಲಸಮಾಡುತ್ತಿದೆ ಎಂದು ಹೇಳುತ್ತದೆ. ವಾಸ್ತವದಲ್ಲಿ ಇದು ಲಿಂಗತಾರತಮ್ಯದಿಂದ ಕೂಡಿದ್ದೇ ಆಗಿದೆ. ತನ್ನ ಗಂಡನ ಅಥವಾ ಮನೆಯ ಹಿರಿಯನ ಆಸ್ತಿಯನ್ನು ನೋಡಿ ಅದು ತನ್ನ ಆಸ್ತಿ ಎಂದು ಬೀಗುತ್ತಾಳೆ. ಅದನ್ನು ಅವಳ ಹೆಸರಿಗಿರಲಿ, ಅನಿವಾರ್ಯ ಪ್ರಸಂಗಗಳಲ್ಲಿ ಬಳಸುವ ಅಧಿಕಾರ ಕೂಡ ಇಲ್ಲದಿರುವುದು ವಿಪರ್ಯಾಸ. ಅಷ್ಟೆ ಅಲ್ಲ ತಾನೇ ದುಡಿದುಗಳಿಸಿದ ಉಳಿತಾಯವನ್ನೆ ತನಗೆ ಬೇಕಾದಾಗ ಖರ್ಚುಮಾಡುವಂತಿಲ್ಲ. ಅದಕ್ಕೆ ಅಪ್ಪಣೆತೆಗೆದುಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ತನ್ನ ಕುಟುಂಬಕ್ಕಾಗಿ ದುಡಿಯುವ ಬ್ರಾಹ್ಮಣ ಹೆಣ್ಣು, ತನಗಾಗಿ ಹಣ ಬಳಸುವಂತಿಲ್ಲ. ಹೆಚ್ಚಿನ ಹೆಣ್ಣು ಮಕ್ಕಳು ಸರ್ಕಾರಿ ಕೆಲಸ ಸಿಕ್ಕರೇ ಹೋಗುತ್ತಾರೆ. ಖಾಸಗಿ ಸಂಸ್ಥೆಗಳಲ್ಲಿ ಮಾಡುವುದು ಕಡಿಮೆ ಇದೆ. ಎಷ್ಟೋ ಬ್ರಾಹ್ಮಣ ಹೆಣ್ಣು ಮಕ್ಕಳಿಗೆ ತಮಗಿರುವ ಆಸ್ತಿ ಎಷ್ಟೆಂದು ಗೊತ್ತಿಲ್ಲ. ಆದರೆ ತಿಂಗಳು ತಿಂಗಳಿಗೆ ಗಂಡ ಕೊಡುವ ಹಣವನ್ನು ಮಿತವಾಗಿ ಖರ್ಚುಮಾಡುತ್ತಾ ಆರ್ಥಿಕವಾಗಿ ಆತನನ್ನು ಸಬಲನನ್ನಾಗಿ ಮಾಡುವುದಕ್ಕೆ ತುಂಬಾ ಕಷ್ಟದ ಜೀವನ ನಡೆಸುತ್ತಿದ್ದಾರೆ. ಮನಸ್ಸಿನಲ್ಲಿ ಹಲವು ಆಸೆಗಳಿದ್ದರೂ ಅದನ್ನು ತೋರಗೊಡದೇ 'ಹಾಸಿಗೆ ಇದ್ದಷ್ಟು ಕಾಲುಚಾಚಬೇಕೆಂಬ' ತತ್ವವನ್ನು ಶಿರಸಾವಹಿಸಿ ಪಾಲಿಸಿಕೊಂಡು ಹೊರಟಿದ್ದಾಳೆ.

೪.೧.೬. ರಾಜಕೀಯ ಸಂಸ್ಥೆ ಮತ್ತು ಬ್ರಾಹ್ಮಣ ಮಹಿಳೆ

ಹಲವು ಸಾಮಾಜಿಕ ಸಂಸ್ಥೆಗಳಲ್ಲಿ ರಾಜಕೀಯವೂ ಒಂದಾಗಿದೆ. ರಾಜಕೀಯದಲ್ಲಿ ಮಹಿಳೆ ಯಾವ ರೀತಿಯಲ್ಲಿ ಭಾಗೀಯಾಗಿದ್ದಾಳೆಂಬುದನ್ನು ಗಮನಿಸುವುದಕ್ಕೆ, ಅವಳು ಎಷ್ಟರಮಟ್ಟಿಗೆ ಮತದಾನಮಾಡುತ್ತಾಳೆಂಬುದನ್ನು ಗಮನಿಸುವುದು ಅತೀ ಅವಶ್ಯವಾಗಿದೆ. ಮತದಾನ ಮಾಡುವುದೇ ರಾಜಕೀಯದಲ್ಲಿ ಭಾಗವಹಿಸುವಿಕೆಯ ಪ್ರಪ್ರಥಮ ಲಕ್ಷಣವಾಗಿದೆ. ಸಾಮಾನ್ಯವಾಗಿ ರಾಜಕೀಯ ಎಂದರೇ 'ತಂತ್ರ' 'ಕುತಂತ್ರ' ಎಂದೇ ಅರ್ಥವಾಗುತ್ತದೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಿನ ತಂತ್ರಗಳೇ ಚಾಲ್ತಿಯಲ್ಲಿರುವಾಗ ಮಹಿಳಾ ತಂತ್ರ ಜಾರಿಗೆ ಬರುವುದು ಅಷ್ಟು

ಸುಲಭವಲ್ಲ. ಹಾಗೆಂದ ಮಾತ್ರಕ್ಕೆ ರಾಜಕೀಯದಲ್ಲಿ ಮಹಿಳೆ ಪಾಲು ಇಲ್ಲ ಎಂದರೆ ತಪ್ಪಾಗುತ್ತದೆ. ಪುರುಷನಿಗೆ ಸಮಾನಾಗಿ ಅವಳ ಪಾಲು ಇಲ್ಲದಿದ್ದರೂ, ಅವಳ ಪಾಲು ಸ್ವಲ್ಪಮಟ್ಟಿಗಾದರೂ ಇದೆ.

''ಯಾವುದೇ ಸಮಾಜದಲ್ಲಿ ನಿಯಮಬದ್ಧತೆ ಒಂದು ಅನಿವಾರ್ಯವಾದಂಥ ಪರಿಸ್ಥಿತಿಯಾಗಿದ್ದು. ಆಯಾ ಸಮಾಜದ ಸದಸ್ಯರು, ಆ ಕಾಲದಲ್ಲಿ ಅಸ್ತಿತ್ವದಲ್ಲಿರುವಂಥ ನಿಯಮಗಳನ್ನು ಪಾಲನೆ ಮಾಡುವಂತೆ ನೋಡಿಕೊಳ್ಳುವುದು ರಾಜಕೀಯ ವ್ಯವಸ್ಥೆಯ ಪ್ರಮುಖ ಜವಾಬ್ದಾರಿ. ರಾಜಕೀಯ ಸಂಸ್ಥೆಯ ಸ್ವರೂಪ ಯಾವುದೇ ಇರಲಿ, ನಿಯಮಗಳನ್ನು ರೂಪಿಸುವುದು, ನಿಯಮ ಪಾಲನೆಯನ್ನು ಮಾಡುವಂತೆ ಸದಸ್ಯರನ್ನು ಬದ್ಧರಾಗಿಸುವುದು ಮತ್ತು ನಿಯಮಗಳ ಉಲ್ಲಂಘನೆಯನ್ನು ಶಿಕ್ಷಿಸುವುದು ಈ ಮೂರು ರಾಜಕೀಯ ಸಂಸ್ಥೆಯ ಕಾರ್ಯಗಳು, ಸರಳ ಸಮಾಜಗಳಲ್ಲಿ, ಸಮಕಾಲೀನ ಸಮಾಜಗಳಲ್ಲಿ ಅಸ್ತಿತ್ವದಲ್ಲಿರುವಂಥ ಸಂಕೀರ್ಣ ಸ್ವರೂಪದ ಆಡಳಿತಾತ್ಮಕ ವ್ಯವಸ್ಥೆ ಜಾರಿಯಲ್ಲಿರಲಿಲ್ಲ. ಆದರೂ ನಿಯಮ ಪಾಲನೆಗೆ ಅತ್ಯಂತ ಮಹತ್ವವನ್ನು ನೀಡಲಾಗುತ್ತಿದ್ದು ಆಯಾ ಸಮುದಾಯದ ಹಿರಿಯರು, ಈ ಜವಾಬ್ದಾರಿಯನ್ನು ಹೊರುತ್ತಿದ್ದರು. ಆದರೆ ಆಧುನಿಕ ಸಮಾಜದ ಉಗಮವಾದ ನಂತರ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು ಪ್ರಜೆಗಳೇ ರಾಜರು ಎಂಬ ತತ್ವಕ್ಕೆ ಮನ್ನಣೆ ದೊರೆಯಿತು. ಸಾಮಾಜಿಕ ನಿಯಂತ್ರಣದ ಜವಾಬ್ದಾರಿ, ಅನೌಪಚಾರಿಕ ವ್ಯವಸ್ಥೆಯಿಂದ ಔಪಚಾರಿಕ ರಾಜಕೀಯ ವ್ಯವಸ್ಥೆಗೆ ವರ್ಗಾಯಿಸಲ್ಪಟ್ಟಿತು.'' [೧೭]

''ರಾಜಕೀಯ ಸಂಸ್ಥೆಯ ಮುಖಂಡತ್ವ ಸಮುದಾಯದ ಹಿರಿಯರ ಕೈಯಲ್ಲೇ ಇರಲಿ, ರಾಜನಲ್ಲೇ ಇರಲಿ ಅಥವಾ ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿಯೇ ಆಗಿರಲಿ, ಅದು ವಿಶೇಷವಾಗಿ ಪುರುಷ ಪ್ರಧಾನವಾದಂಥ ಒಂದು ವ್ಯವಸ್ಥೆ. ಸಮಾಜದಲ್ಲಿ ಕಂಡು ಬರುವ ಅಸಮಾನ ಅಧಿಕಾರ ಹಂಚಿಕೆಯ ಅತ್ಯಂತ ವ್ಯಕ್ತ ಸ್ವರೂಪವೇ ರಾಜಕೀಯ ಸಂಸ್ಥೆಯಲ್ಲಿ ಕಂಡು ಬರುವ ಲಿಂಗಾಧಾರಿತ ಅಸಮಾನತೆ ಎಂದು ಹೇಳಿದರೇ ಅತಿಶಯೋಕ್ತಿಯಾಗಲಾರದು. ಎಲ್ಲ ಸಮಾಜಗಳಲ್ಲೂ, ಎಲ್ಲ ಕಾಲ ಸಂದರ್ಭಗಳಲ್ಲೂ ರಾಜಕೀಯ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿರುವವರು ಪುರುಷರೇ ಆಗಿದ್ದಾರೆ. ರಾಜಕೀಯ ಕ್ಷೇತ್ರ ಸಾರ್ವಜನಿಕ ಕ್ಷೇತ್ರವಾದ್ದರಿಂದ ಅದರಲ್ಲಿ ಮಹಿಳೆಯರ ಪ್ರವೇಶ ನಿಷಿದ್ಧ ಎಂಬವಾದಕ್ಕೆ ಬದ್ಧರಾಗಿರುವವರ ಸಂಖ್ಯೆ ಇಂದಿಗೂ ಅಧಿಕವಾಗಿದೆ. ವಿಶ್ವದಾದ್ಯಂತ ಮಹಿಳೆಯರು ರಾಜಕೀಯ ವ್ಯವಸ್ಥೆಯಲ್ಲಿ ಯಶಸ್ವಿಯಾಗಿ ಭಾಗವಹಿಸಿದ್ದರೂ ಕೂಡ, ಮಹಿಳೆಯರು ರಾಜಕೀಯ ಸಂಸ್ಥೆಗಳನ್ನು ನಿಭಾಯಿಸಲು ಅಸಮರ್ಥರು ಎಂಬ ಅರ್ಥಹೀನ ವಾದವನ್ನು ಮುಂದಿಟ್ಟು ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ರಾಜಕೀಯ ಜೀವನದಲ್ಲಿ ಭಾಗವಹಿಸಿದಂತೆ ತಡೆಯೊಡ್ಡುವುದರಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಅನೇಕ ಶತಮಾನಗಳಿಂದ ಯಶಸ್ಸನ್ನು ಪಡೆದಿದೆ. ಮಹಿಳೆಯರನ್ನು ಖಾಸಗಿ ಬದುಕಿನ ಸಂಕೋಲೆಗಳಲ್ಲಿ ಬಂಧಿಸಿ, ಅವರ ಕಾರ್ಯ ಕ್ಷೇತ್ರ ಅಡಿಗೆ ಮನೆಯೇ ಹೊರತು, ಅಸೆಂಬ್ಲಿ ಪಾರ್ಲಿಮೆಂಟುಗಳಲ್ಲ ಎಂದು ಸಾರ್ವಜನಿಕವಾಗಿಯೇ ಸಾರುವ ಪುರುಷರಿಗೆ, ಅಡಿಗೆ ಮನೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲವರು. ಅವಕಾಶ, ಅನುಭವ ದೊರೆತರೆ ಮತ್ಯಾವುದೇ ಸಂಸ್ಥೆಯನ್ನು ಯಶಸ್ವಿಯಾಗಿ ನಿಭಾಯಿಸಬಲ್ಲರು ಎಂಬ ವಿಷಯ ತಿಳಿದಿಲ್ಲವೇ? ''[೧೮] ''ಪಂಚಾಯತ್ ರಾಜ್‌ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತಂದ ಬಳಿಕ ಗ್ರಾಮಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿಗಳಲ್ಲಿ ಶೇ ೩೩ ರಷ್ಟು ಮಹಿಳಾ ಮೀಸಲಾಯಿತಿಂದಾಗಿ ಮಹಿಳೆಯರು ಕೆಳಹಂತಗಳಿಂದ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆದರೆ ಇಂಥ ಮಹಿಳೆಯರ

ಕೈಯಲ್ಲಿ ಕೇವಲ ನಾಮಮಾತ್ರಕ್ಕೆ ಅಧಿಕಾರವಿದ್ದು, ಅವರ ಬೆನ್ನ ಹಿಂದೆ ಪುರುಷರೇ ಅವರನ್ನು ಸೇರಿದಂತೆ ಎಲ್ಲ ಅಧಿಕಾರಗಳನ್ನು ಚಲಾಯಿಸುವರೆಂಬುದಾಗಿ ಹೇಳಲಾಗುತ್ತಿದೆ. ಆದರೆ ಕ್ರಮೇಣ ಮಹಿಳಾ ಚುನಾಯಿತ ಪ್ರತಿನಿಧಿಗಳು ತಮ್ಮ ಸ್ಥಾನಮಾನ, ಅಧಿಕಾರಬಲವನ್ನು ಸ್ತ್ರೀಪರ ನೆಲೆಯ ಪ್ರಮುಖ ಕಾರ್ಯಕ್ರಮಗಳು ನಡೆಯುವಂತೆ ಜವಾಬ್ದಾರಿ ವಹಿಸುತ್ತಿರುವುದು ಉತ್ತಮ ಪ್ರಗತಿಯೆಂದೇ ಭಾವಿಸಬಹುದು. ಪ್ರತಿಭಾವಂತ ಮಹಿಳೆಯರಿಗೆ ಬುದ್ಧಿಕಲಿಸಲು ಕುಡಿಯಲ್ಲೆ ಚಿವುಟುವ ಕಾರ್ಯವನ್ನು ಇತಿಹಾಸದ ಪುಟಗಳಿಂದ ನಾವು ಗ್ರಹಿಸಬಹುದು. ಆಕೆ ಕೇವಲ ನಾಲ್ಕು ಗೋಡೆಗಳ ನಡೆವೆಯಿದ್ದು ಗಂಡ ಮಕ್ಕಳು ಹಾಗೂ ಇನ್ನಿತರರನ್ನು ಜೋಪಾನವಾಗಿ ನೋಡಿಕೊಂಡರೆ ಸಾಕು ಎಂಬ ಅಭಿಪ್ರಾಯ ಇಂದಿಗೂ ಮುಂದುವರಿಯುತ್ತಲೇ ಇದೆ.''[೧೯]

ರಾಜಕೀಯ ಸಂಸ್ಥೆಯ ಬಗೆಗೆ ಮಾತನಾಡುವಾಗ ಸರ್ಕಾರದ ಸ್ವರೂಪದ ಬಗೆಗೆ ಮಾತನಾಡುವುದು ಅನಿವಾರ್ಯವೆನಿಸುತ್ತದೆ. ಇಂಗ್ಲೀಷಿನ ಡೆಮಾಕ್ರಸಿ ಪದವನ್ನು ಪ್ರಜಾಪ್ರಭುತ್ವ ಎಂದು ಪರ್ಯಾಯವಾಗಿ ಬಳಸಲಾಗುತ್ತದೆ. ಸಾಮಾನ್ಯ ಅರ್ಥದಲ್ಲಿ ಪ್ರಜಾಧಿಕಾರ ಎಂದರೆ ಪ್ರಜೆಗಳ ಕೈಯಲ್ಲೇ ಅಧಿಕಾರವಿರುವುದು. ಪ್ರಜೆಗಳೇ ಆಡಳಿತ ನಡೆಸುವವರು ಅವರೇ ಪ್ರಜೆಗಳು ಎಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಅಬ್ರಹಂಲಿಂಕನ್ ಹೇಳುವಂತೆ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರ್ಕಾರವನ್ನು ಪ್ರಜಾಪ್ರಭುತ್ವ ಎಂದು ವ್ಯಾಖ್ಯಾನಿಸಿದ್ದಾನೆ.

''ಪ್ರಜಾಪ್ರಭುತ್ವ ಸರ್ಕಾರದ ಸ್ವರೂಪ ಮಾತ್ರವಲ್ಲ ಅದು ಒಂದು ಜೀವನ ವಿಧಾನವಾಗಿದೆ. ಅದರ ಗುಣಲಕ್ಷಣಗಳನ್ನು ಗಮನಿಸಿದರೆ ಎಲ್ಲಾ ಪ್ರಜೆಗಳನ್ನು ಸಮಾನ ರೀತಿಯಲ್ಲಿ ಕಾಣುವ, ರಕ್ಷಿಸುವ, ಗೌರವಿಸುವ ಹಾಗೂ ತಾರತಮ್ಯ ತೋರದಿರುವುದನ್ನು ಕಾಣುತ್ತೇವೆ ಯಾವುದೇ ಬೇಧವಿಲ್ಲದೇ ಎಲ್ಲಾ ಜನರಿಗೆ ಮತಾಧಿಕಾರ ಕಾನೂನಿನಡಿಯಲ್ಲಿ ಸಮಾನತೆ, ನಾಗರಿಕ ಹಕ್ಕು ಸ್ವತಂತ್ರನ್ಯಾಯಾಂಗ ಹಾಗೂ ಆಡಳಿತ ವಿಕೇಂದ್ರೀಕರಣ ಮೊದಲಾದ ಲಕ್ಷಣಗಳು ಮಹಿಳೆಯರ ಹಕ್ಕನ್ನು ರಕ್ಷಿಸುವ, ಸಮಾನತೆಯನ್ನು ನೀಡುವ ಸೂಚಿಗಳಾಗಿವೆ. ಜಾತಿ, ವರ್ಗ, ಧರ್ಮ, ಲಿಂಗ, ಜನಾಂಗ, ಭಾಷೆ ಮತ್ತು ಬಣ್ಣ ಆಧಾರಿತ ಬೇಧ ತಾರತಮ್ಯವನ್ನು ವಿರೋಧಿಸುವ ಪ್ರಜಾಪ್ರಭುತ್ವ ಪರೋಪಕಾರ ಭಾವನೆ, ಸಹಿಷ್ಣತೆ, ವ್ಯಕ್ತಿ ಗೌರವ, ಇತರರ ಅಭಿಪ್ರಾಯಗಳಿಗೆ ಮನ್ನಣೆ ಹಾಗೂ ಭಿನ್ನಾಭಿಪ್ರಾಯಗಳನ್ನು ಶಾಂತಿಯುತವಾಗಿ ಪರಿಹರಿಸುವುದನ್ನು ಎತ್ತಿ ಹಿಡಿಯುತ್ತದೆ. ಇವೆಲ್ಲವೂ ಕೂಡ ಪ್ರಜಾಪ್ರಭುತ್ವ ತಾತ್ವಿಕವಾಗಿ ಎಷ್ಟರ ಮಟ್ಟಿಗೆ ಮಹಿಳಾ ಪರವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ ದುರಾದೃಷ್ಟವಶಾತ್ ನಮ್ಮ ಸಾಮಾಜಿಕ ರಚನೆ, ಪುರುಷ ಪ್ರಧಾನ ಸಾಮಾಜಿಕ ಮೌಲ್ಯ, ಅಧಿಕಾರ ಹಂಚಿಕೆ ಮತ್ತು ನಂಬಿಕೆ ಕಟ್ಟುಪಾಡುಗಳು ಪ್ರಜಾಪ್ರಭುತ್ವದ ತತ್ವಗಳು ಕಾರ್ಯರೂಪಕ್ಕೆ ಬರಲು ಅಡ್ಡಿಯಾಗಿವೆ.''[೨೦]

''ಪ್ರಜಾಪ್ರಭುತ್ವದ ರಾಜಕೀಯದಲ್ಲಿ ಜನರು ಎರಡು ರೀತಿಯಲ್ಲಿ ಭಾಗವಹಿಸುತ್ತಾರೆ. ಒಂದು ರಾಜಕೀಯ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸುವುದು. ಅಂದರೆ ಪಕ್ಷಕ್ಕೆ ಸೇರುವುದು, ಪಕ್ಷದ ಕಾರ್ಯಕರ್ತರಾಗಿ ಕೆಲಸ ಮಾಡುವುದು. ಪಕ್ಷದ ಪ್ರತಿನಿಧಿಯಾಗಿ ಅಥವಾ ಸ್ವತಂತ್ರವಾಗಿ ಚುನಾವಣೆಗೆ ನಿಲ್ಲುವುದು, ಪಕ್ಷದ ನೀತಿ ಮತ್ತು ಸರ್ಕಾರದ ನೀತಿ ನಿರೂಪಿಸುವುದು. ಮತದಾರರಾಗಿ ಮತ ಚಲಾಯಿಸುವುದರ ಮೂಲಕ ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವುದಕ್ಕೆ ಔಪಚಾರಿಕ ರಾಜಕೀಯ ಪ್ರಕ್ರಿಯೆ ಎಂದು ಕರೆಯುತ್ತಾರೆ. ಆದರೆ ದೇಶದ ಎಲ್ಲಾ ಜನರು

ಸರ್ಕಾರದಲ್ಲಾಗಲಿ, ರಾಜಕೀಯ ಪಕ್ಷಗಳಲ್ಲಾಗಲಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ. ಕೆಲವು ಜನರು ರಾಜಕೀಯದಲ್ಲಿ ನೇರವಾಗಿ ಭಾಗವಹಿಸದೇ ವಿವಿಧ ಸಂಘಟನಾತ್ಮಕ ಚಳುವಳಿ, ಆಂದೋಲನಗಳ ಮೂಲಕ ಸರ್ಕಾರದ ಮೇಲೆ, ಅಧಿಕಾರದಲ್ಲಿರುವ ಪಕ್ಷಗಳ ಮೇಲೆ ಒತ್ತಡ ತರುತ್ತಾರೆ. ಈ ಕ್ರಿಯೆಗೆ ಅನೌಪಚಾರಿಕ ರಾಜಕೀಯ ಪ್ರಕ್ರಿಯೆ ಎಂದು ಕರೆಯುತ್ತಾರೆ. ಇದನ್ನು ಒತ್ತಡ ತರುವ ರಾಜಕೀಯ ಎಂದು ಕರೆಯುತ್ತಾರೆ.''[೨೦]

ರಾಜಕೀಯದಲ್ಲಿ ಮಹಿಳೆಯ ಪಾಲನ್ನು ಗಮನಿಸಿದಾಗ ಅದು ತುಂಬಾ ನಿರಾಶಾದಾಯಕವಾಗಿರುವುದು ಕಂಡು ಬರುತ್ತದೆ. ೧೦% ರಷ್ಟು ಮಹಿಳೆಯರ ಪಾಲು ಕಾಣಸಿಗುತ್ತದೆ. ರಾಜಕೀಯದಲ್ಲಿ ಮಹಿಳೆಯರು ನೇರವಾಗಿ ಪಾಲ್ಗೊಳ್ಳುವದಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಅವಳ ಅಧಿಕ ಜವಾಬ್ದಾರಿಗಳು ಇದಕ್ಕೆ ಹೊಣೆಯಾಗಿವೆ. ಅತ್ತೆ ಮಾವದಿಂದ ಕ್ಷೇಮಪಾಲನೆ, ಗಂಡನ ಒತ್ತಾಸೆಗನುಗುಣವಾಗಿ ನಡೆಯುವುದು. ಮಕ್ಕಳ ಪಾಲನೆ ಪೋಷಣೆ ಮಾಡುವದರೊಂದಿಗೆ ಗಂಡನ ಕೆಲಸಗಳನ್ನು ಕೂಡ ಮಾಡಿಕೊಂಡು ಹೋಗಬೇಕಾಗುತ್ತದೆ. ಇದರೊಂದಿಗೆ ಗಂಡನ ಮನೆಯಲ್ಲಿ ಸೊಸೆಯಾಗಿಯೇ ಕೆಲವು ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ಆ ಹೆಣ್ಣು ಗುರುತಿಸಲ್ಪಡುವುದು ಗಂಡನ ಹೆಸರಿನಿಂದ. ಅವಳ ನಡುವಳಿಕೆಯೂ ಕೂಡ ಆ ಮನೆಯೊಂದಿಗೆ ಸೇರಿಕೊಂಡಿರುವುದರಿಂದ ಅವಳ ವರ್ತನೆಯ ಮೇಲೆ ಆ ಮನೆಯ ನಿಯಂತ್ರಣ ಸದಾ ಇರುತ್ತದೆ. ರಾಜಕೀಯದಲ್ಲಿ ಅವಳ ಭಾಗವಹಿಸುವಿಕೆಯ ಅವಳ ವರ್ತನೆಯ ಬಗೆಗೆ ಕೆಲವೊಂದು ಅಪವಾದಗಳನ್ನು ಸೃಷ್ಟಿಸುತ್ತದೆ. ಹೀಗಾಗಿ ಆ ಹೆಣ್ಣು ಅಪವಾದಗಳಿಗೆ ಅಂಜಿ ಮುಂದುವರಿಯದೇ ಹೋಗುತ್ತಾಳೆ. ಇದು ಅವಳ ನೇರ ರಾಜಕೀಯ ಪಾಲುದಾರಿಕೆಯಲ್ಲಿ ಹಿಂದೆ ಹೆಜ್ಜೆ ಹಾಕುವಂತೆ ಮಾಡುತ್ತದೆ.

ಹೆಣ್ಣು ಕೇವಲ ನಾಲ್ಕು ಗೋಡೆಗೆ ಸೀಮಿತಳೆಂಬ ಭಾವ ಬದಲಾಗಿದೆ. ಆದರೆ, ಅವಳು ಹೊರಗೆ ಹೋಗಿ ದುಡಿಯಬಹುದಾಗಿದೆ. ಹೇಗೆ ಎಂದರೇ ನಿರ್ದಿಷ್ಟ ಸಮಯಕ್ಕೆ ಮನೆಯಿಂದ ಹೋಗಿ, ನಿರ್ದಿಷ್ಟ ಸಮಯಕ್ಕೆ ಬರಬೇಕು ಇದಕ್ಕೆ ಹೊರತಾಗಿ ಒಂದೆರೆಡು ದಿನ ನಡೆದರೆ ಸಹಿಸುತ್ತಾರೆ. ನಾಲ್ಕು, ಐದು ದಿನದವರೆಗೆ ಹೀಗೆ ನಡೆದರೇ ಆ ಉದ್ಯೋಗವನ್ನೇ ಬಿಟ್ಟುಬಿಡುವಂತೆ ಹೇಳುವವರೂ ಇದ್ದಾರೆ. ಹೀಗಾಗಿ ಉದ್ಯೋಗಸ್ಥಳಾಗಿ ಇಂಥ ಪರಿಸ್ಥಿತಿ ಎದುರಿಸಬೇಕಾದರೇ ಆರ್ಥಿಕ ಭದ್ರತೆ ಇರದೇ ಇರುವಂಥ ಕೇವಲ ರಾಜಕೀಯ ಕಾರ್ಯಕರ್ತೆಯಾಗಿ ಭಾಗವಹಿಸಬೇಕಾದರೇ ಎಂಥೆಂಥ ಪರಿಸ್ಥಿತಿ ಎದುರಿಸಬೇಕಾಗಬಹುದೆಂಬುದು ಊಹೆಗೂ ನಿಲುಕದ ವಿಚಾರ. ಇದೊಂದೆ ಅಲ್ಲದೇ ರಾಜಕೀಯದಲ್ಲಿ ಅವಳು ಭಾಗವಹಿಸಬೇಕೆಂದರೇ ಆರ್ಥಿಕವಾಗಿಯೂ ಕೂಡ ಅವಳ ಸಬಲಳಾಗಿರಬೇಕಾದ ಅವಶ್ಯಕತೆಯಿದೆ. ಆರ್ಥಿಕ ಸಬಲತೆ ಇದ್ದರೂ ಅದನ್ನು ಬಳಸಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ಅವಕಾಶವನ್ನು ನೀಡುವಿಕೆ ಕೇವಲ ಗಂಡನ ಮನೆಯವರಷ್ಟೇ ಅಲ್ಲದೇ, ಅವಿವಾಹಿತಳಾದವಳಲ್ಲಿಯ ಹೆಣ್ಣಿಗೆ ಇಂಥ ಅವಕಾಶ ನೀಡಲು ಹಿಂಜರಿಯುತ್ತಾರೆ. ಇಂಥ ಸಂದರ್ಭಗಳಲ್ಲಿ ಅವಳ ಸಕ್ರೀಯ ರಾಜಕೀಯ ಪಾಲುಗೊಳ್ಳುವಿಕೆ ಹೇಗೆ ತಾನೇ ಸಾಧ್ಯ. ಕುಟುಂಬ ಅವಳಿಗೆ ಇಂಥದಕ್ಕೆ ಅವಕಾಶ ನೀಡದಿರುವುದರಿಂದ ಅವಳ ಭಾಗವಹಿಸುವಿಕೆ ಕಡಿಮೆ ಇದೆ. ಅವಳಿಗೆ ಅವಕಾಶ ದೊರೆತರೆ ಅವಳು ಕೂಡ ಸಮರ್ಥಳು ಎನ್ನುವುದನ್ನು ತೋರಿಸಬಲ್ಲವಳಾಗಿದ್ದಾಳೆಂದು ಹೇಳಬಹುದಾಗಿದೆ.

ಕೇವಲ ಕುಟುಂಬ ಕಾರಣ ಮಾತ್ರದಿಂದ ಅವಳ ಪಾಲ್ಗೊಳ್ಳುವಿಕೆ ಕಡಿಮೆ ಇದೆ ಎಂದರೆ ತಪ್ಪಾಗುತ್ತಿದೆ. ಒಂದೊಂದು ಸರಿ ಕುಟುಂಬ ಅವಕಾಶಕೊಟ್ಟರೂ ರಾಜಕೀಯ ಮುಖಂಡರು, ರಾಜಕೀಯದಲ್ಲಿ ಮುನ್ನಡೆಯಲು ಬೇಕಾದ ಸಾರ್ವಜನಿಕ ಬೆಂಬಲದ ಕೊರತೆಯು ಕಂಡು ಬರುತ್ತದೆ. ಹೀಗಾಗಿ ಅವಳಲ್ಲಿ ತನ್ನ ಸ್ವಂತ ಕೊರತೆಗಿಂತ (ದೈಹಿಕ ಮಾನಸಿಕ) ಬಹಿರಂಗದ ಕೊರತೆ ಅಧಿಕವಾಗಿದೆ. ಇದು ಅವಳು ಸರಾಗವಾಗಿ ಮುಂದುವರಿಯಲು ತಡೆಯಾಗಿದೆ.

ಹೆಣ್ಣಿಗೆ ತನ್ನ ದೈಹಿಕ, ಮಾನಸಿಕ, ಸಾರ್ವಜನಿಕ, ಕೌಟುಂಬಿಕ ಕಾರಣಗಳ ಮೂಲಕ ಅವಳ ಭಾಗವಹಿಸುವಿಕೆಗೆ ತಡೆಯಾದರೇ ಇನ್ನೂ ಅನೇಕ ಅಡೆ ತಡೆಗಳನ್ನು ಎದುರಿಸಬೇಕಾಗುತ್ತದೆ. ಅವುಗಳೆಂದರೆ ಪಕ್ಷದ ಕಾರ್ಯಕರ್ತೆಯರಾಗಿ ಭಾಗವಹಿಸಲು ಅವಕಾಶ ನೀಡುತ್ತಾರೆ. ಚುನಾವಣಾ ಪ್ರಚಾರಕ್ಕೆ ಅವಳನ್ನು ಬಳಸಿಕೊಳ್ಳುತ್ತಾರೆ. ಆದರೆ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲಲು ಟೀಕಿಟು ನೀಡಲು ನಿರಾಕರಿಸುತ್ತಾರೆ. ಇದು ಅವಳು ಪಾಲ್ಗೊಳ್ಳುವಿಕೆಗೆ ಮುಖ್ಯ ಕಡಿವಾಣವಾಗಿದೆ. ಹೀಗಾಗಿ ಮೆನ್‌ಸ್ಟ್ರೀಮ್‌ನಲ್ಲಿ ಭಾಗವಹಿಸಲು ಅನರ್ಹಳೆಂಬ ಭಾವನೆಯಿಂದ ಅವಳ ನಿರ್ಧಾರ ಕೈಗೊಳ್ಳುವಿಕೆಯ ಹಂತವನ್ನು ತಲುಪಿಲ್ಲವೆಂದು ಹೇಳಬಹುದು. ಶಾಸನಗಳ ರಚನೆಯ ಸಂದರ್ಭದಲ್ಲೂ ಕೂಡ ಅವಳ ಪಾಲು ಇಲ್ಲದಿರುವಾಗ, ತನ್ನ ಪರವಾಗಿ ವಾದಮಾಡುವವರು (ಶಾಸನ ರಚನಾಕಾರರು) ಇಲ್ಲದಿರುವಾಗ ಆ ಶಾಸನ ಮಹಿಳಾ ಪರವಾಗಿರುವುದಕ್ಕೆ ಹೇಗೆ ಸಾಧ್ಯ? ಪುರುಷ ಪ್ರಧಾನ ವ್ಯವಸ್ಥೆಯವರೇ ಈ ನಿರ್ಧಾರ ಕೈಗೊಳ್ಳುವುದರಿಂದ, ಆ ಶಾಸನವೂ ಕೂಡ ಪುರುಷ ಪ್ರಧಾನತೆಗೆ ಹೊರತಾಗಿರಲು ಸಾಧ್ಯವೆ? ಎಂಬುದು ಯೋಚನಾರ್ಹವಾಗಿದೆ. ಅವಳಿಗೆ ಗ್ರಾಮ ಪಂಚಾಯ್ತಿ ಜಿಲ್ಲಾ ಪಂಚಾಯ್ತಿ ಮಟ್ಟದಲ್ಲಿ ಅವಕಾಶವಿದೆ. ಮೆಲ್ ಮಟ್ಟದಲ್ಲಿ ಅವಳ ಪಾಲು ಶೇ ೩೩% ಆಗಿಲ್ಲ. ಹೀಗಾಗಿ ಅವರ ಭಾಗವಹಿಸುವಿಕೆ ಅಲ್ಪ ಪ್ರಮಾಣದಲ್ಲಿದೆ.

ಮಹಿಳೆ ಮೊದಲು ಕುಟುಂಬಕ್ಕೆ ಆಧ್ಯತೆ ಕೊಡಬೇಕಾದ್ದರಿಂದ ಅವರ ಮಾತಿನಂತೆ ನಡೆಯುವುದು ಅವಳಿಗೆ ಅನಿವಾರ್ಯ. ಹೀಗಾಗಿ ಕುಟುಂಬ ತಮ್ಮ ಹೆಣ್ಣು ಮಗಳು ರಾಜಕೀಯ ಪ್ರವೇಶ ಬೇಡವೆನ್ನುತ್ತಾರೆ. ಇದರ ಪ್ರವೇಶದಿಂದ ಹೆಚ್ಚು ಹೊತ್ತು ಹೊರಗೆ ಇರಬೇಕಾಗುವುದರಿಂದ ಅವಳಿಗೆ ಆಕ್ಷೇತ್ರ ಬೇಡವೆನ್ನುತ್ತಾರೆ. ಇಷ್ಟಾಗಿಯೂ ಪ್ರವೇಶ ಮಾಡಿದವರಿದ್ದಾರೆ. ಆದರೆ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ ಎಂದು ಹೇಳಬಹುದಾಗಿದೆ.

೪.೨. ಆಚರಣೆಗಳ ಸಾಂಸ್ಕೃತಿಕ ನಿರ್ವಚನ

ಧರ್ಮದಲ್ಲಿ ಧರ್ಮ ಗ್ರಂಥಗಳ ನಂಬಿಕೆಯೊಂದಿಗೆ ಆಚರಣೆಗಳೂ ಕೂಡ ಮಹತ್ವವನ್ನು ಪಡೆದುಕೊಳ್ಳುತ್ತವೆ. ಸ್ತ್ರೀ ಆಚರಣಾತ್ಮಕ ಪರಂಪರೆಯ ಪ್ರಮುಖ ರೂವಾರಿಯಾಗಿದ್ದಾಳೆಂದು ಹೇಳಬಹುದಾಗಿದೆ. ಇದು ಪುರುಷ ಸಂಸ್ಕೃತಿಯು ಮುಂದುವರಿದುಕೊಂಡು ಬಂದಿರುವುದಕ್ಕೆ ಪ್ರಮುಖ ಕಾರಣ ಹೆಣ್ಣು ಎನ್ನುವುದರಲ್ಲಿ ಸಂದೇಹವಿಲ್ಲ. ಆಚರಣೆಯು ರೂಪಪಡೆಯಲು ಅವಳು ಪ್ರಮುಖ ಪಾತ್ರವಹಿಸುತ್ತಾಳೆ. ವಿವಿಧ ಆಚರಣೆಗಳಲ್ಲಿ ಮಹಿಳೆಯನ್ನು ಹೇಗೆ ಕಾಣಲಾಗುತ್ತಿದೆ. ಎಂಬುದನ್ನು ನೋಡುವುದು ನನ್ನ ಆಶಯವಾಗಿದೆ.

ಪ್ರತಿ ಅವಸ್ಥೆಯಲ್ಲೂ ಹೆಣ್ಣಿಗೆ ನಿರ್ಬಂಧಗಳು ಅನೇಕ ಇರುವುದು ಕಂಡುಬರುತ್ತದೆ. ಇದು ಅವಳ ಜನನದಿಂದಲೇ ಆರಂಭಗೊಳ್ಳುತ್ತದೆ. ಮಗುವಿದ್ದಾಗ ಅವಳ ಬೆಳವಣಿಗೆಯಲ್ಲಿ ಅಷ್ಟೇನೂ ವ್ಯತ್ಯಾಸವಿರದಿದ್ದರೂ, ಅವಳಿಗೆ ಚೌಲಕರ್ಮವನ್ನು ಮಾಡಲಾಗುವುದಿಲ್ಲ. ಬೇರೆ ಬೇರೆ ಜಾತಿಗಳಲ್ಲಿ ಚೌಲ ಕರ್ಮವನ್ನು ಹೆಣ್ಣಿಗೂ ಮಾಡಲಾಗುತ್ತದೆ.

ಆದರೆ ಬ್ರಾಹ್ಮಣ ಜಾತಿಯಲ್ಲಿ ಹೆಣ್ಣಿಗೆ ಚೌಲಕರ್ಮವಿಲ್ಲ. ಉಪನಯನವೂ ಇಲ್ಲ. ಅವಳು ಕೇವಲ ವಿವಾಹ ಸಂಸ್ಕಾರಕ್ಕೆ ಮಾತ್ರ ಅರ್ಹಳು ಇಲ್ಲದಿದ್ದರೇ ಬೇರೆಯಾವ ಕರ್ಮಗಳೂ ಅವಳಿಗಿಲ್ಲ. ಯಾವಾಗ ಅವಳು ಋತುಮತಿಯಾಗುತ್ತಾಳೋ ಅವಾಗಿನಿಂದ ಅವಳು ನಿರ್ಭಂದಗಳಿಗೆ ಒಳಗಾಗುತ್ತಾ ಹೋಗುತ್ತಾಳೆ. ಅವಾಗಿನಿಂದ ಹೆಣ್ಣು ಅಪವಿತ್ರ ಪಾಪ ಕಲ್ಪನೆಯಲ್ಲಿ ಗಂಡಿಗೆ ಅಥವಾ ಧರ್ಮಗ್ರಂಥಗಳಿಗೆ ಕಾಣುತ್ತಾ ಹೋಗುತ್ತಾಳೆಂದು ಹೇಳಬಹುದು. ಅವಳು ಮುಟ್ಟಾದಾಗ ವಿಶ್ರಾಂತಿಯ ಅವಶ್ಯಕತೆ ಇದೆ ಎಂದು ವಿಜ್ಞಾನ ಹೇಳುತ್ತದೆ. ಆದರೆ ಧರ್ಮ ಗ್ರಂಥಗಳು ಶುದ್ಧತೆಯ ದೃಷ್ಟಿಯಿಂದ, ಅವಳ ಕಲ್ಮಷ ಹೊರಗೆ ಹೋಗುತ್ತದೆ ಎಂಬ ನಂಬಿಕೆಯಿರುವುದರಿಂದ ಈ ಸಂದರ್ಭದಲ್ಲಿ ಅವಳನ್ನು ಮುಟ್ಟುವಂತಿಲ್ಲ ಎಂದು ಹೆಳುತ್ತದೆ. ಈ ಸಂದರ್ಭದಲ್ಲಿ ಅವಳು ಅಪವಿತ್ರಳು ಎಂದು ಪರಿಭಾವಿಸಲ್ಪಡುತ್ತಾಳೆ.

ಇದಕ್ಕಾಗಿ ಒಂದು ಕತೆಯೇ ಹುಟ್ಟಿಕೊಂಡಿದೆ. ದೇವೇಂದ್ರ ತಾನು ಮಗ್ನರಾಗಿರುವ ಕಾಮಕೇಳಿಗೆ ಭಂಗವಾದುದಕ್ಕೆ ಕೋಪಗೊಂಡು ತಾರಕಾಸುರನನ್ನು ಕೊಲ್ಲುತ್ತಾನೆ. ಪಾನಮತ್ತನಾಗಿದ್ದರಿಂದ ಅವನಿಗೆ ಇದು ತಿಳಿದುರುವದಿಲ್ಲ. ಯಾವಾಗ ಇದು ಅವನಿಗೆ ಅರಿವಾಗುತ್ತದೆಯೋ ಅವಾಗ ಅವನಿಗೆ ಭಯ ಶುರುವಾಗುತ್ತದೆ. ಕಾರಣ ತಾರಕಾಸುರ ಬ್ರಾಹ್ಮಣ. ಬ್ರಾಹ್ಮಣನನ್ನುಕೊಂದರೆ ಬ್ರಹ್ಮ ಹತ್ಯಾದೋಷ ಬರುತ್ತದೆ. ಎಂಬುದು ತಿಳಿದಾಗ ಆತ ಪಾಪ ಪರಿಹಾರಕ್ಕಾಗಿ ತಾರಕಾಸುರನನ್ನೆ ಕೇಳುತ್ತಾನೆ. ನಿನ್ನ ಪಾಪವನ್ನು ನೀನು ಯಾವುದೆ ನಾಲ್ಕರಿಂದ ಹರಿಸಿ ಕಳೆದುಕೊಳ್ಳಬಹುದೆನ್ನುತ್ತಾನೆ. ಅವನು ತನ್ನ ಪಾಪ ಪರಿಹಾರಕ್ಕಾಗಿ ತನ್ನ ಪಾಪವನ್ನು ಸ್ತ್ರೀ, ಬಂಗಾರ, ನೀರು, ಮರದ ಅಂಟಿ ಮೂಲಕ ಹರಿದು ಹೋಗುವಂತೆ ಹೆಳುತ್ತಾನೆ. ಹೀಗೆ ಹೆಣ್ಣಿನ ಮುಟ್ಟಿನ ಪರಿಕಲ್ಪನೆ ಆರಂಭಗೊಳ್ಳುತ್ತದೆ. ಮುಟ್ಟಾದ ಮೂರು ದಿನಗಳಲ್ಲಿ ಅಂದರೆ ಒಂದನೆಯದಿನ ಚಾಂಡಾಲ, ಎರಡನೇ ದಿನ ಶೂದ್ರಳು, ಮೂರನೇ ದಿನವೂ ಶೂದ್ರಳು, ನಾಲ್ಕನೆಯ ದಿನ ದೇವರನ್ನು ಬಿಟ್ಟು ಉಳಿದೆಲ್ಲವನ್ನು ಮುಟ್ಟಬಹುದು ಎಂದು (ಮನುಸ್ಮೃತಿಯ ಭಾಗವಾದ, ಧರ್ಮಸಿಂಧೂರ ಕೌಸ್ತೂಭಮತದ, ಮೂಹರ್ತ ಚಿಂತಾಮಣಿಯಲ್ಲಿ) ಕಾಣಸಿಗುತ್ತದೆ. ಹಿಗಾಗಿ ಈ ಮೂರು ದಿನದಲ್ಲಿ ಅವಳು ಅಪವಿತ್ರಳು ಪಾಪಿ ಎಂದು ಪರಿಗಣಿಸುತ್ತಾಳೆ. ರಜಸ್ವಲೆಯಾದ ಮಹಿಳೆಯನ್ನು ಈ ಮೂರುದಿನಗಳಲ್ಲಿ ಸ್ಪರ್ಷಿಸಿದರೇ ತಮ್ಮ ಇಡೀ ಕುಟುಂಬಕ್ಕೆ ಪಾಪ ಅಂಟಿಕೊಳ್ಳುತ್ತದೆ. ಎಂದು ಧರ್ಮ ಶಾಸ್ತ್ರ ಹೇಳುತ್ತದೆ. ಅಂದರೆ ವಿಜ್ಞಾನದ ವಿಶ್ರಾಂತಿಯ ಕಲ್ಪನೆ ಇಲ್ಲಿ ಇಲ್ಲ. ತಾನು ಮಾಡದಿರುವ ತಪ್ಪಿಗೆ ಹೆಣ್ಣು ಕುಲ ಈ ಪಾಪದ ಕಲ್ಪನೆಯೊಂದಿಗೆ ಹೆಣೆದುಕೊಳ್ಳಬೇಕಾಯಿತು. ಮರದ ಅಂಟು, ಚಿನ್ನ ನೀರು ಇವು ನಿರ್ಜಿವ ವಸ್ತು ಇವುಗಳನ್ನು ಪವಿತ್ರತೆಯ ಸಂಕೇತವಾಗಿ ಗುರುತಿಸುತ್ತಾರೆ. ಆದರೆ ಸಜೀವ ವಸ್ತುವಾಗಿ ಹೆಣ್ಣಿಗೆ ಇದರಿಂದಲೇ ಅಪವಿತ್ರದ ಪಟ್ಟಕಟ್ಟಲಾಗುತ್ತದೆ ಯಾರದೋ ಪಾಪಕ್ಕೆ ಇನ್ಯಾರದೋ ಬಲಿಯನ್ನು ನಮ್ಮ ಸಮಾಜ ಇಂದಿಗೂ ಮುಂದುವರಿಸಿಕೊಂಡು ಹೊರಟಿದೆ.

ವಿವಾಹವು ಶೋಡಷ ಸಂಸ್ಕಾರಗಳಲ್ಲಿ ಒಂದು ಈ ಹದಿನಾರು ಸಂಸ್ಕಾರಗಳು ಕೇವಲ ಪುರುಷನಿಗೆ ಮಾತ್ರ ಹೆಣ್ಣಿಗೆ ಒಂದೇ ಒಂದು ಸಂಸ್ಕಾರ ಅದು ವಿವಾಹ ಸಂಸ್ಕಾರ ಎಂದು ಹೆಳಲಾಗುತ್ತಿದೆ. ವಿವಾಹದಲ್ಲಿ ಗಂಡಿಗೆ ಆಯ್ಕೆ ಇದೆ ಅಂದರೆ ವಿವಾಹಕ್ಕೆ ಪುರುಷನಿಗೆ ಇಷ್ಟವಿರದಿದ್ದರೇ ಆತನು ಬ್ರಹ್ಮಚಾರಿಯಾಗಿ ಸನ್ಯಾಸಿಯಾಗಬೇಕು. ಆದರೆ

ಹೆಣ್ಣಿನ ಆಯ್ಕೆಗೆ ಅವಕಾಶವಿಲ್ಲ ಅವಳಿಗೆ ಇಷ್ಟವಿರಲಿ ಇಲ್ಲದಿರಲಿ ಅವಳು ಈ ಸಂಸ್ಕಾರಕ್ಕೆ ಒಳಪಡಲೇಬೇಕು. ಇಲ್ಲದಿದ್ದರೇ ಅವಳಿಗೆ ಮೋಕ್ಷವಿಲ್ಲ ಎಂದು ಹೇಳಲಾಗುತ್ತದೆ. ವಿವಾಹವು ಹೆಣ್ಣಿನ ಬದ್ರತೆಯ ದೃಷ್ಟಿಯಿಂದ ಒಳ್ಳೆಯದು ಆದರೆ ಈ ವಿವಾಹವೇ ಅವಳನ್ನು ಅಭದ್ರಳನ್ನಾಗಿಸಿದರೇ ಅದು ಯಾತಕ್ಕಾಗಿ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪೂರ್ವವೇದಗಳ ಕಾಲದಲ್ಲಿ ಹೆಣ್ಣು ಅವಿವಾಹಿತಳಾಗಿ ಉಳಿಯುವ ಅವಕಾಶವಿತ್ತು ಮನುಸ್ಮೃತಿಯಿಂದಾಗಿ ಹೆಣ್ಣಿಗೆ ವಿವಾಹ ಕಡ್ಡಾಯವಾಯಿತು. ಮುಸ್ಲಿಂರ ಧಾಳಿಯಿಂದ ಬಾಲ್ಯವಿವಾಹವೂ ಕೂಡ ಜಾರಿಗೆ ಬಂದಿತು ಎಂದು ಹೆಳಬಹುದು. ಪರಿಸ್ಥಿತಿ ಇಂದು ಬದಲಾಗಿದೆ ಅವಳು ಅವಿವಾಹಿತಳಾಗಿ ಉಳಿಯುವ ಸ್ವಾತಂತ್ರ್ಯವಿದೆ ಎನ್ನುವಾಗ, ಸಮಾಜ ಅವಳನ್ನು ಬೇರೆಯದೇ ದೃಷ್ಟಿಯಿಂದ ನೋಡುತ್ತದೆ. ಅವಳಿಗೆ ವಿವಾಹವಾದರೇ ಮಾತ್ರ ಸ್ಥಾನಮಾನಗಳು ಲಭ್ಯ. ಇಲ್ಲದಿದ್ದರೇ ಆಸ್ಥಾನಮಾನಗಳು ಕೇವಲ ಅಪವಾದದಿಂದ ಕೂಡಿರುತ್ತವೆ.

ವಿವಾಹದ ಮೂಲಕ ಹೆಣ್ಣು ಪುರುಷನಿಗೆ ಅಧೀನಳಾಗುತ್ತಾಳೆಂದು ಹೇಳಬಹುದು. ವಿವಾಹದ ವಿಧಿಗಳಲ್ಲಿ ಅಕ್ಕಿಕಾಳನ್ನು ತಲೆಮೇಲೆ ಹಾಕುವಾಗ ಗಂಡು ಕುಳಿತು ಹಾಕುತ್ತಾನೆ ಹೆಣ್ಣು ಎದ್ದುನಿಂತು ಹಾಕುತ್ತಾಳೆ. ಅಂದರೆ ಇದಕ್ಕೆ ಕಾರಣ ಪತಿಯನ್ನು ದೇವರೆಂದು ಪೂಜಿಸುವಾಗ ಆತನಿಗೆ ಮರ್ಯಾದೆಯ ರೂಪಕವಾಗಿ ಇದು ಬೆಳೆದು ಬಂದಿದೆ. ಅಂದರೆ ಪುರುಷನು ಪ್ರಥಮದರ್ಜೆ, ಸ್ತ್ರೀಯು ದ್ವಿತೀಯ ದರ್ಜೆಯವಳೆಂಬುದನ್ನು ಈ ಆಚರಣೆಗಳು ಪ್ರಚುರಪಡಿಸುತ್ತಿವೆ. ಅದೂ ಅಲ್ಲದೇ ವಿವಾಹದಲ್ಲಿ ಹೆಣ್ಣಿನ ಸ್ಥಾನ ಎಡಗಡೆ, ಗಂಡಿನ ಸ್ಥಾನ ಬಲಗಡೆ ಇದೆ. ಅಂದರೆ ಪುರುಷ ಬಲಗಡೆ ಶ್ರೇಷ್ಠ, ಹೆಣ್ಣು ಎಡಗಡೆ ಅಂದರೆ ಕನಿಷ್ಠ ಎಂಬ ಭಾವನೆಯನ್ನು ಬೆಳೆಸುತ್ತವೆ, ಇದು ಧರ್ಮದ ಏಕಮುಖಿ ಚಿಂತನೆಗೆ ಕಾರಣವಾಗಿದೆ. ಪುರುಷ ಪ್ರಧಾನತೆಯನ್ನು ಇವು ಎತ್ತಿಹಿಡಿಯುತ್ತವೆ. ಹೆಣ್ಣು ವಿವಾಹವಾದೊಡನೆ ಗಂಡನ ಮನೆಗೆ ಹೋಗಬೇಕು. ಅಲ್ಲಿ ಅವಳ ಹೆಸರನ್ನೆ ಬದಲಾಯಿಸಲಾಗುತ್ತದೆ. ತಂದೆಯ ಮನೆಯಲ್ಲಿದ್ದ ಅವಳ ಚಿತ್ರ ಅಥವಾ ಪಾತ್ರ ಪೂರ್ತಿಯಾಗಿ ಬದಲಾಗುತ್ತದೆ. ನಂತರದ ಗಂಡನ ಮನೆಯಲ್ಲೂ ಕೂಡ ಅವಳು ತನ್ನ ಅಸ್ತಿತ್ವಕ್ಕಾಗಿ ಪರದಾಡಬೇಕು. ಅದಕ್ಕಾಗಿ ಅವಳು ಸೇವೆಯನ್ನು ನಿರ್ಮಲಭಾವದಿಂದ ಮಾಡಬೇಕು. ಅವರಿಗೆ ಬೇಕಾದ ಪುತ್ರ ಸಂತಾನವನ್ನು ನೀಡಬೇಕು. ಇನ್ನು ಮುಂತಾಗಿ ಅವಳು ಪತಿಯ ಮನೆಯ ಆಶೋತ್ತರಗಳಿಗಾಗಿ ಪರೀಕ್ಷೆಗಳನ್ನು ಎದುರಿಸುತ್ತಲೇ ಸಾಗಬೇಕು. ತಂದೆಯ ಮನೆಯಲ್ಲಿ ಗಂಡನ ಮನೆಯಲ್ಲಿ ಅವಳು ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಬಿಟ್ಟುಕೊಡುತ್ತಲೇ ಸಾಗಬೇಕು. ಅಲ್ಲಿ ಅವಳು ಗಂಡನ ಅಸ್ತಿತ್ವದೊಂದಿಗೆ ತನ್ನನ್ನು ಗುರುತಿಸಿಕೊಳ್ಳಬೇಕು. ಈ ವ್ಯವಸ್ಥೆಯಲ್ಲಿನ ಅವಳ ಲೈಂಗಿಕ ನಿಯಂತ್ರಣದಿಂದಾಗಿ ಅವಳು ಯಾವಾಗಲೂ ನಿಯಂತ್ರಣದಲ್ಲೆ, ಪ್ರತಿಬಂಧಗಳ ಮಧ್ಯೆ ಬದುಕುವಂತೆ ಮಾಡುತ್ತವೆಂದು ಹೇಳಬಹುದು.

'ಗೃಹಿಣಿ ಗೃಹ ಮುಚ್ಛತೆ' ಎಂದು ಹೇಳಿ ಅವಳನ್ನು ನಾಲ್ಕುಗೋಡೆಗಳ ಒಳಗೆ ಸೀಮಿತಗೊಳಿಸುತ್ತದೆ. ಆದರ್ಶ ಪಾತ್ರ ಮಾದರಿಗಳ ಮೂಲಕ ಗೃಹಿಣಿಯ ಪಾತ್ರವನ್ನು ವೈಭವಿಕರಿಸಲಾಗುತ್ತದೆ. ಹೆಚ್ಚಾಗಿ ಈ ಗೃಹಿಣಿತ್ವವು ಅವಳ ಶೀಲ, ಪಾವಿತ್ರ್ಯದೊಂದಿಗೆ ತಳುಕು ಹಾಕಿಕೊಂಡಿದೆ ಎಂದು ಹೇಳಬಹುದು.

ಬಸುರಿ ಮತ್ತು ಬಾಣಂತಿತನಗಳ ಆಚರಣೆಗಳು ಕೇವಲ ಗಂಡು ಸಂತಾನದ ಉದ್ದೇಶವನ್ನೆ ಹೊಂದಿವೆ ಎಂಬುದು ಸರ್ವವೇದ್ಯ. ಗರ್ಭಾಧಾರಣೆಯ ಸಂಸ್ಕಾರದಲ್ಲಿ ಅಂದರೆ ಧರ್ಮಶಾಸ್ತ್ರಗಳ ಪುಂಸವನ ಸಂಸ್ಕಾರವೆಂದು

ಕರೆಯಿಸಿಕೊಳ್ಳುತ್ತದೆ. ಗರ್ಭಿಣಿಗೆ ಮಗು ಗಂಡಾಗಲಿ ಎನ್ನುವ ಉದ್ದೇಶದಿಂದ ಮಾಡಲಾಗುತ್ತದೆ. ಅವಳಿಗೆ ಗಂಡು ಮಗುವನ್ನು ಜನ್ಮ ನೀಡೆಂದು ಆಶಿರ್ವಾದವನ್ನು ಮಾಡಲಾಗುತ್ತದೆ. ಪುತ್ರನು 'ಪುತ್' ಎಂಬನರಕದಿಂದ ತಂದೆಯನ್ನು ಪಾರುಮಾಡಲು ಹೆಣ್ಣು ಗಂಡು ಮಗುವನ್ನು ಹೆರಬೇಕಾಗುತ್ತದೆ. ಇತ್ತಿಚೀನ ಹಲವು ತಾಂತ್ರಿಕ ಸಾಧನಗಳ ಮೂಲಕ ಮಗು ಗಂಡೊ ಎಂದು ತಿಳಿದು ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆಯನ್ನು ಮಾಡುತ್ತಾರೆ. ಬಾಣಂತಿ ಅವಸ್ಥೆಯಲ್ಲಿ ಹೆಣ್ಣು ಮಗು ಹುಟ್ಟದರೇ ಅವಳ ಆರೈಕೆಯನ್ನು ಅಷ್ಟು ಚೆನ್ನಾಗಿ ಕಾಳಜಿವಹಿಸಿ ಮಾಡುವದಿಲ್ಲ. ಎಷ್ಟೋ ಕುಟುಂಬಗಳಲ್ಲಿ ಹೆಣ್ಣು ಮಗು ಹುಟ್ಟಿದರೇ ಮೂರು ದಿನಗಳ ವರೆಗೆ ಹಾಲುಕುಡಿಸುವದಿಲ್ಲ. ಗಂಡು ಸಂತಾನವಾದರೇ ಅವಳ ಆರೈಕೆಯನ್ನು ಚೆನ್ನಾಗಿ ಮಾಡುವುದು ಕಂಡುಬರುತ್ತದೆ. ಗಂಡು ಸಂತಾನವಾದರೇ ೧೨ನೇ ದಿನ ನಾಮಕರಣಮಾಡುತ್ತಾರೆ. ಹೆಣ್ಣು ಮಗುವಾದರೆ ೧೩ನೇ ದಿನ ನಾಮಕರಣ ಮಾಡುತ್ತಾರೆ. ಈ ಆಚರಣೆಗಳಲ್ಲಿ ಗಂಡು ಹೆಣ್ಣು ಮಗುವಿಗಾಗಿ ಏನೂ ವ್ಯತ್ಯಾಸವಿಲ್ಲ. ಆದರೆ ಗಂಡು ಮಗುವಾದರೇ ಸಿಹಿ ಹಂಚಿ, ಹೆಚ್ಚು ಜನರಿಗೆ ಹೇಳಿ ಜೋರಾಗಿ ನಾಮಕರಣಮಾಡುತ್ತಾರೆ. ಹೆಣ್ಣು ಮಗುವಾದರೇ ಮನೆಮಂದಿಯಷ್ಟೆ ಸೇರಿ ಮಾಡುವುದುಂಟು. ಆದರೆ ಇತ್ತಿಚೀಗೆ ಮಗು ಸಣ್ಣದಿರುವುದಕ್ಕೆ ಅಥವಾ ಬಾಣಂತಿಗೆ ಕುಳಿತುಕೊಳ್ಳಲಾಗುವುದಿಲ್ಲ ಎಂದು ೩ ತಿಂಗಳಿಗೆ ನಾಮಕರಣ ಶಾಸ್ತ್ರ ಮಾಡಲಾಗುತ್ತದೆ. ಹೆಣ್ಣು ಮಗುವಿನ ಜನನವಾದರೂ, ಗಂಡು ಮಗುವಿನ ಜನನವಾದರೂ 'ರಿದ್ಧಿ'ಯನ್ನು ಪಾಸಿಲಾಗುತ್ತದೆ. ರಿದ್ಧಿ ಎಂದರೇ ವೃದ್ಧಿ, ವಂಶವೃದ್ಧಿ ಎಂದರ್ಥ, ಅದು ಜನರ ನಾಲಿಗೆಗೆ ಸಿಕ್ಕು ರಿದ್ದಿಯಿಂದಾಗಿದೆ. ಗಂಡನ ಮನೆಯವರಿಗೆ ಈ ರಿದ್ದಿಯು ಹತ್ತುದಿನಗಳ ವರೆಗೆ ಇರುತ್ತದೆ. ತಂದೆಯ ಮನೆಗೆ ಇದು ಮೂರು ದಿನಗಳ ವರೆಗೆ ಇರುತ್ತದೆ. ತಂದೆಯ ಮನೆಗೆ ಈ ರಿದ್ದಿ ಮಾತ್ರ ಸಂಬಂಧಿಸಿದೆ. ಮುಂದ ಅವಳ ಯಾವ ಕಾರ್ಯಕ್ಕೂ ತಂದೆಯ ಮನೆಗೂ ಯಾವ ಸಂಬಂಧವೂ ಇಲ್ಲವೆಂದು ಹೇಳಬಹುದು.

ವೈಧ್ಯವ್ಯವು ಹೆಣ್ಣಿನ ಪಾಲಿಗೆ ಕಠಿಣ ಶಿಕ್ಷೆಯೇ ಸರಿ. ಅದಕ್ಕಾಗಿ ಎಷ್ಟೋ ಹೆಣ್ಣು ಮಕ್ಕಳು ಸತಿಹೋಗುತ್ತಿದ್ದುದೂ ಉಂಟು. ತಾವು ಮಾಡದ ತಪ್ಪಿಗಾಗಿ ವಿಧವೆಯರು ಸಾಮಾಜಿಕ ಕಳಂಕಹೊರಬೇಕಾಗುತ್ತಿತ್ತು. ಆ ಹೆಣ್ಣಿಗೆ ಆ ಹೆಣ್ಣು ಬಂದ ಕಾಲ್ಗುಣ ಚೆನ್ನಾಗಿರಲಿಲ್ಲ. ಗಂಡನನ್ನು ತಿಂದು ಹಾಕಿದಳು. ಆಕೆಗೆ ಮುತ್ತೈದೆಯಾಗಿ ಸಾಯುವಭಾಗ್ಯ ಪಡೆದುಕೊಂಡಿಲ್ಲ. ಆಕೆ ಪಾಪಿಷ್ಟೆ ಎಂತೆಲ್ಲಾ ಬೈಯಲಾಗುತ್ತಿತ್ತು ವಿಧವೆ ಹೆಣ್ಣನ್ನು 'ರಂಡೆ', 'ಮುಂಡೆ', 'ಬೋಳಿ' ಎಂದು ಹೀಯಾಳಿಸಲಾಗುತ್ತಿತ್ತು. ತಾನು ಪಡುತ್ತಿರುವ ಪಾಡಿನ ವೇದನೆ ಒಂದು ಕಡೆಯಾದರೇ ಈ ತರಹದ ವೇದನೆಗಳು ಒಂದು ಕಡೆ ಇವೆಲ್ಲವುಗಳಿಂದ ಇಂಥ ಬಾಳು ಬೆಡವೆಂಬ ತೀರ್ಮಾನಕ್ಕೂ ಕೊಡ ಬರುತ್ತಾಳೆ. ಸಧ್ಯದ ಪರಿಸ್ಥಿತಿಯಲ್ಲಿ ವಿಧವೆಗೆ ಅಷ್ಟೊಂದು ಕಟ್ಟುಪಾಡುಗಳು ಇಲ್ಲವೆಂದರೂ, ವಿಧವೆಯ ಬಾಳು ಚಿಂತಾಜನಕ ಸ್ಥಿತಿಯಲ್ಲೆ ಇದೇ ಎಂದೂ ಹೆಳಬಹುದಾಗಿದೆ. ಹಿಂದೆ ವಿಧವೆ ಎಂದರೆ ಕೆಂಪು ಸೀರೆ ಉಡಬೇಕು ತಲೆ ಬೋಳಿಸಿಕೊಳ್ಳಬೇಕು. ಆಭರಣಗಳನ್ನು ಧರಿಸಬಾರದು. ಮಂಗಳಕರ ಸಾಮಗ್ರಿಗಳನ್ನು ಮುಟ್ಟಬಾರದು. ಮುತ್ತೈದೆಯರೊಂದಿಗೆ ಊಟಮಾಡುವಂತಿಲ್ಲ. ಯಾರಾದರೂ ಊರಿಂದ ಬಂಧಾಗ, ಹೋರಟಾಗ ಅವರಿಗೆ ಎದುರಾಗಬಾರದು, ಅಲ್ಲಿ ಇಲ್ಲಿ ಒಡಾಡಬಾರದು, ಒಂದೆಡೆ ಕುಳಿತುಕೊಳ್ಳಬೇಕು. ಬತ್ತಿಮಾಡುವುದು, ಪೂಜೆಗೆ ಅಣಿಮಾಡುವುದು, ದೇವರ ನಾಮಸ್ಮರಣೆಮಾಡುವುದು, ಒಪ್ಪತ್ತೆ ಊಟಮಾಡಬೇಕು, ಅದೂ ಸಪ್ಪೆ ಸಪ್ಪೆಯಾದ ಆಹಾರ ಸೇವಿಸಬೇಕು, ಕಾಮ ಪ್ರಚೋದಕ ಆಹಾರಗಳನ್ನು

ವರ್ಜಿಸಬೇಕು, ಮನೆಯ ಇತರರ ಸೇವೆ ಮಾಡಿಕೊಂಡು ಕಾಲಕಳೆಯಬೇಕು. ಇದರೊಂದಿಗೆ ಸಮಾಜದ ಇತರರ ಅನಾದರಗಳಿಗೆ ಎಡೆಕೊಡದೆ ಇರಬೇಕಾದಂತಹ ಪರಿಸ್ಥಿತಿ ಇತ್ತು.

ಇತ್ತಿಚೇಗೆ ವಿಧವಾ ನಿರ್ಬಂದಗಳಲ್ಲಿ ಹಲವು ಬದಲಾವಣೆಗಳಾಗಿರುವುದು ಕಂಡುಬರುತ್ತಾರೆ. ಇವರು ತಮ್ಮ ಪತಿಯ ಮರಣಾನಂತರ ವಿಧವಾ ಮರುವಿಹಾಕ್ಕೆ ಒಳಪಡಬಹುದು.ತೀರ ಚಿಕ್ಕವಳಾಗಿದ್ದರೇ ಮರು ವಿವಾಹಕ್ಕೆ ಅವಕಾಶವಿದೆ. ಅವಳಿಗೆ ಮಕ್ಕಳಾಗಿದ್ದರೇ ಅದೂ ಸಾಧ್ಯವಿಲ್ಲ. ಗಂಡಿಗೆ ಮಾತ್ರ ಮಕ್ಕಳಿದ್ದರೂ ವಿವಾಹಮಾಡಿಕೊಳ್ಳಬಲ್ಲ. ಅವಳು ಕುಂಕುಮಬೊಟ್ಟು ಇಡುತ್ತಿದ್ದಾಳೆ. ಆದರೆ ಅದು ತೀರಚಿಕ್ಕದು ಅಷ್ಟಕ್ಕೇನೇ ಅವಳು ಹೇಗೆ ತಿರುಗಾಡುತ್ತಿದ್ದಾಳೆ ನೋಡು ಎಂಬ ಮಾತುಗಳು ಕೇಳಿಬರುತ್ತವೆ. ಅವಾಗ ಕೇವಲ ದೇವರನಾಮಸ್ಮರಣೆ, ಬತ್ತಿ ಹೊಸೆಯುವಂಥ ಕೆಲಸಗಳಿದ್ದವು. ಆದರೆ ಇಂದು ಆರ್ಥಿಕ ಪರಿಸ್ಥಿತಿನೀಗಿಸಲು ಅವಳ ದುಡಿಮೆ ಅನಿವಾರ್ಯವಾಗಿದೆ ಗಂಡನ ಉದ್ಯೋಗ ಇದ್ದರೇ ಸರಿ ಇಲ್ಲದಿದ್ದರೇ ಉದ್ಯೋಗಕ್ಕಾಗಿ ಅವಳು ತುಂಬಕಷ್ಟಪಡಬೇಕು. ಇದ್ಯೋಗಸಿಕ್ಕರೂ ಉಳಿದ ಅವಳ ಸಹವರ್ತಿಗಳಿಂದ ಅಸಹಕಾರ ಕೂಡ ಆಗಬಹುದು. ಕಾಮುಕ ಪುರುಷರು ಯಾವ ರೀತಿ ಅವಳನ್ನು ಸಿಕ್ಕಿಹಾಕಿಸಲಿ, ಹೇಗೆ ಅವಳನ್ನು ಬಳಸಬೇಕು ಎಂಬುದರವುಗಳ ಬಗ್ಗೆ ಸಮಯನೋಡಿಕೊಂಡು ಕುಳಿತಿರುತ್ತಾರೆ. ಇವರ ಇಷ್ಟೊಂದು ಬದಲಾವಣೆಗಳು ಅನಿವಾರ್ಯಕ್ಕಾಗಿ ಮನಸಾ ಒಪ್ಪಿ ಇವರು ಬದಲಾವಣೆಗಳನ್ನು ಸ್ವೀಕರಿಸುತ್ತಿಲ್ಲ. ಈ ಸಮಾಜದ ಬದಲಾವಣೆಗಳಿಗೆ ಅನಿವಾರ್ಯವಾಗಿ ಒಗ್ಗಿಕೊಳ್ಳುತ್ತಿದ್ದಾರೆ.

ವಿಧುರನಿಗೆ ಹಿಂದೆ ಯಾವ ನಿರ್ಬಂದಗಳು ಇರಲಿಲ್ಲ ಈಗಲೂ ಇಲ್ಲ ಎಂದು ಹೇಳಬಹುದಾಗಿದೆ. ಅವನು ಹೆಂಡತಿ ಇರದಿದ್ದ ಈ ಬೇರೆಯವಳೊಂದಿಗೆ ಸಂಬಂಧ ಹೊಂದಬಹುದು. ಇದ್ದರೂ ಕೂಡ ಅವನ ಅನಧಿಕೃತ ವರ್ತನೆಗೆ ಪ್ರಶ್ನೆಯೇ ಇಲ್ಲ. 'ಅವನು ಗಂಡಸು ಏನುಬೇಕಾದರೂ ಮಾಡುತ್ತಾನೆ. ನಿನಗೆ ತಿಳಿಯಲಿಲ್ಲವೇ, ನೀನು ನಿಯಂತ್ರಣದಲ್ಲಿರಬೇಕಿತ್ತು ಅದು ನಿನ್ನ ತಪ್ಪು' ಎಂದು ಒಂದು ಹೆಣ್ಣೆ ಇನ್ನೊಂದು ಹೆಣ್ಣಿಗೆ ಹೇಳುತ್ತಾಳೆ ಇದು ಆಕೆಯ ತಪ್ಪಲ್ಲ. ಇದು ಪುರುಷಾಧಿಕಾರದ ಪ್ರಭಾವಗಳಲ್ಲಿ ಒಂದು. ವಿಧವೆ ಹೆಣ್ಣು ಬೆರೊಬ್ಬನೊಂದಿಗೆ ಸಲುಗೆಯಿಂದ ವರ್ತಿಸಿದರೂ ಅವಳಿಗೆ ಜಾತಿಸಮುದಾಯದಿಂದ ಬೆದರಿಕೆಗಳು ಬಂದೊರಗುತ್ತವೆ. ಇತ್ತಿಚೀನ ವಿಧವೆಯ ಅಭಿಪ್ರಾಯಗಳನ್ನು ಕೇಳಿದಾಗ ತುಂಬಾ ನೋವೆನಿಸುತ್ತದೆ. ಅದೇನೆಂದರೇ 'ಗಂಡು ಮಕ್ಕಳು ನಮ್ಮೊಂದಿಗೆ ಚೆನ್ನಾಗಿ ವರ್ತಿಸುತ್ತಾರೆ ಆದರೆ ಹೆಣ್ಣು ಮಕ್ಕಳೇ ನಮ್ಮೊಂದಿಗೆ ಚೆನ್ನಾಗಿ ವರ್ತಿಸುವದಿಲ್ಲ. ಮಡಿ ಮಡಿ ಎಂದು ಹಾರಾಡುತ್ತಾರೆ. ಅದಕ್ಕೆ ಹೇಳುವುದು ಹೆಣ್ಣಿಗೆ ಹೆಣ್ಣೆ ಶತ್ರು ಎಂದು' ಎನ್ನುತ್ತಾರೆ. ಇದರಲ್ಲಿ ಆ ಮಹಿಳೆಯರತಪ್ಪೇನಿಲ್ಲ. ತನಗೆ ಸಹಕಾರನೀಡದ ಹೆಣ್ಣಿನ ಬಗ್ಗೆ ಶತ್ರು ಎಂಬ ಅಭಿಪ್ರಾಯಕ್ಕೆ ಬಂದು ಬಿಡುತ್ತಾರೆ. ಗಂಡು ಮನೆಯ ನಾಲ್ಕುಗೋಡೆಗಳ ಮಧ್ಯೆ ಕುಳಿತು ಆ ಹೊರಗಿನ ಹೆಣ್ಣಿನ ಬಗ್ಗೆ ಬೆಳೆಸುವ ಶತ್ರುತ್ವ ಭಾವನೆ ಗಮನವೇ ಇಲ್ಲ. ಆತ ಆ ಇಬ್ಬರೂ ಹೆಣ್ಣು ಮಕ್ಕಳನ್ನು ತನ್ನ ವ್ಯವಸ್ಥೆಯ ಸುವ್ಯವಸ್ಥಿತತೆಗೆ ಬಳಸಿಕೊಳ್ಳುತ್ತಾನೆ. ಅಂದರೆ ಮನೆಯ ಹೆಣ್ಣಿನ ಮೂಲಕ ತಾನು ಹೇಳಿಸುತ್ತಾನೆ. ನಾನು ಗಂಡಸು ಅವಳಿಗೆ ಹೇಗೆ ಹೇಳಲಿ ನೀನೆ ಹೇಳು ಎಂದು ಅವಳಿಂದ, ಆ ಎರಡನೆಯ ಹೆಣ್ಣಿಗೆ ಹೇಳಿಸುತ್ತಾನೆ. ಇದರ ಪರಿವೇ ಇಲ್ಲದ ಸೋದರತ್ವದ ತತ್ವಕ್ಕೆ ಒಳಪಡಬೇಕಾದ ಬ್ರಾಹ್ಮಣ ಹೆಣ್ಣು ಮಕ್ಕಳು, ಶತ್ರುಗಳಂತೆ ಮಾರ್ಪಾಟಾಗುತ್ತಿದ್ದಾರೆಂದು ಹೇಳಬಹುದು.

ವಿಧವಾ ಅನ್ನುವುದು ಒಂದು ಧರ್ಮ ಅದನ್ನು ಅದನ್ನು ಪ್ರಾಮಾಣಿಕವಾಗಿ ಪಾಲಿಸಿಕೊಂಡು ಹೋಗಬೇಕೆಂದು ಹೇಳುತ್ತಾರೆ. ಆದರೆ ವಿಧುರನಿಗೆ ಯಾವುದೇ ಧರ್ಮವಿಲ್ಲವೆ ಎಂಬ ಪ್ರಶ್ನೆಗೆ ಆಸ್ಪದವನ್ನೆ ಕೊಡುವದಿಲ್ಲ. ಮುತ್ತೈದೆ ಹೆಣ್ಣೆ ಕೆಲವೇ ಕೆಲವು ದೇವರುಗಳನ್ನು ಪೂಜಿಸಲು ಅವಕಾಶನೀಡುವ ಬ್ರಾಹ್ಮಣಜಾತಿ, ಇನ್ನು ವಿಧವೆಗೆ ಯಾವ ದೇವರನ್ನು ಪೂಜಿಸಲು ಅವಕಾಶಕೊಟ್ಟೀತು. ಕೇವಲ ಗರ್ಭಾಶಯವಿದ್ದ ಕಾರಣಕ್ಕಾಗಿ ಅವಳು ಅಪವಿತ್ರಳೆನಿಸಿಕೊಳ್ಳುತ್ತಾಳೆ. ಎಲ್ಲ ತಪ್ಪುಗಳ ಹೊಣೆಯನ್ನು ತಾನೇ ಹೊತ್ತುಕೊಳ್ಳಬೇಕಾಗುತ್ತದೆ. ಅದು ಅವಳ ತಪ್ಪಾದರೂ ಸರಿ, ಅವನ ತಪ್ಪಾದರೂ ಸರಿ, ದೋಷಾರೋಪಣೆ ಮಾತ್ರ ಹೆಣ್ಣಿಗೆ ಇರುವುದು ಕಂಡುಬರುತ್ತದೆ. ತಾನೇ ದುಡಿದು ತನ್ನ ಸಂಸಾರ ನಿರ್ವಹಿಸುತ್ತಿದ್ದರೂ ಮನೆಯ ಯಜಮಾನಿ ಅನ್ನಿಸಿಕೊಳ್ಳುವದಿಲ್ಲ ಇದು ನಮ್ಮ ಸಾಮಾಜಿಕ ವ್ಯವಸ್ಥೆಯ ದುರದೃಷ್ಟವಶ ಎಂದು ಹೇಬಹುದು.

ಮುಪ್ಪಾವಸ್ಥೆಯಲ್ಲಿ ಮಕ್ಕಳ ಹಾಗೆ ಎಂದು ಹೇಳಲಾಗುತ್ತದೆ. ಅಲ್ಲಿಯೂ ಕೂಡ ಅವಳು ಮಾಡುವ ತಪ್ಪನ್ನೆ ಗಮನಿಸಿರುತ್ತಾರೆ. 'ಮುದುಕಿಯಾದರೂ ಇನ್ನು ಬುದ್ಧಿಬರಲಿಲ್ಲ' ಎಂದು ಹೀಯಾಳಿಸುತ್ತಾರೆ. ಈ ಸಂದರ್ಭದಲ್ಲಿ ಮುಟ್ಟು ನಿಂತಿರುತ್ತದೆ. ಹಾಗಾಗಿ ಋಷಿ ಪಂಚಮಿ ವ್ರತಪಾಲಿಸಬೇಕು ಇದ ಸತತ ಎಂಟು ವರ್ಷಗಳಕಾಲ ಆಚರಿಸಬೇಕು. ಇದು ಮುಗಿದರೂ ವ್ರತಾಚರಣೆಯ ನಿಯಮವನ್ನೆ ಪಾಲಿಸಬೇಕು. ಗಂಡ ಇದಕ್ಕೆ ಒಪ್ಪಿದರೆ ಮಾತ್ರ ಪಾಲಿಸಬೇಕು. ಮಡಿ ಅಡಿಗೆ, ಪೂಜೆ ಎಲ್ಲವನ್ನು ಮಾಡಬೇಕಾಗುತ್ತದೆ. ಬೇರೆಯವರನ್ನು ಮುಟ್ಟಿಸಿಕೊಳ್ಳಬಾರದು ಅನಿವಾರ್ಯ ಪ್ರಸಂಗ ಬಂದರೆ ಉಪವಾಸ ಇಬೇಕೇ ಹೊರತು ಹೊರಗಡೆ ಏನೊ ತಿನ್ನಬಾರದು. ಪ್ರಯಾಣ ಸಂದರ್ಭದ ಪದಾರ್ಥಗಳನ್ನು ಮುಟ್ಟಬಾರದು ತಿನ್ನಬಾರದು. ಬೆಳ್ಳುಳ್ಳಿ, ಈರುಳ್ಳಿ ತಿನ್ನಬಾರದು, ಮಾಂಸಾಹಾರ ಸೇವಿಸಬಾರದೆಂದು ಹೇಳಲಾಗುತ್ತದೆ. ಆದರೆ ಇವೆಲ್ಲ ನಿಯಮುಗಳು ಗಂಡಿಗೆ ಅನ್ವಯಿಸುವುದಿಲ್ಲ. ಅದೇ ಸ್ಥಿತಿ ಅಥವಾ ಅವಸ್ಥೆಯಲ್ಲಿರುವವನೊಂದಿಗೆ ಈ ತರಹದ ಬೇಧ ಭಾವ ಕಾಣಿಸಿಕೊಳ್ಳುವಾಗ, ಇನ್ನು ಹಿಂದಿನ ದಿನಗಳ ಅಂದರೆ ಅವಸ್ಥೆಬದಲಾದ ಗಂಡು ಹೆಣ್ಣುಗಳ ಮಧ್ಯೆ ಎಷ್ಟು ಬೇಧವಿರಬಹುದೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ. ಇದು ಸ್ಮಾರ್ಥ, ವೈಷ್ಣವ, ಕಣ್ವಶಾಖಾ, ಗೃಹಸ್ಥರೆಲ್ಲರಲ್ಲಿಯೂ ಒಂದೇ ರೀತಿಯಾಗಿ ನಡಿಯುತ್ತದೆ. ವೈಷ್ಣವರು ಹೆಚ್ಚು ಮಡಿಮಾಡುತ್ತಾರೆ. ಸ್ಮಾರ್ಥರು ಕಡಿಮೆ, ಕಣ್ವಮತದವರು ಅವರಿಗಿಂತ ಕಡಿಮೆ ಎಂಬ ಅಭಿಪ್ರಾಯವಿದೆ. ಗೃಹಸ್ಥ ಎನ್ನುವುದು ವೈಷ್ಣವರಲ್ಲಿಯ ಉಪಜಾತಿಯಾಗಿದೆ ಅಥವಾ ವಿಂಗಡನೆಯಾಗಿದೆ ಎಂದು ಹೇಳಬಹುದು.

ಇವಷ್ಟೆ ಅಲ್ಲದೇ ಬ್ರಾಹ್ಮಣರಲ್ಲಿ ಹೆಣ್ಣಿಗೆ ಇನ್ನೂ ಅನೇಕ ಧರ್ಮಾಚರಣೆಗೆ ನಿಷೇಧಗಳು ಕಂಡುಬರುತ್ತವೆ. ಬ್ರಾಹ್ಮಣ ಹೆಣ್ಣು ಮಕ್ಕಳು ತೆಂಗಿನಕಾಯಿ ಒಡೆಯುವಂತಿಲ್ಲ. ಏಕೆಂದರೇ ತೆಂಗಿನಕಾಯಿ ಬಲಿಯ ಸಂಕೇತ ಬಲಿಯನ್ನು ಪುರುಷನೇ ಕೊಡಬೇಕು ಅಲ್ಲದೆ ಗರ್ಭಾಶಯದ ಕಾರಣ ಮಹಿಳೆ ಅಪವಿತ್ರೆ ಎಂಬಕಲ್ಪನೆಯಿಂದ ತೆಂಗಿನ ಕಾಯಿಗೆ ಜುಟ್ಟು ಇರುತ್ತದೆ. ಅವುಗಳು ರೋಮಗಳಿದ್ದಂತೆ, ಗರ್ಭಾಶಯದಲ್ಲಿ ಮಗುವಿನ ರೋಮಗಳಿಗೆ ಅವನ್ನು ಹೋಲಿಸಿ ಮಗುವಿನ ತಲೆ ಪೆಟ್ಟಾಗುತ್ತದೆ. ಅದು ಅವಳ ವಂಶಾಭಿವೃದ್ಧಿಗೆ ಒಳ್ಳೆಯದ್ದಲ್ಲವಾದ್ದರಿಂದ ಹೆಣ್ಣು ತೆಂಗಿನಕಾಯನ್ನು ಒಡೆಯಲಾಗುವುದಿಲ್ಲವೆಂದು ಹೇಳಲಾಗುತ್ತದೆ.

ಹೆಣ್ಣು ಪ್ರತಿ ತಿಂಗಳು ರಜಸ್ವಲೆಯಾಗುವುದರಿಂದ ಅವಳು ಪಾಪಿಷ್ಠೆ ಅಪವಿತ್ರೆ ಎಂಬ ಕಲ್ಪನೆಯಿದೆ ಹಾಗಾಗಿ ಅವಳು ಶಾಲಿಗ್ರಾಮವನ್ನು ಮುಟ್ಟುವಂತಿಲ್ಲ. ಬ್ರಾಹ್ಮಣರಲ್ಲಿ ಹೆಣ್ಣು ಪೂಜೆಗೆ ಅರ್ಹಳಲ್ಲ. ಅವಳಿಗೆ ಕೇವಲ ಪೂಜೆಗೆ ಅಣಿಮಾಡಿಕೊಡುವುದು. ತನ್ನ ಕುಟುಂಬದ ಸದಸ್ಯರ ಪೋಷಣೆ ಮಾಡುವುದು. ಆಹಾರ ತಯಾರಿಸುವುದು ಇವಷ್ಟನ್ನೆ ಅವಳಿಗೆ ವಿಧಿಸಲಾಗಿದೆ ಎಂದು ಹೇಳಲಾಗುತ್ತದೆ. ಗೃಹಿಣಿತ್ವ ಪಾಲನೆಯೇ ಅವಳ ಪ್ರಪ್ರಥಮ ಕರ್ತವ್ಯ ಅದನ್ನು ಸರಿಯಾಗಿ ನಿಭಾಯಿಸಿಕೊಂಡು ಹೋದರೆ ಸಾಕು ಅದೇ ಅವಳ ಪೂಜೆಮಾಡುವ ರೀತಿ, ಪೂಜೆಗೆ ಸಿಗುವ ಫಲ ಇದಕ್ಕೆನೆ ಸಿಗುತ್ತದೆ ಎಂದು ಹೇಳಿ ಧರ್ಮದ ವಿಷಯದಲ್ಲಿ ಅವಳು ಸ್ವತಂತ್ರಳಲ್ಲ, ಪೂಜಾಧಿಕಾರವನ್ನು ಅವಳಿಗೆ ನಿಷೇದಿಸಲಾಗಿದೆ. ಇತ್ತೀಚೆಗೆ ಅವಳು ಕೆಲವೊಂದು ದೇವರುಗಳನ್ನು ಪೂಜಿಸಬಹುದೆಂದು ಹೇಳಲಾಗುತ್ತಿದೆ.

ವೈಷ್ಣವ ಹೆಣ್ಣು ಮಕ್ಕಳು ಈ ರೀತಿಯ ಕುಂಕುಮ ಹಚ್ಚಬೇಕು. ಸ್ಮಾರ್ಥಹೆಣ್ಣು ಮಕ್ಕಳು ಈ ರೀತಿಯ ಕುಂಕುಮ ಹಚ್ಚಬೇಕೆಂಬ ಉಲ್ಲೇಖವಿಲ್ಲ. ಹಿಂದಿನಿಂದ ಆಚರಣೆಗಳ ಮೂಲಕ ನಡೆದುಕೊಂಡು ಬಂದುದರಿಂದ ವೈಷ್ಣವ ಹೆಣ್ಣುಮಕ್ಕಳು ಉದ್ದನೆಯ ಕುಂಕುಮ ಹಚ್ಚುತ್ತಾರೆ. ಸ್ಮಾರ್ಥರು ದುಂಡಾದ ಕುಂಕುಮ ಹಚ್ಚುತ್ತಾರೆ. ಕೆಲವೊಬ್ಬರು ಇದು Signal (ಚಿಹ್ನೆ) ತರ ಹಾಗಾಗಿ ಆ ರೀತಿ ಹಚ್ಚುತ್ತಾರೆಂದು ಹೇಳುತ್ತಾರೆ. ಆ ರೀತಿ ಹಚ್ಚುತ್ತಾರೆಂದು ಭಾವಿಸುತ್ತದೆ. ಆದರೆ ಅಪವಿತ್ರ ಭಾವನೆಗಳು ಅನೇಕ ಇರುವುದು ಕಂಡುಬರುತ್ತದೆ. ಹೆಣ್ಣು ದರ್ಮಾಚರಣೆಯನ್ನು ಒಂಟಿಯಾಗಿಮಾಡುವಂತಿಲ್ಲ. ಹೆಣ್ಣು ಇರದಿದ್ದರೇ ಪುರುಷ ಒಬ್ಬಂಟಿಯಾಗಿಮಾಡಬಹುದು. ಆದರೆ ಆಕೆಗೆ ಆ ಅವಕಾಶ ಇಲ್ಲ. ಇದಕ್ಕೆ ಕಾರಣ ಹೆಣ್ಣು ಸ್ವತಂತ್ರಳಲ್ಲ ಎಂದು ಹೆಳುತ್ತಾರೆ. ವೃತಗಳನ್ನು ಗಂಡೇ ಮಾಡಬೇಕು, ಹೆಣ್ಣೆ ಮಾಡಬೇಕೆಂದು ಎಲ್ಲಿಯೂ ಹೇಳಿಲ್ಲ. ಗಂಡು ಹೊರಗೆ ದುಡಿಯುವವನಾದ್ದರಿಂದ ಅವನಿಗೆ ಅದು ಸಾಧ್ಯವಿಲ್ಲ. ಎಂದು ತಾನೇ ಮಾಡುತ್ತಾಳೆ.

ಋತುಮತಿಯಾದ ಕನ್ಯೆ ಮುದ್ರೆ ಹಾಕಿಸಿಕೊಳ್ಳುವಂತಿಲ್ಲ. ಬ್ರಾಹ್ಮಣರಲ್ಲಿ ಋತುಮತಿ ಮುಂಚೆ ಮತ್ತು ವಿವಾಹಾನಂತರ ಮಾತ್ರ ಅವಳಿಗೆ ಮಾನ್ಯತೆ ಇದೆ. ಹಾಗಾಗಿ ಆ ಕನ್ಯೆಗೆ ಮುದ್ರೆಗೆ ಅವಕಾಶವಿಲ್ಲ. ಯಾವ ಧರ್ಮಗ್ರಥಗಳಲ್ಲೂ ಇದರ ಉಲ್ಲೇಖವಿಲ್ಲ. ಮುದ್ರೆ ಗಂಡಿಗೆ ಐದು, ಹೆಣ್ಣಿಗೆ ಎರಡು. ಕಾರಣ ಆತ ಉಪನಯನ ಸಂಸ್ಕಾರಕ್ಕೊಳಪಟ್ಟು ದೇವರ ಪೂಜೆಮಾಡುತ್ತಾನೆ. ಹೆಣ್ಣು ಪೂಜಾಧಿಕಾರ ಹೊಂದಿಲ್ಲ ಹಾಗಾಗಿ ಎರೆಡು ಮುದ್ರೆಗಳನ್ನು ಮಾತ್ರ ಅವಳಿಗೆ ಹಾಕಲಾಗುತ್ತದೆ. ಸ್ಮಾರ್ಥರ ಮುದ್ರೆ ಹಾಕಿಸಿಕೊಳ್ಳುವದಿಲ್ಲ. ವೈಷ್ಣವರು ಮುದ್ರೆ ಹಾಕಿಸಿಕೊಳ್ಳುತ್ತಾರೆ. ಈ ಮುದ್ರೆ ಎನ್ನುವುದು ಪಂಚಲೋಹ ಅಥವಾ ಚಿನ್ನದಿಂದ ಕೂಡಿದ ಶಂಕಚಕ್ರ ಇರುತ್ತದೆ ಇದನ್ನು ಕಾಯಿಸಿ ಮಠಾಧಿಪತಿಗಳಿಂದ ಕೊಡಲಾಗುತ್ತಿದೆ. ಪಾಪನಾಶಮಾಡುತ್ತದೆ ಎಂದು ಹೇಳಲಾಗುತ್ತದೆ. ಈ ಮುದ್ರೆಹಾಕಲು ಸೀರೆ ಉಡಬೇಕು. ಗಂಡಸರು ಪಂಚೆ ಅಥವಾಲುಂಗಿ ಉಡಬೇಕೆಂದು ಹೇಳುತ್ತಾರೆ. ಏಕೆಂದರೇ ಇದು ಭಾರತೀಯ ಮಹಿಳೆ ಲಕ್ಷಣ ಹಾಗಾಗಿ ಆ ರೀತಿಯ ಬಟ್ಟೆಯ ಮಾನದಂಡ ಇಡಲಾಗಿದೆ.

ವಿಧವೆಗೆ ಕೆಂಪು ಸೀರೆ ಉಡಬೇಕು ತಲೆ ಬೋಳಿಸಿಕೊಳ್ಳಬೇಕು. ಮಂಗಳಕರ ಸಾಮಗ್ರಿ ಬಳಸುವಂತೆ ಯಾವ ಧರ್ಮ ಗ್ರಂಥಗಳಲ್ಲೂ ಹೇಳಲಾಗಿಲ್ಲ ಒಟ್ಟಿನಲ್ಲಿ ಆಕೆಯನ್ನು ಕುರೂಪಗೊಳಿಸುವ ಮೂಲಕ ನಿರ್ಭಂದ ಹೇರಬೇಕೆಂದು ಹೇಳಲಾಗುತ್ತದೆ. ವಿಧುರನಿಗೆ ಇಂಥ ಯಾವ ಕುರೂಪಗಳಿಲ್ಲ. ಪೀಠಾಧಿಪತಿ ಸ್ಥಾನ ಮಹಿಳೆಗೆ ನಿರಾಕರಿಸಲಾಗುತ್ತದೆ.

ಕಾರಣ ಅಷ್ಟು ಜ್ಞಾನಿ ಅವಳಲ್ಲ. ಅವಳಿಂದ ನಿಗ್ರಹ ಅಸಾಧ್ಯ. ಹತ್ತು ಜನರೊಡನೆ ಸಂಚಾರ, ಸಂಪರ್ಕ ಹೊಂದಬೇಕಾದ್ದರಿಂದ ಹೆಣ್ಣು ಇವನ್ನು ಮಾಡಲು ಅಸಮರ್ಥಳೆಂಬ ಕಾರಣದಿಂದ ಪೀಠಾಧಿಪತಿಸ್ಥಾನವನ್ನು ನೀಡಲಾಗುವದಿಲ್ಲ.

ಹಲವು ಸಾಮಾಜಿಕ ಸಮಸ್ಯೆಗಳಿಗೆ, ಹೆಣ್ಣಿನ ಮೇಲಿನ ಶೋಷಣೆ ಎಲ್ಲದ್ದಕ್ಕೂ ಕಾರಣ ಕಲಿಯುಗ ಈ ಯುಗದಲ್ಲಿ ಅಜ್ಞಾನ ಹೆಚ್ಚಾಗಿದೆ. ಧರ್ಮ ಕಡಿಮೆಯಿದೆ ಹಾಗಾಗಿ ಇಂಥ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ ಎನ್ನುತ್ತಾರೆ. ಈ ಕಲಿಯುಗದಲ್ಲಿ ಗಂಡಿನ ತಪ್ಪಿಗೆ ಹೆಣ್ಣು ಹೊಣೆ ಆದರೆ ಹೆಣ್ಣಿನ ತಪ್ಪಿಗೆ ಗಂಡನ್ನು ಹೊಣೆಯಾಗಿಸುವುದಿಲ್ಲ. ಲಿಂಗ ಅಸಮಾನತೆ ಬ್ರಾಹ್ಮಣ ಜಾತಿಯಲ್ಲಿ ಇಲ್ಲವೆನ್ನುತ್ತಾರೆ. ಅಸಮಾನತೆ ಅಂದರೆ ಕೇವಲ ಎಂಬ ಭಾವನೆಯಿದೆ. ಇಷ್ಟೊಂದು ಅವಕಾಶವ ನೀಡಿದೆ. ಹಳೆ ಸಂಪ್ರದಾಯಗಳನ್ನು ಸಡಿಲಿಸಿದೆ. ಇನ್ನೂ ಎಷ್ಟುಕೊಡಬೇಕೆಂಬ ಉಪಕಾರ ಭಾವನೆಯಿರುವುದು ಕಂಡುಬರುತ್ತದೆ. ತೆರೆಮರೆಯಲ್ಲಿ ಹೆಣ್ಣಿನ ಶೋಷಣೆ ನಡೆಯುತ್ತದೆ ಎಂದಾಗ ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ. ಆ ಶೋಷಣೆ ಪದವನ್ನು ನಿರಾಕರಿಸುತ್ತಾರೆ. ಅವರ ದೃಷ್ಟಿಕೋನಗಳನ್ನು ಅದನ್ನೆ ಬಿಂಬಿಸುತ್ತವೆ. ಇದಕ್ಕೆಲ್ಲ ಮೂಲ ಕಾರಣ ನಮ್ಮ ಪಿತೃ ಪ್ರಧಾನತೆ ಎಂಬುದಂತೂ ಸರ್ವವೇಧ್ಯ ಸಂಗತಿ.

ಇಂದಿನ ಯುವತಿಯರು ಈ ಎಲ್ಲಾ ಆಚರಣೆಗಳಿಂದಾಗಿ ಶೋಷಣೆ ಒಳಗಾಗುತ್ತಿದ್ದಾರೆ. ಅವರು ಇವುಗಳ ಬಗ್ಗೆ 'ಚ'ಕಾರ ವೆತ್ತದೆ ಬದುಕುತ್ತಿದ್ದಾರೆ. ಯಾಕೆಂದರೇ ತಾವು ಅತಂತ್ರರು ಎಂಬ ಭಾವ ಅವರನ್ನು ಕಾಡುತ್ತಿದೆ. ತಾವು ಆರ್ಥಿಕವಾಗಿ ಸಬಲರಾಗಿದ್ದರೇ ತಮ್ಮ ದಾರಿಯನ್ನು ತಾವೇ ಆರಿಸಿಕೊಳ್ಳುತ್ತಿದ್ದರು. ಸಂಸ್ಕೃತಿ ಬಯಸುವ ಆಚರಣೆಗಳಿಂದ ದೂರುಳಿಯಲು ಹೋದಾಗ ಉಂಟಾಗುವ ತೊಡಕನ್ನು ಎದುರಿಸಲು ಸಹಾಯವಾಗುತ್ತಿತ್ತು. ತಾವು ಆರ್ಥಿಕ ಪರಾವಲಂಬಿಗಳಾಗಿರುವಾಗ, ಆಚರಣೆಗಳನ್ನು ಹೇಗೆ ವಿರೋಧಿಸಲು ಸಾಧ್ಯ ಎಂಬ ಪ್ರಶ್ನೆಗಳು ಅವರ ಮನಸ್ಸಿನಲ್ಲಿವೆ. ''ಇದು ನಿನ್ನ ಮನೆಯಲ್ಲ ನಿನ್ನಿಷ್ಟ ಬಂದಂತೆ ನಡೆದುಕೊಳ್ಳಲು ಆಸ್ಪದವಿಲ್ಲ'' ಎಂದು ಹೇಳುವಾಗ ಅವಳು ಯಾರಿಗೆ ತನ್ನ ನೋವನ್ನು ಹೇಳಿಕೊಳ್ಳಬೇಕೆಂಬ ಗೊಂದಲದಲ್ಲಿದ್ದಾಳೆ. ತನ್ನ ಜೀವನ ಪ್ರತಿಹಂತದಲ್ಲೂ ತನ್ನ ಆಯ್ಕೆಗಳಿಗೆ ಅವಕಾಶವಿಲ್ಲ. ಕೆಲವೊಂದರೊಂದಿಗೆ ಸಹಕಾರಮಾಡಿಕೊಂಡು ಬದುಕಬಹುದು ಕೆಲವು ಸಹಕಾರ ಸಾಧ್ಯವೇ ಇಲ್ಲವೆನ್ನಿಸುವಾಗ ಹೇಗೆ ತಾನೇ ಬದುಕಲು ಸಾಧ್ಯ.

ಪ್ರೇಮ ವಿವಾಹಕ್ಕೆ ಆಸ್ಪದವಿದೆ ಯಾವಾಗ ಎಂದರೆ ಬ್ರಾಹ್ಮಣರು, ಬ್ರಾಹ್ಮಣರಲ್ಲೆ ಆಗಬೇಕು. ಕಾಲಬದ್ಧವಾದ್ದರಿಂದ ಇದಕ್ಕೆ ನಡೆಯುತ್ತಿರಲಿಲ್ಲ. ಈಗ ಬ್ರಾಹ್ಮಣ ಹೆಣ್ಣಿನ ಸಂಖ್ಯಾ ಪ್ರಮಾಣವೇ ಕುಸಿದಿರುವುದರಿಂದ ಬ್ರಾಹ್ಮಣರಲ್ಲಿಯ ಯಾವುದೇ ಉಪಜಾತಿಯನ್ನು ಕೂಡ ವಿವಾಹಕ್ಕೆ ಮಾನ್ಯಮಾಡಿದ್ದಾರೆ. ಅಂತರ್ ಜಾತಿ ವಿವಾಹ ನಿಷೇದ ಎಂದು ಹೆಳುತ್ತಾರೆ. ಆದರೆ ಗಂಡು ಈ ಕೃತ್ಯಮಾಡಿದಾಗ ಒಪ್ಪಿಕೊಳ್ಳುತ್ತಾರೆ. ಇದನ್ನೆ ಹೆಣ್ಣು ಮಾಡಿದಾಗ ಸ್ವೀಕರಿಸುವದಿಲ್ಲ. ಹೆಣ್ಣು ಬೇರೊಬ್ಬರ ಮನೆಗೆ ಹೋಗಬೇಕಾಗುವುದರಿಂದ ತಂದೆ ತಾಯಿಗಳು ಅವಳನ್ನು ಅಂತಕರಣದಿಂದ, ಅವಳ ಆಸೆನಿರಾಸೆಯಾಗದಂತೆ ನಡೆದುಕೊಳ್ಳುತ್ತಾರೆ. ಇಲ್ಲಿ ಅವರಿಗೆ ಪ್ರೀತಿ ಇಲ್ಲವೆಂದರೆ ತಪ್ಪಾಗುತ್ತದೆ. ಆದರೂ ಅವರಲ್ಲಿ ಗಂಡುಸಂತಾನದ ಬಯಕೆ ಆಳವಾಗಿ ಬೇರೂರಿದೆ. ಈಗ ಮೋಕ್ಷದ ಕಲ್ಪನೆಯೊಂದೆ ಅಲ್ಲದೆ. ಅವರ ಮುಪ್ಪಾವಸ್ಥೆಗಾಗಿಯೂ ಗಂಡು ಮಕ್ಕಳುಬೇಕೆನ್ನುತ್ತಾರೆ. ಹೆಣ್ಣು ಹಿಂದಿನ ದಿನಗಳಲ್ಲಿ ಕಟ್ಟೆಹಾಕಿ

ಸೀರೆ ಉಡಬೇಕಿತ್ತು. ಇಂದು ಕಾಲಬದಲಾಗಿ ಅವರಿಗಿಷ್ಟ ಬಂದ ಬಟ್ಟೆಧರಿಸಬಹುದಾದರೂ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮೂಲ ಉಡುಗೆ ಕಡ್ಡಾಯ ಆದರೆ ಹೆಣ್ಣು ಮಕ್ಕಳು ಮನೆಯ ಮೂಲ ದೇವರನ್ನು ನೋಡುವಂತಿಲ್ಲ.

ಅವರು ಆ ದೇವರ ಮೇಲೆ ಪುರುಷ ರೇಷ್ಮೆ ಬಟ್ಟೆ ಮುಚ್ಚುತ್ತಾನೆ. ಆವಾಗ ಅದಕ್ಕೆ ನಮಸ್ಕರಿಸಬಹುದು. ಕಾಲಬದಲಾಗಿದೆ ಎಂದ ಮಾತ್ರಕ್ಕೆ ಮನಸ್ಥಿತಿ ಬದಲಾಗದು ಎಂಬುದು ಸತ್ಯವಾಗಿದೆ. ಅವಳ ಮುಟ್ಟಿನ, ಹೆಣ್ಣು ದೇಹದ ಕಾರಣದಿಂದ ಅವಳು ಇನ್ನೂ ಅನೇಕ ನಿಷೇಧಗಳಿಗೆ ಒಳಗಾಗುತ್ತಿದ್ದಾಳೆ. ಮಹಿಳಾ ವರ್ಷ ಆಚರಿಸುತ್ತಿರುವಾಗಲೇ, ಮಹಿಳಾ ಸಬಲೀಕರಣ ಪ್ರಕ್ರಿಯೆ ನಡೆದಿದೆ ಎನ್ನುವಾಗಲೆ ಇಂಥ್ಯ ಮಿಥ್ಯ, ಅಪವಾದಗಳು ಇನ್ನು ಜಾರಿಯಲ್ಲಿರುವುದು ಚಿಂತನಾಸ್ಪದ ವಿಚಾರವಾಗಿದೆ ಎಂದು ಹೇಳಬಹುದು.

ಟಿಪ್ಪಣಿಗಳು

೧. ಜ್ಯೋತಿ ಶಶಿಕುಮಾರ, ಮಹಿಳಾ ಸಾಮಾಜಿಕತೆ, ಪು. ೬

೨. ಇಂದಿರಾ ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ ಪು. ೮

೩. ಶಂಕರ್‌ರಾವ್.ಚ.ನ. ಭಾರತೀಯ ಸಮಾಜದ ಅಧ್ಯಯನ ಪು. ೬೭

೪. ಇಂದಿರಾ ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ ಪು. ೧೯

೫. ಅದೇ ಪು. ೯

೬. ಪ್ರಭಾಮಣಿ ಮಹಿಳೆ ಮತ್ತು ಧರ್ಮ, ಪು. ೨೨

೭. ಜ್ಯೋತಿ ಶಶಿಕುಮರ, ಉಧೃತ್ರ ಶ್ರೀಮತಿ ಸೆಕೆಂಡ ಸೆಕ್ಸ (ಅನು) ಪು. ೫

೮. ಇಂದಿರಾ ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ - ಪು. ೪೭

೯. ಅದೇ ಪು. ೧೪

೧೦. ಅದೇ ಪು. ೮೧

೧೧. ಜ್ಯೋತಿ ಶಶಿಕುಮಾರ ಮಹಿಳಾ ಸಾಮಾಜಿಕತೆ, ಪು. ೧೭

೧೨. ಅದೇ ಪು. ೧೭

೧೩. ಕವಿತಾರೈ, ವಿವಾಹ ಮತ್ತು ಕುಟುಂಬ, ಪು. ೧೦

೧೪. ಉಷಾ ಎಂ. ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು, ಪು. ೭೩.೭೪

೧೫. ಇಂದಿರಾ, ಆರ್. ಮಹಿಳೆ ಸಮಾಜ ಮತ್ತು ಸಂಸ್ಕತಿ, ಪು. ೩೧

೧೬. ವ್ಯಾಸಭಾರತ, ಅನುಶಾಸನಪರ್ವ, ಪು. ೪೪.೧೪

೧೭. ಇಂದಿರಾ ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ - ಪು. ೨೦.೨೧

೧೮. ಅದೇ ಪು. ೧೮.೧೯

೧೯. ಜ್ಯೋತಿ ಶಶಿಕುಮಾರ, ಮಹಿಳಾ ಸಾಮಾಜಿಕತೆ, ಪು. ೨೦.೨೧

೨೦. ಹೇಮಲತಾ ಎಚ್.ಎಂ. ಮಹಿಳಾ ಅಧ್ಯಯನ-೨ ಪು. ೧೨

೨೧. ಅದೇ ಪು. ೧೩.೧೪.

೨೨. ಇಂದಿರಾ ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ ಪು. ೨೦.೩೧

೨೩. ಜ್ಯೋತಿ, ಶಶಿಕುಮಾರ, ಮಹಿಳಾ ಸಾಮಾಜಿಕತೆ, ಪು. ೨೨.೨೩

೨೪. ಇಂದಿರಾ,ಆರ್.ಮಹಿಳೆ ಸಮಾಜ ಮತ್ತು ಸಂಸ್ಕೃತಿ ಪು. ೨೨

೨೫. ಅದೇ ಪು. ೧೧

೨೬. ಜ್ಯೋತಿ ಶಶಿಕುಮಾರ, ಮಹಿಳಾ ಸಾಮಾಜಿಕತೆ, ಪು. ೧೫.೧೬

❐

ಅಧ್ಯಾಯ : ಐದು

ಬ್ರಾಹ್ಮಣ ಮಹಿಳೆ : ಸ್ತ್ರೀವಾದಿ ನಿರ್ವಚನ

೫.೧. ತೌಲನಿಕ ವಿಶ್ಲೇಷಣೆ

೫.೨. ಸ್ಥಿತ್ಯಂತರಗಳು

೫.೩. ಸ್ತ್ರೀವಾದಿ ನಿರ್ವಚನ

ಅಧ್ಯಾಯ : ಐದು

ಬ್ರಾಹ್ಮಣ ಮಹಿಳೆ : ಸ್ತ್ರೀವಾದಿ ನಿರ್ವಚನ

''ಪುರುಷನಿಗೆ ಸರಿಸಮಾನವಾದ ಹಕ್ಕುಗಳನ್ನು ಅವಕಾಶಗಳನ್ನು ಹಾಗೂ ಅಂತಸ್ತನ್ನು ಸ್ತ್ರೀಯರಿಗೂ ನೀಡಬೇಕಾದ್ದು ಮಾನವ ಧರ್ಮವಾಗಿದೆ. ಇಂತಹ ವಿಚಾರಗಳ ಪ್ರತಿಪಾದನೆಯನ್ನು 'ಸ್ತ್ರೀವಾದ' ಎಂದು ಪರಿಗಣಿಸಬಹುದಾಗಿದೆ. ಹೆಣ್ಣು ಗಂಡುಗಳ ನಡುವಿನ ವ್ಯತ್ಯಾಸ ಜೈವಿಕವಾದ, ನಿಸರ್ಗದತ್ತವಾದ ಲಕ್ಷಣಗಳನ್ನು ಮಾತ್ರ ಒಪ್ಪುವಂತಹದಾಗಿದ್ದು, ಸಾಮಾಜಿಕವಾದ ಶ್ರೇಷ್ಠ ಕನಿಷ್ಠ ಪಾತಳಿಯಲ್ಲಿ ಗ್ರಹಿಸುವಂತದ್ದನ್ನು ವಿರೋಧಿಸುವುದಾಗಿದೆ. ಇದನ್ನೆ ಸ್ತ್ರೀಪರ ಆಶಯಗಳಿಂದ ಸೈದ್ಧಾಂತಿಕವಾಗಿ ಮತ್ತು ರಾಜಕೀಯ, ಸಾಮಾಜಿಕ ಹೊರಾಟದ ಭಾಗವಾಗಿ ಮಂಡಿಸುವುದು ಸ್ತ್ರೀವಾದವಾಗಿದೆ. ಒಂದರ್ಥದಲ್ಲಿ ಸ್ತ್ರೀಯ ಅಸ್ತಿತ್ವವನ್ನು ಮತ್ತೊಮ್ಮೆ ಮನವರಿಕೆ ಮಾಡುವ ಮತ್ತು ಅವರ ಶಕ್ತಿ ಸಾಮರ್ಥ್ಯಗಳನ್ನು ಪುನರ್ ಸ್ಥಾಪಿಸುವ ಹೋರಾಟವೇ ಸ್ತ್ರೀವಾದದ ಆಶವಾಗಿದೆ.''[೧]

ಈ ಅಧ್ಯಾಯದಲ್ಲಿ ಲಿಖಿತ ಧಾರ್ಮಿಕ ಪರಂಪರೆಗೂ ಮತ್ತು ಆಚರಣಾತ್ಮಕ ಪರಂಪರೆಗೂ ತೌಲನಿಕ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ಬ್ರಾಹ್ಮಣ ಮಹಿಳೆಯ ಇತ್ತೀಚಿನ ಬದಲಾವಣೆಗಳನ್ನು ಗ್ರಹಿಸಲಾಗಿದೆ. ಇವೆರಡಕ್ಕೂ ಸ್ತ್ರೀವಾದಿ ನಿರ್ವಚನವನ್ನು ಕೈಗೊಳ್ಳಲಾಗಿದೆ.

''ಸ್ತ್ರೀ ಶೋಷಣೆಯ ಮೂಲ ಅಡಗಿರುವುದು ಆಕೆ ಪುರುಷನಿಗಿಂತ 'ಭಿನ್ನವಾದವಳು' ಎಂಬ ಕಾರಣಕ್ಕಾಗಿ, ಮಾನವ ಸಮಾಜದ ಉಗಮಕಾಲದಿಂದಲೂ ಪುರುಷ ತನ್ನನ್ನು ತಾನು (Self) ಎಂದು ಪರಿಗಣಿಸಿದ್ದಾನೆ 'ತಾನು' ಹಾಗೂ 'ಪರ' ಎನ್ನುವ ಎರಡು ಭಾವನೆಗಳು ಯಾವಾಗಲೂ ಪರಸ್ಪರ ವಿರೋಧಿಗಳಾರುವುದರಿಂದ ತನ್ನತನವನ್ನು ಉಳಿಸಿಕೊಳ್ಳಲಿಚ್ಛಿಸುವ ಪುರುಷ ತಾನು 'ಪರ' ಎಂದು ಪರಿಗಣಿಸುವ ಸ್ತ್ರೀಯನ್ನು ಪರಾಧೀನಳನ್ನಾಗಿ ಪರಿವರ್ತಿಸಿದ್ದಾನೆ. 'ಸ್ತ್ರೀ' ಮತ್ತು 'ಪುರುಷ'ನಿಗೆ ಇರುವ ಭಿನ್ನ ಅಸ್ತಿತ್ವಗಳು, ಎಂದರೇ 'ಸ್ತ್ರೀ ದೇಹ' ಹಾಗೂ ಈ ದೈಹಿಕ ಸ್ಥಿತಿಗಳಿಗೆ ಸಂಬಂಧಿದ ಕಾರ್ಯಗಳಲ್ಲಿ ಕಂಡುಬರುವ ಭಿನ್ನತೆ ಇವುಗಳೇ ಸ್ತ್ರೀ-ಪುರುಷ ಅಸಮಾನತೆಗೆ ಮೂಲ ಕಾರಣ ಎಂಬುದು ಬೋವಾಳ ವಿಚಾರವಾಗಿತ್ತು.''[೨]

ಸ್ತೀವಾದಿ ದೃಷ್ಟಕೋನದಿಂದ ಬ್ರಾಹ್ಮಣ ಮಹಿಳೆಯ ಚಹರೆಯನ್ನು ಗುರುತಿಸಲು ಸಹಕಾರಿಯಾಗಿದೆ. ಧರ್ಮಗ್ರಂಥಗಳ ಮತ್ತು ಆಚರಣಾತ್ಮಕ ಪರಂಪರೆಯ ತುಲನೆಯನ್ನು, ಸ್ಥಿತ್ಯಂತರಗಳಿಗೆ ಸ್ತ್ರೀವಾದ ಯಾವ ಕಾರಣವನ್ನು ಕೊಡುತ್ತದೆ ಎಂಬುದನ್ನು ಈ ಅಧ್ಯಾಯವು ಕಂಡುಕೊಳ್ಳಬಯಸುತ್ತದೆ.

೫.೧. ತೌಲನಿಕ ವಿಶ್ಲೇಷಣೆ

ತುಲನೆಯ ಮೂಲಕ ಸತ್ಯವನ್ನು ಒರೆಹಚ್ಚಲಾಗದು. ಆದರೆ ಅದಕ್ಕೆ ಹತ್ತಿರ ಹೋಗುತ್ತಿದ್ದೇವೆ ಎಂಬ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವುದು ಉತ್ತಮ. ಲಿಖಿತ ಪರಂಪರೆ ಬ್ರಾಹ್ಮಣ ಮಹಿಳೆಯ ಬಗೆಗೆ ಎಂತಹ ಭಾವನೆಗಳನ್ನು ತಾಳುತ್ತದೆ. ಆಚರಣಾತ್ಮಕ ಪರಂಪರೆ ಹೆಣ್ಣಿನ ಬಗೆಗೆ ಯಾವ ಭಾವವನ್ನು ತಾಳುತ್ತದೆ. ಎಂಬುದನ್ನು ಒರೆಗೆ ಹಚ್ಚಿದಾಗ ಅಲ್ಲಿ ನೈಜಸ್ಥಿತಿಯ ಅರಿವಾಗುತ್ತದೆ. ಲಿಖಿತಪರಂಪರೆ ಮತ್ತು ಆಚರಣೆಗಳನ್ನು ವಾಸ್ತವದಲ್ಲಿಟ್ಟು ನೋಡಿದಾಗ ಬ್ರಾಹ್ಮಣ ಮಹಿಳೆಯ ನಿಜ ಸ್ಥಿತಿಯನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು.

ಸ್ತ್ರೀಯನ್ನು ಶೂದ್ರಳೆಂದು ಮಹಾಭಾರತದಲ್ಲಿ ಹೇಳಲಾಗಿದೆ. ಆಕೆ ಶೂದ್ರಳಾದ್ದರಿಂದ ಅನೇಕ ಸಂಸ್ಕಾರಗಳು ಆಕೆಗೆ ನಿಷಿದ್ದ ಎಂದು ನಮ್ಮ ಆಚರಣೆಗಳು ಸಾರುತ್ತವೆ. ಆದರೆ ನಮ್ಮ ಧರ್ಮಗ್ರಂಥಗಳ ಪ್ರಕಾರ ''ಸ್ಮೃತಿಕಾಲದಲ್ಲಿ ಸ್ತ್ರೀಯನ್ನಾಗಲಿ, ಶೂದ್ರರನ್ನಾಗಲಿ ಸಾಮಾನ್ಯವಾಗಿ ಗುಲಾಮರಂತೆ ಕಂಡಿರಲಿಲ್ಲ. ಸ್ಮೃತಿಗಳ ಕೆಲವು ಭಾಗಗಳಲ್ಲಿ ಇಬ್ಬರ ವಿಷಯದಲ್ಲೂ ಕಠೋರವಾದ ಶಬ್ದಗಳನ್ನು ನಾವು ಕಾಣಬಹುದು. ಅಭಿಪ್ರಾಯಗಳ ನಿರೂಪಣೆಗಳು ಯಾವಾಗಲೂ ನಮ್ಮ ಶ್ರೇಷ್ಠ ಅಥವಾ ಅತ್ಯಂತ ವಿವೇಕಯುಕ್ತ ಮನಃಸ್ಥಿತಿಗಳ ಸಂಕೇತಗಳಾಗಿರುವದಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಆದರೆ ಜೀವನ ಸದಾ ಸರಿಯಾದ ಪಾತ್ರದಲ್ಲಿ ಹರಿದಿದೆ. ಏಕೆಂದರೆ ಈ ಕಠೋರ ಶಬ್ದಗಳ ಸಂಗಡವೇ ಮಾರ್ಗದರ್ಶನ ಮತ್ತು ರಕ್ಷಣೆಗಳ ಕರ್ತವ್ಯ ಮತ್ತು ಅವಿದ್ಯಾವಂತರ ನಡುವಳಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳುವಾಗ ತೋರಬೇಕಾದ ಔದಾರ್ಯದ ಕರ್ತವ್ಯಗಳನ್ನು ಉಪದೇಶಿಸುವ ಇತರ ವಾಕ್ಯಗಳನ್ನು ನಾವು ನೋಡುತ್ತೇವೆ. ಆರ್ಯ ಗೃಹಸ್ಥನು ತಾನು ಉಟಮಾಡುವ ಮೊದಲು ಶ್ವಪಚ (ಜಾತಿಬಾಹಿರ)ನನ್ನು ಒಳಗೊಂಡು ಎಲ್ಲರಿಗೂ ಅನ್ನಹಾಕಬೇಕೆಂದು ವಿಧಿ ಇರುವುದರಿಂದ, ಸಾಮಾಜಿಕ ಸುಭದ್ರತೆ ಎಷ್ಟರ ಮಟ್ಟಿಗೆ ಸಾಮಾಜಿಕ ನ್ಯಾಯವನ್ನು ಅವಲಂಬಿಸುರುತ್ತದೆ. ಎಂಬುದರ ಅರಿವು ಈ ಪ್ರಾಚೀನ ಶಾಸನಕಾರರಿಗೆ ಇಲ್ಲದೆ ಇರಲಿಲ್ಲ ಎಂಬ ವಿಷಯ ನಮಗೆ ತಿಳಿಯುತ್ತದೆ.''[೩] ಈ ಮೂಲಕ ನಾವು ಧರ್ಮ ಗ್ರಂಥಗಳು ಹೇಳದೆ ಇರುವ ಆಚರಣೆಗಳನ್ನು ವಾಸ್ತವದಲ್ಲಿ ಪಾಲಿಸಿಕೊಂಡು ಹೋಗಲಾಗುತ್ತದೆ. ಆದರೆ ಇವುಗಳನ್ನು ವಿರೋಧಿಸದೇ ಮುಂದುವರಿಸಿಕೊಂಡು ಹೊರಟಿರುವ ಆಚರಣೆಗಳು ತಮ್ಮ ಮೂಲವೇ ಇಲ್ಲದಂತೆ ಬೆಳೆಯುತ್ತಿವೆ. ಎಂದು ಹೇಳಬಹುದು.

ಧರ್ಮ ಗ್ರಂಥಗಳಲ್ಲಿರುವ ಹೇಳಿಕೆಗೂ, ಆಚರಣಾತ್ಮಕ ಪರಂಪರೆಯಲ್ಲಿ ನಡೆದುಕೊಂಡ ರೀತಿಗಳಲ್ಲಿ ಬಹಳ ವ್ಯತ್ಯಾಸ ಇಲ್ಲದಿದ್ದರೂ, ಸಾಮ್ಯವಂತೂ ಇದ್ದೇ ಇದೆ. ಹೆಣ್ಣಿನ ಜನನವನ್ನು ತಡೆಗಟ್ಟಲು ಪೂಜೆ, ಹೋಮ ಹವನಗಳನ್ನು ಮಾಡಲಾಗುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಶತಮಾನಗಳೇ ಸಂದಿದ್ದರೂ ಕೂಡ ಇಂಥ ವಿಚಾರಗಳು ಇನ್ನೂ ಅಷ್ಟೆ ಪ್ರಬಲವಾಗಿವೆ. ಹಿಂದೆ ಹೋಮ ಮಾಡುತ್ತಿದ್ದರೇ, ಇಂದು ತಂತ್ರಜ್ಞಾನದ ಮುಖಾಂತರ ಹೆಣ್ಣು ಜನನವನ್ನು ನಿರಾಕರಿಸುವುದು ಕಂಡುಬರುತ್ತದೆ. ಇದಕ್ಕೆಲ್ಲ ಕಾರಣ ಮೋಕ್ಷದ ಕಲ್ಪನೆ ಪುತ್ರನು 'ಪುತ್' ಎಂಬ ನರಕದಿಂದ ಪಾರುಮಾಡುತ್ತಾನೆಂಬ ನಂಬಿಕೆ. ವಿಪರ್ಯಾಸವೆಂದರೇ ಪುತ್ರನು ತಾಯಿಗೆ ಮೋಕ್ಷಕೊಡಿಸಲಾರ ತಂದೆಗೆ ಮತ್ತು ಅವನ ಮನೆತನದ ಹಿರಿಯ ಯಜಮಾನರುಗಳಿಗೆ ಮೋಕ್ಷಕೊಡಿಸುವವ ಎಂಬ ನಂಬಿಕೆ ಇದೆ. ಹೆತ್ತು ಹೊತ್ತು ಪಾಲನೆ ಮಾಡಿದ ತಾಯಿಗೆ ಸ್ವರ್ಗ ನೀಡಲಾರ. ಅವನು ತನ್ನ ತಾಯಿಗೆ ಋಣ ತೀರಿಸಬೇಕೆಂದರೇ ಅದು

ಕೇವಲ ತನ್ನ ತಂದೆಯ ಮತ್ತು ಅವನ ವಂಶ ಉದ್ಧಾರ ಮಾಡುವುದು ಮಾತ್ರ. ಅಂದರೆ ಮತ್ತೆ ಮತ್ತೆ ಗಂಡು ಜನನ ನೀಡಿ, ವಂಶೋದ್ಧಾರ ಮಾಡುವುದು. ಇಷ್ಟು ಮಾಡಿದರೇ ಆ ತಾಯಿಯ ಜನ್ಮ ಸಾರ್ಥಕ ಎಂಬ ನಂಬಿಕೆಗಳಿವೆ.

ಜನನದ ನಂತರ ಬರುವ 'ವೃದ್ಧಿ'ಯಲ್ಲಿ ಗಂಡಿಗೆ, ಹೆಣ್ಣಿಗೆ ಎನ್ನುವ ಬೇಧವಿಲ್ಲ. ಆದರೆ ಆ ತಾಯಿ ಮಾತ್ರ ತನ್ನ ಸ್ರಾವ ಕಡಿಮೆಯಾಗುವವರೆಗೂ ಯಾವುದೇ ಮಂಗಳಕರಕಾರ್ಯದಲ್ಲಿ ಪಾಲ್ಗೊಳ್ಳಬಾರದು ಮುಂದೆ ಆ ಮಗುವಿನ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಸಾವಿನವರೆಗೂ ಮುಂದುವರಿಯುತ್ತದೆ.

ವೇದಗಳಕಾಲದಲ್ಲಿ ಬ್ರಾಹ್ಮಣ ಮಹಿಳೆಗೂ ಉಪನಯನ ಸಂಸ್ಕಾರವಿತ್ತು ನಂತರದ ದಿನಗಳಲ್ಲಿ ಬ್ರಾಹ್ಮಣ ಹೆಣ್ಣಿಗೆ ಉಪನಯನ ಸಂಸ್ಕಾರವಿಲ್ಲ. ಇದನ್ನು ಗಮನಿಸಿದಾಗ ಧರ್ಮಗ್ರಂಥಗಳಲ್ಲಿ ಇದರ ಬಗೆಗೆ ಉಲ್ಲೇಖವಿಲ್ಲ ಅಂದರೆ ತಮ್ಮ ಮನಸ್ಥಿತಿಗಳಿಗೆ ಅನುಗುಣವಾಗಿ ಆಚರಣೆಗಳನ್ನು ಮಾಡಿಕೊಂಡು ಹೋಗಲಾಗುತ್ತಿತ್ತು. ಮನಸ್ಥಿತಿ ಬದಲಾದೊಡನೆ ಆಚರಣೆಯೂ ಇಲ್ಲವೆಂಬುದು ವೇದ್ಯವಾಗುತ್ತದೆ. ಋತುಮತಿಯಾದ ನಂತರ ಪ್ರತಿ ತಿಂಗಳು ಆಗುವ ಮುಟ್ಟಿನ ದಿನಗಳಲ್ಲಿ ಇತ್ತೀಚೇಗೆ ಸಡಿಲಿಕೆಗಳು ಕಂಡುಬುತ್ತವೆ. ೩ ದಿನಗಳ ಕಾಲ ಆಕೆ ಚಾಂಡಾಲಿ, ಶೂದ್ರಳು, ಮತ್ತೆ ಶೂದ್ರಳಾಗುವ ಪರಿಕಲ್ಪನೆ ಬದಲಾಗಿಲ್ಲ. ಆದರೆ ಆಚರಣೆಗಳು ಹಿಂದಿನಷ್ಟು ಬಿಗಿಯಾಗಿರದೇ ಸಡಿಲಿಕೆಗಳು ಕಂಡುಬರುತ್ತವೆ ಸ್ನಾನಮಾಡಬಾರದು. ಈ ದಿನಗಳಲ್ಲಿ ಇತರರನ್ನು ಸ್ಪರ್ಶಿಸಬಾರದು ಎಂಬ ನಿಯಮಗಳು ಜಾರಿಯಲ್ಲಿವೆ. ಧರ್ಮಗ್ರಂಥದಲ್ಲಿ ಈ ದಿನಗಳಲ್ಲಿ ಹೆಣ್ಣುಮಗಳನ್ನು ಸ್ಪರ್ಶಿಸಬಾರದು ಮನೆಯ ಒಳಗೆ ಕರೆದುಕೊಳ್ಳಬಾರದು ಅಂದರೆ ಕತ್ತಲೆಕೋಣೆಯಲ್ಲಿರುವುದನ್ನು ಪ್ರತಿಪಾದಿಸುತ್ತವೆ.

ವಿವಾಹದ ವಯಸ್ಸಿನ ಬಗೆಗೆ ಧರ್ಮಗ್ರಂಥಗಳು ಋತುಮತಿ ಪೂರ್ವ ಎಂದು ಹೇಳುತ್ತವೆ. ಇಂದು ತೀರ ಸಂವಿಧಾನದ ನಿಯಮಾನುಸಾರ ೨೧ನೇ ವಯಸ್ಸಿಗೆ ಮಾಡಲಾಗದಿದ್ದರೂ ೧೯,೨೦ ವಯಸ್ಸಿಗೆ ವಿವಾಹ ಮಾಡಲಾಗುತ್ತಿದೆ. ಕಡ್ಡಾಯ ಪದವಿಯನ್ನು ಬಯಸುವದರಿಂದ, ೨೧ ವಯಸ್ಸಿಗೇ ಹೆಚ್ಚಿನ ವಿವಾಹಗಳು ಜರುಗುವುದು ಕಂಡುಬರುತ್ತದೆ. ವಿವಾಹದ ಆಯ್ಕೆ ಬ್ರಾಹ್ಮಣ ಹೆಣ್ಣಿಗೆ ಇರಲಿಲ್ಲ. ಇಂದು ತಂದೆ ತಾಯಿಗಳೇ ನೋಡಿದರೂ, ಹೆಣ್ಣಿನ ಒಪ್ಪಿಗೆ ಕೇಳುವುದು ಕಂಡುಬರುತ್ತಿದೆ. ವಿವಾಹದ ವಿವಿಧ ವಿಧಿಗಳಿಗಾಗಿ ಎಂಟು ದಿನ ಹಿಡಿಯುತ್ತಿತ್ತು. ಸಮಯದ ಅಭಾವ ನಗರೀಕರಣಗಳಿಂದಾಗಿ ಇಂದು ಎರಡೇ ದಿನಗಳಲ್ಲಿ ಈ ವಿಧಿಗಳನ್ನು ಪೂರೈಸಲಾಗುತ್ತದೆ. ವಿವಾಹಾನಂತರ ಹೆಣ್ಣು ಗಂಡನ ಮನೆಗೆ ಹೋಗುವುದು. ಅವಳ ಹೆಸರು ಬದಲಾಯಿಸುವಿಕೆಯಲ್ಲಿ ಏನೂ ವ್ಯತ್ಯಾಸವಿಲ್ಲದಿರುವುದು ಕಂಡುಬರುತ್ತದೆ. ಅಂದಿನ ದಿನಗಳಲ್ಲಿ ಅಷ್ಟೊಂದು ಖರ್ಚುಮಾಡುತ್ತಿರಲಿಲ್ಲ. ಆದರೆ ಇಂದು ವಿವಾಹದ ಖರ್ಚುವೆಚ್ಚಗಳು ಹೆಚ್ಚಾಗಿವೆ. ಎಲ್ಲರೂ ಇದನ್ನು ಮಾಡೆಮಾಡುತ್ತಾರೆ.

ಈ ವಿವಾಹದ ವಿಧಿಗಳು ಧರ್ಮಗ್ರಂಥಗಳಲ್ಲಿ ಹೀಗೆ ಇರಬೇಕೆಂಬನಿಯಮವಿರುವುದನ್ನು ಇಂದು ಕೇವಲ ಶಾಸ್ತ್ರಕ್ಕಾಗಿ ಮಾತ್ರ ಬಿಟ್ಟುಬಿಡುತ್ತಾರೆ. ಅವಳ ಪಾಲನೆ ಕಡ್ಡಾಯವೇನೂ ಇಲ್ಲ.

ವೈಧವ್ಯದ ಆಚರಣೆಗಳನ್ನು ಧರ್ಮಗ್ರಂಥಗಳಲ್ಲಿ ಹೇಳಿಲ್ಲ. ಇವು ಕೇವಲ ಸಮಾಜ ನಿರ್ಮಿತವಾದಂತವುಗಳಾಗಿವೆ. ಈ ಸಮಾಜ ನಿರ್ಮಿತ ಆಚರಣೆಗಳೂ ಈಗ ಕೆಲವು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ವಿಧುರನಿಗೆ ಇಂಥ ಮೌಲ್ಯಾಚರಣೆಗಳು ಹಿಂದೆಂದೂ ಇರಲಿಲ್ಲ. ಅಂದರೆ ಧರ್ಮಗ್ರಂಥಗಳಲ್ಲೂ ಇರಲಿಲ್ಲ. ಧರ್ಮ ಗ್ರಂಥ

ವಿಧವಾಧರ್ಮ ಪಾಲಿಸಬೇಕೆಂದು ಹೇಳಲಾಗುತ್ತದೆ. ಆದರೆ ವಿಧುರ ಧರ್ಮದ ಬಗ್ಗೆ ತುಟಿಪಿಟಕ್ಕೆನ್ನುವುದಿಲ್ಲ. ಋಷಿ ಪಂಚಮಿ ವ್ರತಾಚರಣೆ ಹೆಣ್ಣೆ ಮಾಡಬೇಕೆಂದು ಧರ್ಮಗ್ರಂಥಗಳು ಹೇಳುತ್ತವೆ. ಆದರೆ ಗಂಡಿಗೆ ಯಾವ ವ್ರತಾಚರಣೆಗಳನ್ನೂ ಹೇಳಿಲ್ಲ.

ಧರ್ಮ ಗ್ರಂಥಗಳು ಬ್ರಾಹ್ಮಣ ಹೆಣ್ಣು ಮಗಳು ತೆಂಗಿನಕಾಯಿ ಒಡೆಯಬಾರದೆಂದು ಹೇಳಿಲ್ಲ. ಆದರೆ ಇದಕ್ಕೆ ಬಲಿಯ ಕಲ್ಪನೆಕೊಟ್ಟದ್ದರಿಂದ ಬಲಿಕೊಡುವುದು ಹೆಣ್ಣಿಗೆ ನಿಷಿದ್ದವೆಂದು ಹೇಳಿ ಹೆಣ್ಣು ತೆಂಗಿನ ಕಾಯಿ ಒಡೆಯದಂತೆ ಮಾಡಿವೆ. ಆದರೆ ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ಬ್ರಾಹ್ಮಣ ಹೆಣ್ಣು ಮಕ್ಕಳು ತೆಂಗಿನಕಾಯಿಯನ್ನು ಒಡೆಯುತ್ತಿದ್ದಾರೆ. ಸ್ತ್ರೀ ಪೂಜೆಗೆ ಅರ್ಹಳಲ್ಲ. ಅವಳಿಗೆ ಮೂಲದೇವರ ನೇರದರ್ಶನವಿಲ್ಲ. ಪೂಜೆಯೂ ಇಲ್ಲ. ಆದರೆ ಇತ್ತೀಚೆಗೆ ಕೆಲವು ದೇವರುಗಳನ್ನು ಪೂಜಿಸುತ್ತಿದ್ದಾಳೆ. ಮೂಲದೇವರ ಪೂಜೆಗೆ ಇನ್ನೂ ಕೈ ಹಾಕಿಲ್ಲ ಕಾರಣ ಆ ದೇವರ ಬಗೆಗಿರುವ ನಂಬಿಕೆ ಎಂದರೆ ತಪ್ಪಾಗಲಾರದು. ಕುಟುಂಬದ ಜವಾಬ್ದಾರಿಯೇ ದೇವರ ಪೂಜೆ ಮಾಡಿದ ಫಲ ಸಿಕ್ಕುತ್ತದೆಯಾದ್ದರಿಂದ ಮತ್ತೇಕೆ ದೇವರ ಪೂಜೆ ಎಂದು ಪುರುಷರು, ಮಠಾದೀಶರು ಹೆಳುತ್ತಾರೆ. ಆದರೆ ಮೂಲ ಧರ್ಮಗ್ರಂಥಗಳಲ್ಲಿ ಹೆಣ್ಣು ಪೂಜಿಸಬಾರದೆಂದು ಹೇಳಿಲ್ಲ. ಇವೆಲ್ಲ ಮನುವಿನ ಮತ್ತು ಭಗವದ್ಗಿತೆಯ ಸೃಷ್ಟಿಗಳಾಗಿವೆ ಎಂದು ಹೇಳಬಹುದು. ಅಧಿಕಾರಶಾಹಿ ಪುರುಷನ ಸಂಚುಗಳಿಗಾಗಿ ಈ ತರಹದ ಆಚರಣೆಗಳು ರೂಪಪಡೆದುಕೊಂಡಿವೆ.

ಸ್ಮಾರ್ಥರು, ವೈಷ್ಣವರು ಇಂಥದೇ ನಿರ್ದಿಷ್ಟ ರೀತಿಯಲ್ಲಿ ಕುಂಕುಮ ಹಚ್ಚಬೇಕೆಂದು ಎಲ್ಲಿಯೂ ಹೇಳಲಾಗಿಲ್ಲ. ಇವು ಕೇವಲ ಆಚರಣೆ, ರೂಢಿ, ಸಂಪ್ರದಾಯಗಳ ಮೂಲಕ ಜನ್ಮತಾಳಿದಂತವುಗಳಾಗಿವೆ. ಸ್ಮಾರ್ಥ ವೈಷ್ಣವರಲ್ಲಿ ಶ್ರೇಷ್ಠ ಕನಿಷ್ಟ ಎಂಬ ಬೇಧಭಾವಗಳು ಆರಂಭವಾದ ಮೇಲೆ ಇಂತಹ ಚಿನ್ಹೆಗಳು ಹುಟ್ಟಿಕೊಂಡವು. ಗಂಡಸರಲ್ಲಿಯೂ ಸ್ಮಾರ್ಥರು ನಾಮ ಹಚ್ಚುವುದರಲ್ಲಿ ಮತ್ತು ವೈಷ್ಣವರು ನಾವು ಹಚ್ಚುವುದರಲ್ಲಿ ವ್ಯತ್ಯಾಸವಿದೆ. ವೈಷ್ಣವರು ಉದ್ದನೆಯದಿಟ್ಟರೇ ಸ್ಮಾರ್ಥರು ಅರ್ಧಚಂದ್ರಾಕೃತಿಯ ನಾಮ ಇಡುತ್ತಾರೆ. ಇದೆ ಬೆಳೆದು ವೈಷ್ಣವ ಹೆಣ್ಣು ಮಕ್ಕಳಿಗೆ ಉದ್ದನೆಯದು, ಸ್ಮಾರ್ಥ ಹೆಣ್ಣು ಮಕ್ಕಳು ದುಂಡಗೆ ಕುಂಕುಮ ಇಡುವುದು ಕಂಡುಬರುತ್ತದೆ. ಉಪವಾಸ ವ್ರತಾಚರಣೆಗಳು ಕೇವಲ ಹೆಣ್ಣಿಗೇ ಮೀಸಲು ಎಂದು ಎಲ್ಲಿಯೂ ಹೇಳಿಲ್ಲ. ಆದರೆ ಗಂಡಸು ಹೊರಗೆ ಹೋಗುತ್ತಾನೆ, ದುಡಿಯುತ್ತಾನೆ. ಹಾಗಾಗಿ ಅವನಿಗೆ ಉಪವಾಸ ಆಗದು ಎಂದು ಹೆಣ್ಣು ತಾನೇ ಉಪವಾಸ ಕೈಗೊಳ್ಳುವುದನ್ನು ರೂಢಿಸಿಕೊಂಡು ಬರಲಾಗಿದೆ. ಇವೆಲ್ಲ ಪಿತೃ ಪ್ರಧಾನತೆಯ ಕುರುಹುಗಳು ಎನ್ನುವುದರಲ್ಲಿ ಸಂಶಯವಿಲ್ಲ.

ಮುದ್ರೆ ಹಾಕಿಸಿಕೊಳ್ಳುವ ವಿಚಾರದಲ್ಲಿ ಧರ್ಮಗ್ರಂಥಗಳು ಏನನ್ನೂ ಹೇಳುವುದಿಲ್ಲ. ವಿವಾಹ ನಂತರವೇ ಹೆಣ್ಣು ಮಾನ್ಯಮಾಡಲ್ಪಡುವುದು ಬ್ರಾಹ್ಮಣರಲ್ಲಿ ಕಂಡು ಬರುವುದರಿಂದ ವಿವಾಹನಂತರವೇ ಮುದ್ರೆಗೆ ಅವಕಾಶವಿದೆ. ಗಂಡಸಿಗೆ ವಿವಾಹ ಪೂರ್ವದಲ್ಲಿಯೂ ಮುದ್ರೆಗೆ ಅವಕಾಶ ವಿದೆ. ಹೆಣ್ಣಿಗೂ ಅಂಥ ಅವಕಾಶ ವಿದೆ. ಆದರೆ ಅದು ಋತುಮತಿಯಾದನಂತರ ಅಂತಹ ಅವಕಾಶವಿಲ್ಲ. ನಂತರದಲ್ಲಿ ಕೊಡಲೇಬಾರದೆಂಬ ನಿಯಮವೇನೂ ಇಲ್ಲ. ಅವಳ ದೇಹದ ಕಾರಣದಿಂದ ಅದು ಅಸಾಧ್ಯ ಎಂದು ಹೇಳಲಾಗುತ್ತದೆ. ಮುದ್ರೆಯನ್ನು ಎದೆಗೆ ಕೊಡುತ್ತಾರೆ. ಗಂಡುಮಕ್ಕಳು ಕೊಡಿಸಿಕೊಳ್ಳುತ್ತಾರೆ. ಆದರೆ ಹೆಣ್ಣಿಗೆ ಇದು ಲಜ್ಜೆಯ ವಿಷಯವಾದರೆ, ಮಠಾಧಿಪತಿಗಳ ಭಂಗಕ್ಕೂ

ಕಾರಣವಾಗಬಹುದಾದ್ದರಿಂದ ಬ್ರಾಹ್ಮಣ ಹೆಣ್ಣಿಗೆ ಕೈಗೆ ಮುದ್ರೆ ಕೊಡಲಾಗುತ್ತದೆ. ವೈಷ್ಣವರು ಮುದ್ರೆ ಹಾಕಿಸಿಕೊಳ್ಳುತ್ತಾರೆ. ಸ್ಮಾರ್ಥರು ಮುದ್ರೆ ಹಾಕಿಸಿಕೊಳ್ಳುವದಿಲ್ಲ. ಮುದ್ರೆಗೆ ಭಾರತೀಯ ಉಡುಗೆಯೇ ಆಗಬೇಕೆಂಬ ನಿಯಮವಿದೆ. ಅಂದರೆ ಹೆಣ್ಣು ಮಕ್ಕಳು ಸೀರೆ ಉಡಬೇಕು. ಗಂಡು ಮಕ್ಕಳು ಧೋತಿ ಅಥವಾ ಪಂಚೆ ಧರಿಸಿಕೊಳ್ಳಬೇಕೆಂಬುದಾಗಿ ಹೇಳಲಾಗುತ್ತದೆ. ಒಂದು ವೇಳೆ ಇಂಥ ಉಡುಗೆ ಇಲ್ಲದಿದ್ದರೇ ಮುದ್ರೆ ಹಾಕಿಸಿಕೊಳ್ಳಲು ಅಸಾಧ್ಯವೆಂದು ಹೇಳಲಾಗುತ್ತದೆ.

ಇತ್ತೀಚಿನ ಯುವತಿಯರಿಗೆ ಈ ಎಲ್ಲಾ ಆಚರಣೆಗಳಿಂದಾಗಿ ತುಂಬಾ ಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಇವುಗಳಿಂದ ಹೊರಬರಲು ಆಗದೇ ಅನುಭವಿಸಲೂ ಆಗದೇ ಇರುವಂಥ ಸ್ಥಿತಿಯಲ್ಲಿದ್ದಾರೆ. ಆಚರಣೆಗಳಿಂದ ದೂರ ಉಳಿಯಲು ಮನೆಯವರ ಒತ್ತಡದಿಂದ ಅಂದರೆ ನಮ್ಮ ಆಚರಣೆ ಸಂಪ್ರದಾಯದಂತೆ ನಡೆಯದಿದ್ದರೇ ನಮ್ಮ ಮನೆಯಲ್ಲಿರಲು ಅವಕಾಶವಿಲ್ಲವೆಂದು ಹೇಳುವಾಗ ಏನು ತಾನೇ ಮಾಡಲು ಸಾಧ್ಯ. ಮನೆಬಿಟ್ಟು ಹೊರಗಡೆ ಹೋದರೆ ತಮಗೆ ನೆಲೆ ಇದೆಯೇ, ಆರ್ಥಿಕವಾಗಿ ತಾವು ಸಬಲರಲ್ಲ. ಸಮಾಜದಲ್ಲಿ ತಮಗೆ ಬೆಲೆಸಿಗುತ್ತದೆಯೇ ಇಂಥ ಎಲ್ಲ ಯೋಚನೆಯಿಂದ ತಮ್ಮ ಅಭದ್ರತೆಯನ್ನು ನೆನೆದು ಮೌನವಾಗಿ ನೋವು ಸಹಿಸುತ್ತಿದ್ದಾರೆ. ಇದು ಕೇವಲ ಯುವತಿಯರ ಸ್ಥಿತಿಯಷ್ಟೆ ಅಲ್ಲ ಗೃಹಿಣಿಯದೂ ಇಂಥದೇ ಸ್ಥಿತಿಯಾಗಿದೆ. ಉದ್ಯೋಗದ ಭದ್ರತೆ ಇದ್ದರೂ ಇಂಥ ಸ್ಥಿತಿಯಲ್ಲಿ ಇರುವವರ ಸಂಖ್ಯೆಗೇನೂ ಕಡಿಮೆ ಇಲ್ಲ. ಸಂಪ್ರದಾಯ ಆಚರಣೆಗಳ ಮೂಲಕ ಹೆಣ್ಣನ್ನು ಅದೇ ಅಧೀನ ಸ್ಥಿತಿಯಲ್ಲಿರಿಸಿವೆ ಎಂದು ಹೇಳಬಹುದಾಗಿದೆ.

ಕೇವಲ 'ಕಲಿಯುಗ'ದ ನೆಪವೊಡ್ಡಿ ಬ್ರಾಹ್ಮಣ ಹೆಣ್ಣು ಮಕ್ಕಳ ಶೋಷಣೆಗೆ ಇಂಬು ಕೊಡುತ್ತಿದ್ದಾರೆ. ತೆರೆಮರೆಯಲ್ಲಿ ನೀವು ಹೆಣ್ಣಿನ ಶೋಷಣೆಮಾಡುತ್ತಿದ್ದೀರಿ ಎಂದು ಹೇಳಿದಾಗ ನಾವು ಶೋಷಣೆ ಮಾಡುತ್ತಿಲ್ಲ. ಗಂಡು ಹೆಣ್ಣು ಎಂಬ ಬೇಧಭಾವಮಾಡುತ್ತಿಲ್ಲ. ಪವಿತ್ರ ಭಾವನೆಯಿಂದ ಅವಳನ್ನು ನೋಡುತ್ತಿದ್ದೇವೆ ಎಂಬ ಉತ್ತರಗಳು ಕಂಡುಬರುತ್ತವೆ. ಆದರೆ ವಾಸ್ತವವಾಗಿ ನಿರಂತರವಾಗಿ ಹೆಣ್ಣಿನ ಶೋಷಣೆ ನಡೆಯುತ್ತಿದೆ. ಅದೂ ತೆರೆಮರೆಯಲ್ಲಿ ಅವಳನ್ನು ಅಪವಿತ್ರ ಭಾವನೆಯಿಂದ ಬ್ರಾಹ್ಮಣ ಜಾತಿಯಲ್ಲಿ ಕಾಣಲಾಗುತ್ತದೆ. ಒಂದು ಕಡೆ ಗೌರವ ಕೊಟ್ಟಂತೆ ವರ್ತಿಸಿ, ಇನ್ನೊಂದು ರೀತಿಯಲ್ಲಿ ಹಿಂಸೆಗೆ ಮಣೆಹಾಕುತ್ತಿದ್ದಾರೆ. ಇದರ ಕಲ್ಪನೆಯೇ ಇರದ ಬ್ರಾಹ್ಮಣ ಹೆಣ್ಣು ಮಕ್ಕಳು ತಮ್ಮ ಈ ಪರಿಸ್ಥಿತಿಗೆ ಹಣೆ ಬರಹ, ಕರ್ಮದ ಫಲ ಕಾರಣ ಎಂಬ ಭ್ರಮೆಯಲ್ಲೆ ಬದುಕುತ್ತಿದ್ದಾರೆ. ಅಷ್ಟೆ ಅಲ್ಲ 'ಹೆಣ್ಣಿಗೆ ಹೆಣ್ಣೆ ಶತ್ರು' ಎಂಬ ಭಾವದಲ್ಲಿ ಬದುಕುತ್ತಿದ್ದಾರೆ. ಕೀಲಿಕೊಟ್ಟು ಆ ರೀತಿ ವರ್ತಿಸುವಂತೆ ಮಾಡುವ ಗಂಡಿನ ಬಗೆಗೆ ಯೋಚನೆಯನ್ನೆ ಮಾಡುತ್ತಿಲ್ಲ. ಇದಕ್ಕೆ ಕಾರಣ ಅವರ ಸಾಮಾಜಿಕರಣ. ಈ ಕಾರಣದಿಂದಲೇ ಬ್ರಾಹ್ಮಣ ಹೆಣ್ಣು ಮಕ್ಕಳು 'ಬಿಸಿತುಪ್ಪ ನುಂಗಲೂ ಆಗದು, ಉಗುಳಲೂ ಆಗದು' ಎನ್ನುವ ಸ್ಥಿತಿಯಲ್ಲಿದ್ದಾರೆ. ಇತ್ತಿಚೆಗೆ ಬದಲಾವಣೆಗಳ ಕಾರಣದಿಂದ ಹೊರಬರಲು ಚಿಂತಿಸುತ್ತಲೂ ಇದ್ದಾರೆಂದು ಹೇಳಬಹುದು.

ಮೇಲಿನದನ್ನು ಗಮನಿಸಿದಾಗ ಲಿಖಿತ ಪರಂಪರೆ ಮತ್ತು ಆಚರಣಾತ್ಮಕ ಪರಂಪರೆಯನ್ನು ಗಮನಿಸಿದಾಗ ಆಚರಣೆಗಳು ಹೆಣ್ಣಿನ ಶೋಷಣೆಯ ಮೂಲವೆಂದು ಹೇಳಬಹುದು. ಆಚರಣೆಗಳಷ್ಟೆ ಇದಕ್ಕೆ ಕಾರಣವಲ್ಲ. ನಮ್ಮ

ಲಿಖಿತ ಪರಂಪರೆಗಳೂ ಕಾರಣ ಎಂದು ಹೇಳಬಹುದು. ಇವು ಹೆಣ್ಣಿನ ದ್ವಿತೀಯ ದರ್ಜೆಯನ್ನು ಅಧೀನ ಸ್ಥಿತಿಯನ್ನು ಒಪ್ಪಿಕೊಂಡು ಹೊರಟಿವೆ. ಇವೆಲ್ಲದಕ್ಕೆ ಮೂಲ ಪಿತೃ ಪ್ರಾಧಾನ್ಯತೆ. ಧರ್ಮಗ್ರಂಥಗಳು, ಆಚರಣೆಗಳೂ ಕೂಡ ಪಿತೃಪ್ರಧಾನತೆಗೆ ಹೊರತಾಗಿರಲು ಸಾಧ್ಯವೇ? ತಮ್ಮ ತನವನ್ನು ಹತ್ತು ಹಲವು ಬಗೆಗಳಲ್ಲಿ ಮುಂದುವರಿಸಿಕೊಂಡು ಹೋಗುತ್ತಲೇ ಇವೆ. ಎಂದು ಹೇಳಬಹುದು.

ಶ್ರಾದ್ಧ, ಕರ್ಮ ಆಚರಣೆಯ ಸಂದರ್ಭದಲ್ಲಿ ವಿಧವೆಗೆ ಒಂದು ಬಗೆಯ ಶವ ಸಂಸ್ಕಾರ. ಮುತ್ತೈದೆಗೆ ಒಂದು ಬಗೆಯ ಶವಸಂಸ್ಕಾರ, ಅವಿವಾಹಿತರಿಗೆ ಒಂದು ಬಗೆ ಹೀಗೆ ಹಲವು ಬಗೆಗಳಿವೆ. ಮುತ್ತೈದೆಗೂ ವಿಧವೆಗೆ ಸಾವಿನ ಸಂದರ್ಭದ ಆಚರಣೆಗಳಲ್ಲಿ ಭಿನ್ನತೆ ಇದೆ. ಮುತ್ತೈದೆಗೆ ಹಸಿರು ಸೀರೆ, ಹೂವು, ಬಳೆ ಮುಡಿಸಿ ಮಾಡಲಾಗುತ್ತಿದೆ. ವಿಧವೆಗೆ ಇವ್ಯಾವೂ ಇಲ್ಲದೆ ಹಾಗೆ ಶವಸಂಸ್ಕಾರಮಾಡಲಾಗುತ್ತದೆ. ಇದೇ ರೀತಿಯಲ್ಲಿ ವಿಧುರನಿಗೂ ಮದುವೆಯಾದ ಗಂಡಸಿಗೂ ವ್ಯತ್ಯಾಸವಿಲ್ಲ. ಆಚರಣೆಗಳು ಅಷ್ಟೆ ವಿವಿಧ ಅವಸ್ಥೆಗನುಗುಣವಾಗಿ ಶ್ರಾದ್ಧ ಕರ್ಮಮಾಡಲಾಗುತ್ತದೆ. ಅವಿವಾಹಿತ ಹೆಣ್ಣಿನ ಶವಸಂಸ್ಕಾರ ಸಮಯದಲ್ಲಿ ಎಕ್ಕೆ ಗಿಡದೊಂದಿಗೆ ವಿವಾಹ ಮಾಡಿ ಶವಸಂಸ್ಕಾರಮಾಡುತ್ತಾರೆ. ಅವಿವಾಹಿತ ಗಂಡಿಗೂ ಇದೇ ರೀತಿ ಮಾಡುತ್ತಾರೆ. ಆದರೆ ಪ್ರತಿ ವರ್ಷ ಶ್ರಾದ್ಧಮಾಡುವುದು ಉಪನಯನ ಸಂಸ್ಕಾರವಾದ ಗಂಡಿಗೆ ಮಾತ್ರ ಹೆಣ್ಣಿಗೆ ಇಲ್ಲ. ಹೆಣ್ಣು ಗಂಡಿಗೆ ಇದೇ ರೀತಿಯ ಸಂಸ್ಕಾರಮಾಡಬೇಕೆಂದು ಧರ್ಮಗ್ರಂಥಗಳಲ್ಲಿ ಇದೆ. ಮುತ್ತೈದೆಗೆ, ವಿಧವೆಗೆ, ಅವಿವಾಹಿತ ಪುರುಷ, ವಿಧುರ, ಅವಿವಾಹಿತರಿಗೆ ಹೀಗೆ ಮಾಡಬೇಕೆಂದು ಹೇಳಲಾಗಿದೆ. ಧರ್ಮಗ್ರಂಥಗಳು ಪುರುಷಪರವಾಗಿರುವುದು ಕಂಡುಬರುತ್ತದೆ ಹುಟ್ಟಿನಿಂದ ಹಿಡಿದು. ಸಾವಿನ ಸಂದರ್ಭದ ಹಲವು ಆಚರಣೆಗಳಾಗಿರಬಹುದು ಅಥವಾ ಲಿಖಿತ ಧರ್ಮಗ್ರಂಥಗಳಾಗಿರಬಹುದು ಇವು ಪುರುಷ ಪಕ್ಷಪಾತಿಯಾಗಿರುವುದು ಕಂಡುಬರುತ್ತದೆ. ಬ್ರಾಹ್ಮಣ ಮಹಿಳೆಗೆ ಸಂಬಂಧಿಸಿದ. ಹೆಚ್ಚಿನ ಆಚರಣೆಗಳು ರೂಢಿ ಮೂಲಕ ಬೆಳೆದು ಬಂದಂತವುಗಳಾಗಿವೆ. ಬಹುಶಃ ಇವು ಪುರುಷ ಸೃಷ್ಟಿಯಾದವುಗಳಾಗಿವೆ ಎಂದು ಹೇಳಬಹುದು.

೫.೨. ಸ್ಥಿತ್ಯಂತರಗಳು

ಅನಾಗರಿಕ ಹಂತದಿಂದ ನಾಗರಿಕತೆ ಎಡೆಗೆಸಾಗಬೇಕಾದರೇ ಬದಲಾವಣೆ ಅನಿವಾರ್ಯ. ಅದು ಪ್ರಕೃತಿ ನಿಯಮಕೂಡ ಹೌದು. ಕಾಲ, ದೇಶ, ವಾತಾವರಣಗಳಿಗೆ ಅನುಗುಣವಾಗಿ ನಾವು ಬದಲಾವಣೆಯನ್ನು ಸ್ವೀಕರಿಸಲೇಬೆಕಾಗುತ್ತದೆ. ಈ ಸ್ಥಿತ್ಯಂತರಕ್ಕೆ ಕಾರಣ ಹಿಂದಿನದರಲ್ಲಿನ ದೋಷಗಳೂ ಆಗಿರಬಹುದು. ಸ್ವಸ್ಥ ಸಮಾಜ ನಿರ್ಮಾಣವಾಗಬೇಕಾದರೇ ಸ್ಥಿತ್ಯಂತರಗಳಿಂದ ಕೂಡಿದ್ದಾಗಿರಬೇಕೆಂದು ಹೇಳಲಾಗುತ್ತದೆ. ಅದಕ್ಕೆಂದೇ 'ನಿಂತನಿರಾಗದೇ, ಹರಿಯುತ್ತಿರುವ ನೀರಾಗಬೇಕೆಂದು' ಹೇಳಲಾಗುತ್ತದೆ. ಬ್ರಾಹ್ಮಣ ಮಹಿಳೆಗೆ ತನ್ನ ಹಿಂದಿನ ಆಚರಣೆಗಳಲ್ಲಿ ನಂಬಿಕೆ ಕಡಿಮೆಯಾಗಿ ಈ ಸ್ಥಿತ್ಯಂತರಕ್ಕೆ ಕಾರಣವಾಗಿರಬಹುದು. ಇಲ್ಲವೇ ಪರಿಸ್ಥಿತಿಯ ಒತ್ತಡ ಜಾಗತೀಕರಣದಿಂದಾದ ಯಾಂತ್ರಿಕ ಜೀವನ ಪದ್ಧತಿಯು ಇದಕ್ಕೆ ಕಾರಣವಾಗಿರಬಹುದು. ಇವುಗಳನ್ನು ಬ್ರಾಹ್ಮಣ ಮಹಿಳೆ ತಾನೇ ತಾನಾಗಿ ಒಪ್ಪಿಕೊಂಡಿಲ್ಲ. ಪುರುಷನ ಒಪ್ಪಿಗೆಯಿಂದಾಗಿ ಸಮುದಾಯದ ಪುರುಷರ ಒಪ್ಪಿಗೆಯ ಪ್ರತಿಫಲವಾಗಿ ಮತ್ತು ಅಧಿಕಾರಶಾಹಿ ನೆಲೆಯಲ್ಲಿರುವ ಪುರುಷನ ಒಲೈಕೆಗಾಗಿ ಒಪ್ಪಿಕೊಂಡು, ಬದುಕುತ್ತಿದ್ದಾಳೆ. ಹಾಗಂದ ಮಾತ್ರಕ್ಕೆ ಅವಳಿಗೆ ಈ ಬದಲಾವಣೆ ಇಷ್ಟವಿಲ್ಲ, ಸಂಪ್ರದಾಯದ ಸಂಕೋಲೆಯಿಂದ ಹೊರಬರಲು ಆಸೆ ಇಲ್ಲ ಎಂದು ಅರ್ಥವಲ್ಲ.

ಸಂಕೋಲೆಗಳನ್ನು ತಾನಾಗಿಯೇ ಮುರಿಯದೇ ಅವನು ಅದನ್ನು ಭೇದಿಸಿದಾಗ ಅದನ್ನು ಒಪ್ಪಿಕೊಂಡಿದ್ದಾಳೆ. ಇದಕ್ಕೆ ಕಾರಣ ಅವಳ ಸಾಮಾಜಿಕರಣದ ಪ್ರಭಾವ ಎಂದು ಹೇಳಬಹುದು. ತಾನಾಗಿಯೇ ಸಂಕೋಲೆಗಳನ್ನು ಮುರಿದರೇ ಎಲ್ಲಿ ತನ್ನ ಸ್ಥಾನ ಅತಂತ್ರವಾಗುವುದೋ ಎಂಬ ಭಯ ಅವಳಲ್ಲಿತ್ತು. ಹಾಗಾಗಿ ತನ್ನಲ್ಲಿದ್ದ ತುಡಿತವನ್ನು ವ್ಯಕ್ತಪಡಿಸದೇ ಮೌನಿಯಾಗಿದ್ದಳು. ಯಾವಾಗ ಗಂಡಸು ತನ್ನ ಅನಕೂಲಕ್ಕಾಗಿ ಸಂಪ್ರದಾಯ ಆಚರಣೆಗಳನ್ನು ಮಾರ್ಪಡಿಸಿದನೋ ಆವಾಗ ಅದನ್ನು ಅವಳ ಮೇಲೆ ಅನಿವಾರ್ಯವಾಗಿ ಹೇರಲಾಯಿತು. ಗಂಡಸಿನ ಮಾತುಮುರಿಯಲಾಗದೇ, ಒಪ್ಪಿಗೆ ಇತ್ತೋ, ಇಲ್ಲವೋ ಯೋಚಿಸದೇ ಆ ಬದಲಾವಣೆಗೆ ತನ್ನ ಸಮ್ಮತಿಯಿತ್ತು. ಅವನ್ನು ಮುಂದುವರೆಸಿಕೊಂಡು ಹೊರಟಳು. ಕಾರಣ ಏನೇ ಇರಲಿ ಹಿಂದೆ ಆಚರಣೆಗಳಲ್ಲಿ ಆದ ಸ್ಥಿತ್ಯಂತರಗಳನ್ನು ಗಮನಿಸೋಣ.

ಸಂಪ್ರದಾಯ ಆಚರಣೆಗಳಲ್ಲಿನ ಸ್ಥಿತ್ಯಂತರಗಳಲ್ಲಿ ಮೊದಲನೆಯದಾಗಿ ಭ್ರೂಣವು ಗಂಡಾಗಲೆಂದು ಮಾಡುತ್ತಿದ್ದ ಹೋಮ ಹವನಗಳು ಇಂದು ಆಚರಣೆಯಲ್ಲಿ ಇಲ್ಲ. ಆದರೆ ಸ್ಕಾನಿಂಗ್, ಅಲ್ಟ್ರಾಸ್ಕಾನಿಂಗ ಮೂಲಕ ಆ ಭ್ರೂಣ ಯಾವುದೆಂದು ಪತ್ತೆಹಚ್ಚುತ್ತಾರೆ. ಇಲ್ಲವೇ ಆ ಭ್ರೂಣ ಗಂಡಾಗುವಂತೆ ಕ್ರಮ ಕೈಗೊಳ್ಳುತ್ತಿದ್ದಾರೆ. ಆದರೂ ಹೆಣ್ಣು ಮಗುವನ್ನು ನಿರಾಕರಿಸುತ್ತಿಲ್ಲ. ಹೆಣ್ಣು ಮಗುವಿನೊಂದಿಗೆ ಒಂದು ಗಂಡು ಮಗುವನ್ನು ಅಪೇಕ್ಷಿಸುತ್ತಿದ್ದಾರೆ. ಬಾಣಂತಿತನದ ಆರೈಕೆ ಗಂಡು ಮಗುವಾದಾಗ ಚೆನ್ನಾಗಿ ನಡೆಯುತ್ತಿತ್ತು. ಹೆಣ್ಣು ಮಗುವಾದರೇ ಅವಳ ಆರೈಕೆಯನ್ನು ನಿರ್ಲಕ್ಷಿಸಲಾಗುತ್ತಿತ್ತು. ಆದರೆ ನಿರ್ಲಕ್ಷ ಸ್ವಲ್ಪಮಟ್ಟಿಗೆ ಇದ್ದರೂ, ಆಧುನಿಕರಣದಿಂದ ಬಂದಂತಹ ಮಾತ್ರೆ, ಔಷಧಿಗಳು ಅವಳ ಆರೈಕೆಮಾಡುತ್ತಿವೆ. ಇಂದು ಬ್ರಾಹ್ಮಣ ಮಹಿಳೆ ಉಳಿದ ದಿನಗಳಲ್ಲಿ ತನ್ನ ಕಾಳಜಿವಹಿಸದಿದ್ದರೂ ಆ ದಿನಗಳಲ್ಲಿ (ಬಸುರಿ, ಬಾಣಂತಿ) ಕಾಳಜಿಯಿಂದ, ಗಂಡನ ಸಂತಾನಕ್ಕಾಗಿ ತಾನೇ ಆರೈಕೆ ಮಾಡಿಕೊಳ್ಳುವುದು. ಆಸ್ಪತ್ರೆಗೆ ತೋರಿಸಿಕೊಳ್ಳುವುದು ಮಾಡುತ್ತಿದ್ದಾಳೆ.

ಋತುಮತಿ ಆದಂದಿನಿಂದ ಅವಳು ಪ್ರತಿ ತಿಂಗಳ ನಾಲ್ಕು ದಿನಗಳ ನಿಷೇಧಗಳು ಹಿಂದಿನಷ್ಟು ಕಟ್ಟುನಿಟ್ಟಾಗಿಲ್ಲ. ಬೆಳಕುನೋಡಬಾರದು ಸ್ನಾನ ಮಾಡಬಾರದು, ಮೂರು ದಿನ ಹೊರಗಡೆ ಕೂಡಬೇಕೆಂಬ ನಿಯಮಗಳು ಸಡಿಲಗೊಂಡಿವೆ. ಇದಕ್ಕೆ ಕಾರಣ ವಿಭಕ್ತ ಕುಟುಂಬದಿಂದ ಮನೆಯಲ್ಲಿ ಗಂಡ, ಹೆಂಡತಿ, ಮಕ್ಕಳು ಇರುವದರಿಂದ ತಾಯಿ, ಮಗಳು ಇಬ್ಬರೂ ಮುಟ್ಟಾದರೇ ಎಲ್ಲ ಕೆಲಸಗಳು ಎಲ್ಲಿ ತನ್ನ ಕೊರಳಿಗೆ ಬೀಳುವವೋ ಎಂದು ಇಂದು ಅಷ್ಟಾಗಿ ಹೊರಗಡೆ ಕೂಡಿಸುವದಿಲ್ಲ. ಅಲ್ಲದೇ ಉದ್ಯೋಗಸ್ಥ ಹೆಣ್ಣಿಗೆ ಇವೆಲ್ಲ ನಿಯಮಗಳನ್ನು ಪಾಲಿಸಲು ಆಗದು. ಹೀಗಾಗಿ ಇಂಥ ಆಚರಣೆಗಳು ಸಡಿಲಗೊಂಡಿವೆ. ಆದರೆ ಗ್ರಾಮೀಣರಲ್ಲಿ ಅಲ್ಲದೇ ಕೆಲವು ಕುಟುಂಬಗಳಲ್ಲಿ ಈ ಪದ್ಧತಿ ಇನ್ನೂ ಚಾಲ್ತಿಯಲ್ಲಿರುವುದು ಕಾಣಬರುತ್ತದೆ. ಅಂದರೆ ಅನಿವಾರ್ಯ ವಿದ್ದಲ್ಲಿ ಅವುಗಳನ್ನು ಪಾಲಿಸುವದಿಲ್ಲ. ಈ ವಿಷಯದಲ್ಲಿ ಇತ್ತೀಚೆಗೆ ಕೆಲವು ಸಡಿಲಿಕೆಗಳುಂಟಾಗುತ್ತಿವೆ.

ವಿವಾಹದ ವಿಷಯಕ್ಕೆ ಬಂದಾಗ ಗಂಡು ನೋಡಲು ಹೆಣ್ಣೆ ಗಂಡಿನ ಮನೆಗೆ ಹೋಗಬೇಕಾಗಿತ್ತು ಎಷ್ಟು ದೂರ ಇದ್ದರೂ ಅಲ್ಲಿಗೆ ಹೆಣ್ಣು ಮತ್ತು ಅವಳ ತಂದೆ ತಾಯಿ ಹೋಗಬೇಕು. ಆದರೆ ಇತ್ತೀಚೆಗೆ ತಂತ್ರಜ್ಞಾನದ ಬೆಳವಣಿಗೆಯಿಂದ ಮೊದಲು ಹೆಣ್ಣಿನ ಪೋಟೋ ಕಳಿಸಲಾಗುತ್ತದೆ. ಒಪ್ಪಿಗೆಯಾದ ಮೇಲೆ ಗಂಡಿನ ಮನೆಗೆ ಹೋಗುತ್ತಾರೆ. ತೀರ ಇತ್ತೀಚೆಗೆ ಪುರುಷರು ಅಂದರೆ ಹುಡುಗ ಹೋಗಿ ಹುಡಿಗಿ ನೋಡಿ ಬಂದು, ಒಪ್ಪಿಗೆಯಾದರೇ

ಆಗುವುದು ತೀರ ದೂರದ ಊರಿನಲ್ಲಿ ಹುಡುಗ ಇದ್ದರೇ, ಉದಾರ ಮನೋಭಾವದವನಿದ್ದರೇ ಇಂಥದಕ್ಕೆ ಅವಕಾಶವಿದೆ. ವಿವಾಹದ ಆಯ್ಕೆಯ ವಿಷಯದಲ್ಲಿ ಮೊದಲಿನಷ್ಟು ಕಟ್ಟುನಿಟ್ಟಿನ ವಾತಾವರಣವಿಲ್ಲ ತಂದೆ-ತಾಯಿ ಗುರು ಹಿರಿಯರು ಒಪ್ಪಿದರೇ ಆಗುತ್ತಿತ್ತು. ಈಗ ಮದುವೆಯಾಗುವ ಹುಡುಗಿಯ ಒಪ್ಪಿಗೆ ಕೇಳುತ್ತಾರೆ. ವಿವಾಹಕ್ಕೂ ಮುಂಚೆ ಹೆಣ್ಣುನೋಡುವ ಶಾಸ್ತ್ರವು ವಿವಾಹದಲ್ಲಿ ಮುಂದುವರಿಯಬೇಕಾದರೇ ಗಂಡು ಮತ್ತು ಆತನ ಕಡೆಯವರು ಒಪ್ಪಿಗೆಕೊಟ್ಟನಂತರ ಹೆಣ್ಣಿನವರು ವಿಚಾರಮಾಡಬೇಕಿತ್ತು. ಆದರೆ ಇತ್ತೀಚೆಗೆ ಹೆಣ್ಣು ಮತ್ತು ಅವಳ ಮನೆಯವರು ಒಪ್ಪಿದ ಮೇಲೆ ಗಂಡಿನ ಕಡೆಯವರು ಯೋಚಿಸುತ್ತಾರೆ.

ಈ ಬದಲಾವಣೆ ಗಮನಾರ್ಹವಾದುದಾದರೂ, ಇದಕ್ಕೆ ಬೇರೆ ಕಾರಣಗಳು ಇವೆ. ಅಂದರೆ ಇಂದು ಬ್ರಾಹ್ಮಣರಲ್ಲಿ ಹೆಣ್ಣಿನ ಸಂಖ್ಯೆ ಕಡಿಮೆಯಾಗಿದೆ. ಈ ಕಾರಣಕ್ಕಾಗಿಯೇ ಬ್ರಾಹ್ಮಣ ವರ, ಕನ್ಯೆ ಯಾದರೆ ಸಾಕು ಅವರು ಕಣ್ವ ಮಠದವರು, ಉತ್ತರಾಧಿಮಠದವರು, ರಾಘುವೇಂದ್ರ ಮಠದವರೆಂದು ನೋಡುವದಿಲ್ಲ. ಸ್ವಜಾತಿಗಳಲ್ಲಿ ಪ್ರೇಮವಿವಾಹದರೂ ಒಪ್ಪಿಕೊಳ್ಳುತ್ತಿದ್ದಾರೆ. ಇಷ್ಟೆ ಅಲ್ಲದೇ ಇತ್ತೀಚೆಗೆ ಹೆಣ್ಣಿನ ಸಂಖ್ಯೆ ಕಡಿಮೆ ಇರುವುದರಿಂದ ಅಂದರೆ ತಂದೆ ತಾಯಿಗೆ ಒಬ್ಬಳೇ ಮಗಳಾದ್ದರಿಂದ ಚೆನ್ನಾಗಿ ಓದಿಸುತ್ತಾರೆ. ಮುಂದೆ ಆ ಓದಿಗೆ ತಕ್ಕುನಾದ ಹುಡುಗನನ್ನು ಹುಡುಕತೊಡಗುತ್ತಾರೆ. ಇದರಿಂದ ಕಡಿಮೆ ಓದಿದ, ಒಳ್ಳೆಯ ಉದ್ಯೋಗ ಇರದಿರುವವರಿಗೆ ಹುಡುಗಿಯರು ಸಿಗುವುದು ತುಂಬ ಕಷ್ಟವಾಗಿದೆ. ಒಬ್ಬಳೇ ಮಗಳಾದ್ದರಿಂದ ಅವಳಿಷ್ಟ ಪಟ್ಟ ಹುಡುಗನೊಂದಿಗೆ ವಿವಾಹಮಾಡುತ್ತಾರೆ. ಇಂಥ ಬದಲಾವಣೆ ಒಳ್ಳೆಯದೇ ಆದರೂ ಪರಿಸ್ಥಿತಿ ಪೂರ್ತಿ ಸುಧಾರಿಸಿಲ್ಲ. ಕಡಿಮೆ ಓದಿದ, ಚೆನ್ನಾಗಿಲ್ಲದ ಹುಡುಗಿಯರಿಗೆ ಇಂಥ ಅವಕಾಶಗಳು ಕಡಿಮೆ. ಎಷ್ಟೊ ಕುಟುಂಬಗಳಲ್ಲಿ ಇನ್ನೂ ತಂದೆ ತಾಯಿ ಒಪ್ಪಿ ಮಗಳ ಒಪ್ಪಿಗೆ ಕೇಳದೇ ವಿವಾಹಗಳು ಆಗುತ್ತಿವೆ. ಆದರೆ ಇಂಥವುಗಳ ಸಂಖ್ಯೆ ಕಡಿಮೆ ಎಂದು ಹೇಳಬಹುದು.

ವಿವಾಹದ ವಿಧಿಗಳಲ್ಲಿ ಮಾತ್ರ ಬದಲಾವಣೆ ಇಲ್ಲ. ತುಂಬಾ ಸಮಯ ಹಿಡಿಯುತ್ತಿದ್ದ ಹೋಮಹವನಗಳು ಅಷ್ಟೊಂದು ಸಮಯ ತೆಗೆದುಕೊಳ್ಳುತ್ತಿಲ್ಲ. ಅಂದರೆ ೨ ರಿಂದ ೩ ಗಂಟೆಯಷ್ಟು ಮಾತ್ರ ಸಮಯ ಹಿಡಿಯುತ್ತಿವೆ. ವಿವಾಹದ ವಿಧಿಗಳು ಉತ್ತರ ಕನ್ನಡ ದಕ್ಷಿಣ ಕನ್ನಡಗಳಲ್ಲಿ ಬೇರೆ ಬೇರೆಯಾಗಿರುವುದು ಕಂಡುಬರುತ್ತಿವೆ. ವಿವಾಹವನ್ನು ಕಡ್ಡಾಯವಾಗಿ ಹೆಣ್ಣಿನ ಕಡೆಯವರೇ ಮಾಡಬೇಕೆಂಬ ನಿಯಮವಿದೆ. ತೀರ ಆಗದೇ ಇರುವವರು ಮಾತ್ರ ಗಂಡಿನ ಕಡೆಯವರಿಗೆ ದುಡ್ಡುಕೊಟ್ಟು ವಿವಾಹಮಾಡುತ್ತಾರೆ. ಇವು ತೀರಾ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಮಾತ್ರ ಕಂಡುಬರುತ್ತವೆ. ಅಂತರ್ ಜಾತಿ ವಿವಾಹಗಳು ಕಡಿಮೆ. ಆದರೂ ಅಂತವುಗಳು ಜರುಗಿದಾಗ, ತಮ್ಮ ಜಾತಿಗೆ ಸೇರಿಸಿಕೊಂಡು ಅಂದರೆ ಮುದ್ರೆ ಹಾಕಿಸಿಕೊಂಡರೇ ಆಯಿತು. ಆ ಹೆಣ್ಣು ತನ್ನ ತಾಯಿ ಮನೆಗೆ ಹೋಗುವಂತಿಲ್ಲ. ಆದರೂ ಇಂಥವುಗಳಿಗೆ ಕೆಲವೊಮ್ಮೆ ಮನ್ನಣೆ ನೀಡಲಾಗುತ್ತದೆ. ವರದಕ್ಷಿಣೆಯಾಗಿ ನೀಡುವ ಚಿನ್ನ ಆ ಹೆಣ್ಣು ಮಗಳ ಮೈಮೇಲೆ ಆಭರಣಮಾಡಿಹಾಕಲಾಗುತ್ತಿದೆ. ದುಡ್ಡನ್ನು ಮಾತ್ರ ಗಂಡಿನ ಮನೆಯವರು ಮದುವೆ ಖರ್ಚಿಗೆಂದೇ ನೀಡಲಾಗುತ್ತಿದೆಂದೇ ಹೇಳಬಹುದು. ಅಂದರೆ ವರದಕ್ಷಿಣೆಯ ಅರ್ಧದುಡ್ಡನ್ನು ವಿವಾಹ ಸಂದರ್ಭದಲ್ಲಿ ಕೊಡಬೇಕು. ಇನ್ನರ್ಧ ದುಡ್ಡನ್ನು ವಿವಾಹ ಸಂದರ್ಭದಲ್ಲಿ ಕೊಡಬೇಕು ಈ ವರದಕ್ಷಿಣೆ ಮೊದಲು ಆ ಮನೆತನದ ಆಸ್ತಿ, ಪ್ರತಿಷ್ಠೆ ನೋಡಿ ಕೊಡಲಾಗುತ್ತಿತ್ತು. ಆದರೆ ಈಗ ಗಂಡಿನ ಉದ್ಯೋಗ ಸಮಾಜದಲ್ಲಿ ಅವನ ಸ್ಥಾನ ಮಾನ,

ಶಿಕ್ಷಣ ಇವುಗಳನ್ನು ನೋಡಿಕೊಡಲಾಗುತ್ತದೆ. ಉದ್ಯೋಗಸ್ಥ ಯುವತಿಯರಿದ್ದರೂ ವರದಕ್ಷಿಣೆ ಕೊಟ್ಟು ವಿವಾಹವಾಗುವುದು ಕಂಡುಬರುತ್ತದೆ.

ವೈದವ್ಯದ ಪಾಲನೆಯ ಆಚಾರ ವಿಚಾರಗಳಲ್ಲಿಯ ಸಡಿಲಿಕೆಗಳು ಕಂಡುಬರುತ್ತಿವೆ ಮಡಿ ಆಗಬೇಕೆಂಬುದು ಕಡ್ಡಾಯವೆನಿಲ್ಲ. ತಲೆ ಕೂದಲು ತೆಗೆಸಿಕೊಳ್ಳಬೇಕೆಂಬ ಕಡ್ಡಾಯ ನಿಯಮಗಳೇನೂ ಇಲ್ಲ. ಕುಕುಂಮ ಹಚ್ಚಬಾರದು, ಹೂ ಮುಡಿಯಬಾರದು, ಬಳೆ ಹಾಕಬಾರದೆಂಬ ನಿಯಮಗಳು ಈಗ ಹೆಸರಿಲ್ಲದಂತಿವೆ. ಈ ಹಿಂದೆ ಇವುಗಳು ಕಡ್ಡಾಯವಾಗಿದ್ದವು. ಸಾಮಾಜಿಕ ಚಳುವಳಿಗಳಿಂದ ಮತ್ತು ಶಿಕ್ಷಣದ ಪ್ರಭಾವದಿಂದ ಇವುಗಳು ಪ್ರಾಬಲ್ಯವನ್ನು ಕಳೆದುಕೊಂಡಿವೆ. ಪತಿಯ ಮರಣಾನಂತರ ಹೆಂಡತಿಗೆ ತನ್ನ ಕುಟುಂಬಕ್ಕಾಗಿ ಅವಳು ಅನಿವಾರ್ಯವಾಗಿ ಉದ್ಯೋಗದ ಮೊರೆಹೋಗಬೇಕು. ಮನೆತನದ ಆಸ್ತಿ ಇದ್ದು, ಮನೆಯಲ್ಲಿದ್ದವರ ಸಂಖ್ಯೆ ತೀರ ವಿರಳ ಹೊರಗಡೆ ಹೋದಾಗ ಸಮಾಜದ ಕುಹಕ ಕಣ್ಣಿನಿಂದ ತಪ್ಪಿಸಿಕೊಳ್ಳಲು ಚಿಕ್ಕದಾಗಿ ಕುಂಕುಮ ಇಡುವುದು. ಬಳೆಹಾಕಿಕೊಳ್ಳುವುದು, ಹೂ ಮುಡಿಯುವುದು ಇವೆಲ್ಲವನ್ನು ಅವಳು ತನ್ನ ಒಪ್ಪಿಗೆಯಿರದಿದ್ದರೂ ಅನಿವಾರ್ಯವಾಗಿ ಪಾಲಿಸುತ್ತಾಳೆ. ಇದಕ್ಕೆ ಇತರ ಹೆಣ್ಣುಮಕ್ಕಳು, ವಿರೋಧಿಸುತ್ತಾರಾದರೂ, ನೇರವಾಗಿ 'ಚ'ಕಾರವೆತ್ತುವದಿಲ್ಲ. ಮಂಗಳಕರ ಕಾರ್ಯದಲ್ಲಿ ಇವರು ಭಾಗವಹಿಸಬಹುದು ಆದರೆ ಆ ಕಾರ್ಯವನ್ನು ತಾವೇ ಮಾಡುವಂತಿಲ್ಲ. ಇಂಥವರಿಗೆ ಮೊದಲ ಪಂಕ್ತಿಯಲ್ಲಿ ಬೋಜನ ನಿಷಿದ್ಧವೆಂದೇ ಹೇಳಬಹುದು. ಮೊದಲು ಹೆಣ್ಣುಮಕ್ಕಳು ಕಚ್ಚೆಹಾಕಿ ಸೀರೆ ಉಡಬೇಕೆಂದು ಹೆಳಲಾಗುತ್ತಿತ್ತು. ಇಂದು ಇದು ಕಡ್ಡಾಯವೆನಿಲ್ಲ. ಒಪ್ಪತ್ತೆ ಊಟಮಾಡಬೇಕು ಸಪ್ಪೆ ಸಪ್ಪೆಯಾದ ಆಹಾರ ಸೇವನೆ ಮಾಡಬೇಕು ಎಂಬ ನಿಯಮಗಳಿದ್ದವು. ಇತ್ತಿಚೇಗೆ ಇಂಥ ನಿಯಮಗಳು ಪಾಲನೆಯಾಗುತ್ತಿಲ್ಲ. ವಿಧುರನಿಗೆ ಮರುವಿವಾಹದ ಅವಕಾಶ ವಿತ್ತು. ಆದರೆ ವಿಧವೆಗೆ ಮರುವಿವಾಹಕ್ಕೆ ಇಂದು ಅವಕಾಶಗಳಿವೆ. ಇಂಥವರು ಎರಡನೆ ಸಂಬಂಧಮಾಡಿಕೊಳ್ಳಬೇಕು. ಮಕ್ಕಳಿದ್ದ ತಾಯಂದಿರು ಮರು ವಿವಾಹವಾಗುವುದು ಕಠಿಣ. ಮರುವಿವಾಹಕ್ಕೆ ಅವಕಾಶವಿದೆ. ಇದೆ ಎಂದು ಬರೀ ಮಾತಿನಲ್ಲಿ ಹೇಳಲಾಗುತ್ತದೆ. ಇಂಥ ಘಟನೆಗಳು ನಿಜವಾಗಿ ನಡೆದಿರುವುದು ತೀರ ಅಂದರೆ ತೀರ ವಿರಳ ಎಂದೇ ಹೇಳಬಹುದು.

ಕುಂಕುಮ ಹಚ್ಚುವ ವಿಚಾರದಲ್ಲಿ ಇಂದು ಅನೇಕ ಬದಲಾವಣೆಗಳು ಕಂಡುಬರುತ್ತಿವೆ. ಅಂದರೆ ವೈಷ್ಣವ ಹೆಣ್ಣು ಮಗಳಾಗಿರಬಹುದು, ಸ್ಮಾರ್ಥ ಹೆಣ್ಣು ಮಗಳಾಗಿರಬಹುದು. ತಮ್ಮ ಮನಸ್ಸಿಗೆ ಬಂದ ಆಕಾರದಲ್ಲಿ, ಬೇಕಾದ ಬಣ್ಣದ ಕುಂಕುಮ ಹಚ್ಚುವುದು ಕಂಡುಬರುತ್ತದೆ. ಅಂದು ತಮ್ಮ ಉಪಜಾತಿಯ ಸಂಕೇತವಾಗಿದ್ದರೇ, ಇಂದು ಇದು ಬಟ್ಟೆಯ ಮೇಲೆ ಅವಲಂಬಿತವಾಗಿದೆ ಎಂದು ಹೆಳಬಹುದು.

ಶವಸಂಸ್ಕಾರ, ಶ್ರಾದ್ಧ, ಕರ್ಮದ ವಿಚಾರದಲ್ಲಿ ಆಚರಣೆಗಳಲ್ಲಿ ಭಿನ್ನತೆ ಅಷ್ಟಾಗಿ ಕಂಡುಬರದಿದ್ದರೂ, ಸಮಯ ಕಡಿಮೆ ಬಳಕೆಯಾಗುತ್ತಲಿದೆ. ಮೊದಲು ಮನೆಯಲ್ಲಿ ಯಾರಾದರೂ ಸತ್ತರೇ ಗರುಡ ಪುರಾಣ ಹೇಳಿಸುತ್ತಿದ್ದರು ಇದು ಹತ್ತು ದಿನಗಳ ಕಾಲ ನಡೆಯುತ್ತಿತ್ತು. ಇಂದು ಸಮಯದ ಅಭಾವದ ಕಾರಣದಿಂದ ಗರುಣ ಪುರಾಣ ಹೇಳಿಸುವದಿಲ್ಲ.

ಇತ್ತೀಚೇಗೆ ಯುವತಿಯರು ತಮಗೆ ಇಷ್ಟ ಬಂದಂತೆ ಇರುವುದನ್ನು ರೂಢಿಸಿಕೊಳ್ಳುತ್ತಿದ್ದಾರೆ ಶಿಕ್ಷಣದ ಪ್ರಭಾವದಿಂದ ಅವರು ಕೆಲವು ಆಚಾರ ವಿಚಾರಗಳನ್ನು ಬಿಟ್ಟುಹಾಕುತ್ತಿದ್ದಾರೆ. ಮನೆಯಲ್ಲಿ ಕೆಳಿದರೇ ನನ್ನಿಷ್ಟ ಬಂದಂತೆ ಇರುತ್ತೇನೆ ಎಂದು ನೇರವಾಗಿ ಹೇಳುತ್ತಾರೆ. ಅದೂ ಅಲ್ಲದೇ ಇವರ ಪೋಷಕರು ಆಚರಣೆಗಳನ್ನು ಪಾಲಿಸದಿದ್ದರೇ, ಹೋಗಲಿ, ಮುಂದೆ ಗಂಡನ ಮನೆಯಲ್ಲಿ ಅನಿವಾರ್ಯವಾಗಿ ರೂಢಿಸಿಕೊಳ್ಳುತ್ತಾನೆ. ಇಲ್ಲಿಯಾದರೂ ತನಗಿಷ್ಟಬಂದಂತೆ ಇರಲಿ ಎಂಬ ಮನೋಭಾವ ಬೆಳೆಸಿಕೊಂಡಿದ್ದಾರೆ. ಅಷ್ಟೆ ಅಲ್ಲದೇ ತಂದೆ ತಾಯಿ ಇಬ್ಬರೂ ಉದ್ಯೋಗಸ್ಥರಾಗಿರುವುದರಿಂದ ಹೆಚ್ಚಿನ ಸಮಯ ತಮಗಿಷ್ಟ ಬಂದಂತ ಕಳೆಯುತ್ತಿದ್ದಾರೆ. ತಂದೆ ತಾಯಿಗೆ ಹೇಳಲು ಕೇಳಲು ಪುರುಸೊತ್ತೆ ಇಲ್ಲದಂತಾಗಿದೆ. ಏನಾದರೂ ಹೇಳಹೊರಟರೇ ಇವನ್ನೆಲ್ಲ ಮೊದಲು ನೀನು ಪಾಲಿಸು, ಆಮೇಲೆ ನಾನು ಪಾಲಿಸುತ್ತೇನೆ ಎಂದು ಹೇಳುತ್ತಾರೆ. ಇದಕ್ಕಾಗಿ ಪೋಷಕರು ಸುಮ್ಮನಾಗಿ ಬಿಡುತ್ತಾರೆ. ಇಂಥ ಹುಡುಗಿಯರು ತುಂಬ ಕಡಿಮೆ ಸಂಖ್ಯೆಯವರೆಂದೇ ಹೇಳಬಹುದು. ಧರ್ಮದ ಮಾತನ್ನು ಮುರಿಯಲು ಆಗದೇ ಕೆಲವೊಮ್ಮೆ ಅರ್ಥಹೀನ ಭಾಗವಹಿಸುವಿಕೆಗೆ ಸಮ್ಮತಿಸಿದ್ದಾರೆಂದು ಹೇಳಬಹುದು.

ಪ್ರೇಮವಿವಾಹಗಳು ಅಂತರ್‌ಜಾತಿಗಳಲ್ಲಿಯೂ ಏರ್ಪಡುತ್ತಿವೆ ಎಂದು ಹೇಳಬಹುದು. ಮನೆಗೆ ಸೇರಿಸಿಕೊಳ್ಳದಿದ್ದರೇ ಹೋಗಲಿ, ನಮ್ಮ ಪಾಡಿಗೆ ನಾವು ಇರುತ್ತೆವೆಂಬ ಮನಸ್ಥಿತಿಗೆ ಬಂದಿದ್ದಾರೆ. ಹೀಗಾಗಿ ಪೋಷಕರು ಅವರು ತಮ್ಮ ಮಾತು ಕೇಳುವುದಿಲ್ಲ ಎಂದು, ಅವರೇನು ನಮ್ಮ ಜೊತೆ ಇರುವುದಿಲ್ಲ. ಯಾವಾಗಲಾದರೊಮ್ಮೆ ಬಂದು ಹೋಗುತ್ತಾರೆ ಎಂದು ಒಪ್ಪಿಗೆ ಸೂಚಿಸುತ್ತಿದ್ದಾರೆ.

ಎಷ್ಟೆ ಬದಲಾವಣೆಗಳು ಸಂಭವಿಸಿದರೂ ವ್ಯವಸ್ಥೆಗಳಲ್ಲಿ ಅವರ ಆಚರಣೆಗಳಲ್ಲಿ ಸಂಪೂರ್ಣ ಬದಲಾಗಿಲ್ಲ. ಬದಲಾದ ಮನೋಧರ್ಮಕ್ಕೆ ಯೋಚಿಸುತ್ತಾ, ಯೋಚಿಸುತ್ತಾ ಮತ್ತೆ ತಮ್ಮ ಮೂಲ ಬದಲಾಗದೇ ಹೋದರೂ, ಕಾಲಕ್ಕೆ ತಕ್ಕಂತೆ, ಅವಶ್ಯಕತೆಗಳಿಗೆ ಅನುಗುಣವಾಗಿ ಪರಿವರ್ತನೆಯನ್ನು ಸ್ವೀಕರಿಸಿದ್ದಾರೆ. ಇದು ಮನೋಭಾವದಲ್ಲಾದ ಬದಲಾವಣೆಯಿಲ್ಲದಿದ್ದರೂ, ಪರಿಸ್ಥಿತಿಯ ಒತ್ತಡಕ್ಕೆ ಮಣಿದು ತಮ್ಮ ವಿಚಾರಗಳನ್ನು ಬದಲಿಸಿಕೊಳ್ಳುತ್ತಿದ್ದಾರೆ.

ಕುಟುಂಬ ನಿಯಂತ್ರಣ ವಿಷಯಗಳ ಬಗ್ಗೆ ಇಂದು ಯೋಚನೆಮಾಡುತ್ತಲಿದ್ದಾರೆ. ಕಾರಣ ಆರ್ಥಿಕ ಸಂಕಷ್ಟಕ್ಕೆ ಒಳಗಾಗಬಾರದೆಂದು ಕಟುಂಬ ನಿಯಂತ್ರಣಾ ವಿಧಾನಗಳ ಬಗೆಗೆ ಇಂದು ಗಂಡ, ಹೆಂಡತಿ ಚರ್ಚೆ ಮಾಡುತ್ತಾರೆ. ನಿಯಂತ್ರಕಗಳನ್ನು ಬಳಸುವುದು ಮಾತ್ರ ಮಹಿಳೆ ಎಂದು ಹೇಳಬಹುದು. ಮಕ್ಕಳನ್ನು ಪಡೆಯುವ ವಿಚಾರದಲ್ಲೆ ಮೊದಲೇ ಯೋಚಿಸುತ್ತಾರೆ. ಆದರೆ ಅಲ್ಲಿ ಹೆಣ್ಣಿನ ಭಾವನೆ, ಅಭಿಪ್ರಾಯ ಅಷ್ಟು ಮುಖ್ಯವಾಗುವುದಿಲ್ಲ. ಕುಟುಂಬ ನಿಯಂತ್ರಣಕ್ಕೆ ತನ್ನನ್ನು ಒಳಪಡಿಸುವ ಅವಳ ವಿಚಾರ ಅನ್ನುವುದಕ್ಕಿಂತ, ವೈದ್ಯರ ಸಲಹೆ ಮೇರೆಗೆ ಅಳವಡಿಸಿಕೊಳ್ಳುವುದು ಕಂಡು ಬರುತ್ತದೆ. ಎಷ್ಟು ಮಕ್ಕಳು ಬೇಕು, ಎಂಥ ಮಕ್ಕಳು ಬೇಕು, ಎನ್ನುವ ವಿಚಾರದಲ್ಲಿ ಚರ್ಚೆಗಳಾಗುತ್ತಿವೆ. ಆದರೆ ಅಲ್ಲಿ ಮುಖ್ಯವಾಗಿ ಪರಿಣಮಿಸುವುದು ಗಂಡಸಿನ ವಿಚಾರ ಮಾತ್ರ ಎಂದು ಹೇಳಬಹುದಾಗಿದೆ.

೫.೩. ಸ್ತ್ರೀವಾದಿ ನಿರ್ವಚನ

'ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಒಂದು ರಾಜಕೀಯ ಸಿದ್ಧಾಂತ, ಅದು ಸ್ತ್ರೀ ಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ. ಸಾಮಾಜಿಕ ರಾಜಕೀಯ ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೇ ಅದರ ಮುಖ್ಯವಾದ ಕಾರ್ಯ ವಿಧಾನವಾಗಿದೆ. ಸ್ತ್ರೀವಾದ ಪಶ್ಚಿಮದಿಂದ ಭಾರತಕ್ಕೆ ಆಮದಾಗಿ ಬಂದಿರುವ ಇತರ ಅನೇಕ ವಿಚಾರಧಾರೆಗಳ ಸಾಲಿಗೆ ಸೇರುತ್ತದೆ. ಆದರೆ ಅದರ ಪ್ರಾಥಮಿಕ ಗುರಿ ಕೇವಲ ಬೌದ್ಧಿಕ ಚಿಂತನಾ ಸೂತ್ರವಷ್ಟೆ ಆಗಿಲ್ಲ. ಅದು ವರ್ತಮಾನದ ಜನ ಜೀವನ ಕ್ರಮವನ್ನು ರೂಪಿಸಿರುವಂಥ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲನೆಗೆ ಗುರಿಮಾಡುತ್ತ, ಜನರಲ್ಲಿ ಪ್ರಜ್ಞಾಜಾಗೃತಿಗಾಗಿ ಪ್ರಯತ್ನಿಸುತ್ತದೆ. ಈ ಅರ್ಥದಲ್ಲಿ ಸ್ತ್ರೀವಾದವು ಒಂದು ಪ್ರಯೋಗ ರೂಪಿ ಕ್ರೀಯೆ ಕೂಡ ಆಗಿರುತ್ತದೆ.''[೪] ''ಆಧುನಿಕ ಶಿಕ್ಷಣ, ಉದ್ಯೋಗ, ಮೀಸಲಾತಿ ಮೊದಲಾದವುಗಳು ಹೇಗೆ ಸ್ಥಗಿತಗೊಂಡಿದ್ದ ಜಾತಿ, ವರ್ಗಗಳ ಸ್ಥಗಿತತೆಗೆ ಒಂದು ಚಾಲಕ ಶಕ್ತಿಯಾಗಿ ಒದಗಿ ಬಂದವೋ ಹಾಗೆ ಮಹಿಳೆಯರ ಪಾಲಿಗೂ ಒಂದು ಬಿಡುಗಡೆಯ ರಹ ದಾರಿಯಾಗಿ ತೆರಕೊಂಡವು. ಅದುತನಕ ಪುರುಷ ನಿರ್ಮಿತ ಸೀಮಿತ ಪ್ರಪಂಚದಲ್ಲಷ್ಟೇ ಅರಳಬೇಕಾಗಿದ್ದ, ಬಾಳಬೇಕಾಗಿದ್ದ ಆಕೆ ಈಗ ಹೊಸ ಅವಕಾಶಗಳ ಉಪಲಬ್ದತೆಯಿಂದ ತನ್ನ ವ್ಯಕ್ತಿತ್ವ ವಿಕಸನಕ್ಕೆ ಪಿತೃ ಪ್ರಧಾನ ಚೌಕಟ್ಟಿನಾಚೆಯೂ ತನ್ನ ಕೊರಳನ್ನು ಚಾಚುತ್ತಿದ್ದಾಳೆ. ಅವಕಾಶಗಳು ಆಕೆಗೆ ಸಂಭ್ರಮ, ಬೆರಗು ಭಯ, ವಿಷಾದ ಹಾಗೂ ದ್ವಂದ್ವಗಳ ಅಪಾರ ರಾಶಿಯನ್ನು ತಂದು ಒಡ್ಡಿದವು. ಕಾಲದ ಹಾದಿಯಲ್ಲಿ ತನಗೆ ಆಗಿರುವ ಅನ್ಯಾಯವನ್ನು ತಪ್ಪಿ ಹೋಗಿರುವ ಅನಂತ ಅವಕಾಶಗಳನ್ನು ಕುರಿತು ಚಾರಿತ್ರಿಕ ಮರುಪರಿಶೀಲನೆಗೂ ಮುಂದಾದಳು. ಸಂಪ್ರದಾಯಗಳು, ಧರ್ಮಜಾತಿಗಳು, ಕುಟುಂಬ ಸಮಾಜ, ಮತ್ತು ಗಂಡಸು ಹೇಗೆ ತನ್ನ ವ್ಯಕ್ತಿತ್ವವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಒಂದು, ಪಡಿಯಚ್ಚಿನಂತೆ, ನಿರ್ಮಿಸಿದ್ಧವು. ಆ ಪಡಿಯಚ್ಚಿನ ಬಾಳು ಹೇಗೆ ನಿರ್ಜಿವವೋ, ದುರ್ಬಲವೋ ಅಸಾಹಾಯಕವೂ ಆಗಿತ್ತು ಎಂಬ ಎಚ್ಚರ ಕೂಡ ಆಕೆಯಲ್ಲಿ ಕಾಣಿಸಿಕೊಳ್ಳತೊಡಗಿತು.''[೫]

''ಸ್ತ್ರಿ ಶೋಷಣೆಯ ಮೂಲಗಳನ್ನು ಬೋವಾ ಸ್ತ್ರಿಯರನ್ನು ಕುರಿತಂತೆ ಇರುವ ಅನೇಕ ಮಿಥ್ಯೆಗಳಲ್ಲೂ (Myths) ಹುಡುಕುತ್ತಾಳೆ. ಸ್ತ್ರಿಯನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪುರುಷ ಆಕೆಯನ್ನು ಕುರಿತಂತೆ ಅನೇಕ ಮಿಥ್ಯೆಗಳನ್ನು ರಚಿಸಿದ್ದಾನೆ 'ಆದರ್ಶ ಸ್ತ್ರಿ'ಯನ್ನು ಕುರಿತಂತೆ ದೊರೆಯುವ ಅನೇಕ ಕಲ್ಪನೆಗಳು ಪುರುಷ ಸಂಸ್ಕೃತಿಯ ಪ್ರತೀಕಗಳಷ್ಟೆ ಹೊರತು ವಾಸ್ತವಗಳಲ್ಲ. ಸ್ತ್ರಿಗೆ ತನ್ನದೇ ಆದಂತಹ ಪ್ರತ್ಯೇಕ ಅನನ್ಯತೆ ಮತ್ತು ಸ್ವತಂತ್ರ ವ್ಯಕ್ತಿತ್ವ ಇದೆ ಎಂಬುದನ್ನು ಸುಲಭದಲ್ಲಿ ಒಪ್ಪಿಕೊಳ್ಳದ ಸಾಮಾಜಿಕ ವ್ಯವಸ್ಥೆ ಪುರುಷನ ವಿಚಾರಕ್ಕೆ ಬಂದಾಗ ಮಾತ್ರ ಆತನಿಗೆ ಗುಣಗಳ ಸರಮಾಲೆಯನ್ನೆ ತಗುಲಿಸುತ್ತಕದೆ. ಪುರುಷನಿಗೆ ತನ್ನದೇ ಆದಂಥ ಸ್ವಂತಿಕೆ, ಸ್ವಾತಂತ್ರ್ಯ ಹಾಗೂ ವ್ಯಕ್ತಿತ್ವಗಳು ಇರುವುದರಿಂದ ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಈ ಕಾರಣದಿಂದ ಆತನಿಗೆ ತನ್ನ ಬದುಕಿನ ಮೇಲೆ ನಿಯಿಂತ್ರಣವಿದೆ. ಆದರೆ ತನ್ನ ಬದುಕಿಗೆ ಅರ್ಥಪೂರ್ಣವೆನಿಸಿದ ವಿಚಾರಗಳನ್ನು ತಾನೇ ತೀರ್ಮಾನಿಸುವ ಸ್ವಾತಂತ್ರ್ಯವಾಗಲಿ ಸ್ತ್ರಿಗೆ ಇಲ್ಲ.''[೬] 'ಸ್ತ್ರಿಯ ಬದುಕನ್ನು ಸುತ್ತುವರೆದಿರುವ ಕೃತಕ ಸಂಕೋಲೆಗಳು ಆಕೆ ಓರ್ವ

ಸ್ವತಂತ್ರ ವ್ಯಕ್ತಿಯಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಅವಕಾಶವನ್ನೇ ನೀಡುವುದಿಲ್ಲ. ಸ್ತ್ರೀ ಸಹಜ ಜೈವಿಕ ಕ್ರಿಯೆಗಳಾದ ಗರ್ಭದಾರಣೆ, ಸಂತಾನೋತ್ಪತ್ತಿ, ಮುಂತಾದವುಗಳನ್ನೇ ಹಿರಿದು ಮಾಡಿ ಸ್ತ್ರೀ ಕ್ರೀಯಾತ್ಮಕ ಶಕ್ತಿಯನ್ನು ದಮನ ಮಾಡಲಾಗುತ್ತದೆ. 'ಪತ್ನಿತ್ವ' ಮತ್ತು 'ತಾಯ್ತನ' ಗಳೇ ಸ್ತ್ರಿಯ ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಡುವ ಪ್ರಮುಖ ಅಂಶಗಳು ಎಂಬುದು ಬೋವಾಳ ಖಚಿತ ನಿಲುವು.'[೭]

ಬ್ರಾಹ್ಮಣ ಮಹಿಳೆಯೂ ಎಲ್ಲ ಸ್ತ್ರಿಯರೊಂದಿಗೆ ಹೋಲಿಸಿದಾಗ ಅವಳು ಇತರ ಮಹಿಳೆಗಿಂತ ಹೊರತಲ್ಲ ಎಂದು ಎಂಬುದು ವೇಧ್ಯವಾಗುತ್ತಿದೆ. ಕೆಲವು ಸಮಸ್ಯೆಗಳೇನೋ ಇತರರಿಗಿಂತ ಭಿನ್ನವಾಗಿವೆ. ಯಾವುದೇ ಪ್ರದೇಶ, ಕಾಲಗಳ ಮೇಲೆ ಮಹಿಳೆಯ ಸಮಸ್ಯೆಗಳು ಭಿನ್ನವಾಗಿರುವುದು ಕಂಡುಬರುತ್ತಿದೆ.

ಸ್ತ್ರಿವಾದಿ ದೃಷ್ಟಿಕೋನದಿಂದ ಬ್ರಾಹ್ಮಣ ಮಹಿಳೆಯ ಚಹರೆಯನ್ನು ಕಂಡುಕೊಳ್ಳಲು ಹೋರಟಾಗ ಅನೇಕ ಅವ್ಯಕ್ತ, ಎಲೆ ಮರೆಕಾಯಿಗಳಂತಿರುವ ಅನೇಕ ರೂಪಗಳು ಕಾಣಿಸಿಕೊಳ್ಳುತ್ತವೆ.

ವೇದಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆ ಒಳ್ಳೆಯ ಜೀವನ ನಡೆಸುತ್ತಿದ್ದಳು. ಅವಳಿಗೆ ನಿರ್ಭಂದಗಳೇ ಇರಲಿಲ್ಲ ಎಂಬ ಮಾತಿಗೆ ಆಳವಾದ ಅಧ್ಯಯನದ ಮೂಲಕ ನೈಜ ವಿಷಯವನ್ನು ತಿಳಿಯಬಹುದಾಗಿದೆ. ವೇದಗಳ ಕಾಲದ ಬ್ರಾಹ್ಮಣ ಮಹಿಳೆಗೆ ಹೆಸರಿಗೆ ಮಾತ್ರ ಅವಕಾಶಗಳಿದ್ದುದು ಕಂಡು ಬರುತ್ತದೆ. ಯಾವುದೇ ಅವಕಾಶಗಳು ಸ್ತ್ರಿಯರಿಗೆಂದೇ ಇರಲಿಲ್ಲ. ಅನಾಯಾಸವಾಗಿ ಸಿಕ್ಕ ಅವಕಾಶವನ್ನು ಆ ಮಹಿಳೆ ಬಳಸಿಕೊಂಡಳು. ಇದನ್ನು ತಾವು ಕೊಟ್ಟದ್ದು ಎಂಬ ಬೀಗುವಿಕೆಯ ಮಾತುಗಳು ಕಂಡುಬರುತ್ತವೆ. ಸ್ಮೃತಿಗಳ ಕಾಲ ಬ್ರಾಹ್ಮಣ ಮಹಿಳೆಯ ಪಾಲಿಗೆ ದ್ವಂದ್ವಗಳ ಕಾಲವೇ ಎಂದು ಹೇಳಬಹುದು. ಮಹಾಕಾವ್ಯಗಳಂತೂ ಹೆಣ್ಣಿಗೆ ಶೂದ್ರಳೆಂಬ ಪಟ್ಟಕಟ್ಟಿವೆ. ಅಷ್ಟೇ ಅಲ್ಲ ಅವಳು ಮಾಡದೇ ಇರುವ ತಪ್ಪಿಗೆ ಶಾಪವನ್ನು ಕೊಟ್ಟು, ಆಯುಷ್ಯ ಪೂರ್ತಿ ಕೊರಗುವಂತೆ ಮಾಡಿವೆ. ಇಂಥವುಗಳನ್ನು ಆದರ್ಶಿಕರಿಸಿ ಇಂದಿನ ಮಹಿಳೆಯರಿಗೆ ಬದುಕಲು ದಾರಿಯನ್ನಾಗಿಸಿವೆ. ತನ್ನ ಪೂರ್ಣ ಅವಧಿಯಲ್ಲಿ ಮೌನವಾಗಿ ನೋವುನುಂಗಿದ, ಸಹನೆ ಕಳೆದುಕೊಳ್ಳದೇ ಬದುಕಿದ ಅವಳನ್ನು ಕೇಳಿದರೇ ಮಾತ್ರ ನಮಗೆ ಅವಳ ಬದುಕಿನ ನಿಜ ಅರ್ಥವಾಗಬಹುದು. ಅವಳು ಒಂದು ನಿಜ ಹೇಳಿದ್ದರೇ ನಮ್ಮ ಧರ್ಮಗ್ರಂಥಗಳು, ಆಚರಣೆಗಳನ್ನು ಸೃಷ್ಟಿಸಿದ ಪುರುಷರು ತುಟಿಪಿಸಿಕ್ಕೆನ್ನದೇ ಇರುತ್ತಿದ್ದರು. ಆದರೆ ಅವಳು ಬಂದು ಹೇಳಲಾರಳು ಎಂಬ ಕಾರಣಕ್ಕಾಗಿ ತನ್ನ ಮನಸ್ಸಿಗೆ ಬಂದಂತೆ, ಆ ಮಹಿಳೆಯ ನಿರ್ವಚನ ಮಾಡಿರುವುದು ಕಂಡು ಬರುತ್ತದೆ. ಎಂದು ಬೇಳಬಹುದು. ಅದಕ್ಕಾಗಿಲ್ಲವೇ ಅವರೆಲ್ಲರ ಆದರ್ಶ ಹೇಳಿ ಅಂದಿನ ಮಹಿಳೆಯರೊಂದಿಗೆ ಇಂದಿನ ಮಹಿಳೆಯ ಪರಾಧೀನತೆಯ ಸಂಚನ್ನು ಹೂಡಿದೆ. ಅವಳು ದ್ವಿತಿಯ ದರ್ಜೆಯ, ಪೂರಕ ಸ್ಥಾನದಲ್ಲಿ ಉಳಿಯುವಂತೆ ಮಾಡಿದೆ ಎಂದು ಹೇಳಬಹುದು. ಬ್ರಾಹ್ಮಣ ಮಹಿಳೆ ಅಂದು ಅನುಭವಿಸಿದ ನೋವಿಗೂ ಇಂದು ಅನುಭವಿಸುತ್ತಿರುವ ನೋವಿನ ಹಿಂದೆ ತೆರೆಮರೆಯಲ್ಲಿ ಪುರುಷನ ಕೈವಾಡವಿರುವುದು ಕಂಡುಬರುತ್ತದೆ.

ಒಂದು ಕಾಲದಲ್ಲಿ ಉಚ್ಚಕುಲವೆಂದು ಕರೆಯಿಸಿಕೊಂಡಿದ್ದ ಬ್ರಾಹ್ಮಣ ಜಾತಿ, ಯಾವಾಗಲೂ ಸ್ತ್ರಿಗೆ ಗೌರವಯುತ ಸ್ಥಾನವನ್ನು ಕೊಟ್ಟಿಲ್ಲವೆಂದು ಹೇಳಬಹುದು. ಬದಲಿಗೆ ಅವಳುತನ್ನ ಬಗ್ಗೆ ನಿರ್ದಿಷ್ಟ ನಿಲುವಿಗೆ ಬರದಂತೆ ದ್ವಂದ್ವಗಳನ್ನು ಸೃಷ್ಟಿಸಿದೆ ಎಂದು ಹೇಳಬಹುದು. ಅವಳು ತನ್ನ ಸ್ಥಾನವೇನು ಎಂಬ ಅರಿವು ಮೂಡದಂತೆ ಮಾಡುವಲ್ಲಿ

ಯಶಸ್ವಿಯಾಗಿದೆ. ಲಿಖಿತ ಪರಂಪರೆಗಳ ಸೃಷ್ಠಿಯಾದ ಧರ್ಮಗ್ರಂಥಗಳು ಹೆಣ್ಣಿಗೆ ಎಲ್ಲೋ ಒಂದೊಂದು ಅಪವಾದದಂತೆ ದೇವಿಯಸ್ಥಾನ, ಗೌರವಯತ ಸ್ಥಾನ ನೀಡಿರುವುದು ಗೋಚವಾಗುತ್ತಿದೆ. ಉಳಿದಂತೆ ಇವೆಲ್ಲವು ಅವಳು ಅವಲಂಬಿತ ಸ್ಥಿತಿಯಲ್ಲಿರುವಂತೆ ಮಾಡಿರುವುದು ಕಂಡುಬರುತ್ತವೆ.

ಆಚರಣಾತ್ಮಕ ಪರಂಪರೆಯ ಮೂಲವನ್ನು ಬಗೆಯುತ್ತಾ ಹೋದಂತೆ, ನಮಗೆ ಕಂಡುಬರುವ ಸಂಗತಿ ಎಂದರೆ ಆಚರಣೆಗಳು ಪುರುಷ ಸೃಷ್ಟಿಯಾದವುಗಳು ಇದಕ್ಕೆ ನಮ್ಮ ಲಿಖಿತ ಪಂಪರೆಗಳು ಸಾಕ್ಷವನ್ನು ಒದಗಿಸುತ್ತವೆ ಎಂದು ಹೇಳಬಹುದು. ಲಿಖಿತ ಪರಂಪರೆಯನ್ನು ಆಳವಾಗಿ ಅಭ್ಯಸಿಸಿದಾಗ, ಹೆಚ್ಚಿನ ಆಚರಣೆಗಳು ಉಲ್ಲೇಖವಿರದೇ ಇರುವುದು ಕಂಡು ಬರುತ್ತವೆ. ಎಂದು ಹೇಳಬಹುದು. ಅದು ಅಲ್ಲದೇ ಹೆಚ್ಚಿನ ಆಚರಣೆಗಳಿಗೆ ಪುರುಷನ ವಾಖ್ಯಾನಗಳು ಕಂಡು ಬರುತ್ತವೆ. ಎಂದು ಹೇಳಬಹುದು.

ಸ್ತ್ರೀವಾದ ಸ್ತ್ರೀಯ ಸಮಸ್ಯೆಗಳಿಗೆ ಸ್ತ್ರೀ ದೃಷ್ಟಿಕೋನದಿಂದ ನೋಡಬೇಕು ಮತ್ತು ಪರಿಹಾರ ನೀಡಬೇಕೆಂದು ಹೇಳುತ್ತದೆ. ಸ್ತ್ರೀವಾದಿ ನೆಲೆಯಿಂದ ಲಿಖಿತ ಪರಂಪರೆ ಮತ್ತು ಆಚರಣಾತ್ಮಕ ಪರಂಪರೆಯನ್ನು ಅವಲೋಕಿಸಿದಾಗ ಸಂಪೂರ್ಣವಾಗಿ ವ್ಯವಸ್ಥೆ ಪುರುಷ ಪರವಾಗಿದೆ. ಸ್ತ್ರೀ ವಿರೋಧಿಯಾಗಿರುವುದು ವೇದ್ಯವಾಗುತ್ತದೆ. ಬ್ರಾಹ್ಮಣ ಮಹಿಳೆಯ ಚಹರೆಯು ಮಸುಕು, ಮಸುಕಾಗಿರುವುದು ಕಂಡುಬರುತ್ತದೆ. ಚಹರೆ ಪೂರ್ತಿ ಇಲ್ಲವೆಂದರೇ ಅನುಮಾನ ಬರುತ್ತಿದೆ. ಚಹರೆ ಸ್ಪಷ್ಟವಾಗಿ ಗೋಚರವಾದರೇ ತಮ್ಮ ಕುತಂತ್ರಬುದ್ಧಿ ಹೊರಬರುತ್ತದೆ. ಎಲ್ಲಿ ತಾನು (ಪುರುಷ) ಅಪರಾಧಿಯಾಗಿ ಬಿಡುವನೋ ಎಂದು ಅವಳ ಚಹರೆ ಮಬ್ಬಾಗಿ ಕಾಣುವಂತೆ ಮಾಡಿದೆ. ಅಧಿಕಾರ ಶಾಹಿ ನೆಲೆಯಲ್ಲಿರುವುದರಿಂದ ಇದನ್ನು ಯಾರೂ ಪ್ರಶ್ನಿಸಿಲ್ಲವೆನ್ನಬಹುದು.

ನಮ್ಮ ಸಾಮಾಜಿಕ ಸಂಸ್ಥೆಗಳೂ ಕೂಡ ಬ್ರಾಹ್ಮಣ ಮಹಿಳೆಯನ್ನು ಎರಡನೇಯ ದರ್ಜೆಯಲ್ಲಿರಿಸಿವೆ. ಇವೂ ಕೂಡ ಪಿತೃಪ್ರಧಾನ ವ್ಯವಸ್ಥೆಗೆ ಹೊರತಾದವುಗಳಲ್ಲ. ಹಾಗಾಗಿ ಇವು ಅದೇ ಸ್ಥಾನ ಮಾನವನ್ನು ಇಂದೂ ಮುಂದವರೆಸಿಕೊಂಡು ಹೊರಟಿವೆ. ಬದಲಾದ ಸಂದರ್ಭದಲ್ಲೂ ಕೂಡ ಅವಳು ಪೂರಕ ಸ್ಥಾನದಲ್ಲೆ ಗುರುತಿಸಲ್ಪಡುತ್ತಿರುವುದು ವಿಪರ್ಯಾಸವೇಸರಿ. ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಒಪ್ಪಿಕೊಂಡು ಹೊರಟಿರುವ ನಮ್ಮ ವ್ಯವಸ್ಥೆ, ಬ್ರಾಹ್ಮಣ ಮಹಿಳೆಯ ಸಂದರ್ಭದಲ್ಲಿ ಅದೇ ಧೋರಣೆಯನ್ನು ತಿಳಿದಿವೆ ಮತ್ತು ಮುಂದುವರೆಸಿಕೊಂಡು ಹೊರಟಿವೆ ಎಂದು ಹೇಳಬಹುದು.

ಶ್ರೇಷ್ಠ ಎಂದು ಕರೆಯಿಸಿಕೊಳ್ಳುವ ಧರ್ಮವೂ ಕೂಡ ಸ್ತ್ರೀ ಪುರುಷ ಎಂಬ ತಾರತಮ್ಯಕ್ಕೆ ಬೆಂಬಲನೀಡುತ್ತಿದೆ. ''ಧರ್ಮೋರಕ್ಷತಿ ರಕ್ಷಿತಃ'' ಎಂದು ಹೇಳುವ ಧರ್ಮ, ಹಾಗಾದರೇ ಧರ್ಮಪಾಲನೆಮಾಡಿಕೊಂಡು ಹೊರಟಿರುವ ವಾಖ್ಯಾನದಲ್ಲಿ ಬ್ರಾಹ್ಮಣ ಮಹಿಳೆ ಸೇರಿಕೊಳ್ಳುವುವದಿಲ್ಲವೊ ಎಂಬ ಸಂದೇಹಗಳು ಹುಟ್ಟಿಕೊಳ್ಳುತ್ತಲಿವೆ. ಪರಿಸ್ಥಿತಿಬದಲಾಗಿದೆ. ಮೂಲ ಧರ್ಮಗ್ರಂಥಗಳಲ್ಲಿರುವ ಬ್ರಾಹ್ಮಣ ಮಹಿಳೆಯ ಪರಿಭಾವನೆ ಹಾಗೇ ಇದೇ, ಆಚರಣೆಗಳಲ್ಲಿ ಸ್ಥಿತ್ಯಂತರಗಳುಂಟಾಗುತ್ತಿದ್ದು, ಅಷ್ಟು ಕಠಿಣ ಪರಿಸ್ಥಿತಿಯನ್ನು ಉಂಟುಮಾಡುತ್ತಿಲ್ಲ. ಅವಳು ಪುರುಷನಿಗೆ ಸಮಾನವಾಗಿ ಎಲ್ಲ ಸಂದರ್ಭಗಳಲ್ಲೂ ಭಾಗವಹಿಸುತ್ತಿದ್ದಾಳೆ. ಆ ಕಾರ್ಯದಲ್ಲಿ ಅವಳು ಯಶಸ್ವಿಯೂ ಆಗುತ್ತಿದ್ದಾಳೆ. ಆದರೆ ಅವಳ ಪೂರಕ, ದ್ವಿತೀಯ ದರ್ಜೆಗಳು ಬದಲಾಗದಿರುವುದು ವಿಪರ್ಯಾಸವೇ ಸರಿ ಎಂದು ಹೇಳಬಹುದು.

ಧರ್ಮವು ಏಕಮುಖಿ ಚಿಂತನೆ ಮಾಡುತ್ತಿರುವುದು ಸರ್ವವೇಧ್ಯ ಸಂಗತಿ ಇದಕ್ಕೆ ಕಾರಣ ಬದಲಾಗದ ಅವಳ ಸ್ಥಾನ ಮಾನ ಮತ್ತು ಪಿತೃ ಪ್ರಧಾನ ವ್ಯವಸ್ಥೆ. ಇಪ್ಪತ್ತೊಂದನೆಯ ಶತಮಾನದಲ್ಲಿದ್ದರೂ ಪಿತೃ ಪ್ರಧಾನತೆ ತನ್ನಲ್ಲಿ ಬದಲಾವಣೆ ಮಾಡಿಕೊಳ್ಳುತ್ತಿಲ್ಲ ಬದಲಾಗಿ ಹೊಸ, ಹೊಸ ಸಂಚುಗಳನ್ನು ಹೆಣೆಯುತ್ತಿದೆ. ಏಕೆಂದರೇ ಬ್ರಾಹ್ಮಣ ಮಹಿಳೆಯನ್ನು ತನ್ನ ಬಲೆಗೆ ಬಿಳಿಸಿಕೊಳ್ಳಲು ಯತ್ನಿಸುತ್ತಿದೆ ಎಂದು ಹೇಳಬಹುದಾಗಿದೆ.

ಟಿಪ್ಪಣಿಗಳು

೧. ಉಮೇಶ ಬಸಪ್ಪ ಕಾತರಕಿ ಬಿಸರಳ್ಳಿ ದೇವದಾಸಿ ಪದ್ಧತಿ ಒಂದು ಅಧ್ಯಯನ ಪು. ೧೦

೨. ಇಂದಿರಾ, ಆರ್. ಸ್ತ್ರೀವಾದಿ ದಿಕ್ಸೂಚಿ, ೩೮.೩೯

೩. ಪುಟ್ಟಪ್ಪ, ಕೆ.ವಿ. (ಪ್ರ.ಸಂ). ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ-೨ ಪು. ೨೩೬

೪. ಸುಮಿತ್ರಾಬಾಯಿ, ಬಿ.ಎನ್. ಸ್ತ್ರೀವಾದ, ಪು. ೧

೫. ಪ್ರಹ್ಲಾದ ಅಗಸನಕಟ್ಟೆ, ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಪು. ೩೭೧.೩೭೨

೬. ಇಂದಿರಾ, ಆರ್. ಸ್ತ್ರೀವಾದ ದಿಕ್ಸೂಚಿ, ಪು. ೩೯.೪೦

೭. ಅದೇ ಪು. ೪೦

❐

ಅಧ್ಯಾಯ : ಆರು

ಸಮಾರೋಪ

೬.೧. ಅಧ್ಯಯನದ ಸಮೀಕ್ಷೆ

೬.೨. ಫಲಿತಗಳು

೬.೩. ಸಲಹೆಗಳು

೬.೪. ಸಾಧ್ಯತೆಗಳು

ಅಧ್ಯಾಯ : ಆರು

ಸಮಾರೋಪ

೬.೧. ಅಧ್ಯಯನದ ಸಮೀಕ್ಷೆ

'ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಗ್ರಂಥಗಳ ಪರಾಮರ್ಶೆಯೊಂದಿಗೆ ಪ್ರಶ್ನಾವಳಿ ಮತ್ತು ಸಂದರ್ಶನ ವಿಧಾನದ ಮೂಲಕ ಮಾಹಿತಿ ಪೂರೈಸಿಕೊಳ್ಳಲಾಗಿದೆ. ಈ ಸಂಶೋಧನಾ ವಿಷಯವು ಆರು ಅಧ್ಯಾಯಗಳನ್ನು ಒಳಗೊಂಡಿದೆ.

'ಹೆಣ್ಣಾಗಿ ಯಾರೂ ಹುಟ್ಟುವದಿಲ್ಲ, ಅವಳನ್ನು ಹೆಣ್ಣನ್ನಾಗಿ ರೂಪಿಸಲಾಗುತ್ತದೆ.' ಎಂಬ ಬೋವಾಳ ಅಭಿಪ್ರಾಯಕ್ಕೆ ಬ್ರಾಹ್ಮಣ ಮಹಿಳೆಯೂ ಹೊರತಾಗಿಲ್ಲ. ಲಿಖಿತ ಪರಂಪರೆಯನ್ನು ಅವಲೋಕಿಸಿದಾಗ ಧರ್ಮ ಗ್ರಂಥಗಳೂ ಕೂಡ ಪುರುಷ ಪ್ರಧಾನತೆಯ ಸೃಷ್ಟಿಯಾದ್ದರಿಂದ, ಪುರುಷ ಪ್ರಧಾನ ದೃಷ್ಟಿಕೋನದಿಂದಲೇ ಬ್ರಾಹ್ಮಣ ಮಹಿಳೆಯನ್ನು ಕಾಣಲಾಗಿದೆ. ಪೂರ್ವ ವೇದಗಳ ಕಾಲದಲ್ಲಿ ಇದ್ದವು ಎನ್ನಲಾದ ಸ್ತ್ರೀ ಪರನಿಲುವುಗಳು ಉತ್ತರ ವೇದಗಳ ಕಾಲದಲ್ಲಿ ಸ್ತ್ರೀ ವಿರೋಧಿ ಪ್ರವೃತ್ತಿಗಳಾಗಿ ಪರಿವರ್ತನೆಗೊಂಡವು. ಪೂರ್ವವೇದಗಳ ಕಾಲದಲ್ಲಿ ಅವಳ ಸಂತಾನೋತ್ಪತ್ತಿಯ ಕಾರಣವು ಪುರುಷನಿಗೆ ಒಂದು ಶಕ್ತಿಯಾಗಿ ಕಂಡಿದ್ದು, ಆ ಶಕ್ತಿಯ ಹೆದರಿಕೆಯಿಂದ ಅವಳನ್ನು ಕಾಣುತ್ತಿದ್ದರಿಂದ ತನ್ನೆಲ್ಲಾ ಕೆಲಸಗಳಿಗೆ ಸಹಭಾಗಿಯನ್ನಾಗಿಸಿಕೊಂಡ. ಅಲ್ಲದೇ ಮಾನವ ಒಂದೆಡೆ ನೆಲೆ ನಿಂತ ಮೇಲೆ ಅಲ್ಲವೇ ಕೆಲಸಗಳು ವಿಭಾಗಿಕರಣಗೊಂಡಿದ್ದು, ಹಾಗಾಗಿ ಖಾಸಗಿ ಸಂಪತ್ತಿನ ಸಂಗ್ರಹ, ಉತ್ಪಾದನಾ ಕಾರ್ಯದಲ್ಲಿ ಪುರುಷನೇ ಶ್ರೇಷ್ಠ ಎಂದು ಗುರುತಿಸಲ್ಪಟ್ಟ, ಕಾರಣದಿಂದ ಸ್ತ್ರೀ ಪುರುಷರಲ್ಲಿ ಶ್ರೇಷ್ಠ ಕನಿಷ್ಠ ಎಂಬ ಭಾವಗಳು ಉಗಮಗೊಂಡವು. ಹಾಗಾಗಿ ವೇದಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆ ಶ್ರೇಷ್ಠವೂ ಅಲ್ಲದ, ಕನಿಷ್ಠವೂ ಅಲ್ಲದ ಸ್ಥಾನವನ್ನು ಹೊಂದಿದ್ದಳು.

ಧರ್ಮಶಾಸ್ತ್ರಗಳು ಬ್ರಾಹ್ಮಣ ಮಹಿಳೆಯನ್ನು ದ್ವಂದ್ವಗಳಿಗೆ ಎಡೆಮಾಡಿದವು. ಒಂದೆಡೆ ಅತಿಯಾದ ಗೌರವ, ಇನ್ನೊಂದೆಡೆ ಆಕೆಯನ್ನು ಸ್ವಂತ ವ್ಯಕ್ತಿತ್ವವಿಲ್ಲದ ವ್ಯಕ್ತಿಯನ್ನಾಗಿ ಕಾಣಲಾಯಿತು. ಅವಳ ಬದುಕಿಗೆ ಭದ್ರತೆ, ರಕ್ಷಣೆ ಒದಗಿಸುವ ನೆಪದಲ್ಲಿ ಅವಳನ್ನು ನಿಯಂತ್ರಣ ಮಾಡಿದವು. ಇವುಗಳು ಆಕೆಗೆ ಅಧೀನ ಸ್ಥಾನವನ್ನು ಕಲ್ಪಿಸಿದವು.

ಮಹಾಕಾವ್ಯಗಳ ಕಾಲದಲ್ಲಿ ಆದರ್ಶನಾರಿಯ ಸಹನೆ, ತಾಳ್ಮೆ, ಪತಿವಿಧೆಯತೆ ಪರಾಧೀನತೆ ಮತ್ತು ಪತಿಯಲ್ಲಿ ಪ್ರಶ್ನಾತೀತವಾದ ನಂಬಿಕೆಗಳನ್ನು ಬಿತ್ತಿದವು. ಅಲ್ಲದೇ ಬ್ರಾಹ್ಮಣ ಮಹಿಳೆಯನ್ನು 'ಶೂದ್ರ'ಳೆಂದು ಪರಿಗಣಿಸಿದವು. ಚರಿತ್ರೆಯ ವಿವಿಧ ಮುಖಗಳಲ್ಲಿಯೂ ಅಂದರೆ ಶಾಸನಗಳು ಆದರ್ಶನಾರಿಯ ಬಗ್ಗೆ, ಸತೀ ಹೋದವರ ಬಗೆಗೆ ಮಾತ್ರ ದಾಖಲೆಗಳನ್ನು ಕೈಗೊಂಡವು. ಮಧ್ಯಕಾಲೀನ ಯುಗದಲ್ಲಿ ಮುಸ್ಲಿಂರ ಧಾಳಿಯಿಂದ ಬ್ರಾಹ್ಮಣ ಮಹಿಳೆ ನಾಲ್ಕು ಗೋಡೆಗಳ ಮಧ್ಯೆ ಸಿಲುಕಿ ನಲಗುವಂತೆ ಮಾಡಿದವು. ಇವು ಆಕೆಗೆ ನಿರ್ಬಂಧಗಳ ಸರಮಾಲೆಯನ್ನೇ ಸೃಷ್ಟಿಸಿ, ಅವಳ ಬದುಕನ್ನು ದುಸ್ತರಗೊಳಿಸಿದವು. ಬ್ರಿಟಿಷರ ಕಾಲದಲ್ಲಿ ಸಮಾಜ ಸುಧಾರಕರ ಪ್ರಯತ್ನದಿಂದ ಹಲವು ಅನಿಷ್ಠ ಪದ್ಧತಿಯಿಂದ ಮುಕ್ತಿ ಏನೋ ದೊರೆಯಿತು. ಆದರೆ ಅವಳ ಪರಾಧೀನ ಪರಿಸ್ಥಿತಿ ಮಾತ್ರ ಬದಲಾಗಲಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಮಹಿಳೆ ಅತಿಯಾದ ಕೆಲಸದ ಹೊರೆಯನ್ನು ಹೊರಲು ಸಿದ್ಧಳಾಗಿದ್ದಾಳೆ. ತಾನು ಯಾರಿಗಿಂತ ಕಡಿಮೆ ಇಲ್ಲವೆಂದು ಪುರುಷನಿಗೆ ಪ್ರತಿಕೆಲಸದಲ್ಲೂ ಸಮಾನ ಭಾಗಿಧಾರಳಾಗಿದ್ದಾಳೆ. ಆದರೆ ಅವಳು ದ್ವಿತಿಯ ದರ್ಜೆಯಿಂದ ಮಾತ್ರ ಹೊರಬಂದಿಲ್ಲ ಎಂಬುದನ್ನು ಈ ಅಧ್ಯಯನವು ಬಿಂಬಿಸುತ್ತದೆ.

ಸಾಮಾಜಿಕ ಸಂಸ್ಥೆಗಳು ಬ್ರಾಹ್ಮಣ ಮಹಿಳೆಯನ್ನುಆಚರಣೆಗಳ ಮೂಲಕ ನಿಯಂತ್ರಣದಲ್ಲಿರಿಸುತ್ತವೆ. ಈ ಆಚರಣೆಗಳು ಪದೇ ಪದೇ ಅವಳ ನಿಷೇಧಗಳನ್ನು ನೆನಪಿಸುವಂತವುಗಳಾಗಿವೆ. 'ಸಂಸ್ಕೃತಿ' ಎನ್ನುವುದೇ ಪುರುಷ ವಾಚಿಪದವಾಗಿರುವುದರಿಂದ ಸಂಸ್ಕೃತಿಯ ಹೆಸರಿನಲ್ಲಿ ಅವಳ ಶೋಷಣೆ ಮಾಡಲಾಗುತ್ತದೆ. ಹೆಚ್ಚಿನ ಆಚರಣೆಗಳು ಲಿಖಿತಪರಂಪರೆಯಲ್ಲಿ ಕಂಡುಬರುವುದೇ ಇಲ್ಲ. ಜೀವನದ ವಿವಿಧ ಹಂತಗಳು, ನೈತಿಕ ನಿಯಮಗಳನ್ನು ಮಾತ್ರ ಇಲ್ಲಿ ಕಾಣಬಹುದು. ರೂಢಿ ಸಂಪ್ರದಾಯಗಳ ಒತ್ತಡದ ಮೂಲಕ ಜಜಮಾನಿ ಪದ್ಧತಿ ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಮಾಡಿದ ಸಂಚುಗಳಂತೆ ಬ್ರಾಹ್ಮಣ ಮಹಿಳೆಯ ಆಚರಣೆಗಳು ಗೋಚರಿಸುತ್ತವೆ. ಆದರೆ ಈ ಆಚರಣೆಗಳು ಇತ್ತಿಚೇಗೆ ಬದಲಾಗುತ್ತಿದ್ದು, ಮೊದಲಿನಷ್ಟು ಕಠಿಣ ಪರಿಸ್ಥಿತಿಯನ್ನು ಎದುರಿಸುವಂತೆ ಮಾಡಿಲ್ಲ. ನಗರೀಕರಣ, ಯಾಂತ್ರಿಕ ಜೀವನ ಪದ್ಧತಿಯಿಂದ ಹೆಚ್ಚು ಹೆಚ್ಚು ಹೊಣೆಗಳನ್ನು ನಿಭಾಯಿಸುತ್ತಿರುವ ಬ್ರಾಹ್ಮಣ ಮಹಿಳೆಗೆ ವಿಶ್ರಾಂತಿಯ ಅಭಾವ ಕಂಡುಬರುತ್ತಿದೆ. ತನ್ನ ಬಗೆಗೆ ಯೋಚಿಸುವಷ್ಟು ಸಮಯವೂ ಆಕೆಗೆ ಇಲ್ಲದಂತಾಗಿದೆ ಇನ್ನು ತನ್ನ ಚಹರೆಯ ಹುಡುಕಾಟಕ್ಕೆ ಅವಳಿಗೆ ಸಮಯವೆಲ್ಲಿ ಸಿಕ್ಕಿತು.

ಎಲ್ಲಾ ಕಾಲದಲ್ಲಿಯೂ ಸಮಾಜವು ಒಂದೇ ರೀತಿಯಾಗಿರುವುದಿಲ್ಲ. ನಿಯಮಗಳ ಉಲ್ಲಂಘನೆ, ಹೊಸತರ ಆಕರ್ಷಣೆಯು, ಎಲ್ಲಾ ಕಾಲದ ಸಮಾಜದಲ್ಲಿಯೂ ನಡೆಯುತ್ತಲೇ ಇರುತ್ತದೆ. ಬ್ರಾಹ್ಮಣ ಮಹಿಳೆಯ ಜೀವನ ವಿಧಾನದಲ್ಲಿ ಬದಲಾವಣೆಗಳುಂಟಾಗುತ್ತಿವೆ. ಆ ಬದಲಾವಣೆಗಳನ್ನು ಆಕೆ ಸ್ವತಃ ತಾನೇ ಒಪ್ಪಿಕೊಂಡದ್ದಲ್ಲ. ತನ್ನ ಜಾತಿಯ ಪುರುಷರ ಒಳ್ಳೆಕೆಗಾಗಿ, ತನ್ನ ಪುರುಷನ ಒಪ್ಪಿಗೆ ಮೇರೆಗೆ ಸಮ್ಮತಿ ನೀಡಿರುವುದು ಗೋಚರವಾಗುತ್ತದೆ. ಸಂಪ್ರದಾಯದ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದಾಳೆ. ತನ್ನ ಅತಂತ್ರ ಸ್ಥಿತಿಯಿಂದ ಭಯಗೊಂಡು, ಅವನ ತಾಳಕ್ಕೆ ಕುಣಿಯುತ್ತಿದ್ದಾಳೆ. ಇತ್ತಿಚೇಗೆ ಬ್ರಾಹ್ಮಣ ಮಹಿಳೆ ಉದ್ಯೋಗವನ್ನು ಹೊಂದಿ, ಆರ್ಥಿಕವಾಗಿ ಸಬಲಳಾಗುತ್ತಿದ್ದಾಳೆ. ಆದರೆ ತನ್ನ ದುಡ್ಡನ್ನು ತಾನೇ ತನಗಾಗಿ ಖರ್ಚುಮಾಡದಿರುವುದು ಕಂಡುಬರುತ್ತದೆ. ಸಧ್ಯದ ಬ್ರಾಹ್ಮಣ ಮಹಿಳೆಯ

ವಿಪರ್ಯಾಸವೆಂದರೇ ಅಧಿಕ ಜವಾಬ್ದಾರಿಗಳನ್ನು ತೂಗಿಸಿಕೊಂಡು ಹೊರಟಿದ್ದಾಳೆ. ಆದರೆ ಆಕೆಗೆ ತನಗಾಗಿ ಯೋಚಿಸಲು ಸಮಯವೇ ಇಲ್ಲದಂತಾಗಿದೆ. ತನ್ನ ಸಂಪಾದನೆಯನ್ನು ಕಷ್ಟಕಾಲದಲ್ಲಿ ಬಳಸಲೂ ಕೂಡ ಅನುಮತಿ ಪಡೆಯಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಮುಟ್ಟು, ಗೃಹಿಣಿತ್ವ, ಹೆರಿಗೆ, ವೈಧವ್ಯ, ಮುಪ್ಪು ಮುಂತಾದ ಪ್ರತಿ ಅವಸ್ಥೆಯಲ್ಲೂ ಹೆಣ್ಣಿನ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಗುತ್ತದೆ. ಪಾಪದ ಕಲ್ಪನೆಯನ್ನು ಅವಳ ಮೇಲೆ ಹೇರಲಾಗುತ್ತದೆ. ಇದು ಲಿಖಿತ ಪರಂಪರೆಯಲ್ಲಿ ಕಾಣಸಿಗುತ್ತದೆ. ಅವಳು ಮಾಡದೇ ಇರುವ ತಪ್ಪಿಗೆ, ಇಡೀ ಸ್ತ್ರೀಕುಲವೇ ಶಾಪಕ್ಕೆ ಒಳಗಾಗಿ ಶಿಕ್ಷೆ ಅನುಭವಿಸುವಂತಾಗಿದೆ. ಇದು ಪುರುಷ ಪ್ರಧಾನತೆಯ ಹುನ್ನಾರವೇ ಆಗಿದೆ. ಸಂಪ್ರದಾಯಗಳ ಮೂಲಕ ಅವಳ ಅಧೀನ ಸ್ಥಾನವನ್ನು ಈ ಆಚರಣೆಗಳು ಪ್ರತಿಪಾದಿಸಿರುವುದು ಕಂಡು ಬರುತ್ತದೆ.

ಪವಿತ್ರತೆಯ ಸಂಕೇತವೆಂದು ಪರಿಭಾವಿಸುವ ಧರ್ಮವೂ ಕೂಡ ಸಮಾಜ ವ್ಯವಸ್ಥೆಯಲ್ಲಿರುವಂತಹ ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ತಾರತಮ್ಯ ಭಾವನೆಗಳಿವೆ. ಇದಕ್ಕೆಲ್ಲಾ ಕಾರಣ ಪಿತೃಪ್ರಧಾನ ಸಂಸ್ಕೃತಿ, ಮಾತೃದೇವತೆಯ ಆರಾಧನೆ ಮಾಡುತ್ತಿದ್ದ ಕಾಲದಲ್ಲಿ ಹೆಣ್ಣು ಒಂದು ಶಕ್ತಿಯಾಗಿದ್ದಳು ಈ ಶಕ್ತಿಯ ಅಗೋಚರತೆಯಿಂದ ಇದ್ದಂತಹ ಭಯದ ವಾತಾವರಣ ತಿಳಿಯಾದ್ದರಿಂದ, ಪುರುಷನು ತನ್ನ ಸ್ಥಾನ ಕಳೆದುಕೊಳ್ಳುವ ಭಯದಿಂದ ಬ್ರಾಹ್ಮಣ ಮಹಿಳೆಗೆ ದ್ವಿತಿಯ ದರ್ಜೆಯನ್ನು ನೀಡಿರುವುದು ಕಂಡುಬರುತ್ತದೆ. ಧರ್ಮದಲ್ಲಿರುವ ಏಕಮುಖಿ ಚಿಂತನೆಗೆ ಯಜಮಾನ್ಯ ಸಂಸ್ಕೃತಿಯೊಂದಿಗೆ, ದ್ವಿತೀಯ ದರ್ಜೆಯು ಪ್ರಮುಖ ಕಾರಣವಾಗಿದೆ.

ಧಾರ್ಮಿಕ ಮೌಲ್ಯಾಚರಣೆಗಳು ಹೆಣ್ಣನ್ನು ದ್ವಿತೀಯ ದರ್ಜೆಗೆ ಇಳಿಸಿ ಮಾನಸಿಕ ಬಲಹೀನತೆಗಿಂತ ದೈಹಿಕ ಅಥವಾ ಅವಳ ಜೈವಿಕ ಬಲಹೀನತೆಯನ್ನು ಹೆಚ್ಚಾಗಿ ಪರಿಗಣಿಸಿರುವುದು ಕಂಡುಬರುತ್ತದೆ. ಲಿಖಿತ ಧಾರ್ಮಿಕ ಪರಂಪರೆಯು ಬ್ರಾಹ್ಮಣ ಮಹಿಳೆಯ ಬಗೆಗೆ ಅಪವಿತ್ರ ಭಾವನೆಗಳನ್ನು ಇಟ್ಟುಕೊಂಡಿರುವುದು ಗಮನಕ್ಕೆ ಬರುತ್ತದೆ. ಸಂಪ್ರದಾಯ ಆಚರಣೆಗಳೂ ಕೂಡ ಬ್ರಾಹ್ಮಣ ಮಹಿಳೆಯ ಬಗೆಗೆ ಅಪವಿತ್ರತೆಯೊಂದಿಗೆ ದ್ವಿತೀಯ ದರ್ಜೆಯವಳೆಂದು ಪರಿಭಾವಿಸಿದೆ. ಸಾಮಾಜಿಕ ಸಂಸ್ಥೆಗಳಾದ ವಿವಾಹ ಕುಟುಂಬ, ರಾಜಕೀಯ ಆರ್ಥಿಕ, ಧಾರ್ಮಿಕ ಸಂಸ್ಥೆಗಳೂ ಸಹ ಮೇಲಿನ ಭಾವನೆಯನ್ನೇ ಇಟ್ಟುಕೊಂಡಿವೆ. ಈ ಸಂಸ್ಥೆಗಳಲ್ಲಿ ಅವಳ ಕೊಡುಗೆ ಅಪಮೌಲ್ಯಗೊಂಡಿರುವುದು ಕಂಡುಬರುತ್ತದೆ. ಒಂದು ಕಾಲಕ್ಕೆ ತಾವು ಉಚ್ಛಕುಲದವರೆಂಬ ಪ್ರಾಬಲ್ಯ ಹೊಂದಿದ್ದ, ಬ್ರಾಹ್ಮಣರಲ್ಲಿಯೂ ಹೆಣ್ಣು ತೆರೆ ಮರೆಯಲ್ಲಿ ಶೋಷಣೆಗೆ ಒಳಗಾಗಿದ್ದಾಳೆ. ಇಂದಿಗೂ ಕೂಡ ಹತ್ತು ಹಲವು ಬಗೆಗಳಲ್ಲಿ ತೆರೆ ಮರೆಯಲ್ಲೇ ಶೋಷಣೆಗೆ ಇಡಾಗುತ್ತಿದ್ದಾಳೆ.

ಆಚರಣೆಗಳ ಸಾಂಸ್ಕೃತಿಕ ನಿರ್ವಚನವನ್ನು ಶೋಧಿಸಿದಾಗ ಆಚರಣೆಗಳು ಅವಳ ಪರವಾಗಿರುವುದಕ್ಕಿಂತ ಹೆಚ್ಚಾಗಿ ವಿರೋಧಿಯಾದಂತವುಗಳಾಗಿವೆ. ಉದಾಹರಣೆಗೆ ವಿಧವಾ ಆಚರಣೆ, ಋಷಿ ಪಂಚಮಿ ಆಚರಣೆ, ಗೃಹಿಣಿತ್ವದ ಆಚರಣೆ ಮುಟ್ಟಿನ ಸಂದರ್ಭದ ಆಚರಣೆ, ಪೂಜೆಯ ಅರ್ಹತೆಗಳ ಆಚರಣೆಗಳು, ವೈಜ್ಞಾನಿಕ ಸತ್ಯವನ್ನು ತಳಕು ಹಾಕಿಕೊಂಡಿರುವಂತೆ ತೋರಿದರೂ ಅವಳ ವ್ಯಕ್ತಿತ್ವದ ಕಡೆಗೆ ಗಮನಹರಿಸದಿರುವುದು ಕಂಡುಬರುತ್ತದೆ. ಬ್ರಾಹ್ಮಣ ಮಹಿಳೆಯ ನಿಜವಾದ ಅಸ್ತಿತ್ವ ಹುಡುಕಾಡತೊಡಗಿದಾಗ ನಿರಾಶಾದಾಯಕ ಉತ್ತರ ಕಂಡುಬರುತ್ತದೆ. ಬದಲಾದ

ಸಂದರ್ಭದಲ್ಲಿ ಬ್ರಾಹ್ಮಣ ಮಹಿಳೆಯ ಸ್ಥಿತ್ಯಂತರಕ್ಕೆ ಕಾರಣ ಪುರುಷನ ಸ್ಥಾನ-ಮಾನ, ಮತ್ತು ಅಧಿಕಾಶಾಹಿ ನೆಲೆಯಲ್ಲಿರುವ ಪುರುಷನ ಒಪ್ಪಿಗೆ ಮೇರೆಗೆ ಎಂದು ಹೇಳಬಹುದು. ಇದಕ್ಕೆ ನಗರೀಕರಣ, ಅವಿಶ್ರಾಂತ ಸ್ಥಿತಿ, ಯಾಂತ್ರಿಕ ಜೀವನ ಪದ್ಧತಿಗಳು ಅಷ್ಟೆ ಪ್ರಮುಖ ಕಾರಣವಾಗಿವೆ.

ಬ್ರಾಹ್ಮಣ ಮಹಿಳೆಯು ಗೃಹಿಣಿಗಿಂತ ತಾಯಿ ಸ್ಥಾನದಲ್ಲಿ ಪ್ರಾಮುಖ್ಯತೆ ಪಡೆದಿದ್ದಾಳೆ. ಅವಳು ಮೌಲ್ಯಪಡೆಯಲು ಇದೇ ಕಾರಣವಾಗಿದೆ. ಉಳಿದಂತೆ ಅವಳು ಗಂಡನ ಬೋಗದ ವಸ್ತು ಅವನ ಸಂತಾನಾಭಿವೃದ್ಧಿಗಾಗಿ ಇರುವಂತಹ ಸಾಧನವಾಗಿದ್ದಾಳೆ.

ತನ್ನ ಪುರುಷ ಮತ್ತು ಆತನ ಕುಟುಂಬಕ್ಕೆ ಮೋಕ್ಷನೀಡಲು ಇರುವಂತಹ ಪಾತ್ರಮಾದರಿಗೆ ಸೀಮಿತವಾಗಿದ್ದಾಳೆ. ಇದರ ನಂತರದ ಸ್ಥಾನವನ್ನು ಅವಳ ಶಿಕ್ಷಣ ಮತ್ತು ಉದ್ಯೋಗಗಳು ಪಡೆದುಕೊಂಡಿವೆ. ಗಂಡನ ಮನೆಯ ಆರ್ಥಿಕ ಪರಿಸ್ಥಿತಿ ಸರಿದೂಗಿಸಲು, ಅವನ ಮನೆತನದ ಸ್ಥಾನ-ಮಾನ ಕಾಪಾಡುವ ನೆಲೆಯಲ್ಲಿ ಅವಳು ಪರಿಗಣಿಸಲ್ಪಡುತ್ತಾಳೆ. ಬ್ರಾಹ್ಮಣ ಮಹಿಳೆ ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನ ಪಡೆಯಬೇಕಾದರೇ, ತನ್ನ ಮಕ್ಕಳನ್ನು ಬೆಳಸುವ ರೀತಿನೀತಿಯನ್ನು ಅವಲಂಬಿಸಿರುತ್ತದೆ. ಇದರೊಂದಿಗೆ ಪಾತ್ರ ಮಾದರಿಗಳಿಗೆ ಅನುಗುಣವಾಗಿ ವರ್ತಿಸುವುದನ್ನು ಅವಲಂಬಿಸಿದೆ.

ಈ ಪ್ರಬಂಧವು ಆರು ಅಧ್ಯಾಯಗಳಲ್ಲಿ ವಿಂಗಡೆನೆಗೊಂಡಿದೆ ಅವುಗಳನ್ನು ಈ ಕೆಳಗಿನಂತೆ ಕಾಣಬಹುದು. ಮೊದಲನೆ ಅಧ್ಯಾಯವು ಅಧ್ಯಯನದ ಉದ್ದೇಶಗಳು, ವ್ಯಾಪ್ತಿ, ವೈಧಾನಿಕತೆ ಮತ್ತು ಮಹತ್ವವನ್ನು ಒಳಗೊಂಡಿದೆ. ಇಲ್ಲಿ ವೈಧಾನಿಕತೆಯು ಪ್ರಾಮುಖ್ಯವನ್ನು ಹೊಂದಿದ್ದು, ಸಂಶೋಧನಾ ವಿಷಯವನ್ನು ನಿರ್ಧರಿಸುವಂತಹ ಅಂಶವಾಗಿದೆ.

ಎರಡನೆಯ ಅಧ್ಯಾಯದಲ್ಲಿ ಇಡೀ ಅಧ್ಯಯನದ ತಾತ್ವಿಕತೆಯನ್ನು ಹೇಳಲಾಗಿದೆ. ಮುಖ್ಯ ಪರಿಕಲ್ಪನೆಗಳ ಬಗ್ಗೆ ಚರ್ಚಿಸಲಾಗಿದೆ. ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆಯನ್ನು ಕಂಡುಕೊಳ್ಳಬೇಕಾದರೆ ಪಿತೃ ಪ್ರಧಾನತೆ, ಮಾತೃ ಪ್ರಧಾನತೆ, ಸಾಮಾಜಿಕರಣ, ಸ್ಥಿರ ಮಾದರಿ ಪಾತ್ರಗಳು, ಗೃಹಿಣಿತ್ವ, ಲಿಂಗ ಅಸಮಾನತೆ, ಜಂಡರ್‌ಸ್ಟಡೀಸ್ ಪರಿಕಲ್ಪನೆಗಳನ್ನರಿಯುವುದು ಅವಶ್ಯಕವಾಗಿದೆ, ಹಿಂಧೂ ಧರ್ಮ ಬ್ರಾಹ್ಮಣ ಮಹಿಳೆಯನ್ನು ಹೇಗೆ ಪರಿಭಾವಿಸಿದೆ ಎಂಬುದರೊಂದಿಗೆ ಧರ್ಮ ಎನ್ನುವ ಸಂಸ್ಥೆ ಬ್ರಾಹ್ಮಣ ಮಹಿಳೆಯನ್ನು ಹೇಗೆ ಅರ್ಥೈಸುತ್ತದೆ ಎಂಬುದನ್ನು ಗಮನಿಸಲಾಗಿದೆ. ಬ್ರಾಹ್ಮಣ ಮಹಿಳೆ ಧರ್ಮವನ್ನು ಹೇಗೆ ಗ್ರಹಿಸಿದ್ದಾಳೆ ಎನ್ನುವುದನ್ನು ಚರ್ಚಿಸಲಾಗಿದೆ. ಬ್ರಾಹ್ಮಣ ಮಹಿಳೆಯ ಬದುಕಿನಲ್ಲಿ ಧರ್ಮವು ಯಾವ ಪಾತ್ರವಹಿಸಿದೆ. ಎಷ್ಟರ ಮಟ್ಟಿಗೆ ಅವಳಿಗೆ ಬೆಂಬಲವಾಗಿ ನಿಂತಿದೆ ಎಂಬ ಅಂಶಗಳನ್ನು ನೋಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಲಿಖಿತ ಪರಂಪರೆಯ ನಿರ್ವಚನವನ್ನು ಮಾಡಲಾಗಿದೆ. ವಿವಿಧ ಕಾಲಘಟ್ಟಗಳಲ್ಲಿ ವೇದಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆ ಸ್ಮೃತಿಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆ, ಮಹಾಕಾವ್ಯಗಳ ಕಾಲದಲ್ಲಿ ಬ್ರಾಹ್ಮಣ ಮಹಿಳೆಯ ಸ್ಥಿತಿಗತಿಯನ್ನು ಅರಿಯಲು ಪ್ರಯತ್ನಿಸಲಾಗಿದೆ. ಇದರೊಂದಿಗೆ ಚರಿತ್ರೆಯ ಶಾಸನಗಳಲ್ಲಿ ಮಧ್ಯಕಾಲಿನ ಯುಗದಲ್ಲಿ, ಬ್ರಿಟಿಷರ ಕಾಲದಲ್ಲಿ, ಸಧ್ಯದ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಮಹಿಳೆಯನ್ನು ನೋಡಲಾಗಿದೆ.

P.T.O

ವೇದಗಳ ಕಾಲದಲ್ಲಿದ್ದಂತಹ ಸ್ತ್ರೀಪರ ನಿಲುವುಗಳು ಕಾಲಕ್ರಮೇಣ ಸ್ತ್ರೀ ವಿರೋಧಿ ಪ್ರವೃತ್ತಿಗಳಾಗಿ ಪರಿವರ್ತನೆಗೊಂಡ ಬಗೆಗೆ ನೋಡಲಾಗಿದೆ. ಧರ್ಮಶಾಸ್ತ್ರಗಳ ಕಾಲದಲ್ಲಿದ್ದಂತಹ ದ್ವಂದ್ವ ನಿಲುವುಗಳನ್ನು ವಿಶ್ಲೇಷಿಸಲಾಗಿದೆ. ರಾಮಾಯಣದ ಸೀತೆಯ ಪಾತ್ರ ಮಹಾಭಾರತದ ದ್ರೌಪದಿಯ ಪಾತ್ರಕ್ಕಿಂತ ಆದರ್ಶನಾರಿಯ ಸ್ಥಾನದಲ್ಲಿರಿಸಿ, ರಾಮನ ಅಗ್ನಿ ಪರೀಕ್ಷೆ ಒಪ್ಪಿಕೊಂಡ ಸೀತೆ ರಾಮನನ್ನು ಇಂತಹ ಪರೀಕ್ಷೆಗೆ ಏಕೆ ಒಡ್ಡಲಿಲ್ಲ? ಇಲ್ಲಿ ಸಹನೆ ತಾಳ್ಮೆ ಪತಿವಿಧೆಯತೆ, ಪರಾಧೀನತೆ ತೋರಿಸಿ, ಅವಳಲ್ಲಿ ಆ ಗುಣಗಳ ವೈಭವೀಕರಣ ಮಾಡಿರುವುದನ್ನು ನೋಡಲಾಗಿದೆ. ಚರಿತ್ರೆಯ ಪುಟಗಳಲ್ಲಿ ಎಂತಹ ಮಹಿಳೆ ದಾಖಲಾಗಿದ್ದಾಳೆ. ಮುಸ್ಲಿಂಧಾಳಿಯಿಂದ ಎಂತಹ ಪರಿಣಾಮಗಳು ಆಕೆ ಎದುರಿಸಬೇಕಾಯಿತು. ಸಮಸ್ಯೆಗಳಿಂದ ಮುಕ್ತಿನೀಡಿದಂತೆ ಕಂಡರೂ ಆಂಗ್ಲರು ಅವಳನ್ನು ನೋಡಿಕೊಂಡ ರೀತಿಯನ್ನು ನೋಡಲಾಗಿದೆ. ಇದರೊಂದಿಗೆ ಸಧ್ಯದ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಮಹಿಳೆ ಹೇಗಿದ್ದಾಳೆಂಬುದನ್ನು ಬಿಂಬಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಆಚರಣಾತ್ಮಕ ಪರಂಪರೆ ಹಾಗೂ ಅದರ ನಿರ್ವಚನವನ್ನು ನೋಡಲಾಗಿದೆ. ಸಾಮಾಜಿಕ ಸಂಸ್ಥೆಗಳಾದ ವಿವಾಹ, ಕುಟುಂಬ, ಆರ್ಥಿಕ, ರಾಜಕೀಯ ಧಾರ್ಮಿಕ ಸಂಸ್ಥೆಗಳು ಬ್ರಾಹ್ಮಣ ಮಹಿಳೆಯನ್ನು ಹೇಗೆ ಪರಿಭಾವಿಸುತ್ತವೆ. ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ಸಂಸ್ಥೆಗಳು ಹೇಗೆ ಅವಳನ್ನು ನಡೆಸಿಕೊಂಡು ಹೊರಟವೆ. ಎಂತಹ ಮೌಲ್ಯಗಳನ್ನು ಈ ಸಂಸ್ಥೆಗಳು ಬ್ರಾಹ್ಮಣ ಮಹಿಳೆಗೆ ಕೊಟ್ಟಿವೆ ಎಂಬುದನ್ನು ಅರಿಯಲಾಗಿದೆ ಆಚರಣೆಗಳಿಗೆ ಸಾಂಸ್ಕೃತಿಕ ನಿರ್ವಚನವನ್ನು ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಬ್ರಾಹ್ಮಣ ಮಹಿಳೆಯ ಬಗೆಗೆ ಸ್ತ್ರೀವಾದಿ ನಿರ್ವಚನವನ್ನು ಕೈಗೊಳ್ಳಲಾಗಿದೆ. ಲಿಖಿತ ಪರಂಪರೆ ಹಾಗೂ ಆಚರಣಾತ್ಮಕ ಪರಂಪರೆಗಳನ್ನು ತುಲನೆಗೊಳಪಡಿಸಲಾಗಿದೆ. ಬ್ರಾಹ್ಮಣ ಮಹಿಳೆಯ ಮೇಲೆ ಆಚರಣೆಗಳನ್ನು ಧರ್ಮಗ್ರಂಥಗಳು ಹೇರುತ್ತವೆಯೋ ಅಥವಾ ಆಚರಣಾತ್ಮಕ ಪರಂಪರೆಗಳು ಒತ್ತಡ ತರುತ್ತವೆಯೋ ಎಂಬುದಕ್ಕೆ ಉತ್ತರಿಸಲಾಗಿದೆ. ಬ್ರಾಹ್ಮಣ ಮಹಿಳೆಯ ಇತ್ತೀಚಿನ ಸ್ಥಿತ್ಯಂತರಗಳನ್ನು ಆಚರಣೆಯನ್ನು ಪ್ರಧಾನವಾಗಿಟ್ಟುಕೊಂಡು ಸ್ತ್ರೀವಾದಿ ದೃಷ್ಟಿಕೋನದಿಂದ ಕಂಡುಕೊಳ್ಳಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಂಶೋಧನೆಯ ಪ್ರಮುಖ ಅಂಶಗಳನ್ನು ರೂಪಿಸಲಾಗಿದೆ. ಅಧ್ಯಯನದಿಂದ ಕಂಡು ಬಂದ ಅಂಶಗಳಿಂದ ಫಲಿತಗಳನ್ನು ನೀಡಲಾಗಿದೆ. ಮುಂದಿನ ಅಧ್ಯಯನಕ್ಕೆ ಸಲಹೆ ಮತ್ತು ಸಾಧ್ಯತೆಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಪ್ರಶ್ನಾವಳಿಗಳ ಸ್ವರೂಪವನ್ನು, ವಕ್ತೃಗಳ ಪಟ್ಟಿ, ಛಾಯಾಚಿತ್ರಗಳನ್ನು ಹಾಕಲಾಗಿದೆ. ಇದರೊಂದಿಗೆ ಆಕರ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

೬.೨. ಫಲಿತಗಳು

* ಬ್ರಾಹ್ಮಣ ಮಹಿಳೆಯ ಸಾಮಾಜಿಕ ಚಹರೆಯನ್ನು ಧರ್ಮದ ನೆಲೆಯಲ್ಲಿ ಕಂಡುಕೊಳ್ಳಲು ಪ್ರಯತ್ನ ಮಾಡಲಾಗಿದೆ.
* ಲಿಖಿತ ಪರಂಪರೆಯಲ್ಲಿ ಬ್ರಾಹ್ಮಣ ಮಹಿಳೆಗೆ ಅಸಮಾನತೆ ಇದೆ. ಎಂಬುದನ್ನು ಈ ಅಧ್ಯಯನ ತಿಳಿಸುತ್ತದೆ.
* ಪಿತೃಪ್ರಧಾನ ವ್ಯವಸ್ಥೆಯು ಅವಳಿಗೆ ದ್ವಿತೀಯ ದರ್ಜೆಯನ್ನು ನೀಡಿದೆ. ಎಂದು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ.

See Page 130

* ಆಚರಣೆಗಳು ರೂಢಿಯಿಂದ ಬಳಕೆಗೆ ಬಂದಿವೆ. ಸಂಸ್ಕೃತಿಯ ಪ್ರಭಾವದಿಂದ ಬ್ರಾಹ್ಮಣ ಮಹಿಳೆ ಆಚರಣೆಗಳಿಗೆ ಜೀವತುಂಬುವಂತೆ ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ರೂಪಿಸಿವೆ.
* ಈ ಆಚರಣೆಗಳು ಅವಳ ಅಧೀನ ಸ್ಥಿತಿಗೆ ಪ್ರೋತ್ಸಾಹಿಸುತ್ತಿವೆ.
* ಸಾಮಾಜಿಕ ಸಂಸ್ಥೆಗಳು ಅವಳಿಗೆ ನಿಷೇಧಗಳಿಗೆ ಬೆಂಬಲ ನೀಡಿವೆ.
* ಬ್ರಾಹ್ಮಣ ಕುಟುಂಬಗಳಲ್ಲಿ ಗಂಡಿಗೆ ಮಹಿಳೆ ಜೀವನದ ಒಂದು ಭಾಗ ಮಾತ್ರವಾಗಿದ್ದಾಳೆ. ಆದರೆ ಮಹಿಳೆಗೆ ಗಂಡು ಅವಳ ಜೀವನವೇ ಆಗಿದ್ದಾನೆ.
* ಧರ್ಮವೂ ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿರುವಂತಹ ಲಿಂಗ ಶ್ರೇಣೀಕರಣಕ್ಕೆ ಆಸ್ಪದ ನೀಡಿದೆ. ಎನ್ನುವುದನ್ನು ಈ ಅಧ್ಯಯನ ನಿರೂಪಿಸಿದೆ.
* ಸಂಸ್ಕೃತಿಯ ವಾಹಕಿಯಾಗಿ ಬ್ರಾಹ್ಮಣ ಮಹಿಳೆ ಕಂಡುಬಂದರೂ ವ್ಯವಸ್ಥೆ ಅವಳಿಗೆ ಪ್ರತಿರೋಧವಾಗಿದೆ. ಎಂದು ಈ ಅಧ್ಯಯನ ಹೇಳುತ್ತದೆ.
* ಆಚರಣೆಗಳನ್ನು ಆಕೆಯ ಮೇಲೆ ಒತ್ತಾಯ ಪೂರ್ವಕವಾಗಿ ಹೇರಲಾಗಿದೆ.
* ಬ್ರಾಹ್ಮಣರಲ್ಲಿ ಮಹಿಳೆ ತಾಯಿ ಸ್ಥಾನದಲ್ಲಿ ಮಾತ್ರ ಪ್ರಾಮುಖ್ಯತೆ ಪಡೆದಿದ್ದಾಳೆ.
* ಧರ್ಮಗ್ರಂಥಗಳು ಮತ್ತು ಆಚರಣಾತ್ಮಕ ಪರಂಪರೆಗಳು ಬ್ರಾಹ್ಮಣ ಮಹಿಳೆಯನ್ನು ದ್ವಂದ್ವ ನಿಲುವುಗಳಲ್ಲಿಟ್ಟಿದೆ. ಎನ್ನುವುದು ಇಲ್ಲಿ ಪ್ರತಿಬಿಂಬಿಸಲಾಗಿದೆ.
* ವೈಜ್ಞಾನಿಕ ಮನೋಭಾವ ತೋರಿಸಿದಂತೆ ಮಾಡಿ ಬ್ರಾಹ್ಮಣ ಮಹಿಳೆಯನ್ನು ಸಂಪ್ರದಾಯದ ಸಂಕೋಲೆಯಲ್ಲಿ ಸಿಲುಕುವಂತೆ ಮಾಡಲಾಗಿದೆ.
* ಬದಲಾವಣೆಗಳುಂಟಾದರೂ, ಆಚರಣೆ ಮತ್ತು ಲಿಖಿತ ಪರಂಪರೆಯ ಮಧ್ಯೆ ಸಿಲುಕಿಸಿ ಅವಳನ್ನು ಒದ್ದಾಡುವಂತೆ ಮಾಡಿವೆ.
* ಪ್ರಸ್ತುತ ಸಂದರ್ಭದಲ್ಲಿ ಬ್ರಾಹ್ಮಣ ಮಹಿಳೆ ಹಲವು ರೀತಿಗಳಲ್ಲಿ ಬುದ್ಧಿ ಮಟ್ಟವನ್ನು ವಿಸ್ತರಿಸಿಕೊಂಡಿದ್ದರೂ ಕೂಪಮಂಡೂಕಳಂತಾಗಿದ್ದಾಳೆ.

೬.೩. ಸಲಹೆಗಳು

* ಬ್ರಾಹ್ಮಣ ಮಹಿಳೆಯ ಅಪವಿತ್ರದ ಕಲ್ಪನೆಯನ್ನು ನಾಶಪಡಿಸಬೇಕಾಗಿದೆ.
* ಬ್ರಾಹ್ಮಣ ಮಹಿಳೆಯ ನಿಷೇಧಗಳು ಸಡಿಲಗೊಳ್ಳಬೇಕು.
* ಸಮಾನ ಜೀವಿ ಎಂಬ ದೃಷ್ಟಿಯಿಂದ ಅವಳನ್ನು ಕಾಣುವುದು ಅವಶ್ಯವಾಗಿದೆ.
* ಬ್ರಾಹ್ಮಣ ಮಹಿಳೆಯ ಮಾನಸಿಕ ಸ್ಥಿತಿಯಲ್ಲಿ ಬದಲಾವಣೆಗಳಾಗುವುದು ಅವಶ್ಯವಾಗಿದೆ.
* ಸಮಾನತೆಯಿಂದ ಕೂಡಿದ ಮಾನವ ಧರ್ಮದ ಉಗಮವಾಗಬೇಕಿದೆ.

* ಧರ್ಮದಲ್ಲಿರುವ ಲಿಂಗಶ್ರೇಣಿಕರಣವು ಬದಲಾಗಬೇಕಿದೆ.
* ಬ್ರಾಹ್ಮಣ ಮಹಿಳೆಯನ್ನು ತಾಯಿ, ಅಕ್ಕ, ತಂಗಿ, ಹೆಂಡತಿ ಪಾತ್ರಗಳಿಂದ ಹೊರತಾಗಿ, ಸ್ತ್ರಿ ಎಂಬ ಸ್ವಂತ ವ್ಯಕ್ತಿತ್ವವಿರುವ ವ್ಯಕ್ತಿಯನ್ನಾಗಿಪರಿಗಣಿಸುವುದು ಅವಶ್ಯವಾಗಿದೆ.

೬.೪. ಸಾಧ್ಯತೆಗಳು

* ಸಂಶೋಧನೆಯು ಮುಟ್ಟು, ಗೃಹಿಣಿತ್ವ, ವಿವಾಹ, ವೈಧವ್ಯ, ಹೆರಿಗೆ, ಬಾಣಂತಿತನ, ಮುಪ್ಪು, ಗಳಂತಹ ಆಚರಣೆಗಳಿಗೆ ಮಾತ್ರ ಸೀಮಿತಗೊಂಡಿದೆ. ಇಂತಹ ಇನ್ನೂ ಹಲವಾರು ಆಚರಣೆಗಳನ್ನು ಕೈಬಿಡಲಾಗಿದೆ. ಆ ಆಚರಣೆಗಳನ್ನು ಮುಂದಿನ ಸಂಶೋಧನಾ ವಿಷಯಕ್ಕೆ ಬಳಸಬಹುದಾಗಿದೆ.
* ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯಾಗುತ್ತವೆ. ಪ್ರದೇಶಗಳನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆ ಮುಂದುವರಿಸಬಹುದಾಗಿದೆ.
* ಲಿಖಿತ ಪರಂಪರೆ ಒಂದನ್ನೇ ಸ್ತ್ರಿಮಾದಿ ನೆಲೆಯಲ್ಲಿ ನಿಂತು ನೋಡಬಹುದಾಗಿದೆ.
* ಬ್ರಾಹ್ಮಣ ಮಹಿಳೆಯ ಆಯ್ಕೆಯ ಅವಕಾಶಗಳನ್ನು ವಿವಿಧ ಕಾಲಘಟಗಳಲ್ಲಿ ನೋಡಬಹುದಾಗಿದೆ.
* ಧರ್ಮವು ಬ್ರಾಹ್ಮಣ ಮಹಿಳೆಯನ್ನು ದೈಹಿಕ ನೆಲೆಯಲ್ಲಿ ಅಪವಿತ್ರದ ನೆಲೆಯಲ್ಲಿ ನೋಡುತ್ತದೆ. ಅವಳ ಮಾನಸಿಕ ಸ್ಥಿತಿಯನ್ನು ಅನ್ವಯಿಸಿ ಅಧ್ಯಯನ ಕೈಗೊಳ್ಳಬಹುದಾಗಿದೆ.
* ವಿವಿಧ ಅವಸ್ಥೆಯಲ್ಲಿ ಮಾನಸಿಕತೆಯು ಯಾವ ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ. ಎಂಬುದನ್ನು ಅಭ್ಯಸಿಸಬಹುದಾಗಿದೆ.
* ಆಧುನಿಕರಣದ ಸಂದರ್ಭದಲ್ಲಿ ಬ್ರಾಹ್ಮಣ ಮಹಿಳೆಗಿರುವ ನಿಷೇಧಗಳ ಕುರಿತು ವಿಷಧವಾಗಿ ಅಧ್ಯಯನ ಕೈಗೊಳ್ಳಬಹುದಾಗಿದೆ.
* ಬ್ರಾಹ್ಮಣ ಮಹಿಳೆಯರಲ್ಲಿರುವ ಆದರ್ಶನಾರಿ ಪರಿಕಲ್ಪನೆಯ ಬಗೆಗೆ ಅಧ್ಯಯನ ಮಾಡಬಹುದಾಗಿದೆ.

❒

ಅನುಬಂಧ

೧. ಪರಾಮರ್ಶನ ಗ್ರಂಥಗಳು

೨. ಪ್ರಶ್ನಾವಳಿಯ ಸ್ವರೂಪ

೩. ವಕ್ತೃಗಳ ಪಟ್ಟಿ

೪. ನಕ್ಷೆಗಳು

೫. ಛಾಯಾ ಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಅಂಜನಪ್ಪ ಬಿ.ಹೆಚ್. ಮಹಿಳೆ ಮತ್ತು ದುಡಿಮೆ, ಸೃಷ್ಟಿ ಪಬ್ಲಿಕೇಷನ್ ಬೆಂಗಳೂರು, ೨೦೦೬.

೨. ಅನಂತಕೃಷ್ಣ ಹೆಬ್ಬಾರ (ಅನು) ಭಾರತ ಸಂಘಜೀವನದಿಂದ ಗುಲಾಮರಿಗೆ, ಅಭಿವ್ಯಕ್ತ ಪ್ರಕಾಶನ ಮಂಗಳೂರು.

೩. ಅನಂತ ಕೃಷ್ಣ ಆಚಾರ್ಯ (ಸಂ), ಸುಂದರಕಾಂಡ, ಪ್ರಕಾಶಕರು ಪರ್ಯಾಯ ಶ್ರೀಕಾಣಿಯೂರು ಮಠ, ಉಡುಪಿ, ೧೯೯೯.

೪. ಅತ್ತಿಮಬ್ಬೆ ಮತ್ತು ಸಮಕಾಲೀನ ಸ್ತ್ರೀ ಸಂಸ್ಕೃತಿ, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

೫. ಆಶಾದೇವಿ ಎಂ.ಎಸ್, ಸ್ತ್ರೀಮತವನುತ್ತರಿಸಲಾಗದೇ?, ಅಕ್ಷರ ಪ್ರಕಾಶನ ಸಾಗರ, ೨೦೦೬.

೬. ಇಂದಿರಾ ಆರ್, ಸ್ತ್ರೀವಾದಿ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ಮೈಸೂರು, ೧೯೯೫.

೭. ಇಂದಿರಾ ಆರ್, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,

೮. ಉಮೇಶ ಬಸಪ್ಪಕಾತರಕಿ, ಬಿಸರಳ್ಳಿಯ ದೇವದಾಸಿ ಪದ್ಧತಿ ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಅಪ್ರಕಟಿತ ಎಂ.ಫಿಲ್, ಪ್ರಬಂಧ, ೨೦೦೭.

೯. ಉಷಾ ಎಂ, ಮಹಿಳೆ ಮತ್ತು ಜಾತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫.

೧೦. ಉಷಾ ಎಂ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೧. ಎದುರ್ಕಳ ಕೆ, ಶಂಕರನಾರಾಯಣ ಭಟ್ಟ ಹಿಂದೂ ಧರ್ಮದ ಪರಿಚಯ, ಶ್ರೀವಾಮಕೃಷ್ಣ ಪ್ರಕಾಶನ ಭಾಗಮಂಡಲ ಕೊಡಗು, ೧೯೬೮.

See page 1111

೧೨. ಒಡೆಯರ್ ಡಿ. ಹೆಗ್ಗಡೆ, ಅನ್ನಪೂರ್ಣೇಶ್ವರಿ ಎನ್ ಮಹಿಳಾ ಅಧ್ಯಯನಗಳು, ಆರ್ಥಿಕನೆಲೆಗಳು ಆಯಾಮಗಳು, ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು, ೨೦೦೩.

೧೩. ಒಡೆಯರ್ ಡಿ. ಹೆಗ್ಗಡೆ, ಮಹಿಳಾವಾದಿ ತತ್ವಜ್ಞಾನಿಗಳು ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ ಮೈಸೂರು, ೨೦೦೭.

೧೪. ಕಮಲಾ ಹಂಪನಾ, ಬೊಗಸೆ ಮಹಿಳೆ ಸುತ್ತಮುತ್ತ ಸಿ.ವಿ.ಜಿ. ಪಬ್ಲಿಕೇಷನ್ ಬೆಂಗಳೂರು, ೨೦೦೩.

೧೫. ಕವಿತಾ ರೈ, ವಿವಾಹ ಮತ್ತು ಕುಟುಂಬ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೬. ಕಿಶೋರಿ ನಾಯಕ್, ಸ್ತ್ರೀವಾದಿ ನೆಲೆಗಳು ಮತ್ತು ನಿಲುವುಗಳು ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ, ೧೯೯೯.

೧೭. ಕಿಶೋರಿನಾಯಕ್. ಕೆ, ಸಂ ಮಹಿಳಾ ಅಧ್ಯಯನ ಸಾಧ್ಯತೆಗಳು ಮತ್ತು ಸವಾಲುಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಹಿಳಾ ಅಧ್ಯಯನ ಕೇಂದ್ರ ಮಂಗಳ ಗಂಗೋತ್ರಿ, ೨೦೦೭

೧೮. ಕುಲಕರ್ಣಿ ಆರ್.ಜಿ, ಕನ್ನಡಕ್ಕೆ ಸ್ತ್ರೀ ಶಕ್ತಿ, ಶ್ರೀ ಅರವಿಂದ ಮತ್ತು ಶ್ರೀಮಾತೆ, ಶ್ರೀ ದ.ರಾ. ಬೇಂದ್ರೆ, ಸ್ನೇಹಮಂಡಲ, ಬೆಂಗಳೂರು, ೧೯೯೮.

೧೯. ಗೋಪಾಲರಾವ್, ಭಾರತೀಯ ನಾರಿ ಅಂದು ಇಂದು, ಭೈರವ ಪ್ರಕಾಶನ ಚಿಕ್ಕಮಂಗಳೂರು, ೨೦೦೦

೨೦. ಗಾಯತ್ರಿ ಎನ್, ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪಬ್ಲಿಕೇಷನ್ ಬೆಂಗಳೂರು, ೧೯೯೧.

೨೧. ಗಾಯತ್ರಿ ನಾವಾಡ, ವಿರಚನೆ, ಎನ್.ಆರ್.ಎ.ಎಮ್.ಎಚ್. ಪ್ರಕಾಶನ, ದಕ್ಷಿಣ ಕನ್ನಡ, ೧೯೯೭.

೨೨. ಗಾಯತ್ರಿ ನಾವಾಡ, ಮಹಿಳಾ ಸಂಕಥನ, ಕರ್ನಾಟಕ ಸರ್ಕಾರ ಪ್ರಾಧಿಕಾರ, ಬೆಂಗಳೂರು, ೨೦೦೩

೨೩. ಚಂದ್ರಶೇಖರ ಟಿ.ಆರ್, ಮಹಿಳೆ ಮತ್ತು ಆರ್ಥಿಕತೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಚಿನ್ನಪ್ಪಗೌಡ (ಪ್ರ.ಸಂ) ಲೋಲಾಕ್ಷಿ ಎನ್.ಕೆ (ಸಂ) ಕನ್ನಡ ಪತ್ರಿಕೆಗಳು ಮತ್ತು ಮಹಿಳೆ ಪ್ರಸಾರಾಂಗ ಕನ್ನಡ ಅಧ್ಯಯನ ವಿಭಾಗ ಮಂಗಳ ಗಂಗೋತ್ರಿ, ೨೦೦೬.

೨೫. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿ. ೪೫೦-೧೧೫೦ ಸಪ್ನ ಬುಕ್ ಹೌಸ್ ಬೆಂಗಳೂರು ೧೯೬೬.

೨೬. ಚಿದಾನಂದಮೂರ್ತಿ ಎಂ, ಸಂಶೋಧನೆ, ಡಿ.ವಿ.ಕೆ. ಮೂರ್ತಿ ಮೈಸೂರು ೧೯೬೭.

೨೭. ಚಂದ್ರಶೇಖರ ಬಿ.ಎಸ್, ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾವಿಧಾನಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೨೮. ಚಂದ್ರಪೂಜಾರಿ ಎಂ, ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫

೨೯. ಚಂದ್ರಪೂಜಾರಿ ಎಂ, ಸಂಶೋಧನಾ ಪ್ರಸ್ತಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೮.

೩೦. ಚಂದ್ರಪೂಜಾರಿ ಎಂ, ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೩೧. ಚಂದ್ರಮತಿ ಸೊಂದಾ, ಹೆಣ್ಣಲ್ಲ ನಮಗ ರವಿಚಿನ್ನ, ಸಾಗರ ಪ್ರಕಾಶನ ಬೆಂಗಳೂರು, ೨೦೦೬.

೩೨. ಚಂದ್ರಮತಿ ಸೊಂದಾ, ಚಿಪ್ಪೊಡೆದ ಮೌನ, ಅಭಿರುಚಿ ಪ್ರಕಾಶನ ಮೈಸೂರು, ೨೦೦೪.

೩೩. ಜ್ಯೋತ್ಸ್ನಾ ಕಾಮತ್, ಮಹಿಳೆ ಅಂದು ಇಂದು, ಪ್ರೇಮಸಾಯಿ ಪ್ರಕಾಶನ ಬೆಂಗಳೂರು, ೨೦೦೧.

೩೪. ಜ್ಯೋತ್ಸ್ನಾ ಕಾಮತ್, ಮಹಿಳೆ ಒಂದು ಅಧ್ಯಯನ, ನವಕರ್ನಾಟಕ ಪ್ರಕಾಶನ ಬೆಂಗಳೂರು, ೧೯೯೯.

೩೫. ಜ್ಯೋತಿ ಶಶಿಕುಮಾರ, ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೬. ಜವರಯ್ಯ ಮ.ನ. (ಅನು) ಅಂಬೇಡ್ಕರ್ ಬಿ.ಆರ್, (ಮೂಲ) ಜಾತಿ ಮತ್ತು ಮಹಿಳೆ ಸಿದ್ಧಾರ್ಥ ಗ್ರಂಥಮಾಲೆ ಮೈಸೂರು, ೨೦೦೩.

೩೭. ಜಯಲಕ್ಷ್ಮಿ ಕೆ, ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ, ಅನಾವರಣ ಮುದ್ರಕರು, ಬೆಂಗಳೂರು, ೨೦೦೬.

೩೮. ತೇಜಸ್ವಿನಿ ನಿರಂಜನ್, ಸಿಮಂತಿನಿ ನಿರಂಜನ್, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕ್ರೈಸ್ಟ ಕಾಲೇಜು ಕನ್ನಡ ಸಂಘ, ಬೆಂಗಳೂರು, ೧೯೯೪.

೩೯. ದೇವಿಪ್ರಸಾದ ಚಟ್ಟೋಪಾಧ್ಯಾಯ, ಮಾತೆಯರು ಮಾನ್ಯರಾಗಿದ್ದಾಗ, ನವಕರ್ನಾಟಕ ಪಬ್ಲಿಕೇಷನ್, ೨೦೦೪.

೪೦. ನಂಜಮ್ಮಣ್ಣಿ ಎಂ, ಭಾರತೀಯ ಸಾಮಾಜಿಕ ಸಂಸ್ಥೆಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೩

೪೧. ನೇಮಿಚಂದ್ರ ಮಹಿಳಾ ಅಧ್ಯಯನ ಅಂಕಿತ ಪುಸ್ತಕ ಬೆಂಗಳೂರು, ೨೦೦೧.

೪೨. ನಿರ್ಮಲಾ ಬಿರಾದಾರ್ ಮಹಿಳೆ ಸಮಾಜ ಮತ್ತು ಕಾನೂನು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೨೦೦೫.

೪೩. ನಾಗರತ್ನಮ್ಮ ಎಸ್.ವಿ, ಶ್ರೀಹರಿವಂಶಾಮೃತ ಕಲಶ ಪ್ರಕಾಶಕರು, ಎಸ್.ವಿ. ನಾಗರತ್ನಮ್ಮ ಬೆಂಗಳೂರು, ೧೯೯೮.

೪೪. ನಾರಾಯಣ ಎಂ, ಸಾಮಾಜಿಕ ಸಂಸ್ಥೆಗಳು ಮತ್ತು ಬದಲಾವಣೆಗಳು, ಚೇತನ ಬುಕ್ ಹೌಸ್ ಮೈಸೂರು ೨೦೦೪.

೪೫. ನಾರಾಯಣಸ್ವಾಮಿ ಜ.ಹೋ, ಬ್ರಾಹ್ಮಣ್ಯದ ತಂತ್ರಗಳು, ಮಾನವ ಪ್ರಕಾಶನ, ಹಾಸನ, ೨೦೦೭.

೪೬. ಪುಟ್ಟಪ್ಪ ಕೆ.ವಿ, (ಪ್ರ.ಸಂ) ಯುಗಯಾತ್ರೀ ಭಾರತೀಯ ಸಂಸ್ಕೃತಿ (ಸಂಪುಟ - ೩) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧.

೪೭. ಪ್ರಶಾಂತ ಹೆಚ್.ಡಿ. (ಸಂ) ಜನಸಮುದಾಯ ಸಂಪುಟ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೪೮. ಪ್ರಭಾಮಣಿ, ಮಹಿಳೆ ಮತ್ತು ಧರ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨.

೪೯. ಪ್ರಧಾನ ಗುರುದತ್ತ, ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ೧೯೯೦.

೫೦. ಪ್ರಹ್ಲಾದ ಅಗಸನಕಟ್ಟೆ, ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಹರ್ಷ ಪ್ರಕಾಶನ, ಹುಬ್ಬಳ್ಳಿ, ೨೦೦೪.

೫೧. ಪ್ರೀತಿಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೫೨. ಬಿಂದೂರಾಯರು ಸಂ.ಗೋ. (ಸಂ), ಭಾರತಸಾರೋದ್ಧಾರ, ಲೋಕ ಶಿಕ್ಷಣ ಮಾಲಾ, ಹುಬ್ಬಳ್ಳಿ, ೧೯೫೪.

೫೩. ಬುಳ್ಳಾ ಬಿ.ಪಿ, ಶಿಕ್ಷಣದಲ್ಲಿ ಆರ್ಥಿಕ ಮೌಲ್ಯ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮.

೫೪. ಭೈರಪ್ಪ ಕೆ, ಭಾರತೀಯ ಸಮಾಜ, ಪ್ರಕಾಶನ ಸಾಹಿತ್ಯ ತಲಕಾಡು ಸುಬ್ಬರಾವ್, ಬೆಂಗಳೂರು, ೧೯೯೪.

೫೫. ಭೈರಪ್ಪ ಕೆ, ಸಮಗ್ರ ಗ್ರಾಮೀಣ ಸಮಾಜ, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೦೨.

೫೬. ಭಗವಾನ್ (ಅನು), ಸ್ವಾಮಿ ಧರ್ಮತೀರ್ಥ (ಮೂಲ), ಹಿಂದೂ ಸಾಮ್ರಾಜ್ಯ ಶಾಹಿಯ ಇತಿಹಾಸ, ಮಹಿಮ ಪ್ರಕಾಶನ, ಮೈಸೂರು, ೧೯೯೦.

೫೭. ಭಂಢಾರಿ ಆರ್.ವಿ, ವರ್ಣದಿಂದ ವರ್ಗದೆಡೆಗೆ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ.

೫೮. ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ ಪುರಾಣನಾಮ ಚೂಡಾಮಣಿ, ಶ್ರೀಲಕ್ಷ್ಮಿ ನಾರಾಯಣ ಅರೋರಾ, ಪ್ರಕಾಶನ ಮೈಸೂರು, ೧೯೪೧.

೫೯. ಬರಗೂರು ರಾಮಚಂದ್ರಪ್ಪ, (ಸಂ) ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೬೦. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬಂಗಳೂರು, ೧೯೯೩.

೬೧. ಮಂಗಳಾ ಚಿ.ನ, ಮಹಿಳಾ ಸಾಹಿತ್ಯ ೧೯೮೦-೮೨, ಶಾಶ್ವತಿ ಪ್ರಕಟನೆ ಬೆಂಗಳೂರು, ೧೯೮೪.

೬೨. ಮಧು (ವೆಂಕಾರೆಡ್ಡಿ), ಹೊನ್ನಮ್ಮನ ಹದಿಬದೆಯ ಧರ್ಮ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೫.

೬೩. ಮಹದೇವ ಎನ್.ಜಿ. (ಅನು) ಧರ್ಮಮಿಮಾಂಸೆ ಉಪ್ಪ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೨.

೬೪. ಮಲ್ಲೇಪುರಂ ಜಿ. ವೆಂಕಟೇಶ, ಸುಂದರ ರಾಮಾಯಣ, ಉದಯ ಪ್ರಕಾಶನ ಬೆಂಗಳೂರು, ೧೯೯೫.

೬೫. ಮಂಗಳಾ ಪ್ರಿಯದರ್ಶಿನಿ ಡಿ, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೬೬. ಮಂಗಳಾ ಪ್ರಿಯದರ್ಶಿನಿ, ಬೈದವ್ವ ಕೇಳಾ ನನ ಮಾತಾ, ಸಚಿನ ಪಬ್ಲಿಷರ್ಸ್, ೨೦೦೭.

೬೭. ಮುಜುಂದಾರ್ (ಪ್ರಸಂ), ನರಸಿಂಹಮೂರ್ತಿ ಎ.ವಿ, (ಕ ಅನು) ದೆಹಲಿಸುಲ್ತಾನರ ಅಧಿಪತ್ಯ (ಭಾಗ -೨), ಬೆಂಗಳೂರು, ೨೦೦೧.

೬೮ ಮುಳಗುಂದ, ಚ.ವಿ. (ಪ್ರ.ಸಂ) ಮಾತೋಶ್ರೀ, ಮಾತೋಶ್ರೀ ಪ್ರಕಾಶನ, ಮುದ್ದೆಬಿಹಾಳ, ೧೯೮೬

೬೯. ಯಳನಾಡು ಅಂಜನಪ್ಪ, ಧರ್ಮ ಮತ್ತು ಮುಕ್ತ ವಿಚಾರ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೭೦. ರಘುಸುತ, ಬ್ರಹ್ಮವಾದಿನಿಯರು ಮತ್ತು ಪವಿತ್ರಮಾತೆಯರು, ಪುಲಕೇಶಿ ಪ್ರಕಾಶನ ಬೆಂಗಳೂರು, ೧೯೯೫.

೭೧. ರಹಮತ್ ತರಿಕೇರೆ (ಸಂ), ಧರ್ಮವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭೨. ರವೀಂದ್ರ ಕೆ, (ಸಂ) ಅಧ್ಯಯನದ ವಿಧಿವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ರೋಹಿಣಿ ಬಿ.ಎಂ, ಸ್ತ್ರೀ ಸಂವೇದನೆ, ಹೇಮಾಂಶು ಪ್ರಕಾಶನ ಮಂಗಳೂರು, ೧೯೯೫.

೭೩. ರಾಜಶೇಖರಪ್ಪ ಎಸ್, ಭಾರತೀಯ ಸಮಾಜ, ಭ್ರಮರ ಪ್ರಕಾಶನ ಶಿವಮೊಗ್ಗ, ೨೦೦೧.

೭೪. ರಾಮಾಜೋಯಿಸ್ ಮ, ಮನುಸ್ಮೃತಿಯಲ್ಲಿ ಶಾಶ್ವತ ಜೀವನ ಮೌಲ್ಯಗಳು, ಸಪ್ನ ಬುಕ್‌ಹೌಸ್ ಬೆಂಗಳೂರು, ೨೦೦೫.

೭೫. ರಾಮಚಂದ್ರನ್ ಸಿ.ಎನ್, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

೭೬. ವೀರಭದ್ರಪ್ಪ ಬಿ.ವಿ. (ಅನು) ಅಶ್ವಘೋಷನ ವಜ್ರಸೂಚಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೭೭. ವಾಗೀಶ್ವರಿ ಶಾಸ್ತ್ರಿ, ಹಿಂದೂ ಸ್ತ್ರೀ ಚಿತೆಯಿಂದ ಚಿಂತೆಗೆ, ವಾಗ್ದೇವಿ ಕಲಾನಿಕೇತನ ಬೆಂಗಳೂರು, ೧೯೯೫.

೭೮. ವಿವಿಧ ಲೇಖಕರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩.

೭೯. ವಿಜಯಕುಮಾರಿ ಎಸ್. ಕರಿಕಲ್, ಮಹಿಳೆ ಮತ್ತು ಸಮಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೮೦ ವಿಜಯ ಪೂಣಚ್ಚ ತಂಬಂಡ, (ಸಂ) ಚರಿತ್ರೆ ವಿಶ್ವಕೋಶ-೪ ಪ್ರಸಾರಾಂಗ ಕ.ವಿ.ವಿ. ಹಂಪಿ. ೨೦೦೧

೮೧. ವಿಶ್ವನಂದನ ತೀರ್ಥ ಶ್ರೀಪಾದರು, ಬಾಲಭಾಗವತ, ಶ್ರೀಶ್ರೀ ವಿಶ್ವನಂದನತೀರ್ಥ, ಶ್ರೀಪಾದ ಸೇವಾ ಸಮೀತಿ ಹಾಗೂ ಶ್ರೀ ಹಯಗ್ರಿವ ವಿಠ್ಠಲ ಟ್ರಸ್ಟ್, ೨೦೦೮.

೮೨. ವಿಜಯಾ, ನಿಜಧ್ಯಾನ, ಪ್ರೆಸ್ ಕ್ಲಬ್ ಪ್ರಕಾಶನ ಬೆಂಗಳೂರು, ೨೦೦೫.

೮೩. ವೀರಭದ್ರಪ್ಪ ಬಿ.ವಿ. ವೇದಗಳಲ್ಲಿ ಜನಸಾಮಾನ್ಯರು ನವಕರ್ನಾಟಕ ಪಬ್ಲಿಕೇಷನ್ ಬೆಂಗಳೂರು, ೨೦೦೩.

೮೪. ವೀರಣ್ಣ ಸಿ., ಮಹಾಭಾರತ ಮಂಥನ ಸುಮುಖ ಪ್ರಕಾಶನ ಬೆಂಗಳೂರು, ೨೦೦೬.

೮೫. ವಿಜಯ ಭಾರತಿ, ವೇದ ಕಾಲೀನ ವನಿತೆಯರು ಪ್ರಕಾಶಕರು, ತಾ.ರಾ.ನಾಗರಾಜ್, ಬೆಂಗಳೂರು ೧೯೯೯.

೮೬. ವಿಜಯಶ್ರೀ ಸಬರದ (ಸಂ), ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೮೭. ವೆಂಕಟೇಶ ಕೆ.ಎಸ್, ಮದ್ವ ಸಿದ್ಧಾಂತ V/S ಆಧುನಿಕ ವಿಜ್ಞಾನ ಧ್ವನಿ ಪಬ್ಲಿಕೇಷನ್ಸ ಬೆಂಗಳೂರು, ೨೦೦೩.

೮೮. ವೆಂಕಟರಾವ್ ಡಿ. ಕೊನೆಯ ಬ್ರಾಹ್ಮಣ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೨.

೮೯. ಸರೋಜಾ ಕೆ. ಮಹಿಳಾ ಆರೋಗ್ಯ ಒಂದು ಮರು ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೯೦. ಸರೋಜಾ ಕೆ, ಮಹಿಳೆ ಮತ್ತು ಆರೋಗ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೯೧. ಸಂಗಮೇಶ ಸವದತ್ತಿಮಠ, ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸ, ಕರ್ನಾಟಕ ಸರ್ಕಾರ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೩.

೯೨. ಸರಸ್ವತಿ ಟಿ.ಎನ್, ಸೀತೆ ಭಾರತ ಸಂಸ್ಕೃತಿ ಪ್ರಕಾಶನ ಬೆಂಗಳೂರು, ೧೯೯೯.

೯೩. ಸಾರಾ ಅಬೂಬಕ್ಕರ್, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೯೪. ಸುಬ್ರಮಣ್ಯ ಜಿ, ಭಾರತೀಯ ಸಮಾಜ ಸಪ್ನ ಬುಕ್‌ಹೌಸ್ ಗಾಂಧಿನಗರ ಬೆಂಗಳೂರು, ಪರಿಷ್ಕೃತ ಆವೃತ್ತಿ, ೨೦೦೬-೦೭

೯೫. ಸುಮನಾ, ಆರ್. ವಿಜಯನಗರದ ರಾಣಿಯರು: ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಅಪ್ರಕಟಿತ, ಎಂ.ಫಿಲ್. ಪ್ರಬಂಧ, ೨೦೦೫.

೯೬. ಸುನಂದಮ್ಮ ಆರ್. ಮಹಿಳಾ ಸಂಸ್ಕೃತಿ, ಸಮತಾ ಅಧ್ಯಯನ ಕೇಂದ್ರ ಮೈಸೂರು, ೨೦೦೫.

೯೭. ಸುಮಿತ್ರಾಬಾಯಿ ಬಿ.ಎನ್, ಸ್ತ್ರೀವಾದ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೫.

೯೮. ಸುಮಿತ್ರಾಬಾಯಿ ಬಿ.ಎನ್, ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦.

೯೯. ಸುಮಿತ್ರಾಬಾಯಿ ಬಿ.ಎನ್, (ಸಂ) ಸ್ತ್ರೀವಾದಿ ಪ್ರವೇಶಿಕೆ, ಕರ್ನಾಟಕ ಲೇಖಕಿಯರ ಸಂಘ, ೧೯೯೫.

೧೦೦. ಸೋಮನಾಥಾನಂದ, ಉಪನಿಷತ್ ಭಾವಧಾರೆ, ಶ್ರೀರಾಮಕೃಷ್ಣ ಆಶ್ರಮ ಮೈಸೂರು, ೧೯೯೫.

೧೦೧. ಶಂಕರ್‌ರಾವ್ ಚ.ನ, ಭಾರತೀಯ ಸಮಾಜ, ಜೈ ಭಾರತ, ಪ್ರಕಾಶನ ಮಂಗಳೂರು, ೧೯೯೧.

೧೦೨. ಶಂಕರ್‌ರಾವ ಚ.ನ, ಭಾರತೀಯ ಸಮಾಜದ ಅಧ್ಯಯನ ಜೈ ಭಾರತ ಪ್ರಕಾಶನ ಮಂಗಳೂರು, ೧೯೯೬.

೧೦೩. ಶಶಿಕಲಾ ವಿಜಯಾನ್ವೇಷಣೆ ವಿಜಯಾದಬ್ಬೆ ಅಭಿನಂದನಾ ಗ್ರಂಥ ಸಮಿತಿ ಮೈಸೂರು.

೧೦೪. ಶಶಿಕಲಾ ಶಿವಶಂಕರ; ದೀಪಕ್ಕೆ ದೀಪ್ತಿ ಜ್ಞಾನೋದಯ, ಪ್ರಕಾಶನ ಬೆಂಗಳೂರು, ೨೦೦೦.

೧೦೫. ಶಂಭುಶರ್ಮಾನಾಜಗಾರ, ಧರ್ಮಸಿಂಧು ಸಮಾಜ ಪುಸ್ತಕಾಲಯ ಧಾರವಾಡ, ೨೦೦೨.

೧೦೬. ಶಾರದಾ ಶಾಮಣ್ಣ, ಭಾರತೀಯ ಮಹಿಳೆ, ಕಳಸ ಪ್ರಕಾಶನ ಬೆಂಗಳೂರು, ೧೯೯೯.

೧೦೭ ಶಾಸ್ತ್ರಿ ಜಿ.ವಿ, (ಸಂಗ್ರಹ) ಸಂಪೂರ್ಣ ಮಹಾಭಾರತ, ಪಾರು ಪ್ರಕಾಶನ ಗದಗ.

೧೦೮. ಶಾಸ್ತ್ರಿ ಜಿ.ವಿ, (ಸಂಗ್ರಹ) ಸಂಪೂರ್ಣ ರಾಮಾಯಣ, ಪ್ರಕಾಶಕರು, ಶಾಬಾದಿಮಠ ಬುಕ್ ಡಿಪೋ ಗದಗ.

೧೦೯. ಶಾಂತಿನಾಥ ದಿಬ್ಬದ (ಸಂ) ವೈಚಾರಿಕ ಲೇಖನಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, ೨೦೦೫.

೧೧೦. ಶ್ರೀಮತಿ ಎಚ್.ಎಸ್, (ಸಂ) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೧. ಶ್ರೀಮತಿ ಎಚ್.ಎಸ್. ಚಹರೆ, ಇಳಾ ಪ್ರಕಾಶನ ಬೆಂಗಳೂರು, ೧೯೯೯.

೧೧೨. ಶ್ರೀಮತಿ ಎಚ್.ಎಸ್, (ಸಂ) ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭.

೧೧೩. ಶ್ರೀಮತಿ ಎಚ್.ಎಸ್. (ಸಂ) ಮಹಿಳೆ ದುಡಿಮೆ ಮತ್ತು ಒಡುವು ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೧೪. ಶ್ರೀಮತಿ ಎಚ್.ಎಸ್, ಗರ್ಭಾಶಯ ಮಹಿಳೆಯ ಶಕ್ತಿ ಕೇದ್ರ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೫. ಶ್ರೀಮತಿ ಎಚ್.ಎಸ್. (ಕ ಅನು) ಜೆರಾಲ್ಡಿನ್ ಫೋರ್ಬ್ಸ್ (ಇ. ಮೂಲ) ಆಧುನಿಕ ಭಾರತದಲ್ಲಿ ಮಹಿಳೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೧೧೬. ಶ್ರೀಮತಿ ಎಚ್.ಎಸ್, ಹೆಣ್ಣು ಮತ್ತು ಹೆಂಗಸು, ಬಾಲ್ಯದಕೆರೆ ಪ್ರಕಾಶನ ಮಂಡ್ಯ, ೨೦೦೪.

೧೧೭. ಶ್ರೀಮತಿ ಎಚ್.ಎಸ್, ಸ್ತ್ರೀವಾದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೧೮. ಶ್ರೀಮತಿ ಎಚ್.ಎಸ್, (ಅನು) ಸಿಮೋನ್‌ದಬೋವಾ ದಸೆಕೆಡ ಸೆಕ್ಸ್, ಅಧ್ಯಯನ ಮಂಡಲ ಬೆಂಗಳೂರು, ೨೦೦೭

೧೧೯. ಶೇಷನವರತ್ನ, ನಾಲ್ಕು ವೇದಗಳು ಒಂದು ಅಧ್ಯಯನ, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೩.

೧೨೦. ಶೇಷನವರತ್ನ (ಅನು) ಮನುಸ್ಮೃತಿ ಮನೋಹರ ಘಾಣೇಕರ ಸಮಾಜ ಪುಸ್ತಕಾಲಯ, ಧಾರವಾಡ.

೧೨೧. ಶೈಲಜಾ ಹಿರೇಮಠ, ಪಾತರದವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯.

೧೨೨. ಶೈಲಜಾ ಹಿರೇಮಠ, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೨೩. ಶೈಲಜಾ ಹಿರೇಮಠ, ಸ್ತ್ರೀಕಥನ, ಭುವನ ಪ್ರಕಾಶನ ಹೊಸಪೇಟೆ, ೨೦೦೩.

೧೨೪. ಹನುಮಂತರಾಯಪ್ಪ ಎಚ್. ಧರ್ಮ ಮತ್ತು ಕಾವ್ಯ ಧರ್ಮ ಸುಮುಖ ಪ್ರಕಾಶನ ಬೆಂಗಳೂರು, ೨೦೦೬.

೧೨೫. ಹಾಲತಿಸೋಮಶೇಖರ, ಮಹಿಳಾ ಚಳುವಳಿ, ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಮೈಸೂರು, ೨೦೦೭.

೧೨೬. ಹೇಮಲತಾ ಹೆಚ್.ಎಂ, ಮಹಿಳಾ ಅಧ್ಯಯನ - ೧, ಡಿ.ವಿ.ಕೆ. ಮೂರ್ತಿ ಮೈಸೂರು, ೨೦೦೪.

೧೨೭. ಹೇಮಲತಾ ಹೆಚ್.ಎಂ, ಮಹಿಳಾ ಅಧ್ಯಯನ - ೨, ಡಿ.ವಿ.ಕೆ ಮೂರ್ತಿ ಮೈಸೂರು, ೨೦೦೪

೧೨೮. ಹೇಮಲತಾ ಹೆಚ್.ಎಂ, ಮಹಿಳಾ ಅಧ್ಯಯನ - ೩, ಡಿ.ವಿ.ಕೆ ಮೂರ್ತಿ ಮೈಸೂರು, ೨೦೦೬

೧೨೯. ಹೇಮಲತಾ ಹೆಚ್.ಎಂ, ಮಹಿಳಾ ಅಧ್ಯಯನ - ೪, ಡಿ.ವಿ.ಕೆ ಮೂರ್ತಿ ಮೈಸೂರು, ೨೦೦೭

ಸಂಚಿಕೆಗಳು

೧೩೦. ಉಷಾ ಎಂ, ಸಂ ಮಹಿಳಾ ಅಧ್ಯಯನ ಸಂಪುಟ - ೫, ಸಂಚಿಕೆ - ೧,೨. ಜನವರಿ, ಡಿಸೆಂಬರ್ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೩೧. ಶಿವಾನಂದ ವಿರಕ್ತಮಠ (ಸಂ), ಮಹಿಳಾ ಅಧ್ಯಯನ ಸಂಪುಟ - ೬, ಸಂಯುಕ್ತ ಸಂಚಿಕೆ - ೧,೨. ಜನವರಿ ಡಿಸೆಂಬರ್ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೩೨. ಶೈಲಜಾ ಹಿರೇಮಠ (ಸಂ), ಮಹಿಳಾ ಅಧ್ಯಯನ ಸಂಪುಟ - ೮, ಸಂಚಿಕೆ - ೧ ಜನವರಿ ಜೂನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೩೩. ಶೈಲಜಾ ಹಿರೇಮಠ (ಸಂ), ಮಹಿಳಾ ಅಧ್ಯಯನ ಸಂಪುಟ - ೮, ಸಂಚಿಕೆ - ೨ ಜನವರಿ ಜೂನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೩೪. ಶ್ರೀಮತಿ ಎಚ್.ಎಸ್. (ಸಂ), ಮಹಿಳಾ ಅಧ್ಯಯನ ದಕ್ಷಿಣಾಯಣ ಸಂಚಿಕೆ ಸಂಪುಟ - ೪, ಸಂಚಿಕೆ - ೧ ಜುಲೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೩೫. ಶ್ರೀಮತಿ ಎಚ್.ಎಸ್. (ಸಂ), ಮಹಿಳಾ ಅಧ್ಯಯನ ದಕ್ಷಿಣಾಯಣ ಸಂಚಿಕೆ ಸಂಪುಟ - ೩, ಸಂಚಿಕೆ - ೨ ಜುಲೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೩೬. ಶ್ರೀಮತಿ ಎಚ್.ಎಸ್. (ಸಂ), ಮಹಿಳಾ ಅಧ್ಯಯನ ದಕ್ಷಿಣಾಯಣ ಸಂಚಿಕೆ ಸಂಪುಟ - ೨, ಸಂಚಿಕೆ - ೧ ಜನವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

❐

೨. ಪ್ರಶ್ನಾವಳಿಯ ಸ್ವರೂಪ

೧. ಹೆಸರು :

೨. ಊರು :

೩. ವಯಸ್ಸು :

೪. ಶಿಕ್ಷಣ :

ಪ್ರಾಥಮಿಕ ಪದವಿ

ಮಾಧ್ಯಮಿಕ ಅನಕ್ಷರಸ್ಥೆ

ಪದವಿಪೂರ್ವ

೫. ಯಾವ ಬ್ರಾಹ್ಮಣರು ಸ್ಮಾರ್ಥ ವೈಷ್ಣಿವ ಕಣ್ವಶಾಖಾ

<u>ಯುವತಿಯರಿಗೆ</u>

೬. ಋತುಮತಿಯಾದ ವಯಸ್ಸು

೭. ಮುಟ್ಟಿನೊಂದಿಗೆ ಮೈಲಿಗೆ ಪರಿಕಲ್ಪನೆ ಬಳೆಯಲು ಕಾರಣ?

೮. ಹೊರಗೆ ಕೂಡಿಸುತ್ತಾರೆಯೇ?

ಹೌದು ಇಲ್ಲ

೯. ಎಷ್ಟುದಿನ

೧೦. ಅದಕ್ಕಾಗಿ ವಿಶೆಷ ಕೊಠಡಿಗಳಿವೆಯೇ?

ಹೌದು ಅಲ್ಲ

೧೧. ಸ್ನಾ ಮಾಡಲು ಈ ಸಂದರ್ಭದಲ್ಲಿ ಬಿಡುತ್ತಾರೆಯೇ?

೧೨. ಈ ಸಂದರ್ಭದಲ್ಲಿ ಯಾವ ಯಾವ ಕಾರ್ಯದಲ್ಲಿ ಭಾಗವಹಿಸಬಹುದು.

೧೩. ಯಾವ ಯಾವ ವಸ್ತ್ರಗಳನ್ನು ಮುಟ್ಟಬಹುದು.

೧೪. ದೇವರ ಪೂಜೆ ಮಾಡಬಹುದೇ?

೧೫. ಮುಟ್ಟಿನ ಸಂದರ್ಭದಲ್ಲಿ ಹೊರಗೆ ಕೂಡಿಸುವುದಕ್ಕೆ, ಬಿಡುವುದಕ್ಕೆ, ನಿಮ್ಮ ಅಭಿಪ್ರಾಯವೇನು?

೧೬. ಈ ಆಚರಣೆಯ ಬಗೆಗೆ ನಿಮ್ಮ ಅಭಿಪ್ರಾಯವೇನು?

ಗೃಹಿಣಿ

೧೭. ಮಕ್ಕಳು : ಗಂಡು, ಹೆಣ್ಣು

೧೮. ಮಕ್ಕಳ ಶಿಕ್ಷಣ : ಪ್ರಾಥಮಿಕ ಪದವಿ

ಮಾಧ್ಯವಿಕ ಅನಕ್ಷರಸ್ಥ

ಪದವಿಪೂರ್ವ

೧೯. ವಿವಾಹ ಸಂದರ್ಭದಲ್ಲಿ ನಿಮ್ಮ ಸ್ಥಾನ

ಎಡಗಡೆ ಬಲಗಡೆ

೨೦. ವಿವಾಹದ ಆಯ್ಕೆ ಯಾರು ಮಾಡುತ್ತಾರೆ.

೨೧. ವರದಕ್ಷಿಣೆ ಕೋಡುತ್ತಿರಾ?

೨೨. ವರದಕ್ಷಿಣೆಯನ್ನು ನಿರ್ದರಿಸು ಅಂಶಗಳು

೨೩. ವರದಕ್ಷಿಣೆಯ ದುಡ್ಡು ಯಾರಿಗೆ ಸೇರುತದೆ.

೨೪. ವಿವಾಹ ಸಂದರ್ಭದ ಆಚರಣೆಗಳಲ್ಲಿ ಅಕ್ಕಿಯನ್ನು ಹೆಣ್ಣು ಎದ್ದುನಿಂತು, ಗಂಡು ಕುಳಿತು ಹಾಕಲು ಕಾರಣ.

೨೫. ಪ್ರೇಮ ವಿವಾಹಕ್ಕೆ ಆಸ್ಪದವಿದೆಯೇ?

೨೬. ಗೃಹಕೃತ್ಯಗಳನ್ನು ಮಾಡುವವಳು (ಗೃಹಿಣಿ)

ನಿಮ್ಮ ದೃಷ್ಟಿಯಲ್ಲಿ ಇದರ ಅರ್ಥ

೨೭. ಉದ್ಯೋಗಸ್ಥೆ ಮಹಿಳಗೆ ಇದು ಅನ್ವಯಿಸುತ್ತದೆಯೇ?

೨೮. Opracation ಮಾಡಿಸಿಕೊಂಡಿದ್ದಿರಾ?

೨೯. ಯಾವ ಮಗುವನ್ನು ಬಯಸುತ್ತೀರಿ? ಏಕೆ.

ಹೆರಿಗೆ ಬಾಣಂತಿತನ

೩೦. ಮಕ್ಕಳನ್ನು ಪಡೆಯಲು ನಿಮ್ಮ ನಿರ್ಧಾರವನ್ನು ಪರಿಗಣಿಸಲಾಗುತ್ತದೆಯೇ?

೩೧. ಯಾವ ಮಗುವನ್ನು ಪಡೆಯಬೇಕೆಂಬ ನಿರ್ಧಾರದ ಸಂದರ್ಭದಲ್ಲಿ ನಿಮ್ಮ ಪಾತ್ರ ಎಷ್ಟರ ಮಟ್ಟಿಗೆ ಇದೆ?

೩೨. ನಿಮ್ಮ ಆರೋಗ್ಯಕ್ಕಾಗಿ ಅಸ್ಪತ್ರೆಗೆ ಪ್ರತಿ ತಿಂಗಳು ತೋರಿಸಿಕೊಳ್ಳುತ್ತೀರಾ

೩೩. ಕುಟುಂಬ ಯೋಜನೆಯನ್ನು ಯಾರು ಪಾಲಿಸುತ್ತೀರಿ.

೩೪. ಹೆರಿಗೆಗೆ ಆಸ್ಪತ್ರೆಗೆ ಹೋಗುತ್ತೀರಾ ಅಥವಾ ಮನೆಯಲ್ಲಿ ಮಾಡಿಸಿಕೊಳ್ಳುತ್ತೀರಾ?

೩೫. ಇದಕ್ಕಾಗಿ ವಿಶೇಷ ಕೊಠಡಿ ಅಥವಾ ಮನೆ ಇದೆಯೇ?

ವಿಧವೆ

೩೬. ವೈಧವ್ಯದ ಆಚರಣೇಯ ಬಗೆಗೆ ನಿಮ್ಮ ಅಭಿಪ್ರಾಯ

೩೭. ಪುನರ್ ವಿವಾಹಕ್ಕೆ ಅವಕಾಶವಿದೆಯೇ?

೩೮. ವೈಧವ್ಯದ ಆಚರಣೆ ಕಡ್ಡಾಯವೇ?

೩೯. ವೈಧವ್ಯದ ಆಚರಣೆಗಳನ್ನು ಪಾಲಿಸಲು ಕಾರಣ

ಮನೆಯವರ ಒತ್ತಾಯ

ಸಮಾಜದ ಕಣ್ಣಿನಿಂದ ತಪ್ಪಿಸಿಕೊಳ್ಳಲು

ಸ್ವಂತ ಇಚ್ಛೆ.

ಆಚರಣೆಗಳ ಪ್ರಭಾವ

೪೦. ಮಂಗಳ ಕಾರ್ಯದಲ್ಲಿ ನೀವು ಭಾಗವಹಿಸಬಹುದೇ?

೪೧. ಕೇಶಮುಂಡನ, ಕೆಂಪುಸೀರೆ, ಎಡುವುದು ಈಗಲೂ ಜಾರಿಯಲ್ಲಿಟ್ಟಿದಾದ್ದೀರಾ?

೪೨. ಹೊರಗಡೆ ಕೆಲಸಮಾಡುವುದರಿಂದ ಎಂತಹ ಪರಿಣಾಮ ಎದುರಿಸಬೇಕಾಗಬಹುದು?

೪೩. ಒಪ್ಪತ್ತೆ ಊಟ ಮಾಡಬೇಕೆ?

೪೪. ಮಡಿ ಆಗುವುದು ಕಡ್ಡಾಯವೆ?

ಪುರುಷರಿಗೆ ಆಚಾರ್ಯರಿಗೆ

೪೫. ಯಾವ ಮಾನದಂಡ ವಿವಾಹಕ್ಕೆ ಸೂಕ್ತ

ಸ್ಮಾರ್ಥರು ಗೃಸ್ಥರು

ವೈಷ್ಣವರು ಕಣ್ವಶಾಖಾ

೪೬. ನಿಮ್ಮಲ್ಲಿ ನೀರಬಳಕೆ ನಡೆಯುತ್ತದೆಯೇ?

೪೭. ಗೃಹಿಣಿ ಎಂಬ ಪದ ಸಮಾಜದ ವೈವಾಹಿಕ ಮಾನದಂಡಕ್ಕೆ ಸೂಕ್ತವಾದುದೇ?

೪೮. ಹೆರಿಗೆಯಲ್ಲಿ ವೃದ್ಧಿ ಪಾಲಿಸಲು ಕಾರಣ

ಇದು ಗಂಡನ ಮನೆಯವರಿಗೆ, ಹೆಣ್ಣಿನ ಮನೆಯವರಿಗೆ ಎಷ್ಟು ದಿನಗಳವರೆಗೆ ಸಂಬಂಧಿಸಿದೆ.

೪೯. ಗರ್ಭಿಣಿ ಸಂದರ್ಭದಲ್ಲಿ ಏನೇನು ಆಚರಣೆಗಳನ್ನು ಮಾಡಲಾಗುತ್ತಿದೆಯೇ?

೫೦. ಗಂಡು, ಹೆಣ್ಣು ಮಗುವಿನ ಜನನದ ಆಚರಣೆಗಳಲ್ಲಿ ಭಿನ್ನತೆ ಇದೆಯೇ?

೫೧. ಹೆಣ್ಣು ಮಕ್ಕಳು ಏಕೆ ತೆಂಗಿನಕಾಯಿ ಒಡೆಯಬಾರದು?

೫೨. ಹೆಣ್ಣು ಮಕ್ಕಳು ಶಾಲಿಗ್ರಾಮವನ್ನು ಸ್ಪರ್ಶಿಸುವಂತಿಲ್ಲ, ಹೆಣ್ಣಿನ ನೆರಳು ಅದರ ಮೇಲೆ ಬೀಳಬಾರದೆನ್ನಲು ಕಾರಣ,

ವೈಜ್ಞಾನಿಕ, ಆಚರಣಾತ್ಮಕ, ಗ್ರಂಥಗಳ ಉಲ್ಲೇಖ

೫೩. ಕೆಲವೇ ಕೆಲವು ದೇವರುಗಳನ್ನು ಮಾತ್ರ ಏಕೆ ಹೆಣ್ಣು ಮಕ್ಕಳು ಪೂಜಿಸಬೇಕು?

೫೪. ವೈಷ್ಣವ ಹೆಣ್ಣು ಮಕ್ಕಳು ಉದ್ದನೆಯ ಕುಂಕುಮ ಹಚ್ಚಬೇಕು ಎಂದು ಏಕೆ ಹೇಳಲಾಗುತ್ತಿದೆ?

೫೫. ಹೆಣ್ಣು ಹೀಗೇ ಇರಬೇಕು ಎಂದು ಎಲ್ಲಿಯಾದರೂ ಉಲ್ಲೇಖವಿದೆಯೇ?

೫೬. ಹೆಣ್ಣನ್ನು ಯಾವ ದೃಷ್ಟಿಯಲ್ಲಿ ಬ್ರಾಹ್ಮಣ ಧರ್ಮ ನೋಡುತ್ತದೆ.

ಪವಿತ್ರ ಅಪವಿತ್ರ

೫೭. ಹೆಣ್ಣು ಧರ್ಮಾಚರಣೆಯನ್ನು ಒಂಟಿಯಾಗಿ ನಿರ್ವಹಿಸಬಹುದೇ?

೫೮. ವ್ರತಾಚರಣೆ ಹೆಣ್ಣಿಗೆ ಫಲಗಳು ಗಂಡಿಗೆ ಎಂದು ಯಾಕೆ ಹೇಳಲಾಗುತ್ತಿದೆಯೇ?

೫೯. ಋತುಮತಿಯಾದ ಕನ್ಯೆ ಏಕೆ ಮುದ್ರೆ ಹಾಕಿಸಿಕೊಳ್ಳಬಾರದು?

೬೦. ಮುದ್ರೆ ಹೆಣ್ಣೆ ೨, ಗಂಡಿ ೫ ಏಕೆ?

೬೧. ವಿಧವಾ ನಿರ್ಬಂಧ ಕೆಂಪುಸೀರೆ, ಕೇಶಮುಂಡನ ಯಾಕೆ ಮಾಡಬೇಕು? ಅದನ್ನೆ ಏಕೆ ಸಂಕೇತಗಳನ್ನಾಗಿ ಬಳಸಲಾಗುತ್ತಿದೆ.

೬೨. ಬಳೆ, ಕುಂಕುಮ, ಹೂಗಳ ನಿರ್ಬಂಧ ಎಷ್ಟರ ಮಟ್ಟಿಗೆ ಸರಿ.

೬೩. ವಿಧವೆ ಎನ್ನಿಸಿಕೊಳ್ಳುವ ಹೆಣ್ಣಿಗೆ ಇರುವ ನಿರ್ಬಂಧ ವಿಧುರ ಎಂಬುವನಿಗೆ ಇವೆಯೇ? ಏಕೆ?

<u>ಪ್ರಶ್ನಾವಳಿ</u>

೬೪. ಹೆಣ್ಣು ಮಕ್ಕಳು ವಿವಾಹ ನಂತರ ಗಂಡಿನ ಮನೆಗೆ ಏಕೆ ಹೋಗಬೇಕು? ಅವಳ ಹೆಸರನ್ನೇಕೆ ಬದಲಿಸಬೇಕು.

೬೫. ಹೆಣ್ಣಿಗೆ ಗಂಡನ ಮನೆಯಲ್ಲಿ ಬಾಳಬೇಕಾದ ಶಿಕ್ಷಣವನ್ನು ನೀಡಬೇಕೆಂದು ಎಲ್ಲಿಯಾದರೂ ಹೇಳಲಾಗಿದೆಯೇ?

೬೬. ಉಪನಯನ ಸಂಸ್ಕಾರ ಹೆಣ್ಣಿಗೆ ಏಕೆ ಇಲ್ಲ.

೬೭. ಮಠಾದೀಪ, ಪೀಠಾಧಿ ಪಟ್ಟಯಾಕೆ ಹೆಣ್ಣಿಗೆ ನೀಡುವುದಿಲ್ಲ?

೬೮. ಉದ್ಯೋಗಸ್ಥದ ಬಗೆಗೆ ಧರ್ಮ ಏನನ್ನು ಹೇಳುತ್ತದೆ?

೬೯. ಇದರಲ್ಲಿ ಮಹಿಳೆ ಪಾಲುದೊರೆತರೆ ಯಾವ ಬಗೆಯಲ್ಲಿ ಪರಿಭಾವಿಸುತ್ತದೆ.

೭೦. ಲಿಂಗತಾರತಮ್ಯದ ಬಗ್ಗೆ ನಿಮ್ಮ ಅಭಿಪ್ರಾಯ

೭೧. ಲಿಂಗವು ದರ್ಮಾಚರಣೆಗೆ ಅಡ್ಡಿಯೇ?

೭೨. ಮೇಲ್ವರ್ಗ ವೆಂದು ಕರೆಯಿಸಿಕೊಂಡಿದ್ದ ಬ್ರಾಹ್ಮಣರಲ್ಲಿ ಮಹಿಳೆಗೆ ತೆರೆಮರೆಯಲ್ಲಿ ಹೆಮ್ಮಿನ ಶೋಷಣೆ ನಡೆಯುತ್ತಿದೆ ಎಂಬುದಕ್ಕೆ ನಿಮ್ಮ ಅಭಿಪ್ರಾಯ?

❐

೩. ವಕ್ತೃಗಳಪಟ್ಟಿ

೧.	ಹೆಸರು	:	ಕಮಲಾಬಾಯಿ ಕುಲಕರ್ಣಿ
	ಊರು	:	ಜಮುಖಂಡಿ
	ವಯಸ್ಸು	:	೭೦
	ಶಿಕ್ಷಣ	:	ಅನಕ್ಷರಸ್ಥೆ
೨.	ಹೆಸರು	:	ಮಂದಾಕಿನಿ ದೇಸಾಯಿ
	ಊರು	:	ಜಮಖಂಡಿ
	ವಯಸ್ಸು	:	೬೫
	ಶಿಕ್ಷಣ	:	ಅನಕ್ಷರಸ್ಥೆ
೩.	ಹೆಸರು	:	ಕಮಲಾದೇಸಾಯಿ (ಉದ್ಯೋಗಸ್ಥೆ)
	ಊರು	:	ಜಮಖಂಡಿ
	ವಯಸ್ಸು	:	೪೫
	ಶಿಕ್ಷಣ	:	T.C.H
೪.	ಹೆಸರು	:	ವಿನೋದಾ ಕುಲಕರ್ಣಿ
	ಊರು	:	ಜಮಖಂಡಿ
	ವಯಸ್ಸು	:	೪೫
	ಶಿಕ್ಷಣ	:	S.S.L.C
೫.	ಹೆಸರು	:	ವಾಣಿಶ್ರೀ ಕುಲಕರ್ಣಿ
	ಊರು	:	ಜಮಖಂಡಿ
	ವಯಸ್ಸು	:	೨೭
	ಶಿಕ್ಷಣ	:	B.A
೬.	ಹೆಸುರು	:	ವಿಧ್ಯಾಕುಲಕರ್ಣಿ
	ಊರು	:	ಜಮಖಂಡಿ
	ವಯಸ್ಸು	:	೨೩
	ಶಿಕ್ಷಣ	:	B.A

೭.	ಹೆಸರು	:	ವಿಧ್ಯಾಶ್ರೀ ಥೀಟೆ
	ಊರು	:	ಜಮಖಂಡಿ
	ವಸ್ಸು	:	೩೦
	ಶಿಕ್ಷಣ	:	B.com
೮.	ಹೆಸರು	:	ರಂಜು ಉತ್ತರೇಶ್ವರ
	ಊರು	:	ಜಮಖಂಡಿ
	ವಯಸ್ಸು	:	೨೬
	ಶಿಕ್ಷಣ	:	
೯.	ಹೆಸರು	:	ಸುಧಾಬಾಯಿ ಕಟ್ಟಿ
	ಊರು	:	ಜಮಖಂಡಿ
	ವಯಸ್ಸು	:	೫೦
	ಶಿಕ್ಷಣ	:	(5th)
೧೦.	ಹೆಸರು	:	ಅಂಜನಾ ಕುಲಕರ್ಣಿ
	ಊರು	:	ಜಮಖಂಡಿ
	ವಯಸ್ಸು	:	೨೫
	ಶಿಕ್ಷಣ	:	S.S.L.C
೧೧.	ಹೆಸರು	:	ಗಂಗಾಬಾಯಿ ಪುರೋಹಿತ
	ಊರು	:	ಜಮಖಂಡಿ
	ವಯಸ್ಸು	:	೭೫
	ಶಿಕ್ಷಣ	:	ಅನಕ್ಷರಸ್ಥೆ
೧೨.	ಹೆಸರು	:	ರುಕ್ಮಿಣಿಬಾಯಿ ಕುಲಕರ್ಣಿ
	ಊರ	:	ಜಮಖಂಡಿ
	ವಯಸ್ಸು	:	೮೦
	ಶಿಕ್ಷಣ	:	ಅನಕ್ಷರಸ್ಥೆ
೧೪.	ಹೆಸರು	:	ಯೋಶೋದಾ (ಉದ್ಯೋಗಸ್ಥೆ)
	ಊರು	:	ಜಮಖಂಡಿ
	ವಯಸ್ಸು	:	೪೮
	ಶಿಕ್ಷಣ	:	P.U.C

೧೫. ಹೆಸರು	:	ಶಾರದಾ ಕಟ್ಟಿ
ಊರು	:	ಜಮಖಂಡಿ
ವಯಸ್ಸು	:	೫೨
ಶಿಕ್ಷಣ	:	ಪ್ರಾಥಮಿಕ 7th
೧೬. ಹೆಸರು	:	ಗೋದಾಬಾಯಿ ಜೋಶಿ (ತೊದಲಬಾಗಿ)
ಊರು	:	ಜಮಖಂಡಿ
ವಯಸ್ಸು	:	೮೫
ಶಿಕ್ಷಣ	:	ಪ್ರಾಥಮಿಕ S.S.L.C
೧೭. ಹೆಸರು	:	ಗೀತಾ, ಬಬಲೇಶ್ವರ (ಉದ್ಯೋಗಸ್ಥೆ)
ಊರು	:	ಜಮಖಂಡಿ
ಶಿಕ್ಷಣ	:	S.S.L.C
೧೮. ಹೆಸರು	:	ಸುಧಾಬಾಯಿ
ಊರು	:	ಜಮಖಂಡಿ
ವಯಸ್ಸು	:	೩೭
ಶಿಕ್ಷಣ	:	S.S.L.C
೧೯. ಹೆಸರು	:	ರಮಾ ದೇಶಪಾಂಡೆ
ಊರು	:	ಜಮಖಂಡಿ
ವಯಸ್ಸು	:	೨೨
ಶಿಕ್ಷಣ	:	B.E.D
೨೦. ಹೆಸರು	:	ಚೈತ್ರಾ ಚಿಮ್ಮಲಗಿ
ಊರು	:	ಜಮಖಂಡಿ
ವಯ್ಸು	:	೨೧
ಶಿಕ್ಷಣ	:	B.A.III
೨೧. ಹೆಸರು	:	ಪ್ರತೀಮಾದೇಸಾಯಿ
ಊರು	:	ಜಮಖಂಡಿ
ವಯಸ್ಸು	:	೨೧
ಶಿಕ್ಷಣ	:	B.A.III

೨೨. ಹೆಸರು : ಅಶ್ವಿನಿ ಕುಲಕರ್ಣಿ
ಊರು : ಜಮಖಂಡಿ
ವಯಸ್ಸು : ೧೯
ಶಿಕ್ಷಣ : P.U.C

೨೩. ಹೆಸರು : ಶ್ರೀದೇವಿ ಕುಲಕರ್ಣಿ
ಊರು : ಜಮಖಂಡಿ
ವಯಸ್ಸು : ೧೯
ಶಿಕ್ಷಣ : B.S.C.I^st^

೨೪. ಹೆಸರು : ರಾಮಾಚಾರ ಕಟ್ಟಿ
ಊರು : ಜಮಖಂಡಿ
ವಯಸ್ಸು : ೫೫
ಶಿಕ್ಷಣ : B.A

೨೫. ಹೆಸರು : R.H. ಕುಲಕರ್ಣಿ
ಊರು : ಜಮಖಂಡಿ
ವಯಸ್ಸು : ೭೦
ಶಿಕ್ಷಣ : B.A

೨೬. ಹೆಸರು : ಸದು ಬಡಜಿ
ಊರು : ಜಮಖಂಡಿ
ವಯಸ್ಸು : ೪೦
ಶಿಕ್ಷಣ : S.S.L.C

೨೭. ಹೆಸರು : ಬಾಬಾಚಾರ ಗಲಗಲ
ಊರು : ಜಮಖಂಡಿ
ವಯಸ್ಸು : ೬೮
ಶಿಕ್ಷಣ : S.S.L.C

೨೮. ಹೆಸರು : ರಂಗಾಚಾರ
ಊರು : ಜಮಖಂಡಿ
ವಯಸ್ಸು : ೩೦
ಶಿಕ್ಷಣ : M.S.

೨೯. ಹೆಸರು : ಇಂದ್ರಾಬಾಯಿ ಜೋಶಿ

ಊರು : ಜಮಕಂಡಿ (ತೊದಲವಾಗಿ)

ವಯಸ್ಸು : ೫೫

ಶಿಕ್ಷಣ : ಪ್ರಾಥಮಿಕ

೩೦. ಹೆಸರು : ಸವಿತು ಜೋಶಿ

ಊರು : ಜಮಖಂಡಿ

ವಯಸ್ಸು : ೨೭

ಶಿಕ್ಷಣ : P.U.C

೩೧. ಹೆಸರು : ಮಾಲತಿ ಕುಲಕರ್ಣಿ

ಊರು : ಜಮಖಂಡಿ

ವಯಸ್ಸು : ೪೮

ಶಿಕ್ಷಣ : S.S.L.C

೩೨. ಹೆಸರು : ವತ್ಸಲಾಬಾಯಿ ಕುಲಕರ್ಣಿ

ಊರು : ಜಮಖಂಡಿ

ವಯಸ್ಸು : ೪೮

ಶಿಕ್ಷಣ : (8th)

೩೩. ಹೆಸರು : ವತ್ಸಲಾ, ಥೀಟಿ

ಊರು : ಜಮಖಂಡಿ

ವಯಸ್ಸು : ೫೦

ಶಿಕ್ಷಣ : S.S.L.C

೩೪. ಹೆಸರು : ವಿಜು ಮನಗೂಳಿ

ಊರು : ಜಮಖಂಡಿ

ವಯಸ್ಸು : ೫೫

ಶಿಕ್ಷಣ : ಅನಕ್ಷರಸ್ಥೆ


೩೫. ಹೆಸರು : ರೇಖಾಖಾಖಂಡರ್

ಊರು : ಜಮಖಂಡಿ

ವಯಸ್ಸು : ೪೦

ಶಿಕ್ಷಣ : B.S.C

❒


ಬಾ ಗ ಲ ಕೋ ಟೆ ಜಿ ಲ್ಲೆ
ಕಿಲೋಮೀಟರುಗಳು
0 10 20
ಬಾಗಲಕೋಟೆ ಜಿಲ್ಲೆ


ಜಮಖಂಡಿ
ತಾ ಲೂ ಕಾ (ಬೆಳಗಾಂವ ಜಿಲ್ಲಾ)

೫. ಛಾಯಾಚಿತ್ರಗಳು


















श्री गजानन





